

# ಸೇವೆ ಸಲ್ಲಿಸಲು ಮೇಲೇಳುವುದು



ರೂಹಿ ಸಂಸ್ಥೆ





ಪುಸ್ತಕ ೨

# ಸೇವೆ ಸಲ್ಲಿಸಲು ಮೇಲೇಳುವುದು

ರೂಹಿ ಸಂಸ್ಥೆ

ಶ್ರೇಣಿಯಲ್ಲಿನ ಪುಸ್ತಕಗಳು

ರೂಹಿ ಸಂಸ್ಥೆಯು ವಿನ್ಯಾಸಗೊಳಿಸಿರುವ ಶ್ರೇಣಿಯಲ್ಲಿನ ಪ್ರಸ್ತುತ ಶೀರ್ಷಿಕೆಗಳನ್ನು ಕೆಳಗೆ ನೀಡಲಾಗಿದೆ. ಈ ಪುಸ್ತಕಗಳನ್ನು ಯುವಜನರು ಹಾಗೂ ವಯಸ್ಕರು ತಮ್ಮ ಸಮುದಾಯಗಳಲ್ಲಿ ಸೇವೆ ಸಲ್ಲಿಸುವ ಸಾಮರ್ಥ್ಯವನ್ನು ಹೆಚ್ಚಿಸಲು ಮುಖ್ಯ ಸರಣಿಯ ಶಿಕ್ಷಣದಲ್ಲಿ ವ್ಯವಸ್ಥಿತ ಪ್ರಯತ್ನವಾಗಿ ಉಪಯೋಗಿಸಲು ಆಶಿಸಲಾಗಿದೆ. ರೂಹಿ ಸಂಸ್ಥೆಯು ಬಹಾಯಿ ಮಕ್ಕಳ ತರಗತಿಗಳ ಬೋಧಕರ ತರಬೇತಿಗಾಗಿ ಒಂದು ಪಠ್ಯಕ್ರಮವನ್ನು ಪುಸ್ತಕ ಮೂರರ ಶಾಖೆಯಾಗಿ ಹೊರತರುತ್ತಿದೆ, ಮತ್ತೊಂದು ಕಿಶೋರರ ಗುಂಪಿನ ಅನುಪ್ರೇರಕರ ತರಬೇತಿಗಾಗಿರುವ ಪುಸ್ತಕ ಐದರ ಪಠ್ಯಾನುಕ್ರಮ ಮತ್ತು ಇದನ್ನು ಸಹ ಪಟ್ಟಿಯಲ್ಲಿ ಸೂಚಿಸಲಾಗಿದೆ. ಈ ಕ್ಷೇತ್ರದಲ್ಲಿ ಅನುಭವವು ಮುಂದುವರೆದಂತೆ ಪಟ್ಟಿಯಲ್ಲಿ ಬದಲಾವಣೆಗಳಾಗುವುದೆಂಬುದನ್ನು ಗಮನಿಸತಕ್ಕದ್ದು, ಮತ್ತು ಮೂಲ ಪಠ್ಯಗಳು ಎಲ್ಲೆಡೆ ಲಭ್ಯವಾಗುವಂತೆ ಬೆಳವಣಿಗೆಯ ಹಂತವನ್ನು ತಲುಪಿದಾಗ ಹೊಸ ಶೀರ್ಷಿಕೆಗಳನ್ನು ಸೇರಿಸಲಾಗುವುದು.

ಪುಸ್ತಕ ೧ ಚೈತನ್ಯದ ಬದುಕಿನ ಮೇಲೆ ಪ್ರತಿಫಲನಗಳು
ಪುಸ್ತಕ ೨ ಸೇವೆ ಸಲ್ಲಿಸಲು ಮೇಲೇಳುವುದು
ಪುಸ್ತಕ ೩ ಮಕ್ಕಳ ತರಗತಿಗಳಿಗೆ ಬೋಧಿಸುವುದು ಕ್ರಮ ೧
ಮಕ್ಕಳ ತರಗತಿಗಳಿಗೆ ಬೋಧಿಸುವುದು ಕ್ರಮ ೨ (ಶಾಖಾ ಶಿಕ್ಷಣ)
ಮಕ್ಕಳ ತರಗತಿಗಳಿಗೆ ಬೋಧಿಸುವುದು ಕ್ರಮ ೩ (ಶಾಖಾ ಶಿಕ್ಷಣ)
ಮಕ್ಕಳ ತರಗತಿಗಳಿಗೆ ಬೋಧಿಸುವುದು ಕ್ರಮ ೪ (ಶಾಖಾ ಶಿಕ್ಷಣ)
ಪುಸ್ತಕ ೪ ಅವಳಿ ಅವತಾರ ಪುರುಷರು
ಪುಸ್ತಕ ೫ ಕಿಶೋರರ ಅಂತಃಶಕ್ತಿಯನ್ನು ಹೊಹೊಮ್ಮಿಸುವುದು
ಪ್ರಾರಂಭಿಕ ಪ್ರೇರಣೆ : ಪುಸ್ತಕ ೫ ರ ಮೊದಲನೆಯ ಶಾಖಾ ಶಿಕ್ಷಣ
ವಿಸ್ತೃತ ವಲಯ : ಪುಸ್ತಕ ೫ ರ ಎರಡನೆಯ ಶಾಖಾ ಶಿಕ್ಷಣ
ಪುಸ್ತಕ ೬ ಧರ್ಮ ಬೋಧನೆ
ಪುಸ್ತಕ ೭ ಸೇವೆಯ ಪಥದಲ್ಲಿ ಜೊತೆಯಾಗಿ ನಡೆಯುವುದು
ಪುಸ್ತಕ ೮ ಬಹಾಉಲ್ಲಾರವರ ಒಡಂಬಡಿಕೆ
ಪುಸ್ತಕ ೯ ಐತಿಹಾಸಿಕ ಮುನ್ನೋಟವನ್ನು ಗಳಿಸುವುದು
ಪುಸ್ತಕ ೧೦ ಹುರುಪಿನ ಸಮುದಾಯ ನಿರ್ಮಾಣ
ಪುಸ್ತಕ ೧೧ ಭೌತಿಕ ಐಶ್ವರ್ಯ
ಪುಸ್ತಕ ೧೨ ( ಮುಂಬರಲಿದೆ)
ಪುಸ್ತಕ ೧೩ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವಿಕೆ
ಪುಸ್ತಕ ೧೪ ( ಮುಂಬರಲಿದೆ)

ಕೃತಿಸ್ವಾಮ್ಯ 2022 ರೂಹಿ ಫೌಂಡೇಷನ್, ಕೊಲಂಬಿಯ
ಎಲ್ಲಾಹಕ್ಕುಗಳನ್ನು ಕಾಯ್ದಿರಿಸಲಾಗಿದೆ, ಪ್ರಕಾಶನ ಆವೃತ್ತಿ 2.1.1 ಪಿಇ ಫೆಬ್ರುವರಿ 2022

ಮೂಲತಃ ಸ್ಪಾನಿಷ್ ನಲ್ಲಿ ಪ್ರಕಟವಾದ ಹಾಗೆ *ಸೇವೆ ಸಲ್ಲಿಸಲು ಮೇಲೇಳುವುದು*
ಕೃತಿಸ್ವಾಮ್ಯ © ೧೯೮೭, ೧೯೯೬, ೨೦೨೦ ಇವರಿಂದ ರೂಹಿ ಫೌಂಡೇಷನ್, ಕೊಲಂಬಿಯ
ಐಎಸ್‌ಬಿಎನ್ ೯೭೮-೯೫೮-೫೨೯೪೧-೦-೩

Permission for a limited printing of this book in Kannada has been granted to the Regional Training Institute of Karnataka by the Ruhi Institute.

ರೂಹಿ ಸಂಸ್ಥೆ
ಕಲಿ, ಕೊಲಂಬಿಯ
ಇ ಮೇಲ್: institute@ruhi.org
ವೆಬ್ ಸೈಟ್: www.ruhi.org

# ಪರಿವಿಡಿ

ಶಿಕ್ಷಕರಿಗಾಗಿ ಹಲವು ವಿಚಾರಗಳು.......................v

ಬೋಧಿಸುವ ಆನಂದ...........................................1

ಉನ್ನತಿಗೇರಿಸುವ ಸಂಭಾಷಣೆಗಳು......................15

ಜ್ಞಾನಾರ್ಜನಾ  ವಿಷಯಾಂಶಗಳು......................35

# ಶಿಕ್ಷಕರಿಗಾಗಿ ಹಲವು ವಿಚಾರಗಳು

ಈ ಪುಸ್ತಕವು ರೂಹಿ ಸಂಸ್ಥೆಯಿಂದ ನೀಡಲ್ಪಟ್ಟಿರುವ ಸರಣಿಯ ತರಗತಿಗಳಲ್ಲಿ ಎರಡನೆಯದಾಗಿದ್ದು ಅರ್ಥಪೂರ್ಣ ಹಾಗೂ ಉತ್ಸಾಹಪೂರ್ಣ ಸಂಭಾಷಣೆಗೆ ಕೊಡುಗೆ ನೀಡುವಂತೆ ನಮ್ಮನ್ನು ಸಮರ್ಥರನ್ನಾಗಿಸುವುದನ್ನು ಹೊಂದಿರುವುದು. ನಿರ್ದಿಷ್ಟವಾದ ಸೇವಾ ಕಾರ್ಯದ ಬಗ್ಗೆ ಈ ಪುಸ್ತಕದ ಮೂರನೆಯ ಘಟಕದಲ್ಲಿ ಗಮನ ನೀಡಲಾಗಿದೆ. ಪ್ರಬಲ ಶಕ್ತಿಗಳು ಸಾಮುದಾಯಿಕ ಸಂಬಂಧಗಳನ್ನು ಹರಿದೆಸೆಯುತ್ತಿರುವ ಪ್ರಪಂಚದಲ್ಲಿ, ಮಿತ್ರರು ನೆರೆಕೆರೆಗಳಲ್ಲಿ ಅವರ ಮನೆಗಳಿಗೆ ಭೇಟಿ ನೀಡುವ ಪರಿಪಾಠವು ಸಮಾಜದ ಜೀವನದ ಕೇಂದ್ರೀಕೃತ ವಿಷಯದ ಅನ್ವೇಷಿಸುವಿಕೆಯು ಸಂಸ್ಕೃತಿಯ ಒಂದು ಪ್ರಮುಖ ಲಕ್ಷಣ ವಾಗುವುದು. ಅಧಿಕವಾಗುತ್ತಿರುವ ಏಕಾಂಗಿತನದ ಅಸ್ವಸ್ಥತೆಗೆ ಪರಿಹಾರವಾಗುವುದು. ಈ ರೀತಿ ಬೆಳೆದ ಸಂಬಂಧವು ಹುರುಪಿನ ಹಾಗೂ ಸಹಜೀವಿ ಸಮುದಾಯಗಳನ್ನು ರಚಿಸುವ ಪ್ರಕ್ರಿಯೆಯನ್ನು ದೃಢಗೊಳಿಸಲು ಘಟಕವು ಸಲಹೆ ನೀಡುವುದು.

ನೆರೆಕೆರೆಗಳಲ್ಲಿ ಅಥವಾ ಗ್ರಾಮಗಳಲ್ಲಿ ನಿರಂತರ ಮನೆಗಳ ಭೇಟಿ ನೀಡುವ ಕಾರ್ಯಕ್ರಮವು ಒಂದು ಸಂಘಟನೆಯಂತೆ ಇರಬೇಕಾದದ್ದು ಅವಶ್ಯಕ. ಇದರಲ್ಲಿ ನಿಷ್ಠಾವಂತ ಬೀಜಕಣದಂತಹ ಮಿತ್ರರು ಅಗತ್ಯವಾದ ಆಡಳಿತಾತ್ಮಕ ಸಂಸ್ಥೆ ಹಾಗೂ ಏಜೆನ್ಸಿಗಳಿಂದ ಸಹಕರಿಸಲ್ಪಟ್ಟವರೂ ಒಳಗೊಂಡಿರಬೇಕು. ಪುಸ್ತಕದ ಮೂಲಕ ಮಾರ್ಗದರ್ಶಿಸುವ ಶಿಕ್ಷಕನು, ಭಾಗವಹಿಸುವವರು ಅಂತಹ ಮುಂದುವರೆದ ಪ್ರಯತ್ನದಲ್ಲಿ ಸೇರಲುಸಿದ್ಧರಾಗಿರಬೇಕೆಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಆಯೋಜಿಸಲ್ಪಟ್ಟ ಅಂತಹ ಭೇಟಿಗಳು ಅವರ ಅಧ್ಯಯನದ ವಸ್ತುವಿಷಯವಾಗಿತ್ತು ವರ್ಷದ ನಂತರದ ವರ್ಷಗಳಲ್ಲಿ ಕಾರ್ಯವು ಸೇವಾ ಕಾರ್ಯದ ಜೀವನದ ಮುಖ್ಯ ವಿಚಾರವಾಗಿರಬೇಕು.

ಆಧ್ಯಾತ್ಮಿಕ ಮತ್ತು ಸಾಮಾಜಿಕ ಪ್ರಾಮುಖ್ಯತೆಯ ವಿಷಯ ಅಂಶಗಳನ್ನು ಸ್ಪಷ್ಟವಾಗಿ ಅನ್ವೇಷಿಸುವ ಉದ್ದೇಶಕ್ಕಾಗಿ ಮನೆಗಳ ಭೇಟಿಯ ಪರಿಪಾಠವು ಸ್ಪಷ್ಟವಾಗಿ ಸಾಮುದಾಯಿಕ ಸಂಸ್ಕೃತಿಯನ್ನು ಶ್ರೀಮಂತಗೊಳಿಸುವುದು. ಈ ನಿಟ್ಟಿನಲ್ಲಿ ಸಮಾನವಾಗಿ ನಿರ್ಣಾಯಕವೂ ಮನೆಗಳಲ್ಲಿ, ಕೆಲಸದ ಸ್ಥಳಗಳಲ್ಲಿ, ಶಾಲೆಯಲ್ಲಿ ಹಾಗೂ ಮಾರುಕಟ್ಟೆಗಳಲ್ಲಿ ಅನೇಕ ವ್ಯವಸ್ಥಿತವಲ್ಲದ ಚರ್ಚೆಗಳೂ ಸಹ ಇರುತ್ತವೆ. ಕಾಲಕಾಲಕ್ಕೆ ದಿನನಿತ್ಯದ ಸಂಭಾಷಣೆಯಲ್ಲಿ ಆಧ್ಯಾತ್ಮಿಕ ತತ್ವಗಳನ್ನು ಪರಿಚಯಿಸಲು, ಗಮನ ನೀಡುವ ಸಾಮರ್ಥ್ಯವೂ ಅವಶ್ಯಕ. ಅದರ ಬೆಳವಣಿಗೆಯ ಬಗ್ಗೆ ಎರಡನೆಯ ಘಟಕದಲ್ಲಿ ಗಮನ ನೀಡಲಾಗಿದೆ ಈ ರೀತಿಯಾದ ಅಡಿಪಾಯವು ಮೂರನೆಯದರ ಅಧ್ಯಯನದಲ್ಲಿದೆ.

ಮಿತ್ರರೊಂದಿಗೆ ಮತ್ತು ನೆರೆಕೆರೆಯವರೊಡನೆ ನಮ್ಮ ಸಂಭಾಷಣೆಯೂ ಉತ್ಸಾಹ ಪೂರಿತವಾಗಿರ ಬೇಕಾದರೆ, ಅವರೊಡನೆ ನಮ್ಮ ಸಂವಹನ ಆನಂದ ತರುವಂತಿರ ಬೇಕಾದುದು ಅಗತ್ಯ. ಈ ವಿಷಯವು ಮೊದಲ ಘಟಕದ "ಬೋಧಿಸುವುದರಲ್ಲಿನ ಆನಂದ"ದಲ್ಲಿ ವಿವರಿಸಲ್ಪಟ್ಟಿದೆ. ರೂಹಿ ಸಂಸ್ಥೆಯು ನಿರ್ದೇಶಿಸಿರುವ ಎಲ್ಲಾ ಸೇವಾಕಾರ್ಯಗಳ ಸಾರಾಂಶವೇ ಬಹಾ ಉಲ್ಲಾರವರ ಸಾಗರದಲ್ಲಿ ನಾವು ಅನ್ವೇಷಿಸುವ ವಿವೇಕದ ಮುತ್ತುಗಳನ್ನು ಇತರರೊಂದಿಗೆ ಹಂಚಿಕೊಳ್ಳುವುದನ್ನೇ ಒಳಗೊಂಡಿರುವುದು ಪ್ರಥಮ ಘಟಕದ ಅಧ್ಯಯನವು ಈ ಪ್ರಯತ್ನದಲ್ಲಿ ಅಡಗಿರುವ ಆನಂದವನ್ನು ಅಧಿಕಗೊಳಿಸುವ ಉದ್ದೇಶವನ್ನು ಒಳಗೊಂಡಿದೆ ಹಲವಾರು ವಿಭಾಗಗಳಲ್ಲಿ ಭಾಗವಹಿಸುವವರು ದೇವರ. ನುಡಿಯ ಬಗ್ಗೆ ಹಾಗೂ ಅದನ್ನು ಇತರರೊಂದಿಗೆ ಹಂಚಿಕೊಳ್ಳುವುದರ ಬಗ್ಗೆ ಆಲೋಚಿಸಬೇಕೆಂಬುದರ ಕುರಿತು ತಿಳಿಸಲಾಗಿದೆ. ಈ ಕಾರ್ಯದಲ್ಲಿ ನಾವು ಸೇವಾ ಪಥದಲ್ಲಿ ತ್ವರಿತಗತಿಯಲ್ಲಿ ಹೆಜ್ಜೆ ಇಟ್ಟು ನಡೆಯಲು ಆನಂದವನ್ನುಂಟು ಮಾಡುವುದು. ಆದಾಗ್ಯೂ, ಈ ಅಗಾಧವಾದ ಆಧ್ಯಾತ್ಮಿಕ ಸತ್ಯವನ್ನು ಪೂರ್ಣವಾಗಿ ಅರಿಯಬೇಕಾಗಿರುವುದು, ಸೇವೆಯನ್ನು ವಿಭಿನ್ನಗೊಳಿಸಲು ಗುಣಗಳನ್ನು ಮತ್ತು ಮನೋಭಾವನೆಗಳನ್ನು ಮರೆತಲ್ಲಿ, ನಾವು ಬೋಧಿಸುವಲ್ಲಿ ಆನಂದವನ್ನು ಕಳೆದುಕೊಳ್ಳುತ್ತೇವೆ. ಇವು ಸರಣಿಯ ಅನೇಕ ಪೂರಕ ಪುಸ್ತಕಗಳಲ್ಲಿ ಚರ್ಚಿಸುವ ವಿಷಯಗಳಾಗಿವೆ. ಇಲ್ಲಿ ಕೆಲವನ್ನು ಮಾತ್ರ ಪರಿಶೀಲಿಸಲಾಗಿದೆ ವಿಭಾಗ-7 ರ ನಿರ್ಲಿಪ್ತತೆಯಿಂದ ಪ್ರಾರಂಭಿಸಲಾಗಿದೆ. ಈ ಗುಣದ ಮೇಲೆ ಪ್ರತಿಫಲಿಸಲು ಬಹಾಯಿ ಬರಹಗಳಿಂದಾಯ್ದ ಉಲ್ಲೇಖಗಳು ಆಧಾರಿತವಾಗಿವೆ. ಬಾಹ್ಯವಿಚಾರಗಳು ಸೇವೆಯ ಆನಂದವನ್ನು ಮಬ್ಬಾಗಿಸದಂತೆ ಈ ಗುಣವು ಅತ್ಯವಶ್ಯಕವಾದುದು. ಮುಖ್ಯವಾದುದೇನೆಂದರೆ ಭಾಗವಹಿಸುವವರು ತಮ್ಮ ಅಧ್ಯಯನದಿಂದ ದೂರ ಸರಿಯದಂತೆ ನಿರ್ಲಿಪ್ತತೆ ಎಂದರೆ ದೂರವಿರುವುದು ಅಥವಾ ಗಮನ ನೀಡದಿರುವುದು ಎಂಬ ತಪ್ಪು ಅಭಿಪ್ರಾಯದಿಂದ ಹೊರಗಾಗಿರಬೇಕು. ನಮ್ಮ ಶ್ರಮವನ್ನು ಹಾಗೂ ಉತ್ತಮೋತ್ತಮ ಫಲಿತಾಂಶವನ್ನು ಸಾಧಿಸುವ ಅವನ ಸೇವಾ ಕಾರ್ಯದ ತೀವ್ರತೆಯನ್ನು ಹೆಚ್ಚಿಸಲು ನಿರಂತರ ಶ್ರಮಿಸಬೇಕು. ಇದಕ್ಕೆ ಶ್ರಮದ ಕುರಿತು ಸಾಕಷ್ಟು ಅರ್ಥೈಸುವಿಕೆಯು ಅಗತ್ಯ. ವಿಭಾಗ-8 ರಲ್ಲಿ ಈ ವಿಷಯದ ಬಗ್ಗೆ ಪರಿಶೀಲಿಸಲಾಗಿದೆ. ಆಶಾವಾದ ಮತ್ತು ಕೃತಜ್ಞತೆ ಈ ಎರಡೂ ಮನೋಭಾವನೆಗಳು ಸೇವಾ ಪಥಕ್ಕೆ ಮೂಲಭೂತವಾದುದು. ಇದನ್ನು ಮುಂದಿನ ಹಾಗೂ ಅಂತಿಮ ವಿಭಾಗದಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಪುಸ್ತಕ ಎರಡನೆಯ ಘಟಕದ ಉತ್ಸಾಹ "ಪೂರಿತ ಸಂಭಾಷಣೆ"ಯು ಸಂದರ್ಭವೊದಗಿದಂತೆ ಆಧ್ಯಾತ್ಮಿಕ ತತ್ವಗಳನ್ನು ಕುರಿತು ವ್ಯವಸ್ಥಿತವಲ್ಲದ ಸಂಭಾಷಣೆಯಲ್ಲಿ ಉತ್ತೇಜಿಸುವ ಸಾಮರ್ಥ್ಯದ ಬಗ್ಗೆ ಕೇಂದ್ರಿಕೃತವಾಗಿದೆ. ಇದು ವಿವಿಧ ವಿಷಯದ ಮೇಲೆ

ಸಣ್ಣಸಣ್ಣ ವಾಕ್ಯಗಳನ್ನು ಒಳಗೊಂಡಿದೆ ಅದು ನಿರ್ದಿಷ್ಟ ಉಲ್ಲೇಖಗಳಲ್ಲಿ ಅಬ್ದುಲ್ ಬಹಾರವರು ಉಪಯೋಗಿಸಿದ ಅನೇಕ ನುಡಿಗಳು ಹಾಗೂ ಅವರ ಭಾಷಣಗಳ ಮೇಲೆ ಆಧಾರಿತವಾಗಿದೆ ಸಾರ್ವತ್ರಿಕವಾಗಿದ್ದು ಎಲ್ಲ ಹಿನ್ನೆಲೆಯ ಜನಗಳ ಹೆಬ್ಬಯಕೆ ಮತ್ತು ಕಾಳಜಿ ಕುರಿತ ಆಗಿರುವುವು. ವಾಕ್ಯಾಂಶಗಳ ಅಧ್ಯಯನದಿಂದ ಭಾಗವಹಿಸುವವರು ಅಬ್ದುಲ್ ಬಹಾರವರು ಆಧ್ಯಾತ್ಮಿಕ ತತ್ವಗಳನ್ನು ಯಾವ ರೀತಿ ವಿವರಿಸಿರುವರು ಎಂಬುದರಿಂದ ಸ್ಫೂರ್ತಿ ಗೊಳ್ಳುವರು, ಹಾಗೂ ಆತನತ್ತಲೇ ನೋಡುತ್ತಾ ಬಹಾಉಲ್ಲಾರವರ ಪ್ರಕಟಣೆಯ ಸಾಗರದಲ್ಲಿ ಅಡಗಿರುವ ಮುತ್ತುಗಳನ್ನು ಅನ್ವೇಷಿಸಲು ಪ್ರಯತ್ನಿಸುವರು. ಆತನ ತಂದೆಯ ಬೋಧನೆಗಳ ಅರ್ಥೈಸಿಕೊಳ್ಳುವಿಕೆ ಮತ್ತು ಅಳವಡಿಸಿಕೊಳ್ಳುವಿಕೆ ಹಾಗೂ ಅವುಗಳನ್ನು ಇತರರೊಂದಿಗೆ ಉದಾರವಾಗಿ ಹಂಚಿಕೊಳ್ಳುವರು ಎಂದು ಆಶಿಸಲಾಗಿದೆ.

ಘಟಕದ ಗುರಿಯನ್ನು ಸಾಧಿಸಬೇಕಾದರೆ, ಭಾಗವಹಿಸುವವರು ಪ್ರತಿಯೊಂದು ವಾಕ್ಯಾಂಶವನ್ನು ಹಲವಾರು ಬಾರಿ ಓದಲು, ಆಲೋಚನೆಯ ಸರಣಿಯನ್ನು ಗುರುತಿಸಲು ಹಾಗೂ ಅದರಲ್ಲಿನ ವಿಚಾರಗಳನ್ನು ಸ್ವಯಂ ತಾವೇ ಸ್ವಾಭಾವಿಕವಾಗಿ ವ್ಯಕ್ತಪಡಿಸುವವರೆಗೂ ಅಭ್ಯಾಸಮಾಡುವ ಅವಕಾಶವಿರಬೇಕಾದುದು ಅಗತ್ಯ. ಅದಕ್ಕೆ ಮೊದಲಿಗೆ ಕೆಲವನ್ನು ಬಾಯಿಪಾಠ ಮಾಡುವುದು, ಘಟಕದಲ್ಲಿ ಕಂಡುಬರುವುದನ್ನು ಮತ್ತೆ ಮತ್ತೆ ಪುನರಾವರ್ತಿಸುವರು. ಇದನ್ನು ನಿರೀಕ್ಷಿಸಲಾಗಿದೆ ಧರ್ಮದಲ್ಲಿ ಅವರ ಜ್ಞಾನವು ಆಳವಾದಂತೆ , ಅವರ ಅನುಭವವೂ ಬೆಳೆಯುವುದು, ಅವರು ಹೆಚ್ಚಿನ ವಿಸ್ತೃತ ಪರಿವಿಡಿಯನ್ನು ಗಳಿಸುವರು ಮತ್ತು ಶಬ್ದಕೋಶವು ಅಧಿಕವಾಗುವುದಲ್ಲದೆ, ಅವರು ಇತರರೊಡನೆ ಸಂವಹಿಸುವಾಗ ಅದು ವ್ಯಕ್ತವಾಗುವುದು. ಶಿಕ್ಷಕರು ಈ ಹಂತದಲ್ಲಿ ಅದನ್ನು ಗುರುತಿಸಬೇಕು. ಬೋಧನೆಗಳನ್ನು ಸುಲಭವಾಗಿ ವಿವರಿಸುವ ಪರಿಮಾಣ ಮತ್ತು ಅಬ್ದುಲ್ ಬಹಾರವರ ಆಲೋಚನೆಯೊಂದಿಗೆ ಸಮವಾಗಿರುವುದು. ಈ ಎರಡು ವಿಷಯಗಳನ್ನು ಹೊಂದಿರಬೇಕು.

ಪ್ರತಿಯೊಂದು ವಾಕ್ಯಗಳ ವಿಚಾರವನ್ನು ಪ್ರಸ್ತುತಪಡಿಸಲು ಕಲಿತನಂತರ ಭಾಗವಹಿಸುವವರು, ಮುಂದಿನ ಚಟುವಟಿಕೆಯನ್ನು ಆರಂಭಿಸಬೇಕು. ಅದರಲ್ಲಿ ಅವರು ತಮ್ಮ ಕುಟುಂಬಗಳಿಗೆ ಮಿತ್ರರಿಗೆ ಹಾಗೂ ಸಹೋದ್ಯೋಗಿಗಳಿಗೆ ಸಂಬಂಧಪಟ್ಟ ವಿಷಯಗಳಿಗೆ ಸರಿಯಾದ ವಿಚಾರಗಳನ್ನು ತಾವು ಕಲಿತಿರುವುದರಿಂದ ಸಮಾನ ಗೊಳಿಸಲು ಪ್ರೋತ್ಸಾಹಿಸಲ್ಪಡಬೇಕು. ಇದಕ್ಕಾಗಿ ಅವರು ಸಂಭಾಷಣಾ ವೇಳೆ ಉಂಟಾದ ಕೆಲವು ವಿಷಯಗಳು ಹಾಗೂ ಪ್ರಶ್ನಿಸಲ್ಪಟ್ಟವುಗಳನ್ನು ಆಲೋಚಿಸಿ ಪರಿಚಯಿಸ ಬಲ್ಲ ವಿಷಯಗಳನ್ನು ಉಪಯೋಗಿಸಲು ನಿರ್ಧರಿಸಬೇಕು. ಕೆಲವು ವಾಕ್ಯಗಳಿಗೆ ಅಬ್ದುಲ್ ಬಾಬಾರವರು ಹೇಗೆ ಆಧ್ಯಾತ್ಮಿಕ ತತ್ವಗಳನ್ನು ಪ್ರತಿಪಾದಿಸಿದಂತೆ ಒಂದು ಅಥವಾ ಎರಡು ಉದಾಹರಣೆಯನ್ನು ನೀಡಬೇಕು. ಇದು ಎಲ್ಲೆಲ್ಲೂ ಇರುವ ಜನರಿಗೆ ಸಂಬಂಧಿತ ವಿಚಾರಗಳ ಮೇಲೆ ಬೆಳಕು ಚೆಲ್ಲುವುದು. ಪುಸ್ತಕದ ಅಧ್ಯಯನವು ಇನ್ನೂ ಸಾಗುತ್ತಿರುವಾಗಲೇ ಶಿಕ್ಷಕರು ಪ್ರತಿಯೊಬ್ಬ ಸದಸ್ಯನನ್ನು ಒಂದೊಂದು ವಾಕ್ಯ ಗಳನ್ನು ಆಯ್ಕೆ ಮಾಡಿಕೊಂಡು, ಸಂಭಾಷಿಸಲು ಉದ್ದೇಶಿಸುವರು ಇಬ್ಬರು ವ್ಯಕ್ತಿಗಳೊಂದಿಗೆ ಸಂಭಾಷಣೆ ನಡೆಸಲು ಸಹಾಯ ನೀಡಬೇಕು. ಆಗ ಈ ಅಭ್ಯಾಸವು ಫಲಕಾರಿಯಾಗುವುದು. ಈ ರೀತಿಯಾಗಿ ಪರಸ್ಪರ ಭೇಟಿಯಾದಾಗ ಭಾಗವಹಿಸುವವರು ತಾವು ತೊಡಗಬೇಕಾದ ಸಂಭಾಷಣೆಯ ಗತಿಯನ್ನು ಪರಸ್ಪರ ವಿವರಿಸಲು ಸಮಯವು ಲಭ್ಯವಾಗುವುದು.

ಘಟಕದ ಪ್ರತಿಯೊಂದು ವಾಕ್ಯಾಂಶವೂ ಬಹಾಯಉಲ್ಲಾರವರ ಬರವಣಿಗೆಗಳಿಂದಾಯ್ದ ಉಲ್ಲೇಖಗಳನ್ನು ಕಂಠಪಾಠ ಮಾಡಲು ಅಳವಡಿಸಲಾಗಿದೆ. ರೂಹಿ ಸಂಸ್ಥೆಯ ಕಂಠಪಾಠ ಮಾಡುವುದನ್ನು ಸರಣಿಯ ಪ್ರಥಮ ಪುಸ್ತಕದಲ್ಲಾಗಲೇ ಒತ್ತು ನೀಡಲಾಗಿದ್ದು ಪುಸ್ತಕ -2 ರಲ್ಲಿ ಅಧಿಕ ಗೊಳಿಸಲಾಗಿದೆ. ಈಗ ಭಾಗವಹಿಸುವವರು ಬರವಣಿಗೆಗಳಿಂದ ಮತ್ತೆ ಮತ್ತೆ ಉಲ್ಲೇಖಗಳನ್ನು ಮನಸ್ಸಿಗೆ ತಂದುಕೊಳ್ಳುತ್ತಾ ಆಧ್ಯಾತ್ಮಿಕ ಪೋಷಣೆ ಪಡೆಯುತ್ತಿರುವುದನ್ನು ಅರ್ಥೈಸಿಕೊಳ್ಳುವರು. ಈ ಪುಸ್ತಕದಲ್ಲಿಯೂ ಅವರು ಮಾನವ ಹೃದಯಗಳ ಮೇಲೆ ದೇವರ ನುಡಿಯ ಪ್ರಭಾವದ ಬಗ್ಗೆ ಪ್ರತಿಫಲಿಸುವರು. ಮೂರನೆಯ ಘಟಕದಲ್ಲಿ ಎರಡನೆಯದರಂತೆಯೇ ಬರವಣಿಗೆಗಳಲ್ಲಿ ಕಂಡುಬರುವ ತತ್ವಗಳನ್ನು ಮತ್ತು ವಿಚಾರಗಳನ್ನು ತಮ್ಮ ಸಂಭಾಷಣೆಯಲ್ಲಿ ಸೂಕ್ತ ಸಂದರ್ಭಗಳಲ್ಲಿ ವಾಕ್ಯಾಂಶಗಳನ್ನೇ ನೇರವಾಗಿ ಉಲ್ಲೇಖಿಸಲು ಕಲಿಯುವರು. ಬೋಧನೆಗಳನ್ನು ನಿಖರವಾಗಿ ವಿವರಿಸಲು ಅವುಗಳನ್ನು ಇತರರಿಗೆ ಪರಿಶುದ್ಧವಾದ ರೀತಿಯಲ್ಲಿ ನೀಡಲು ನಾವು ಸಮರ್ಥವಾಗುವಂತೆ ಸೇವಾ ಪಥದಲ್ಲಿ ಸಾಗುತ್ತಿರುವಾಗ ಬೆಳೆಯುವುದು. ಪ್ರಾರಂಭಿಸಲು ಅತ್ಯುತ್ತಮ ಸ್ಥಳವೆಂದರೆ ಅಬ್ದುಲ್ ಬಹಾರವರ ವಿವರಣೆಗಳ ಅಧ್ಯಯನವೇ ಆಗಿದೆ ಹಾಗೂ ಅವುಗಳನ್ನು ಆತ ವ್ಯಕ್ತಪಡಿಸುತ್ತಿದ್ದ ರೀತಿಯಂತೆ ಪ್ರಯತ್ನಿಸುವುದು ಎರಡನೆ ಘಟಕದ ರಚನೆಯಲ್ಲಿ ಅಡಗಿದೆ.

ಮೇಲೆ ಸೂಚಿಸಿರುವಂತೆ, ಮೂರನೆಯ ಘಟಕವಾದ "ಜ್ಞಾನಾರ್ಜನಾ ವಿಷಯಗಳು" ಈ ಪುಸ್ತಕದಲ್ಲಿ ನೀಡಿರುವ ಸೇವಾಕಾರ್ಯ ಅಂದರೆ ಸಾಮುದಾಯಿಕ ಜೀವನಕ್ಕೆ ಮುಖ್ಯವಾದ ಚರ್ಚೆಗಳಲ್ಲಿ ತೊಡಗುವ ನಿರ್ದಿಷ್ಟ ಉದ್ದೇಶದಿಂದ ಮಿತ್ರರುಗಳ ಮತ್ತು ನೆರೆಕೆರೆಯವರ ಮನೆಗಳಿಗೆ ಭೇಟಿ ನೀಡುವುದು. ಈ ಘಟಕದಲ್ಲಿ ಮೂರು ವಿಧದ ಸಂಭಾಷಣೆಯ ಬಗ್ಗೆ ದೃಷ್ಟಿ ಇರಿಸಲಾಗಿದೆ. ಪ್ರತಿಯೊಂದಕ್ಕೂ ನಿರ್ದಿಷ್ಟವಾದ ಪರಿವಿಡಿಯಲ್ಲಿ ಸಲಹೆ ನೀಡಲಾಗಿದೆ. ಮೊದಲ ವಿಧವು, ಕ್ರಮಬದ್ಧವಾದ ಭೇಟಿಯ ಕಾರ್ಯಕ್ರಮವನ್ನು ಗ್ರಾಮ ಅಥವಾ ನೆರೆಕೆರೆಯ ನಿವಾಸಿಗಳೊಂದಿಗೆ ಅನ್ವೇಷಿಸುವ ವಿಷಯದ ಕುರಿತಾಗಿರುವುದು. ಹೀಗೆ ನೀಡುವ ವಿಚಾರವನ್ನು ಆಸಕ್ತ ಕೇಳುಗರೊಂದಿಗೆ ವಿವಿಧ ರೀತಿಯಲ್ಲಿ ಹಂಚಿಕೊಳ್ಳಬಹುದು ವಿಷಯದ ಮೂಲ ಉದ್ದೇಶ-

ಮನೆಯ ಸದಸ್ಯರಿಗೆ ಧರ್ಮದ ಬಗ್ಗೆ ಆಳವಾದ ಜ್ಞಾನವನ್ನು ನೀಡುವುದು- ಅತ್ಯಂತ ಸೂಕ್ತವಾಗಿರುತ್ತದೆ ನಂತರ ಈ ಘಟಕದ ಹೆಚ್ಚಿನ ವಿಚಾರವನ್ನು ಇಂತಹ ಸಂಭಾಷಣೆಯಿಂದ ನೀಡಬಹುದು.

ಆದಾಗ್ಯೂ, ಮನೆಗಳ ಭೇಟಿ ನೀಡುವ ಅಭ್ಯಾಸವು ಇತ್ತೀಚಿನ ವರ್ಷಗಳಲ್ಲಿ ಒಂದು ಹೊಸ ಆಯಾಮದಿಂದ ಕೂಡಿದೆ, ವಿಶೇಷವಾಗಿ ಯು ಭೂಖಂಡದ ಚಿಕ್ಕ-ಚಿಕ್ಕ ಘಟಕಗಳಲ್ಲಿ, ಗ್ರಾಮಾಂತರ ಹಾಗೂ ನಗರದ ನೆರೆಕೆರೆಗಳ ಹಂತದಲ್ಲಿ, ಶಿಕ್ಷಕರು, ಕಿಶೋರರ ತಂಡಗಳ ಅನುಪ್ರೇರಕರು ಮತ್ತು ಮಕ್ಕಳ ತರಗತಿಗಳ ಶಿಕ್ಷಕರಾಗಿರುವ ಕಾರ್ಯಕರ್ತರಾಗಿರುವವರ ಸಂಖ್ಯೆಯು ಅಧಿಕವಾಗುತ್ತದೆ. ಧರ್ಮದ ಜ್ಞಾನದ ಪ್ರಸರಣದ ಉದ್ದೇಶವಷ್ಟೇ ಅಲ್ಲದೆ ಕಿಶೋರರಲ್ಲಿ ಆಧ್ಯಾತ್ಮಿಕ ಸಶಕ್ತೀಕರಣ ಮತ್ತು ಮಕ್ಕಳ ಅಧ್ಯಾತ್ಮಿಕ ಶಿಕ್ಷಣದ ಕಾರ್ಯಕ್ರಮದ ಸಫಲತೆಯನ್ನು ತೆರೆಯಲು ಸಹ ಪ್ರಮುಖವಾದುದಾಗಿದ್ದು. ಈ ಅಭ್ಯಾಸವು ಗಮನಾರ್ಹವಾಗಿದೆ. ಇದರಲ್ಲಿ ಸ್ಪಷ್ಟವಾಗಿರುವುದೇನೆಂದರೆ, ಕ್ರಮಬದ್ಧವಾದ ಭೇಟಿಯನ್ನುಅನುಪ್ರೇರಕರು ಮತ್ತು ಶಿಕ್ಷಕರು ಕಿರಿಯರ ಪೋಷಕರನ್ನು ಸಂಧಿಸುವುದು ಅಗತ್ಯವಾಗಿದ್ದು ಪರಿಕಲ್ಪನೆಗಳನ್ನು ಪ್ರಸ್ತುತಪಡಿಸುವಿಕೆಗೆ ಒಂದು ರೂಪವನ್ನು ನೀಡುವುದು. ಇಂತಹ ಚರ್ಚೆಗಳು ಎರಡನೇ ರೀತಿಯ ಸಂಭಾಷಣೆಯಾಗಿರುವುದು. ಅದನ್ನು ವಿಭಾಗ- 14 ಮತ್ತು 15 ರಲ್ಲಿ ಪರಿಶೀಲಿಸಲಾಗಿದೆ. ಈ ವಿಭಾಗಗಳಲ್ಲಿನ ವಿಷಯವಸ್ತು ವಿಶದವಾಗಿದ್ದು, ಭಾಗವಹಿಸುವವರು ಮುಂದಿನ ತರಗತಿಗಳ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಸ್ಪಷ್ಟತೆಯನ್ನು ಗ್ರಹಿಸುವರು. ಆದರೆ ಅವರಿಗೆ ಇಂತಹ ಸಂಭಾಷಣೆ ಮತ್ತು ಮಕ್ಕಳ ತರಗತಿಗಳ ಶಿಕ್ಷಕರ ಹಾಗೂ ಕಿಶೋರರ ಅನು ಪ್ರೇರಕರ ಪೋಷಕರನ್ನು ಸಂಧಿಸುವಾಗ ನೀಡಲ್ಪಡುವ ಸಾಹಚರ್ಯದಿಂದ ಜೊತೆಯಾಗಿ ಸಾಗುವಾಗ ಅಧಿಕ ಸಫಲತೆಯನ್ನು ನೀಡುವುದು, ಸಾಕ್ಷೀಕರಿಸಲ್ಪಡುವುದು.

ಘಟಕದಲ್ಲಿ ನೀಡಲ್ಪಟ್ಟಿರುವ ಮೂರನೆಯ ವಿಧದ ಸಂಭಾಷಣೆಯು ಒಂದು ವಿಶೇಷ ಉದ್ದೇಶ ಉಳ್ಳದ್ದಾಗಿದೆ. ಅನೇಕ ಯುವ ಸ್ತ್ರೀಪುರುಷರು ಪ್ರಪಂಚದ ಒಳಿತಿಗೆ ಕೊಡುಗೆ ನೀಡುವ ತಮ್ಮ ಅತೀವ ಆಶಯದ ಮೂಲಕ ಸಾಗಲು ದಾರಿಗಳ ಶೋಧನೆಯಲ್ಲಿರುವರು. ಬದಲಾವಣೆಗಾಗಿ ಕಾಯುತ್ತಿರುವ, ಇಲ್ಲ, ಎಚ್ಚರಿಸಲು ಎದುರು ನೋಡುತ್ತಿರುವ ಸಮಾಜವನ್ನು ಪರಿವರ್ತಿಸಲು ಅಗಾಧವಾದ ಜಲಾಶಯದಂತಿರುವ ಶಕ್ತಿಯನ್ನು ಪ್ರತಿನಿಧಿಸುತ್ತಿರುವರು. ಸಹಯೋಗಿಗಳೊಂದಿಗಿನ ಸಂಭಾಷಣೆಯಲ್ಲಿ ಯೌವ್ವನಾವಧಿಯ ವೈಶಿಷ್ಟ್ಯವಾದ, ಅವಕಾಶ ಮತ್ತು ಜವಾಬ್ದಾರಿಗಳ ಬಗ್ಗೆ ಪ್ರತಿಫಲಿಸುವರು. ಎಲ್ಲಾ ಸಾಮರ್ಥ್ಯ ಮತ್ತು ಅಸಾಮಾನ್ಯ ಶಕ್ತಿ ಅನೇಕವೇಳೆ ಸೇವಾಕಾರ್ಯದ ಕಾರ್ಯದತ್ತಲೇ ಚರ್ಚೆಗೆ ಅವಕಾಶ ನೀಡುವುದು ಹಾಗೂ ಭೂಗೋಲಾದಾದ್ಯಂತ ಗ್ರಾಮಗಳಲ್ಲಿ, ನೆರೆ ಕೆರೆಗಳಲ್ಲಿ ಆಸಕ್ತಿಯನ್ನು ಕೆರಳಿಸುವಂತಿರುತ್ತದೆ. ಪರಿಣಾಮವಾಗಿ, ಅಧಿಕಾಧಿಕವಾಗಿ ಮಕ್ಕಳ ತರಗತಿಯ ಶಿಕ್ಷಕರಾಗಿ ಮತ್ತು ಅನುಪ್ರೇರಕರಾಗಿ ಸೇವೆಸಲ್ಲಿಸಲು ಆಧ್ಯಾತ್ಮಿಕ ಶಿಕ್ಷಣ ಪಡೆದು ಸಾಮರ್ಥ್ಯಗಳಿಸಲು ತರಬೇತು ಸಂಸ್ಥೆಯ ತರಗತಿಗಳಿಗೆ ಆಹ್ವಾನಿಸಲ್ಪಡುವರು. ಈ ಸಂಭಾಷಣೆಯನ್ನು ಅನ್ವೇಷಿಸಲು 9 ಮತ್ತು 10ನೇ ವಿಭಾಗವು ಹಲವು ವಿಚಾರಗಳನ್ನು ನೀಡುವುದು .

ವ್ಯಕ್ತಿಗಳು ಅರ್ಥಪೂರ್ಣ ಸಂಭಾಷಣೆಯನ್ನು ಪ್ರಾರಂಭಿಸಲು ಹಾಗೂ, ಸಂರಕ್ಷಿಸುವ ಸಾಮರ್ಥ್ಯವನ್ನು ದೃಢಪಡಿಸಲು ಘಟಕವು ವಿಸ್ತೃತ ಹಾಗೂ ಸಮರ್ಪಕವಾದ ವಿಷಯದ ಸಲಹೆ ನೀಡುತ್ತಿದೆ. ವಿಚಾರಗಳನ್ನು ಸ್ಪಷ್ಟವಾಗಿ ಉಚ್ಚರಿಸುವ ಸಾಮರ್ಥ್ಯವಲ್ಲದೆ, ಭಾಗವಹಿಸುವವರು ಅವಶ್ಯಕವಾದ ಮನೋಭಾವನೆ ಮತ್ತು ಆಧ್ಯಾತ್ಮಿಕ ಗುಣಗಳನ್ನೂ ಬೆಳೆಸಿಕೊಳ್ಳುವುದು ಅಗತ್ಯವಾಗಿದೆ. ಇದರ ಕುರಿತು ಘಟಕವು ಹೆಚ್ಚಿನದನ್ನು ತೆರೆಯುವುದು. ಆದರೆ ಅವುಗಳ ಪ್ರಾಮುಖ್ಯತೆಯನ್ನು ಸಾಮರ್ಥ್ಯಕ್ಕೆ ಸಂಬಂಧಿಸಿದ ಪ್ರಶ್ನೆಯು ವಿಭಾಗ -4ರಲ್ಲಿ ಸುಸ್ಪಷ್ಟವಾಗಿದೆ . ಇದರಲ್ಲಿ ಭಾಆಗವಹಿಸುವವರು ಭೇಟಿ ನೀಡಿದಾಗ ಎಂತಹ ಭಾವನೆಗಳು ಮತ್ತು ಆಲೋಚನೆಗಳು ನಮ್ಮ ಹೃದಯ ಮತ್ತು ಮನಸ್ಸಿನಲ್ಲಿ ತುಂಬಿರಬೇಕಾದುದರ ಬಗ್ಗೆ ಆಲೋಚಿಸಬೇಕು ಹಾಗೂ ವಿಭಾ-5ರಲ್ಲಿ ಅವರು ವಿನಮ್ರತೆಯ ಗುಣದ ಬಗ್ಗೆ ಪ್ರತಿಫಲಿಸುವರು. ಭಾಗವಹಿಸುವವರು ಈ ವಿಭಾಗಗಳಿಗೆ ಸಾಕಷ್ಟು ಗಮನ ನೀಡುವಂತೆ ಶಿಕ್ಷಕರು ಖಚಿತಪಡಿಸಿಕೊಳ್ಳಬೇಕು. ಏಕೆಂದರೆ ನಾವೆಷ್ಟು ಜ್ಞಾನವನ್ನುಗಳಿಸಿದ್ದರೂ , ಎಷ್ಟೇ ಸ್ಪಷ್ಟವಾಗಿ ವಿಚಾರಗಳನ್ನು ನೀಡುವಂತಿದ್ದರೂ, ನಮ್ಮ ಸಂಭಾಷಣೆಯ ಪರಿಣಾಮ ನಾವು ಅವರಲ್ಲಿ ಉಂಟುಮಾಡುವ ಗುಣಗಳು ಹಾಗೂ ಮನೋಭಾವನೆಗಳ ಮೇಲೆ ಆಧಾರಿತವಾಗಿರುತ್ತದೆ.

ಈ ಸರಣಿಯ ಪುಸ್ತಕಗಳಲ್ಲಿ ವಿವರಿಸಿರುವ ಸೇವಾಕಾರ್ಯಗಳನ್ನು ಪರಿಗಣಿಸುವುದು ಅಗತ್ಯ, ಅದು ಸಮುದಾಯದ ಬೆಳವಣಿಗೆ ಮತ್ತು ಪ್ರಗತಿಯತ್ತ ಕೇಂದ್ರೀಕೃತವಾದುದಾಗಿದ್ದರೂ, ಪ್ರಕ್ರಿಯೆಯ ಎಲ್ಲಾ ಅಂಶಗಳೂ ಅಧ್ಯಯನ ಮತ್ತು ಕೃತಿಯ ಮೂಲಕ ವ್ಯಕ್ತಿಯ ಸಾಮರ್ಥ್ಯವನ್ನು ಬೆಳೆಸುವುದನ್ನು ಆರಿಸುತ್ತದೆ. ಪ್ರತಿಯೊಬ್ಬ ಶಿಕ್ಷಕನೂ ತಿಳಿಯಬೇಕಾದುದೇನೆಂದರೆ ಈ ಕಾರ್ಯಗಳು ಒಂದರಮೇಲೊಂದರಂತೆ ರಚಿಸಲ್ಪಟ್ಟಿರುವುದು. ಪುಸ್ತಕದಿಂದ ಪುಸ್ತಕಕ್ಕೆ ಸಂಕೀರ್ಣತೆಯು ಅಧಿಕವಾಗುತ್ತಾ ಸಾಗುವುದು. ಪರಿಣಾಮಕಾರಿಯಾಗಿ ಪ್ರತಿಯೊಂದು ಕಾರ್ಯವನ್ನೂ ನಡೆಸುವುದನ್ನು ಕಲಿಯುವಿಕೆಯು, ಅವುಗಳನ್ನು ಅನುಸರಿಸುವುದಕ್ಕೆ ಅಗತ್ಯವಾದ ಸಾಮರ್ಥ್ಯವು ನಿರ್ಣಾಯಕವೆಂದು ಸಾಕ್ಷೀಕರಿಸಿದೆ. ಒಂದು ಮನೆಗೆ ನೀಡುವ ಹಲವಾರು ಭೇಟಿಯು ಸಂಭಾಷಣೆಯ ಮುಂದುವರಿಕೆಯಾಗುತ್ತಿದ್ದಂತೆ, ಈ ಪುಸ್ತಕದಲ್ಲಿ ಸೂಚಿಸಿರುವಂತೆ ಪುಸ್ತಕ-1 ಚಟುವಟಿಕೆಯಾದ ಭಕ್ತ್ಯಾತ್ಮಕ ಕೂಟವನ್ನು

ತಮ್ಮದೇ ಮನೆಯಲ್ಲಿ ಅಥವಾ ಇತರ ಹಲವರೊಡನೆ ನಡೆಸುವುದಕ್ಕಿಂತ ಸ್ಪಷ್ಟವಾಗಿ ಹೆಚ್ಚಿನ ಬೇಡಿಕೆಯದಾಗಿರುವುದು. ಮುಂಬರುವ ಸಂಕೀರ್ಣವಾದ ಸೇವಾ ಕಾರ್ಯಗಳನ್ನು ನಡೆಸಲು ಕಷ್ಟವಾಗುವುದಿಲ್ಲ ಭಾಗವಹಿಸುವವರು ಇಲ್ಲಿ ನೀಡಿದ ಸಾಮರ್ಥ್ಯಗಳಲ್ಲಿ ಪ್ರಗತಿ ಹೊಂದುವುದು ಅವಶ್ಯಕ.

ಪುಸ್ತಕ-1ರ ಪರಿಚಯದ ಭಾಗದಲ್ಲಿ ತಿಳಿಸಿರುವಂತೆ ತರಬೇತು ಸಂಸ್ಥೆಯ ತರಗತಿಗಳಲ್ಲಿ ಪ್ರಪಂಚದಾದ್ಯಂತದ ಭಾಗವಹಿಸುವವರು ವಿವಿಧ ಹಿನ್ನೆಲೆಯವರಾಗಿರುತ್ತಾರೆ ಮತ್ತು ಆರಂಭಿಕವಾಗಿ ಬಹಾಯಿ ಬೋಧನೆಗಳಲ್ಲಿ ವಿಭಿನ್ನ ಮಟ್ಟದ ಪರಿಚಯವನ್ನು ಹೊಂದಿರುತ್ತಾರೆ. ಈ ಎರಡನೆಯ ಪುಸ್ತಕವನ್ನು ಅವರು ಪ್ರಾರಂಭಿಸಿದಾಗ, ನಿಜವಾಗಿಯೂ ಅವರು ಪ್ರತಿಯೊಬ್ಬರೂ ತರಗತಿಗಳಿಂದ ತೆರೆಯಲ್ಪಟ್ಟಿರುವ ಸೇವಾ ಪಥದ ಮೇಲೆ ಸಾಗುತ್ತಿರುತ್ತಾರೆ. ಆದರೂ ಕೆಲವು ವ್ಯತ್ಯಾಸಗಳಿರುವುವು . ಉದಾಹರಣೆಗೆ ಯುವಜನತೆಯಲ್ಲಿ, ಅವರು ಮಕ್ಕಳ ತರಗತಿಗಳ ಹಾಗೂ ಕಿಶೋರ ವರ್ಗದ ಶೈಕ್ಷಣಿಕ ಕಾರ್ಯಕ್ರಮದ ಮೂಲಕ ಸಾಗಿದ್ದಲ್ಲಿ, ಪುಸ್ತಕದಲ್ಲಿ ನೀಡಿದ ಹಲವಾರು ವಾಕ್ಯಗಳು, ವಿಷಯವಸ್ತುಗಳು ಅವರಿಗೆ ಹೊಸದಾಗಿರುತ್ತವೆ ಅವುಗಳ ಅಧ್ಯಯನವು ಧರ್ಮದ ಜ್ಞಾನದ ಬಗ್ಗೆ ಅವರು ಆಳವಾಗಿ ಹೊಂದಲು ಸಾಧನವಾಗುವುದು. ಈ ನಿಟ್ಟಿನಲ್ಲಿ ಶಿಕ್ಷಕನು ತಂಡದ ಪ್ರತಿಯೊಬ್ಬ ಸದಸ್ಯನಲ್ಲೂ ಅಗತ್ಯವಾದ ನಮನೀಯತೆ ಮತ್ತು ಸೃಜನಾತ್ಮಕತೆಯನ್ನು ಪೋಷಿಸಲು ಸಿದ್ಧನಾಗಿರಬೇಕು. ತರಗತಿಯ ಮುಖ್ಯ ಉದ್ದೇಶವನ್ನು ಸಾಧಿಸಲು ಭಾಗವಹಿಸುವವರು ಅರ್ಥಪೂರ್ಣ ಹಾಗೂ ಉತ್ಸಾಹ ಪೂರಿತ ಸಂಭಾಷಣೆಯಲ್ಲಿ ತೊಡಗಲು ಸಮರ್ಥರಾಗಿರುವಂತೆ ನೋಡಿಕೊಳ್ಳಬೇಕು. ಸಾವಿರಾರು ಸ್ಥಳಗಳಲ್ಲಿ ಪುಸ್ತಕದ ಅಧ್ಯಯನವು ನಡೆಯುತ್ತಿರುವುದು ಸಮುದಾಯದ ರಚನೆಯ ಪ್ರಕ್ರಿಯೆಗೆ ಮೂರು ಘಟಕಗಳ ನೀಡುವಿಕೆಯು ಬೆಳವಣಿಗೆಯ ಅಂಶವಾದುದಲ್ಲ . ಕಳಿತುದನ್ನು ಕೃತಿಗಿಳಿಸುವುದು, ನಂತರ ಬೇರೆ ಸ್ಥಳಗಳಲ್ಲಿ ವಿವಿಧತೆಯನ್ನು ಪಾಲಿಸುವಾಗ ಶಿಕ್ಷಕನು ಹೆಚ್ಚಿನ ಗಮನವನ್ನು ತಂಡವು ಈ ಮೂಲಕ ಸಾಗುವಾಗ, ಪ್ರತಿಯೊಬ್ಬ ಸದಸ್ಯನ ಅವಶ್ಯಕತೆಗಳಿಗೆ ಪ್ರತಿಕ್ರಯಿಸುವುದು ಅವಶ್ಯಕ.



# ಬೋಧಿಸುವ ಆನಂದ

## ಉದ್ದೇಶ

ಬೋಧಿಸುವ ಆನಂದದ ಮೆಚ್ಚುವಿಕೆಯು ದೇವರ ನುಡಿಗಳನ್ನು ಇತರರೊಂದಿಗೆ ಹಂಚಿಕೊಳ್ಳುವ ಕಾರ್ಯದಲ್ಲಿ ಅಡಗಿದೆ.

# ವಿಭಾಗ -1

**'ಸೇವೆ ಸಲ್ಲಿಸಲು ಮೇಲೇಳುವುದು'** ರೂಹಿ ಸಂಸ್ಥೆಯಿಂದ ನೀಡಲ್ಪಟ್ಟಿರುವ ಪಠ್ಯಾನುಕ್ರಮಗಳಲ್ಲಿ ಎರಡನೆಯದಾಗಿದೆ. ಅದು ಅಧ್ಯಯನ ಮತ್ತು ಕೃತಿಗಳ ಸಮ್ಮಿಲನವನ್ನು ಅನ್ವೇಷಿಸುವುದು. ಇದರ ಗುರಿಯು ನೀವು ಪ್ರವೇಶಿಸಿರುವ ಸೇವಾಪಥದ : ಸ್ವಯಂ ನಿಮ್ಮದೇ ಆಧ್ಯಾತ್ಮಿಕ ಮತ್ತು ಭೌದ್ಧಿಕ ಬೆಳವಣಿಗೆಗೆ ಹಾಗೂ ಸಮಾಜದ ಪರಿವರ್ತನೆಗೆ ಕೊಡುಗೆ ನೀಡಬೇಕಾಗಿರುವ ದ್ವಿಮುಖ ಉದ್ದೇಶದಲ್ಲಿ ಮುಂದುವರೆಯುವಂತೆ ನಿಮಗೆ ಸಹಾಯ ಮಾಡುವುದೇ ಆಗಿದೆ. ಪ್ರಥಮ ಪಠ್ಯಾನುಕ್ರಮದ ಅಧ್ಯಯನದಲ್ಲಿನ ನಿಮ್ಮ ಭಾಗವಹಿಸುವಿಕೆಯಿಂದ, ನಾವು ಪರಿಭಾಷಿಸುತ್ತಿರುವ ಪಥವು ಸರಣಿ ಸೇವಾ ಕಾರ್ಯಗಳ ಕುರಿತಾಗಿರುವುದು ಎಂಬುದನ್ನು ತಿಳಿದಿರುವಿರಿ, ನಾವು ನಡೆಸಲಿರುವ ಈ ಕಾರ್ಯಗಳು ಬಹಾಉಲ್ಲಾರವರ ಬರವಣಿಗೆಗಳಲ್ಲಿ ದೂರದೃಷ್ಟಿಯ ನೂತನ ವಿಶ್ವ ವ್ಯವಸ್ಥೆಯ ಗುರಿಯತ್ತ ನಮ್ಮ ದೃಷ್ಟಿಯನ್ನು ನೆಟ್ಟಿರುವುದು. ಈ ರೀತಿಯಾಗಿ "ಸೇವಾ ಪಥದಲ್ಲಿ ಸಾಗುವುದು" – ಇದರಲ್ಲಿ ನಮ್ಮ ಪ್ರಯತ್ನಗಳು **ಆತನ** ಬೋಧನೆಗಳು ನಮ್ಮದೇ ಜೀವನದಲ್ಲಿ ಮತ್ತು ಮಾನವ ಜನಾಂಗದ ಜೀವನದಲ್ಲಿ ಅಳವಡಿಸುವುದರಲ್ಲಿ ಇರುವುದು. ಸ್ವಯಂ **ಆತನೇ** ತನ್ನ ಪ್ರಕಟಣೆಯನ್ನು ಈ ಕೆಳಕಂಡ ನುಡಿಗಳಲ್ಲಿ ಹೇಳಿರುವನು:-

> **"ಓ ನನ್ನ ಸೇವಕರೇ! ನನ್ನ ಪವಿತ್ರ, ದಿವ್ಯಾಮೃತ ದರ್ಶನವನ್ನು ಅತಿಶಯ ತೇಜಸ್ಸಿನ, ಬೆಲೆಬಾಳುವ ಮುತ್ತು ರತ್ನಗಳನ್ನು ಅದರಾಳದಲ್ಲಿ ಅಡಗಿಸಿಟ್ಟಿರುವ ಒಂದು ಮಹಾಸಾಗರಕ್ಕೆ ಹೋಲಿಸಬಹುದು. ಪ್ರತಿಯೊಬ್ಬ ಅನ್ವೇಷಿಗನು ತನ್ನಿಂದ ತಾನೇ ಪ್ರೇರಿತಗೊಂಡು ಮತ್ತು ಯತ್ನದ ಮೂಲಕ ಈ ಸಾಗರದ ಅಂಚನ್ನು ಸಾಧಿಸುವುದು ಅವನ ಕರ್ತವ್ಯವಾಗಿರತಕ್ಕದ್ದು, ಇದರಿಂದ ಅವನ ಹುಡುಕಾಟದ ಕಾತುರತೆ ಮತ್ತು ಅವನ ಪ್ರಯತ್ನದ ಪ್ರಮಾಣಕ್ಕೆ ಅನುಗುಣವಾಗಿ, ದೇವರ ಬದಲಾಯಿಸಲಾಗದ ಮತ್ತು ಗುಪ್ತಶಾಸನಗಳಲ್ಲಿರುವಂತಹ ಪೂರ್ವ ವಿಧಾಯಕ ಪ್ರಯೋಜನಗಳಲ್ಲಿ ಪಾಲನ್ನು ಪಡೆಯಬಹುದು."[1]**

ಮೊದಲ ಈ ಘಟಕದಲ್ಲಿ, ಬಹಾಉಲ್ಲಾರವರ ದಿವ್ಯದರ್ಶನದ ಸಾಗರದಲ್ಲಿ ಹುದುಗಿರುವ ವಿವೇಕದ ಮುತ್ತುರತ್ನಗಳನ್ನು ಅನ್ವೇಷಿಸುತ್ತಿದ್ದಂತೆ ಹಾಗೂ ಅವುಗಳನ್ನು ಇತರರೊಂದಿಗೆ ಹಂಚಿಕೊಂಡಾಗ ನಮ್ಮ ಹೃದಯಗಳು ಆನಂದ ಪರವಶವಾಗುವುದು. ಪುಸ್ತಕ1-ರ ಅಧ್ಯಯನದಿಂದ ನೀವು ಈಗಾಗಲೇ ಆತನ ಬರವಣಿಗೆಗಳಲ್ಲಿ ದೈವೀಮಾರ್ಗದರ್ಶನವೆಂಬ ಅತ್ಯಂತ ಸುಂದರವಾದ ಮುತ್ತುರತ್ನಗಳನ್ನು ನೋಡಿರುವಿರಿ. ಈಗ ಇನ್ನೂ ಕೆಲವು ಆಯ್ದ ಭಾಗಗಳ ಮೇಲೆ ವಿಚಾರ ಮಾಡೋಣ:

> **"ದೇವರ ವಚನಗಳು ಒಂದು ದೀಪದಂತೆ, ಅದರ ಬೆಳಕು ಈ ನುಡಿಗಳಲ್ಲಿದೆ : "ನೀವೆಲ್ಲರೂ ಒಂದೇ ಮರದ ಹಣ್ಣುಗಳು ಮತ್ತು ಒಂದೇ ರೆಂಬೆಯ ಎಲೆಗಳು." [2]**
>
> **"ಸಮಸ್ತ ವಸ್ತುಗಳಲ್ಲಿ ನನ್ನ ದೃಷ್ಟಿಗೆ ಅತ್ಯಂತ ಸುಪ್ರಿಯವಾದದ್ದು ನ್ಯಾಯ. ನಾನು ನಿನ್ನ ಆಕಾಂಕ್ಷೆಯಾಗಿದ್ದಲ್ಲಿ ಅದರಿಂದ ನೀನು ವಿಮುಖನಾಗಬೇಡ, ಅದನ್ನು ನೀನು ಅಲಕ್ಷಿಸಬೇಡ ಇದರಿಂದ ನಾನು ನಿನ್ನಲ್ಲಿ ವಿಶ್ವಾಸವಿಡಬಹುದು. "[3]**
>
> **"ನೀವು ವಾಸಿಸುತ್ತಿರುವ ಯುಗದ ಅಗತ್ಯತೆಗಳಿಗೆ ಕಾತುರತೆಯ ಕಾಳಜಿವಹಿಸಿರಿ ಮತ್ತು ನಿಮ್ಮೆಲ್ಲಾ ಚಿಂತನೆಗಳನ್ನೂ ತುರ್ತು ಅವಶ್ಯಕತೆ ಮತ್ತು ಬೇಡಿಕೆಗಳ ಮೇಲೆ ನಿಮ್ಮ ಗಮನವನ್ನು ಕೇಂದ್ರೀಕರಿಸಿ."[4]**
>
> **"ಎಲ್ಲಾ ಮಾನವರು ಸೃಷ್ಟಿಸಲ್ಪಟ್ಟಿರುವುದು ಎಂದೂ ಮುಂದುವರೆಯುತ್ತಿರುವ ಈ ನಾಗರಿಕತೆಯನ್ನು ಮುನ್ನಡೆಸುವುದಕ್ಕಾಗಿಯೇ ಆಗಿದೆ."[5]**
>
> **"ಪ್ರಪಂಚವು ಸರಿದುಹೋಗುವುದು ಮತ್ತು ಶಾಶ್ವತವಾಗಿರುವುದೆಂದರೆ ದೇವರ ಪ್ರೀತಿಯೇ ಆಗಿದೆ"[6]**
>
> **"ನೀನು ನನ್ನ ದೀಪ ನಿನ್ನೊಳಗೇ ನನ್ನ ಜ್ಯೋತಿ ಇದೆ. ಅದರಿಂದ ಮಾತ್ರ ನಿನ್ನ ಉಜ್ವಲತೆಯನ್ನು ಪಡೆ! ನನ್ನನ್ನುಳಿದು ಇನ್ನಾವುದನ್ನು ಅರಸಿ ಅಲೆದಾಡಬೇಡ, ಏಕೆಂದರೆ ಆಗರ್ಭ ಶ್ರೀಮಂತನನ್ನಾಗಿಸಿ ನಿನ್ನನ್ನು ನಾನು ಸೃಷ್ಟಿಸಿದ್ದೇನೆ. ನನ್ನ ಕೃಪೆಯನ್ನೆಲ್ಲಾ ಸಮೃದ್ಧವಾಗಿ ನಿನ್ನ ಮೇಲೆ ಸುರಿಸಿದ್ದೇನೆ."[7]**

ಈ ಚಿಕ್ಕ ವಾಕ್ಯಾಂಶಗಳನ್ನು ನೀವು ಕಂಠಪಾಠ ಮಾಡಲು ಇಚ್ಛಿಸಬಹುದು .

# ವಿಭಾಗ -2

ಈ ಘಟಕದ ಮುಖ್ಯ ಪರಿಕಲ್ಪನೆಯತ್ತ ನಿಮ್ಮ ಪರ್ಯಾಲೋಚನೆಯನ್ನು ಪ್ರಾರಂಭಿಸಲು, ಈ ಹಿಂದಿನ ವಿಭಾಗದಲ್ಲಿನ ಮೊದಲನೆಯ ವಾಕ್ಯಾಂಶವನ್ನು ಮತ್ತೊಮ್ಮೆ ಓದಿದ ನಂತರ ಈ ಕೆಳಗಿನ ಅಭ್ಯಾಸವನ್ನು ಪೂರ್ತಿಗೊಳಿಸಿ :

ಈ ಕೆಳಕಂಡ ವಾಕ್ಯಗಳನ್ನು ಪೂರ್ಣಗೊಳಿಸಿರಿ:-

(ಅ) _______________ ಮತ್ತು ____________ ಮೂಲಕ ಬಹಾಉಲ್ಲಾರ ದರ್ಶನ ಸಾಗರದ _____________ ತಲುಪುವುದು ನಮ್ಮೆಲ್ಲರ ಕರ್ತವ್ಯವಾಗಿರುವುದು.

(ಆ) ನಾವು ಬಹಾ'ಉ'ಲ್ಲಾರವರ ದರ್ಶನದ ಸಾಗರದ ಅಂಚನ್ನು ತಲುಪಲು ಶ್ರಮಿಸಬೇಕು ಅದರಿಂದ ದೇವರ ಬದಲಾಯಿಸಲಾಗದ ಮತ್ತು ಗುಪ್ತಶಾಸನಗಳಲ್ಲಿರುವಂತಹ ಪೂರ್ವ ವಿಧಾಯಕ ____________________ ಪಾಲನ್ನು ಪಡೆಯಬಹುದು.

(ಇ ) ಬಹಾ'ಉ'ಲ್ಲಾರವರ ದರ್ಶನ ಸಾಗರದ ಪ್ರಯೋಜನಗಳಲ್ಲಿ ಪಾಲನ್ನು ಪಡೆಯುವುದು ______________________________________________________________________________________________ ______________________________ಅನುಗುಣವಾಗಿರುವುದು.

2. ಒಬ್ಬನು 'ತನ್ನಿಂದ ತಾನೇ ಪ್ರೇರಿತಗೊಂಡು' ಎಂಬುದರ ಅರ್ಥವೇನು?

3. ಯಾವುದನ್ನಾದರೂ 'ಸಾಧಿಸಲು ಯತ್ನಿಸು' ಎಂಬುದರ ಅರ್ಥವೇನು?

4. ಪ್ರತಿಯೊಬ್ಬ ಅನ್ವೇಷಿಗನೂ ಹೊಂದಲು ಪ್ರಯತ್ನಿಸಬೇಕಾದುದೇನು?

5. 'ಪ್ರಮಾಣಕ್ಕೆ ಅನುಗುಣವಾಗಿ' ಎಂಬುದರ ಅರ್ಥವೇನು?

6.ಆತನ ದರ್ಶನ ಸಾಗರದ ಅನುಗ್ರಹಗಳನ್ನು ನಾವು ಮಾಡುವ ಪ್ರಯತ್ನಗಳಿಗೆ ಅನುಸಾರವಾಗಿ ಪಡೆಯುತ್ತೇವೆ ಎಂದು ಬಹಾ'ಉ'ಲ್ಲಾರವರು ನಮಗೆ ಹೇಳುತ್ತಾರೆ.

ಅ. ಈ ಅನುಗ್ರಹಗಳನ್ನು ಪಡೆಯಲು ನಾವು ಮಾಡಬೇಕಾದ ಪ್ರಯತ್ನದಲ್ಲಿ ಕೆಲವು ಉದಾಹರಣೆಗಳನ್ನು ನೀಡಿ :

______________________________________________________________________________________________
______________________________________________________________________________________________
______________________________________________________________________________________________
______________________________________________________________________________________________
______________________________________________________________________________________________
______________________________________________________________________________________________

ಆ. ನಾವು ಪಡೆಯುವ ಅನುಗ್ರಹಗಳ ಕೆಲವು ಉದಾಹರಣೆಗಳನ್ನು ನೀಡಿರಿ:

______________________________________________________________________________________________
______________________________________________________________________________________________
______________________________________________________________________________________________
______________________________________________________________________________________________
______________________________________________________________________________________________
______________________________________________________________________________________________

**4-ಸೇವೆ ಸಲ್ಲಿಸಲು ಮೇಲೇಳುವುದು**

## ವಿಭಾಗ -3

ಬಹಾ'ಉ'ಲ್ಲಾರವರ ದಿವ್ಯ ದರ್ಶನವನ್ನು ಬೆಲೆ ಕಟ್ಟಲಾಗದ ಮುತ್ತುರತ್ನಗಳನ್ನೊಳಗೊಂಡ ಒಂದು ಸಾಗರಕ್ಕೆ ಹೋಲಿಸಬಹುದೆಂದು ತಿಳಿದ ನಂತರ, ಅದರ ಅನುಗ್ರಹಗಳಲ್ಲಿ ಭಾಗಿಯಾಗಲು ನಾವು ಪ್ರತಿಯೊಬ್ಬರು ಪ್ರಯತ್ನ ಮಾಡಬೇಕು ಹಾಗೂ ಇತರರೂ ಅದರ ಅಂಚನ್ನು ತಲುಪಲು ಸಹಾಯ ಮಾಡಬೇಕು. ಆದರೆ ಈ ಸಾಗರದ ಅಂಚು ಎಷ್ಟು ದೂರದಲ್ಲಿದೆ? ಎಂದು ನಮ್ಮನ್ನು ನಾವು ಪ್ರಶ್ನಿಸಿಕೊಳ್ಳಬೇಕು. ಬಹಾ'ಉ'ಲ್ಲಾ ರವರು ಈ ರೀತಿ ಘೋಷಿಸಿರುವರು :

> **"ಓ ನನ್ನ ಸೇವಕರೇ! ನಿಜವಾದ ದೇವನೊಬ್ಬನೇ ನನ್ನ ಸಾಕ್ಷಿ! ಈ ಸರ್ವೋಚ್ಚ, ಅಗಾಧವಾದ ಮೊರೆಯುವ ಸಾಗರವು ಸಮೀಪ, ಬೆರಗಾಗುವಷ್ಟು ಸಮೀಪದಲ್ಲಿಯೇ ಇದೆ. ಇಗೋ ಅದು ನಿಮ್ಮ ಜೀವ-ನಾಡಿಗಿಂತಲೂ ಹತ್ತಿರವಿದೆ ! ನೀವು ಇಚ್ಚಿಸಿದಲ್ಲಿ, ಕಣ್ಣು ಮಿಟುಕಿಸುವುದುಕ್ಕಿಂತಲೂ ಶೀಘ್ರವಾಗಿ, ಈ ದೈವಾನುಗ್ರಹದಲ್ಲಿ , ಈ ಕಲುಷಿತಗೊಳ್ಳದ ಕೊಡುಗೆಯಲ್ಲಿ, ಈ ಅತ್ಯಂತ ಸಮರ್ಥ ಮತ್ತು ಮಾತಿನಲ್ಲಿ ವರ್ಣಿಸಲಾಗದ ವೈಭವಯುತ ಔದಾರ್ಯತೆಯಲ್ಲಿ, ಈ ಅವಿನಾಶೀ ಒಲುಮೆಯಲ್ಲಿ ಪಾಲ್ಗೊಳ್ಳುವಿರಿ. "[8]**

1. "ಈ ಸರ್ವೋಚ್ಚ, ಅಗಾಧವಾದ, ಮೊರೆಯುವ ಸಾಗರ" ಎಂಬ ನುಡಿಗಟ್ಟು ಯಾವುದನ್ನು ಸೂಚಿಸುವುದು?
   ______________________________________________________________

2. ಈ ಸಾಗರವು ನಮಗೆ ಎಷ್ಟು ಸಮೀಪದಲ್ಲಿದೆ
   ______________________________________________________________
   ____________________________________

3. ನಾವು ಎಷ್ಟು ತ್ವರಿತವಾಗಿ ಈ ಸಾಗರವನ್ನು ತಲುಪಬಹುದು?
   ______________________________________________________________
   ____________________________________

4. ಕೆಳಕಂಡ ವಾಕ್ಯಗಳನ್ನು ಪೂರ್ಣಗೊಳಿಸಿರಿ:-

ಅ) ಬಹಾ'ಉ'ಲ್ಲಾರವರ ಈ ಸರ್ವೋಚ್ಚ ದರ್ಶನ ಸಾಗರವು ________________________________ ವಷ್ಟು ಸಮೀಪವಿದೆ .

ಆ) ) ಬಹಾ'ಉ'ಲ್ಲಾರವರ ದರ್ಶನ ಸಾಗರವು ನಮ್ಮ ಜೀವ-ನಾಡಿಗಿಂತಲೂ ___________________________ .

ಇ) ನಾವು ಇಚ್ಚಿಸಿದಲ್ಲಿ ಮಾತ್ರ __________________________________ಅದನ್ನು ತಲುಪಬಹುದು ಮತ್ತು _____________________ ಪಾಲ್ಗೊಳ್ಳಬಹುದು.

ಈ) ಕಣ್ಣು ಮಿಟುಕಿಸುವುದಕ್ಕಿಂತಲೂ ಶೀಘ್ರವಾಗಿ ನಾವು ___________________________________ **ಆತನ** ದಿವ್ಯದರ್ಶನದ ಸಾಗರದಲ್ಲಿ____________________________ ಪಾಲ್ಗೊಳ್ಳಬಹುದು.

## ವಿಭಾಗ -4

ಬಹಾಉಲ್ಲಾರವರ ದಿವ್ಯದರ್ಶನದ ಸಾಗರದ ಅಂಚನ್ನು ತಲುಪಿದ ನಂತರ ನಾವು ಅದರ ಸಂಪತ್ತಿನಿಂದ ಪಡೆದುದ್ದನ್ನು ಉದಾರವಾಗಿ ಮತ್ತು ಯಾವುದೇ ನಿರ್ಬಂಧವಿಲ್ಲದೆ ಆ ದೈವೀ ಮಾರ್ಗದರ್ಶನವೆಂಬ ಮುತ್ತುಗಳನ್ನು ಇತರರೊಂದಿಗೆ ಹಂಚಿಕೊಳ್ಳುವೆವು ಅವುಗಳನ್ನು ಸ್ವಯಂ ನಮ್ಮ ಅಧ್ಯಯನ, ಪ್ರಾರ್ಥನೆಯ ಹಾಗೂ ಧ್ಯಾನದ ಸಮಯಗಳಲ್ಲಿ ಮತ್ತು ಆತನ ಧರ್ಮದ ಹಾಗೂ ಮಾನವತೆಗೆ ನಾವು ಸಲ್ಲಿಸುವ ಸೇವೆಗಳಲ್ಲಿ ಅನ್ವೇಷಿಸುವೆವು. ಈ ಪವಿತ್ರ ಕರ್ತವ್ಯವನ್ನು ನಿರಂತರ ನೆನಪಿಸುವ, ಈ ಕೆಳಕಂಡ ಉಲ್ಲೇಖವನ್ನು ನೀವು ಕಂಠಪಾಠ ಮಾಡಲು ಸ್ವಲ್ಪ ಸಮಯವನ್ನು ತೆಗೆದುಕೊಳ್ಳಲಿಚ್ಚಿಸಬಹುದು.

> **"ದೈವ ಪಥದಲ್ಲಿ ಸಾಗುವ ಓ ಪಥಿಕನೇ! ಆತನ ದಯಾಸಾಗರದಿಂದ ನಿನ್ನ ಪಾಲಿನದನ್ನು ತೆಗೆದುಕೋ ಮತ್ತು ಅದರ ಆಳಗಳಲ್ಲಿ ಅಡಗಿರುವ ವಸ್ತುಗಳಿಂದ ನಿನ್ನನ್ನು ನೀನು ವಂಚಿತನಾಗಿಸಿಕೊಳ್ಳಬೇಡ. ಅದರ**

**ಭಂಡಾರಗಳನ್ನು ಪಡೆದುಕೊಂಡವರಲ್ಲಿ ನೀನು ಒಬ್ಬನಾಗು. ಈ ಸಾಗರದ ಒಂದು ಹನಿಯು ಭೂ ಸ್ವರ್ಗದಲ್ಲಿರುವ ಎಲ್ಲದರ ಮೇಲೆ ಬಿದ್ದರೆ, ಸರ್ವ-ಶಕ್ತ, ಸರ್ವಜ್ಞ, ಸರ್ವ-ವಿವೇಕಿಯಾದ, ಭಗವಂತನ ಕೃಪೆಯೊಂದಿಗೆ ಸಮೃದ್ಧಗೊಳಿಸಲು ಸಾಕಷ್ಟಾಗುವುದು. ಪರಿತ್ಯಕ್ತತೆಯ ಕರಗಳಿಂದ ಆ ಜೀವ-ನೀಡುವ ಜಲವನ್ನು ಹೊರತೆಗೆ, ಮತ್ತು ಆ ಜಲವನ್ನು ಸೃಷ್ಟಿಸಿದ ಎಲ್ಲಾ ವಸ್ತುಗಳ ಮೇಲೆ ಸಿಂಪಡಿಸು, ಇದರಿಂದ ಅವರು ಮಾನವ-ನಿರ್ಮಿತ ಇತಿಮಿತಿಗಳಿಂದ ಪರಿಶುದ್ಧವಾಗಿ ಮತ್ತು ಆ ಪ್ರತಿಷ್ಠಿತ ಮತ್ತು ಉಜ್ವಲ ತಾಣದತ್ತ, ದೇವರ ಪರಾಕ್ರಮ ಉಳ್ಳ ಪೀಠದತ್ತ ಸಾಗಬಹುದು.”[9]**

## ವಿಭಾಗ- 5

ಅಧ್ಯಯನ ಮತ್ತು ಅದಕ್ಕೆ ಅಗತ್ಯವಾದ ಕಾರ್ಯಗಳನ್ನು ನಡೆಸುತ್ತ ತರಬೇತಿ ಸಂಸ್ಥೆಯ ತರಗತಿಗಳಲ್ಲಿ ಮುಂದೆ ಸಾಗುತ್ತಿದ್ದಂತೆ, ನಮ್ಮ ಸೇವಾ ಸಾಮರ್ಥ್ಯವು ಬೆಳೆಯುವುದು, ನಾವು ಸೇವಾಕಾರ್ಯವನ್ನು ನಡೆಸಲು ಶಕ್ಯರಾಗುವೆವು, ಅದು ನಮ್ಮ ಹೃದಯಗಳಿಗೆ ಅತೀವ ಆನಂದವನ್ನು ತರುವುದು ಹಾಗೂ ದ್ವಿಮುಖ ಉದ್ದೇಶವನ್ನು ಸಾಧಿಸಲು - ಮಕ್ಕಳ ಆಧ್ಯಾತ್ಮಿಕ ತರಗತಿಗಳಿಗೆ ಬೋಧಿಸುವುದು, ಕಿಶೋರರು ತಮ್ಮ ಸಶಕ್ತೀಕರಣ ಕಾರ್ಯಕ್ರಮದಲ್ಲಿ ತೊಡಗಿಸುವಂತೆ ಮಾಡುವುದು ಹಾಗೂ ಮಿತ್ರರು ಪ್ರಮುಖ ಸರಣಿಯ ಪುಸ್ತಕಗಳ ಅಧ್ಯಯನದಲ್ಲಿ ಭಾಗವಹಿಸಲು, ಸಹಾಯ ಮಾಡುವುದು. ಈ ಎಲ್ಲಾ ಪ್ರಯಾಣದಲ್ಲೂ ನಾವು ಇತರ, ಕಿರಿಯರು ಮತ್ತು ಹಿರಿಯರೊಂದಿಗೆ ಹಂಚಿಕೊಳ್ಳುವುದು ಸ್ಫೂರ್ತಿಗೆ ನಿರಂತರ ಮೂಲವಾಗಿರುವುದು. ಆದುದರಿಂದ ನಾವು ಮಾನವ ಹೃದಯಗಳ ಮೇಲೆ ಉಂಟು ಮಾಡುವುದರ ಶಕ್ತಿ ಮತ್ತು ಪ್ರಭಾವದ ಮೇಲೆ ಮನನ ಮಾಡತಕ್ಕದ್ದೇ ಸರಿ. ಈ ಶಕ್ತಿಯ ಕುರಿತು ಬಹಾ’ಉ’ಲ್ಲಾರವರು ಈ ಕೆಳಕಂಡಂತೆ ಉಲ್ಲೇಖಿಸಿರುವರು :

**“ದೇವರ ನುಡಿಗಳನ್ನು ಒಂದು ಗಿಡಕ್ಕೆ ಹೋಲಿಸಬಹುದು, ಅದರ ಬೇರುಗಳನ್ನು ಮಾನವ ಹೃದಯಗಳಲ್ಲಿ ನೆಡಲಾಗಿದೆ. ಅದರ ಬೆಳವಣಿಗೆಯನ್ನು ಜೀವ ಜಲದ ವಿವೇಕದಿಂದ, ಪವಿತ್ರ ಮತ್ತು ದಿವ್ಯ ನುಡಿಗಳ ಮೂಲಕ ಪೋಷಿಸುವುದು ನಿಮಗೆ ಅನಿವಾರ್ಯವಾಗಿದೆ. ಇದರಿಂದ ಅದರ ಬೇರುಗಳು ದೃಡವಾಗಿ ನೆಡಲ್ಪಟ್ಟು ಅದರ ಕೊಂಬೆಗಳು ಸ್ವರ್ಗ ಮತ್ತು ಅದನ್ನು ಮೀರಿದ ಎತ್ತರಕ್ಕೂ ಪಸರಿಸುವಂತಾಗುವುದು." [10]**

1. ದೇವರ ನುಡಿಗಳನ್ನು ಯಾವುದಕ್ಕೆ ಹೋಲಿಸಬಹುದು ?
   ______________________________________________
   ______________________________________________

2. ದೇವರ ನುಡಿಯೆಂಬ ವೃಕ್ಷದ ಬೇರುಗಳನ್ನು ಎಲ್ಲಿ ನೆಡಲಾಗಿದೆ?
   ______________________________________________
   ______________________________________________

3. ಈ ಗಿಡದ ಬೆಳವಣಿಗೆಯನ್ನು ನಾವು ಹೇಗೆ ಪೋಷಿಸಬಹುದು?
   ______________________________________________
   ______________________________________________

4. ಈ ಗಿಡವು ಎಷ್ಟು ಎತ್ತರಕ್ಕೆ ಬೆಳೆಯುವುದು ?
   ______________________________________________
   ______________________________________________

5. ದೇವರ ನುಡಿಗಳನ್ನು ಇತರರೊಡನೆ ಹಂಚುವುದು ಅತ್ಯಗತ್ಯ” ಎಂಬುದನ್ನು ಕೆಲವು ವಾಕ್ಯಗಳಲ್ಲಿ ವಿವರಿಸಿರಿ.______________________________________
   ______________________________________________
   ______________________________________________
   ______________________________________________
   ______________________________________________
   ______________________________________________
   ______________________________________________
   ______________________________________________
   ______________________________________________
   ______________________________________________
   ______________________________________________

## ವಿಭಾಗ 6

ನಮ್ಮ ದೈನಂದಿನ ಜೀವನದಲ್ಲಿ ನಾವು ನಡೆಸುವ ಹಲವಾರು ಚಟುವಟಿಕೆಗಳ ಬಗ್ಗೆ ಆಲೋಚಿಸೋಣ. ನಾವು ನಮ್ಮ ದೇಹವನ್ನು ಪೋಷಿಸುತ್ತೇವೆ. ನಮ್ಮ ಮಾನಸಿಕ ಸಾಮರ್ಥ್ಯವನ್ನು ವಿಸ್ತರಿಸಲು ಮತ್ತು ಹೊಸ ಜ್ಞಾನವನ್ನು ಗಳಿಸಲು ಅಧ್ಯಯನ ಮಾಡುತ್ತೇವೆ. ನಾವು ಕೆಲಸ ಮಾಡಿ ಕೌಶಲ್ಯಗಳನ್ನು ಬೆಳಸಿಕೊಳ್ಳುವುದರ ಮೂಲಕ ಸಮಾಜದಲ್ಲಿ ಉಪಯುಕ್ತ ಜೀವನವನ್ನು ನಡೆಸಲು ಸಮರ್ಥರಾಗುತ್ತೇವೆ. ನಾವು ಕ್ರೀಡೆ ಮತ್ತು ಮನರಂಜನೆಯಲ್ಲಿ ನಮ್ಮನ್ನು ತೊಡಗಿಸಿಕೊಳ್ಳುತ್ತೇವೆ. ಇಂತಹ ಅನೇಕ ಚಟುವಟಿಕೆಗಳೆಲ್ಲವೂ ನಮ್ಮ ಬೌದ್ಧಿಕ ಪ್ರಗತಿ ಮತ್ತು ಭೌತಿಕ ಒಳಿತಿಗೂ ಮುಖ್ಯವಾಗಿದ್ದು, ನಮ್ಮ ಸಮಯದ ಹೆಚ್ಚಿನ ಭಾಗವನ್ನು ಆವರಿಸುವುದು. ಆದರೆ ಪ್ರತಿದಿನ ಕೆಲವು ವಿಶೇಷ ಕ್ಷಣಗಳು ಆಧ್ಯಾತ್ಮಿಕತೆಯಿಂದ ತುಂಬಿ, ನಾವು ಪ್ರಾರ್ಥನೆಯಲ್ಲಿ ಮುಳುಗಿದಾಗ, ನಾವು ಏಕಾಂತವಾಗಿ ಅಥವಾ ಮಿತ್ರರೊಂದಿಗೆ ದೈವೀ ಬೋಧನೆಗಳ ಕುರಿತು ಜ್ಞಾನಾರ್ಜನೆ ಮಾಡುವಾಗ, ಅಥವಾ ಅಸಂಖ್ಯಾತ ವಿಷಯಗಳು ಯಾವುದಾದರೊಂದು ರೀತಿಯಲ್ಲಿ, ಬಹಾ'ಉ'ಲ್ಲಾರವರ ದರ್ಶನದ ಸಾಗರದಲ್ಲಿ ಅಡಗಿರುವ ಮುತ್ತುಗಳನ್ನು ಅನ್ವೇಷಿಸಲು ನಮ್ಮ ಸುತ್ತಮುತ್ತಲಿರುವವರಿಗೆ ನಾವು ಸಹಾಯ ಮಾಡುವಾಗ ಇರಬಹುದು, ಈ ಎಲ್ಲವೂ ಅಳೆಯಲಾಗದ ಅಮೂಲ್ಯವಾದ ಕ್ಷಣಗಳಲ್ಲವೇ? ಈ ಸ್ವರ್ಗೀಯ ಅನುಗ್ರಹಗಳಲ್ಲಿ ಭಾಗಿಯಾಗುವುದಕ್ಕಿಂತ ಬೇರೆ ಯಾವುದಾದರೂ ಆನಂದ ಇದೆಯೇ?

ಮಾನವತೆಯ ಉನ್ನತಿಗಾಗಿ ನಮ್ಮನ್ನು ಸಮರ್ಪಿಸಿಕೊಳ್ಳಬೇಕು ಎಂದು ಅಬ್ದುಲ್ ಬಹಾರವರು ನಮ್ಮನ್ನು ಪ್ರೋತ್ಸಾಹಿಸಿರುವರು ಎಂಬುದನ್ನು ನಾವು ಯಾವಾಗಲೂ ನೆನಪಿಸಿಕೊಳ್ಳಬೇಕು.

**"ಒಂದೇ ದೈವೀ ಉದ್ದೇಶಕ್ಕಾಗಿ ನಾವೆಲ್ಲರೂ ಸೇರಿದ್ದೇವೆ, ಯಾವುದೇ ಭೌತಿಕ ಉದ್ದೇಶವು ನಮ್ಮದಲ್ಲ, ಹಾಗೂ ನಮ್ಮ ಅತಿ ಹೆಚ್ಚಿನ ಆಶಯವೆಂದರೆ ದೇವರ ಪ್ರೀತಿಯನ್ನು ಪ್ರಪಂಚದಾದ್ಯಂತ ಹರಡುವುದೇ ಆಗಿದೆ."[11]**

ವಿಭಾಗ-1ರಲ್ಲಿ ನೀವು ಕಂಠಪಾಠ ಮಾಡಿರುವ ಯಾವುದಾದರೊಂದು ಶ್ಲೋಕವನ್ನು ನಿಮ್ಮ ಮಿತ್ರನೊಬ್ಬನಿಗೆ ಹಂಚಿಕೊಳ್ಳುವ ಅವಕಾಶವು ಒದಗಿ ಬರುವುದೆಂದಿಟ್ಟುಕೊಳ್ಳಿ. ನಿಮ್ಮ ಹೃದಯದಲ್ಲಿ ಅನುಭವಿಸುವ ಆನಂದವು ಎಲ್ಲಿಂದ ಬರುವುದು? ಸ್ವಾಭಾವಿಕವಾಗಿ, ನಿಮ್ಮ ಮಿತ್ರನು ಬಹಾಉಲ್ಲಾರವರ ನುಡಿಗಳಿಂದ ಉತ್ಸಾಹಿತನಾಗಿರುವನು ಎಂಬ ನಿರೀಕ್ಷೆಯಲ್ಲಿರುವಿರಿ. ಆದರೆ ನೀವು ನಿರೀಕ್ಷಿಸಿದಂತಹ ಉತ್ಸಾಹವನ್ನು ಅವನು ಅಥವಾ ಅವಳು ತೋರಿಸದಿದ್ದರೆ ? ನಿಮ್ಮ ಹೃದಯದಲ್ಲಿನ ಆನಂದವು ಒಮ್ಮೆಲೆ ಕಾಣೆಯಾಗುವುದೇ ? ಏಕೆ ಹಾಗಾಗದು ?

__________________________________________________
__________________________________________________
__________________________________________________
__________________________________________________
__________________________________________________

## ವಿಭಾಗ 7

ನಮ್ಮ ಜೀವನದಲ್ಲಿ ನಾವು ಮಾಡುವ ಎಲ್ಲಾ ಕಾರ್ಯಕ್ಕಿಂತಲೂ, ದೇವರ ನುಡಿಗಳನ್ನು ಇತರರೊಂದಿಗೆ ವ್ಯಯಿಸಿದ ಸಮಯಕ್ಕೆ ವಿಶೇಷ ಅನುಗ್ರಹಗಳು ಇರುವುದು, ಎಂಬುದನ್ನು ಕಂಡುಕೊಂಡಾಗ, ನಾವು ಈ ಅತ್ಯಂತ ಪ್ರಮುಖ ತೀರ್ಮಾನಕ್ಕೆ ಬಂದೆವು: ಸೇವೆಯಿಂದ ನಾವು ಗಳಿಸುವ ಆನಂದವು ಸೇವಾಕಾರ್ಯದಿಂದಲೇ ಬರುವುದು. ನಾವು ನಡೆಸುವ ಸೇವಾಚಟುವಟಿಕೆಗಳು ಅರ್ಹ ಫಲಿತಾಂಶವನ್ನೇ ನೀಡುವುದು, ಎಂಬ ಭರವಸೆಯನ್ನು ತಾಳುವೆವು, ಆದರೆ ನಾವು ಅತಿಯಾಗಿ ಫಲಿತಾಂಶಕ್ಕೆ ಅಂಟಿಕೊಂಡಲ್ಲಿ, ಹೊಗಳಿಕೆ ಅಥವಾ ಟೀಕೆಗಳಿಂದ ಹೆಚ್ಚಾಗಿ ಘಾಸಿಗೊಂಡರೆ, ನಾವು ಬೋಧನೆಯಲ್ಲಿನ ಆನಂದವನ್ನು ಕಳೆದುಕೊಳ್ಳುತ್ತೇವೆ. ನಮ್ಮನ್ನು ಪ್ರೇರೇಪಿಸಬೇಕಾದ ಅಂಶವೇ ದೇವರ ಮೇಲಿನ ಪ್ರೀತಿ, ಸಫಲತೆಯ ಇಚ್ಛೆಯಿಂದಲೋ ಅಥವಾ ಲಾಭವನ್ನು ಗಳಿಸಲೋ , ಇತರರು ನಮ್ಮನ್ನು ಗುರುತಿಸಬೇಕೆಂಬುದಕ್ಕೋ ಆಗಿರಬಾರದು. ಆನಂದದಾಯಕ ಸೇವೆಗೆ ಅಗತ್ಯವಾದುದು ಈ ಎಲ್ಲದರಿಂದ ನಿರ್ಲಿಪ್ತತೆ. ಈ ವಿಷಯಾಂಶದ ಮೇಲೆ ಪ್ರತಿಫಲಿಸಲು ಈ ಕೆಳಕಂಡ ಉಲ್ಲೇಖಗಳ ಅಧ್ಯಯನವು ನಿಮಗೆ ಸಹಾಯ ಮಾಡುವುದು:-

**"ಓ ದ್ವೈತ ದೃಷ್ಟಿಯುಳ್ಳ ಮಾನವನೇ ! ಒಂದು ಕಣ್ಣನ್ನು ಮುಚ್ಚಿ ಇನ್ನೊಂದನ್ನು ತೆರೆ. ಪ್ರಪಂಚಕ್ಕೂ ಪ್ರಪಂಚದಲ್ಲಿರುವುದೆಲ್ಲಕ್ಕೂ ಒಂದನ್ನು ಮುಚ್ಚು ಮತ್ತು ಇನ್ನೊಂದನ್ನು ಸಂಪ್ರೀತನ ಪವಿತ್ರ ಸೌಂದರ್ಯಕ್ಕೆ ತೆರೆ."[12]**

**"ಓ ಗೆಳೆಯರೇ! ಮರಣಾಧೀನವಾದ ಚೆಲುವಿಗೋಸ್ಕರ ಶಾಶ್ವತ ಸೌಂದರ್ಯವನ್ನು ತ್ಯಜಿಸಬೇಡಿರಿ ಹಾಗೂ ಮಣ್ಣಿನ ಮರ್ತ್ಯ ಪ್ರಪಂಚದಲ್ಲಿ ನಿಮ್ಮ ಪ್ರೀತಿಯನ್ನು ಸ್ಥಾಪಿಸಬೇಡಿರಿ."[13]**

**"ಓ ದಿವ್ಯೋಕ್ತಿಯ ಸುತನೇ! ನಿನ್ನ ಮುಖವನ್ನು ನನ್ನ ಮುಖದತ್ತ ತಿರುಗಿಸು ನನ್ನನ್ನುಳಿದು ಮಿಕ್ಕೆಲ್ಲವನ್ನೂ ನಿರಾಕರಿಸು; ನನ್ನ ಪ್ರಭುತ್ವ ಚಿರಕಾಲ ಉಳಿಯುವುದು ಮತ್ತು ನನ್ನ ಆಧಿಪತ್ಯಕ್ಕೆ ನಾಶವೇ ಇಲ್ಲ. ನನ್ನಲ್ಲದೆ ಮತ್ತೊಬ್ಬನನ್ನು ನೀನು ಅರಸಿದರೆ, ಅಷ್ಟೇಕೆ ಇಡೀ ವಿಶ್ವದಲ್ಲೇ ಸತತವಾಗಿ ನೀನು ಅರಸಿ ಅಲೆದಾಡಿದರೂ, ನಿನ್ನ ಶೋಧನೆ ನಿಷ್ಫಲವಾಗುವುದು ."[14]**

**"ನನ್ನ ಜೊತೆಯಾದ ಅಪರಿಚಿತನೇ! ನಿನ್ನೆದೆಯ ಮೇಣದ ಬತ್ತಿಯನ್ನು ನನ್ನ ಸಾಮರ್ಥ್ಯದ ಹಸ್ತವು ಹೊತ್ತಿಸಿದೆ. ಅಹಮ್ಮಿಕೆಯ ಹಾಗೂ ರಾಗದ ವಿರುದ್ಧವಾತಗಳಿಂದ ಅದನ್ನು ನಂದಿಸಬೇಡ. ನಿನ್ನ ಸಕಲ ಅಸ್ವಸ್ಥಗಳಿಗೂ ನನ್ನ ಸ್ಮರಣೆಯೇ ಉಪಶಮನಕಾರಕ, ಇದನ್ನು ಮರೆಯದಿರು. ನನ್ನ ಪ್ರೀತಿಯನ್ನು ನಿನ್ನ ಅಮೂಲ್ಯ ಸಂಪತ್ತೆಂದು ಎಣಿಸು ಹಾಗೂ ನಿನ್ನ ಕಣ್ಣೆಂಬಂತೆ ಮತ್ತು ನಿನ್ನ ಜೀವವೆಂಬಂತೆ ಅದನ್ನು ಜೋಪಾನ ಮಾಡು. "[15]**

**"ನಿರ್ಲಿಪ್ತತೆಯು ಸೂರ್ಯನಿದ್ದಂತೆ: ಯಾವ ಹೃದಯದಲ್ಲಾದರೂ ಪ್ರಕಾಶಿಸಲಿ, ಅದು ಆ ಹೃದಯದ ಕಪಟತನ ಮತ್ತು ಸ್ವಾರ್ಥದ ಬೆಂಕಿಯನ್ನು ನಂದಿಸುವುದು. ಅರಿವಿನ ಬೆಳಕಿನಿಂದ ಯಾರ ದೃಷ್ಟಿಯು ಪ್ರಕಾಶಿತವಾಗಿದೆಯೋ ಅವರು ನಿಜವಾಗಿಯೂ ಈ ಪ್ರಪಂಚದಲ್ಲಿರುವ ನಿರುಪಯೋಗಿ ವಸ್ತುಗಳಿಂದ ನಿರ್ಲಿಪ್ತರಿರುತ್ತಾರೆ. ಈ ಪ್ರಪಂಚ ಮತ್ತು ಅದರ ನೀಚತನವು ನಿನ್ನನ್ನು ದುಃಖಿತನನ್ನಾಗಿ ಮಾಡದಿರಲಿ. ಸಿರಿತನದಿಂದ ಒಣ ಹೆಮ್ಮೆ ಪಡದೆ,ಬಡತನದಿಂದ ದುಃಖ ಪಡದೆ ಇರುವವನು ನಿಜವಾಗಿಯೂ ಸಂತುಷ್ಟನು."[16]**

1. ಈ ಪ್ರಪಂಚದಿಂದ ನಿರ್ಲಿಪ್ತನಾಗಿರುವುದು ಎಂದರೆ ಸಂನ್ಯಾಸಿಯ ಹಾಗೆ ಇರುವುದೇ?
   ______________________________
2. ಈ ಪ್ರಪಂಚದಿಂದ ನಿರ್ಲಿಪ್ತನಾಗಿದ್ದು,ಅದೇ ವೇಳೆ ಈ ಪ್ರಪಂಚದ ಎಲ್ಲಾ ವಸ್ತುಗಳನ್ನು ಹೊಂದಿರಲು ಸಾಧ್ಯವೇ?
   ______________________________________________________________________________
3. ಪ್ರಾಯೋಗಿಕವಾಗಿ ತನ್ನ ಜೀವನದ ಪ್ರತಿಯೊಂದು ಗಂಟೆಯನ್ನೂ ಆತ ಅಥವಾ ಆಕೆಯು ತನ್ನ ಕೆಲಸಗಳಲ್ಲಿಯೇ ನಿರತವಾಗಿಸಿದಲ್ಲಿ ಅವನು ಈ ಪ್ರಪಂಚದ ವಿಷಯಗಳಿಂದ ನಿರ್ಲಿಪ್ತನಾದವನೇ?
   ___________________________________________________________________________________________
4. ಆತನ ಅಥವಾ ಆಕೆಯ ಮೂಲಭೂತ ಅಗತ್ಯಗಳಿಗಾಗಿ ಮಾತ್ರ ದುಡಿಯುವ ಒಬ್ಬ ವ್ಯಕ್ತಿ ಉಳಿದ ಸಮಯವನ್ನು ಸುಮ್ಮನೆ ಕಾಲಹರಣ ಮಾಡುತ್ತಿದ್ದರೆ ಈ ಪ್ರಪಂಚದಿಂದ ನಿರ್ಲಿಪ್ತನಾದವನೇ? __________________________
5. ಸೇವಾಕ್ಷೇತ್ರದಲ್ಲಿ ಭೌತಿಕ ಅನಾನುಕೂಲತೆಗಳನ್ನು ಸಹಿಸಲಾರದವರಂತಿದ್ದರೆ ಆ ವ್ಯಕ್ತಿಯು ಪ್ರಪಂಚದಿಂದ ನಿರ್ಲಿಪ್ತನೇ ?
   ______________________________________________________________________________________________
6. ನಾವು ಹೊಂದಿರುವ ಭೌತಿಕ ವಸ್ತುಗಳಲ್ಲದೆ ನಾವು ಅಂಟಿ ಕೊಳ್ಳಬಹುದಾದ ಅನೇಕ ವಿಚಾರಗಳಿವೆ. ಈ ಕೆಳಕಂಡ ವ್ಯಕ್ತಿಯಾಗಿದ್ದರೆ ನೀವು ಯಾವುದಕ್ಕೆ ಅಂಟಿ ಕೊಳ್ಳುವಿರಿ.

   -ಆತನು ಅಥವಾ ಆಕೆಯು ಒಂದು ಸೇವಾಕಾರ್ಯವನ್ನು ಮಾಡುತ್ತಿರುವಾಗ ಅದನ್ನು ಯಾರಾದರೂ ಗುರುತಿಸದಿದ್ದಲ್ಲಿ ಬಿಟ್ಟುಬಿಡುವರು ? ________________________________________________________________________________

   -ಆತನು ಅಥವಾ ಆಕೆಯು ವಿಚಾರಗಳನ್ನು ಹಂಚಿಕೊಳ್ಳುವಾಗ ಕೆಲವರು ಸ್ವೀಕರಿಸದಿದ್ದಾಗ ಎದೆಗುಂದುವರು?

   ____________________________________________________________________________________________

   -ಆತನ ಅಥವಾ ಆಕೆಯ ನಂಬಿಕೆಯನ್ನು ಇತರರು ನಿರಾಕರಿಸುವರೆಂಬ ಭಯದಿಂದ ಮುಚ್ಚಿಡುವರು?

   _____________________________________________________________________________________________

7. ನಿರ್ಲಿಪ್ತತೆಯು ದೂರಸರಿಯುವಿಕೆ ಅಥವಾ ಗಮನ ನೀಡದಿರುವಿಕೆಯನ್ನು ಸೂಚಿಸುವುದಿಲ್ಲ. ಕೆಳಕಂಡವುಗಳಲ್ಲಿ ಯಾವು ಒಬ್ಬನು ನಿರ್ಲಿಪ್ತತೆಯನ್ನು ಹೊಂದಿರುವ ಚಿಹ್ನೆಯನ್ನು ಸೂಚಿಸುವುದು?

   _________ಇತರರ ಪ್ರಗತಿಯನ್ನು ನೋಡಿ ಆನಂದಿಸುವುದು
   _________ಕೆಲವು ಮಕ್ಕಳು ತಪ್ಪಾಗಿ ವರ್ತಿಸುವುದರಿಂದ ಆ ತರಗತಿಗೆ ಬೋಧಿಸುವುದನ್ನು ನಿಲ್ಲಿಸುವುದು

________ತಮ್ಮದೇ ಪಾಂಡಿತ್ಯದ ಬಗ್ಗೆ ಬಡಾಯಿಕೊಚ್ಚಿಕೊಳ್ಳುವುದು
________ಕಷ್ಟಪಟ್ಟು ಓದುವುದಲ್ಲದೇ ಒಬ್ಬರ ಪ್ರಗತಿಯಿಂದ ತೃಪ್ತ ಭಾವನೆ ಹೊಂದುವುದು
________ಸಾಮಾನ್ಯ ಒಳಿತಿಗಾಗಿ ಸೇವೆಸಲ್ಲಿಸಲು ತಮ್ಮ ಸಾಮರ್ಥ್ಯವನ್ನು ಬೆಳೆಸಿಕೊಳ್ಳಲು ಕಷ್ಟಪಟ್ಟು ಕೆಲಸ ಮಾಡುವುದು
________ತಮ್ಮ ಉದ್ಯೋಗದಲ್ಲಿ ಅತ್ಯುತ್ಕೃಷ್ಟತೆಯನ್ನು ಸಾಧಿಸಲು ಶ್ರಮಿಸುವುದು
________ಮನೆಯನ್ನು ಸ್ವಚ್ಛ ಹಾಗೂ ಶುಭ್ರವಾಗಿರಿಸಲು ಸ್ವಚ್ಛತೆಯನ್ನು ಅಭ್ಯಾಸಮಾಡುವುದು
________ಒಬ್ಬರಿಗೆ ಸೇರಿದ ವಸ್ತುಗಳ ಬಗ್ಗೆ ಕಾಳಜಿವಹಿಸುವುದು
________ತಮ್ಮ ಶ್ರಮವನ್ನು ಹೊಗಳಲಿಲ್ಲವೆಂದು ಮರುಗುವುದು

8. ನಮ್ಮಲ್ಲಿ ಪ್ರತಿಯೊಬ್ಬರಿಗೂ ನಿರ್ಲಿಪ್ತತೆಯು ಅತಿಮುಖ್ಯವಾದುದರಿಂದ ಈ ವಿಭಾಗದಲ್ಲಿನ ಎಲ್ಲಾ ಉಲ್ಲೇಖಗಳನ್ನು ಕಂಠಪಾಠ ಮಾಡುವಂತೆ ಸಲಹೆ ನೀಡಲಾಗಿದೆ. .

## ವಿಭಾಗ 8

ಮಾನವತೆಯ ಸೇವೆಯ ಆನಂದದಾಯಕ ಜೀವನಕ್ಕೆ ಅನುಗ್ರಹಗಳನ್ನು ಪಡೆಯಲು ನಾವು ಶ್ರಮವನ್ನು ವಹಿಸಲು ಸಿದ್ಧರಿರಬೇಕು ಮತ್ತು ನಮ್ಮ ಪ್ರಯತ್ನಗಳಲ್ಲಿ ಕೆಲವು ಮಟ್ಟದ ತ್ಯಾಗದ ಅವಶ್ಯಕತೆಯು ಇರುವುದು. ನಮ್ಮ ದಿನ ನಿತ್ಯದ ಜೀವನದಲ್ಲಿ "ತ್ಯಾಗ" ಎಂಬ ಪದವನ್ನು ಉಪಯೋಗಿಸುತ್ತೇವೆ. ನಮ್ಮ ಸ್ನೇಹಿತೆಯೊಬ್ಬಳು ತಮ್ಮ ಪ್ರಯಾಣದಿಂದ ಮುಂಜಾನೆಯಲ್ಲಿ ಹಿಂದಿರುಗುತ್ತಿದ್ದರೆ, ಅವಳನ್ನು ಕರೆತರಲು ನಾವು ಬೇಗನೆ ಏಳುವೆವು. ನಾವು ನಮ್ಮ ನಿದ್ರೆಯ ಕೆಲವು ಗಂಟೆಗಳನ್ನು ತ್ಯಾಗ ಮಾಡಿದೆವು ಎನ್ನುತ್ತೇವೆ. ನಮ್ಮ ಪ್ರೀತಿಪಾತ್ರರೊಬ್ಬರು ಅಸ್ವಸ್ಥರಾಗಿದ್ದರೆ; ನಾವು ನಮ್ಮ ಪ್ರಿಯವಾದ ಬಿಡುವಿನ ವೇಳೆಯನ್ನು ಆತನ ಆರೈಕೆಗೆ ವ್ಯಯಿಸುತ್ತೇವೆ. ಜೀವನದಲ್ಲಿ ಅತ್ಯಂತ ಹೆಚ್ಚು ಕಷ್ಟಪಟ್ಟು ಕೆಲಸ ಮಾಡಲೇಬೇಕಾದ ಸಂದರ್ಭಗಳು ಉಂಟಾಗುತ್ತವೆ, ನಾವು ಒಂದು ಗುರಿಯನ್ನು ತಲುಪಲು ನಮ್ಮ ಸುಖವನ್ನು ತ್ಯಾಗ ಮಾಡುತ್ತಿದ್ದೇವೆ ಎಂದು ಯೋಚಿಸುತ್ತೇವೆ.

ನಮ್ಮ ಸಮಯ ಮತ್ತು ಸಾಮರ್ಥ್ಯವನ್ನು ಉದಾರವಾಗಿ ನೀಡಿ, ಸಾಧ್ಯವಾದಷ್ಟು, ನಮ್ಮ ಭೌತಿಕ ಸಂಪನ್ಮೂಲಗಳ ಸ್ವಲ್ಪ ಭಾಗವನ್ನು ಅರ್ಪಿಸಿ ಧರ್ಮದ ಸೇವೆ ಮಾಡಲು ನಮಗೆಲ್ಲರಿಗೂ ಅತ್ಯಧಿಕವಾದ ಇಚ್ಛೆ ಇದೆ. ಹಾಗೆ ಮಾಡುವಾಗ ನಾವು ನೆನಪಿನಲ್ಲಿಟ್ಟುಕೊಳ್ಳಬೇಕಾದುದೇನೆಂದರೆ ಸೇವಾಪಥದಲ್ಲಿ, ಈ ಪ್ರಪಂಚದ ವಸ್ತುಗಳನ್ನು ತ್ಯಜಿಸಿ ನಾವು ಆಧ್ಯಾತ್ಮಿಕವಾಗಿ ಬೆಳೆದಂತೆಲ್ಲ, ನಿಜವಾದ ಆನಂದವನ್ನು ಪಡೆಯುತ್ತೇವೆ. ನಮ್ಮ ಮುಂದಿನ ತರಗತಿಗಳಲ್ಲಿ ತ್ಯಾಗದ ಸ್ವರೂಪದ ಕುರಿತು ಹೆಚ್ಚು ಪ್ರತಿಫಲಿಸುವ ಅವಕಾಶವನ್ನು ಹೊಂದುವೆವು. ಪ್ರಾರಂಭದಿಂದಲೇ ಗುರುತಿಸಬೇಕಾದ ಪ್ರಮುಖವಾದ ವಿಷಯವೆಂದರೆ, ಒಂದು ಬೀಜವು ಸ್ವಯಂ ತನ್ನನ್ನು ಸಮರ್ಪಿಸುವುದರ ಮೂಲಕ ಒಂದು ಮರವು ಬೆಳೆಯುವ ಹಾಗೆ, ಉನ್ನತವಾದ ವಿಷಯಗಳಿಗಾಗಿ ಕನಿಷ್ಠವಾದುದನ್ನು ತ್ಯಜಿಸಬೇಕಾಗಿರುವುದು. ತ್ಯಾಗವು ಆನಂದವಾಹಕವಾಗಿರುವುದು, ಮತ್ತು ನಾವು ಸ್ಥಿರವಾದ ಪ್ರಯತ್ನವನ್ನು ಮಾಡಲು ಇಚ್ಛಿಸದ ಹೊರತು ಈ ಆನಂದವು ನಮಗೆ ಲಭಿಸದು.

ಬಹಾ'ಉ'ಲ್ಲಾರವರು ಈ ರೀತಿ ಹೇಳಿರುವರು:

> **"ನಾವು ಆತನನ್ನು ಅರಸ ಬೇಕಾದರೆ ಶ್ರಮವು ಅಗತ್ಯ; ಆತನೊಂದಿಗೆ ಸಮ್ಮಿಲನದ ಮಧುವನ್ನು ನಾವು ಪಾನ ಮಾಡಬೇಕಾದರೆ ಉತ್ಸಾಹವು ಅವಶ್ಯಕ; ಈ ಪಾನಪಾತ್ರೆಯಿಂದ ನಾವು ಪಾನ ಮಾಡಿದರೆ ಈ ಪ್ರಪಂಚದ ಮೇಲಿನ ವ್ಯಾಮೋಹವನ್ನು ತ್ಯಜಿಸಬಹುದು."**

ಹಾಗು ಅಬ್ದುಲ್ ಬಹಾರವರು ನಮಗೆ ಈ ರೀತಿ ತಿಳಿ ಹೇಳಿರುವರು :-

> **"…. ವಿಶ್ರಮಿಸದಿರಿ, ಸುಖವನ್ನರಸದಿರಿ, ಕ್ಷಣಿಕ ಪ್ರಪಂಚದ ಸುಖಭೋಗಗಳಿಗೆ ನಿಮ್ಮನ್ನು ನೀವು ಅಂಟಿಸಿಕೊಳ್ಳದಿರಿ, ಪ್ರತಿಯೊಂದು ಬಂಧನದಿಂದಲೂ ನಿಮ್ಮನ್ನು ಮುಕ್ತರನ್ನಾಗಿಸಿ, ದೈವೀ ಸಾಮ್ರಾಜ್ಯದಲ್ಲಿ ಸಂಪೂರ್ಣವಾಗಿ ನೆಲೆಸಲು ಹೃದಯ ಮತ್ತು ಆತ್ಮಪೂರ್ವಕವಾಗಿ ನೀವು ಶ್ರಮಿಸಿ. ಸ್ವರ್ಗೀಯ ಸಂಪತ್ತನ್ನು ನೀವು ಪಡೆದುಕೊಳ್ಳಿ. ದಿನೇ ದಿನೇ ನೀವು ಹೆಚ್ಚು ಪ್ರಕಾಶಮಾನಗೊಳ್ಳಿ. ಏಕತೆಯ ಹೊಸ್ತಿಲಿನ ಕಡೆಗೆ ಹತ್ತಿರ ಹತ್ತಿರ ಸಾಗುತ್ತಿರಿ."**

ನಮ್ಮ ಗುರಿಯನ್ನು ಸಾಧಿಸಲು ನಾವು ಶ್ರಮ ವಹಿಸಬೇಕೆಂದು ನಾವೆಲ್ಲರೂ ನಂಬಿರುವೆವು. ಆದರೆ ಈ ಸರಳ ನಂಬಿಕೆಯು ಪ್ರಾಯೋಗಿಕವಾಗಲು ಕೆಲವು ಪರಿಣಾಮಗಳು ಇವೆ ಎಂಬುದನ್ನು ನಾವು ಮರೆಯಬಾರದು. ಒಬ್ಬ ವ್ಯಕ್ತಿಯು, ಅವಶ್ಯವಿರುವ ಸಾಮರ್ಥ್ಯದ ಪ್ರಮಾಣ ಮತ್ತು ತಮ್ಮ ಮುಂದೆ ಇರುವ ಕಠಿಣವಾದ ಗುರಿ ಅಥವಾ ಕಾರ್ಯದ ನಡುವೆ ಪರಸ್ಪರ ಸಂಬಂಧ ಇರುತ್ತದೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳುವುದು ಅವಶ್ಯಕ. ಅದನ್ನು ಕಡಿಮೆ ಪ್ರಮಾಣದ ಪ್ರಯತ್ನದಲ್ಲಿ ನೆರವೇರಿಸಬಹುದೆಂದು ನಾವು ಆಲೋಚಿಸಿದಲ್ಲಿ ನಮ್ಮನ್ನು ನಾವು ವಂಚಿಸಿಕೊಳ್ಳುವೆವು. ಆದರೆ ಪ್ರಯತ್ನದ ಪರಿಮಾಣವೊಂದನ್ನೇ ಪರಿಗಣಿಸಬಾರದು. ಸ್ಥಿರತೆ ಮತ್ತು ಅವಿರತ ಪ್ರಯತ್ನವು ಅಗತ್ಯ . ಕೇಂದ್ರೀಕೃತ ಗಮನವು ಅವಶ್ಯಕ. ಕಾರ್ಯಗಳನ್ನು ಪೂರ್ಣಗೊಳಿಸುವ, ಒಂದರಿಂದ ಮತ್ತೊಂದಕ್ಕೆ ಸಾಗುತ್ತ ಕೆಲಸವನ್ನು ಅರ್ಧಕ್ಕೆ ಬಿಡದಂತಹ ಅಭ್ಯಾಸವು ಅತಿಮುಖ್ಯ. ಅರೆಮನಸ್ಸಿನ ಶ್ರಮವು ಫಲಕಾರಿಯಾಗದು. ವಾರಕ್ಕೊಮ್ಮೆ ನಡೆಸುವ ಮಕ್ಕಳ ಆಧ್ಯಾತ್ಮಿಕ ಶಿಕ್ಷಣದ ತರಗತಿಯನ್ನು ಕಲ್ಪಿಸಿಕೊಳ್ಳಿ. ಶಿಕ್ಷಕರು ಪ್ರತಿಯೊಂದು ತರಗತಿಯನ್ನು ನಡೆಸುವ ತಯಾರಿ ಮಾಡಲು ಹಲವು ಗಂಟೆಗಳನ್ನು ಮೀಸಲಿಡಬೇಕು, ಪಾಠದಲ್ಲಿನ ವಿಷಯಗಳನ್ನು ವಿದ್ಯಾರ್ಥಿಗಳು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತಾ ಸಂಪೂರ್ಣವಾಗಿ ಆ ಅವಧಿಯಾದ್ಯಂತ ಗಮನಹರಿಸಬೇಕು , ಕ್ರಮಪ್ರಕಾರವಾಗಿ ಕಿರಿಯರ ಪೋಷಕರನ್ನು ಭೇಟಿ ಮಾಡಬೇಕು, ವಾರಗಳು ಕಳೆದಂತೆ ಪ್ರತಿಯೊಬ್ಬರ ಪ್ರಗತಿಯನ್ನು ಅನುಸರಿಸಬೇಕು. ಒಂದು ತರಗತಿಯ ಶಿಕ್ಷಕರೊಬ್ಬರು ಯಾವಾಗಲಾದರೊಮ್ಮೆ ತಯಾರಿ ಮಾಡುವ, ಬೇಸರವಾದಾಗ ಒಂದು ತರಗತಿಯನ್ನು ಇದ್ದಕ್ಕಿದ್ದಂತೆ ಬೇಗನೆ ಕೊನೆಗೊಳಿಸುವುದು, ಪ್ರತಿಯೊಂದು ಮಗುವಿನ ಬಗ್ಗೆ ಆಲೋಚಿಸಲು ಸಮಯ ಕೊಡದಿರುವುದು ಹಾಗೂ ಅವರ ಪೋಷಕರೊಂದಿಗೆ ಅವನ ಅಥವಾ ಅವಳ ಬಗ್ಗೆ ಚರ್ಚಿಸದಿರುವಂತಹ ತರಗತಿಯ ಭವಿಷ್ಯವೇನಾಗುವುದು? ಅಲ್ಲದೆ ಶಿಕ್ಷಕರು ತಮ್ಮದೇ ಆದ ಅನಿವಾರ್ಯ ಕೆಲಸದಲ್ಲಿ ತೊಡಗಿದಾಗ, ಉದಾಹರಣೆಗೆ ತಮ್ಮ ಮಿತ್ರರೊಬ್ಬರು ಹೊರ ಊರಿನಿಂದ ತನ್ನನ್ನು ಭೇಟಿ ನೀಡುವ ಸಂದರ್ಭದಲ್ಲಿ ತರಗತಿಯನ್ನು ನಿಲ್ಲಿಸಿದಲ್ಲಿ ಏನಾಗುವುದು?

ಇಂತಹ ಅಭಿಪ್ರಾಯಗಳು ನಾವು ತೆಗೆದುಕೊಳ್ಳುವ ಪ್ರತಿಯೊಂದು ಕಾರ್ಯಗಳ ಪ್ರಮಾಣ ಮತ್ತು ಶ್ರಮದ ಸ್ವಭಾವವೆರಡಕ್ಕೂ ಗಮನ ನೀಡಬೇಕಾದ ತುರ್ತಿನ ಕುರಿತು ತಿಳಿಸುತ್ತವೆ. ಇದು ನಾವು ತೊಡಗಬಹುದಾದ ಸೇವಾಕಾರ್ಯದಲ್ಲಷ್ಟೇ ಅಲ್ಲದೆ ನಮ್ಮದೇ ಆದ ಬೆಳವಣಿಗೆಗೂ ಅನ್ವಯಿಸುವುದು. ಈ ಸರಣಿಯ ಪ್ರಥಮ ಪುಸ್ತಕದಲ್ಲಿ ನಾವು ಪರಿಗಣಿಸುವ ಆಧ್ಯಾತ್ಮಿಕ ಹವ್ಯಾಸಗಳು- ಕ್ರಮಬದ್ಧವಾಗಿ ಪ್ರಾರ್ಥಿಸುವುದು, ಪವಿತ್ರ ಬರಹಗಳನ್ನು ಪ್ರತಿ ದಿನವು ಪಠಿಸುವುದು, ಬೋಧನೆಗಳೊಂದಿಗೆ ಸಮಾನವಾಗಿ ನಮ್ಮ ಜೀವನವನ್ನು ಹೊಂದಿಸುವುದರ ಕುರಿತು ಚಿಂತಿಸುವುದು, ಭಕ್ತ್ಯಾತ್ಮಕ ಕೂಟಗಳಲ್ಲಿ ಹೃತ್ಪೂರ್ವಕವಾಗಿ ಭಾಗಿಯಾಗುವುದು- ಇವೆಲ್ಲವೂ ನಿರಂತರ ಪ್ರಯತ್ನದ ಮೇಲೆ ಆಧಾರಿತವಾಗಿರುವುವು. ಪ್ರಯತ್ನಕ್ಕೆ ಸಂಬಂಧಿಸಿದ ಅನೇಕ ಹೇಳಿಕೆಗಳನ್ನು ಈ ಕೆಳಗೆ ನೀಡಲಾಗಿದೆ. ಯಾವ ವಾಕ್ಯಗಳು ಸರಿಯೆಂದು ನಿರ್ಧರಿಸುವ ಮೂಲಕ ಈ ವಿಚಾರದ ಕುರಿತಾದ ಪ್ರತಿಫಲನ ಸಹಾಯಕಾರಿಯಾಗಲಿದೆ :-

______________ನೀವು ಚತುರರಾದರೆ, ಕಷ್ಟಪಟ್ಟು ಕೆಲಸ ಮಾಡಬೇಕಾಗಿಲ್ಲ.

______________ಬಹುದೂರವೇಕೆ ಹೋಗಬೇಕು; ಯಾವಾಗಲೂ ಒಂದು ಅಡ್ಡದಾರಿಯನ್ನು ನೋಡಿಕೊಂಡರಾಯಿತು.

______________ಕಷ್ಟ ಪಡದೆ ಲಾಭವಿಲ್ಲ.

______________ದೊಡ್ಡ ಕನಸು ಕಾಣು; ನಿನ್ನ ಆಸೆಯು ನೆರವೇರುವುದು.

______________ಉನ್ನತವಾದ ಬಹುಮಾನಕ್ಕೆ, ಉನ್ನತವಾದ ಪರಿಶ್ರಮ ಅವಶ್ಯಕ.

______________ಪರಿಶ್ರಮ ಅಧಿಕವಾದಂತೆ, ಪ್ರತಿಫಲವು ಅಷ್ಟೇ ಸಿಹಿಯಾಗುವುದು.

______________ಮೊದಲಿಗೆ ನೀವು ಸಫಲರಾಗದಿದ್ದಲ್ಲಿ, ಪ್ರಯತ್ನಿಸಿ, ಮರಳಿ ಯತ್ನ ಮಾಡಿ.

______________ ನಿಮಗಾಗಿ ಇತರರು ಮಾಡುವವರಿರುವಾಗ, ಏಕೆ ಕೆಲಸ ಮಾಡಬೇಕು?

______________ಅತಿಯಾದ ಶ್ರಮದ ಅವಶ್ಯಕತೆ ಇದೆ ಎಂದರೆ ಅದನ್ನು ಮಾಡಬೇಕೆಂದಲ್ಲ.

______________ ಸಣ್ಣ- ನಿರಂತರ ಮತ್ತು ದೃಢವಾದ ಹೆಜ್ಜೆಗಳು - ಬಹುದೂರದವರೆಗೆ ಕರೆದೊಯ್ಯಬಹುದು.

______________ಪಡೆಯಲು ಯೋಗ್ಯವಾಗಿರುವ ಯಾವುದೂ ಸುಲಭವಾಗಿ ಬರುವುದಿಲ್ಲ.

______________ಮಹತ್ವಪೂರ್ಣವಾದ ವಿಷಯವು ಹೃತ್ಪೂರ್ವಕ ನಿಷ್ಠೆಯಿಂದ ಲಭಿಸುವುದು.

______________ ಸಾವಿರಾರು ಮೈಲಿಗಳ ಪ್ರಯಾಣ ಒಂದೇ ಒಂದು ಹೆಜ್ಜೆಯಿಂದ ಪ್ರಾರಂಭವಾಗುವುದು.

______________ಹಾಗೆಯೇ ಅನುಸರಣೆ ಮಾಡುವ ವಿಧಾನ ಸಾಕಾಗದು.

______________ಘಟನೆಗಳು ಸಂಭವಿಸಲಿ ಎಂದು ನಾವು ಕಾಯಬಾರದು, ನಾವು ಅವುಗಳನ್ನು ಹಿಂಬಾಲಿಸಬೇಕು.

______________ ಸಫಲತೆಯು ಒಂದು ಅದೃಷ್ಟ.

______________ನಮ್ಮ ದ್ವಿಮುಖ ಉದ್ದೇಶವನ್ನು ಮಾಂತ್ರಿಕತೆಯಿಂದ ಸಾಧಿಸಲಾರೆವು.

______________ನಾವು ನಮ್ಮ ಪ್ರತಿದಿನದ ಲೆಕ್ಕವನ್ನು ಸರಿಪಡಿಸಿ ತಿಳಿಯಬೇಕು.

**10-ಸೇವೆ ಸಲ್ಲಿಸಲು ಮೇಲೇಳುವುದು**

ನಮ್ಮ ಆಧ್ಯಾತ್ಮಿಕ ಮತ್ತು ಬೌದ್ಧಿಕ ಬೆಳವಣಿಗೆಗೆ ಮತ್ತು ಸಮಾಜದ ಪರಿವರ್ತನೆಗೆ ಕೊಡುಗೆಯನ್ನು ನೀಡಲು ಶ್ರಮಿಸುತ್ತಾ, ನಾವು ಸೇವಾ ಪಥದಲ್ಲಿ ಸಾಗುತ್ತೇವೆ. ಈ ದ್ವಿಮುಖ ಉದ್ದೇಶದ ಸಾಧನೆಗಾಗಿ ನಮ್ಮ ಹೆಚ್ಚಿನ ಪರಿಶ್ರಮ ಅಗತ್ಯವೆಂಬುದು ಸ್ಪಷ್ಟವಾಗಿದೆ. ಬಹಾ'ಉ'ಲ್ಲಾರವರು ನಮಗೆ ಹೀಗೆ ಹೇಳಿರುವರು:

> **"ಅನುಪಮನಾದ ಸೃಷ್ಟಿಕರ್ತನು ಎಲ್ಲ ಮಾನವರನ್ನು ಒಂದೇ ವಸ್ತುವಿನಿಂದ ಸೃಷ್ಟಿಸಿರುವನು, ಮತ್ತು ಅವರ ನೈಜತೆಯನ್ನು ಆತನು ಉಳಿದ ಸೃಷ್ಟಿಯದೆಲ್ಲಕ್ಕೂ ಮೀರಿ ಉನ್ನತಗೊಳಿಸಿರುವನು. ಆದುದರಿಂದ ಸಫಲತೆ ಅಥವಾ ಅಸಫಲತೆ, ಲಾಭ ಅಥವಾ ನಷ್ಟಗಳು ಮಾನವನ ಸ್ವಂತ ಪರಿಶ್ರಮದ ಮೇಲೆ ಆಧಾರಿತವಾಗಿದೆ. ಅವನು ಹೆಚ್ಚು ಶ್ರಮಿಸಿದಷ್ಟೂ, ಪ್ರಗತಿಯೂ ಅಧಿಕವಾಗುವುದು." [19]**

ನೀವು ಈಗಾಗಲೇ ಮೇಲಿನ ಉಲ್ಲೇಖವನ್ನು ಕಂಠಪಾಠ ಮಾಡಿರದಿದ್ದಲ್ಲಿ ಈಗ ಮಾಡಬಹುದು.

## ವಿಭಾಗ 9

ಸೇವೆಯಿಂದ ಆನಂದವನ್ನು ಪಡೆಯಲು ನಮ್ಮಲ್ಲಿ ಕೆಲವು ಮನೋಭಾವನೆಗಳನ್ನು ಬಳಸಿಕೊಳ್ಳಬೇಕು. ಉದಾಹರಣೆಗೆ ನಮ್ಮ ಮೇಲೆ ದೇವರು ದಯಪಾಲಿಸಿರುವ ಸೇವೆಯೆಂಬ ಅನುಗ್ರಹಕ್ಕೆ ನಾವು ಕೃತಜ್ಞರಾಗಿರಬೇಕಾದುದು ಅಗತ್ಯ, ನಾವು ಆತನ ಧರ್ಮಕ್ಕೆ ಸೇವೆ ಸಲ್ಲಿಸುವಾಗ ದೇವರಿಗೆ ಒಂದು ಉಪಕಾರ ಮಾಡುತ್ತಿದ್ದೇವೆ ಎಂಬುದನ್ನು ಕಲ್ಪಿಸುವುದು ಸಹ ಆಲೋಚಿಸಲು ಅಸಾಧ್ಯವಾಗಿರುವುದು. ಅಷ್ಟೇ ಅಲ್ಲದೆ ಜೀವನದಲ್ಲಿ ನಿರಾಶಾವಾದವನ್ನು ಬಿಟ್ಟು ಆಶಾವಾದ ದೃಷ್ಟಿಯಿಂದ ಪ್ರಪಂಚವನ್ನು ನೋಡಬೇಕು. ಸೇವಾ ಪಥದಲ್ಲಿ ಬರುವ ಅಡೆತಡೆಗಳು ಮುಂದಿನ ಪ್ರಗತಿಗೆ ಗೆಲುವಿನ ಮೆಟ್ಟಿಲುಗಳಾಗಬಹುದು. ತೊಂದರೆಗಳ ನಡುವೆಯೂ, ಭವಿಷ್ಯವನ್ನು ಆಶಾ ದೃಷ್ಟಿಯಿಂದ ನೋಡುವೆವು. ಈ ಕೆಳಕಂಡ ಅಬ್ದುಲ್ ಬಹಾರವರ ನುಡಿಗಳು ನಮ್ಮ ಪ್ರಯತ್ನವು ಭರವಸೆ ಮತ್ತು ಆಶಾಭಾವನೆಯ ವೈಶಿಷ್ಟ್ಯತೆಯನ್ನು ಹೊಂದಿರಬೇಕೆಂಬುದನ್ನು ಸೂಚಿಸುವುದು:

> **"ಪ್ರಾರಂಭದಲ್ಲಿ, ಬೀಜವು ಬಹಳ ಚಿಕ್ಕದಾಗಿರುವುದು, ಆದರೆ ಅಂತ್ಯದಲ್ಲಿ ಅದೊಂದು ದೊಡ್ಡ ಮರವಾಗುವುದು. ನೀವು ಕೇವಲ ಬೀಜವನ್ನು ಮಾತ್ರ ನೋಡದಿರಿ, ಮರವನ್ನು, ಅದರ ಹೂವುಗಳನ್ನು, ಅದರ ಎಲೆಗಳನ್ನು ಹಾಗೂ ಅದರ ಹಣ್ಣುಗಳನ್ನು ನೋಡಿರಿ." [20]**

> **"ಆದುದರಿಂದ ನಿಜವಾದ ಬೇಸಾಯಗಾರನು ಹೊಂದಿರುವ ಈ ಚಿಕ್ಕ ಬೀಜದ ಸಾಮರ್ಥ್ಯವನ್ನು ತಿಳಿದುಕೊಳ್ಳಿ, ಅವನು ತನ್ನ ದಯಾಪೂರಿತ ಹಸ್ತದಿಂದ, ಉಳುಮೆ ಮಾಡಿರುವ ಪ್ರಭುವಿನ ಭೂಮಿಯಲ್ಲಿ ಬಿತ್ತಿರುವನು ಹಾಗು ಅನುಗ್ರಹ ಮತ್ತು ಔದಾರ್ಯವೆಂಬ ಮಳೆಯ ನೀರ ಹನಿಸಿರುವನು ಮತ್ತು ಸತ್ಯದ ದಿನ ನಕ್ಷತ್ರದ ಬೆಳಕು ಹಾಗು ಶಾಖದಿಂದ ಪೋಷಿಸುತ್ತಿರುವನು ." [21]**

> **"ಒಂದು ವೃಕ್ಷವು ಬೆಳೆಯುತ್ತಾ ವಿಕಸಿತವಾಗುತ್ತಿರುವುದನ್ನು ನೀವು ನೋಡುವಾಗ, ಅದರ ಫಲಿತಾಂಶದ ಬಗ್ಗೆ ಭರವಸೆ ಹೊಂದುವಿರಿ. ದಿನಗಳೆದಂತೆ ಅದು ಪುಷ್ಪಿತವಾಗಿ, ಫಲವನ್ನು ನೀಡುವುದು. ಒಂದು ಒಣಗಿದ ಮರ ಅಥವಾ ಹಳೆಯ ಮರಗಳನ್ನು ನೀವು ನೋಡಿದರೆ, ಅದು ಫಲ ನೀಡುವ ಯಾವುದೇ ಭರವಸೆ ಇರುವುದಿಲ್ಲ."[22]**

> **"......ಆದುದರಿಂದ, ದೇವರ ಪ್ರೀತಿಪಾತ್ರರಾದವರು, ತಮ್ಮ ಶ್ರಮದಾಯಕ ಜಲದಿಂದ ಶ್ರಮಿಸುತ್ತಾ, ಭರವಸೆಯೆಂಬ ಮರವನ್ನು ಗಮನಿಸುತ್ತಾ ಪೋಷಿಸಿರಿ ಹಾಗೂ ಬೆಳೆಸಿರಿ."[23]**

> **"ದೇವರು ದಯಪಾಲಿಸುವ ಅನುಗ್ರಹಗಳಿಂದ ಹೃದಯವು ವಿಮುಖವಾದರೆ, ಸಂತೋಷದ ಭರವಸೆಯನ್ನು ಅದು ಹೇಗೆ ತಾಳಬಲ್ಲದು? ದೇವರ ಕರುಣೆಯಲ್ಲಿ ಅದು ತನ್ನ ಭರವಸೆಯನ್ನು ಇರಿಸದಿದ್ದರೆ, ಅದು ವಿಶ್ರಾಂತಿಯನ್ನು ಎಲ್ಲಿ ಕಾಣಬಲ್ಲದು?"[24]**

ಮೇಲಿನ ವಾಕ್ಯಾಂಶಗಳ ಮೇಲೆ ಪ್ರತಿಫಲಿಸಲು ಈ ಕೆಳಕಂಡ ವಾಕ್ಯಗಳನ್ನು ಪೂರ್ಣಗೊಳಿಸಿರಿ:-

1. ಪ್ರಾರಂಭದಲ್ಲಿ ಬೀಜವು ಎಷ್ಟು ಚಿಕ್ಕದಾಗಿತ್ತು, ಆದರೆ ಅಂತ್ಯದಲ್ಲಿ__________________________________

2. ನಾವು ಚಿಕ್ಕ ಬೀಜದತ್ತ ನೋಡಬಾರದು ಆದರೆ__________________________________

3. ಆದುದರಿಂದ ನಾವು ಗುರುತಿಸಬೇಕಾದುದು____________________________________

4. ಒಂದು ವೃಕ್ಷವು ಬೆಳೆಯುತ್ತಾ ವಿಕಸಿತವಾಗುತ್ತಿರುವುದನ್ನು ನಾವು ನೋಡಿದಾಗ____________________________________

5. ಒಂದು ವೃಕ್ಷವು ಬೆಳೆಯುತ್ತಾ ವಿಕಸಿತವಾಗುತ್ತಿರುವುದನ್ನು ನಾವು ನೋಡಿದಾಗ ನಮ್ಮ ಭರವಸೆ____________________________________

6. ನಮ್ಮ ಶ್ರಮದಾಯಕ ಜಲದಿಂದ ನಾವು____________________________________

7. ದೇವರು ದಯಪಾಲಿಸುವ ಅನುಗ್ರಹಗಳಿಂದ ಹೃದಯವು ವಿಮುಖವಾದರೆ ____________________________________

8. ದೇವರ ಕರುಣೆಯಲ್ಲಿ ಹೃದಯವು ತನ್ನ ಭರವಸೆಯನ್ನು ಇರಿಸದಿದ್ದರೆ ____________________________________
________________________________________________________________________

ಈಗ ಒಂದು ಕ್ಷಣ ಪ್ರತಿಫಲಿಸಿರಿ: ಕೃತಜ್ಞತಾಪೂರ್ವಕ ವಿನಮ್ರತೆಯಿಂದ ಕೂಡಿರುವ ನಮ್ಮ ಆನಂದದಾಯಕ ಮತ್ತು ಆಶಾದಾಯಕ ಚೈತನ್ಯವು ಇತರರಿಗೆ ಒಂದು ಆನಂದದ ನೆಲೆಯಾಗಬಹುದು ಎಂದು ನೀವು ಒಪ್ಪುವಿರಾ? ಮತ್ತು, ನಮ್ಮ ಮನಸ್ಸಿನಲ್ಲಿ ಸದಾ ಇರಿಸಿಕೊಳ್ಳಬೇಕಾದುದೇನೆಂದರೆ ಧರ್ಮದ ಸೇವೆಗಾಗಿ ಏಳುವಾಗ, ಒಂದು ಹೊಸ ದಿನದ ಮುಂಜಾವಿನ ಸಂತೋಷ ವಾರ್ತೆಗಳನ್ನು ನಾವು ಒಯ್ಯುತ್ತಿರುವೆವು, ಅದು ಮಾನವ ಜನಾಂಗವನ್ನು ಒಗ್ಗೂಡಿಸುವ ದಿನವಾಗಿರುತ್ತದೆ. ಬಹಾಉಲ್ಲಾರವರ ಈ ನುಡಿಗಳು ನಿಮ್ಮ ಹೃದಯಗಳಲ್ಲಿ ಪ್ರತಿಧ್ವನಿಸಲಿ:-

> **“ಯಾರು ಕಾರ್ಯನಿರತರೋ ಅವರು ಸಂತುಷ್ಟರು, ಯಾರು ಅರ್ಥೈಸಿಕೊಳ್ಳುವರೋ ಅವರು ಸಂತುಷ್ಟರು; ಯಾವ ವ್ಯಕ್ತಿಯು ಸತ್ಯಕ್ಕೆ ಅಂಟಿಕೊಂಡು, ಸ್ವರ್ಗ ಮತ್ತು ಭೂಮಿಗಳಲ್ಲಿರುವುದೆಲ್ಲರಿಂದ ನಿರ್ಲಿಪ್ತನಾಗಿರುವನೋ ಅವನೇ ಸಂತುಷ್ಟನು "[25]**

# REFERENCES


1. Gleanings from the Writings of Bahå 'u 'llåh (Wilmette: PublishingTrust,

2. Ibid., cxxxll, par. 3, p. 326.
3. Bahå'u'llåh, The Hidden Words (Wilmette: Bahå'i Publishing Trust, 2003, 2012 printing), Arabic no. 2, p. 3.
4. Gleanings from the Writings of Bahå 'u 'llåh, CVI, par. 1, p. 241.
5. Ibid., CIX, par. 2, p. 243.
6. Bahå'u'llåh, in Women: Extracts from the Writings of Bahå 'u 'llåh, 'Abdu 'I-Bahå, Shoghi Effendi and the Universal House of Justice, compiled by the Research Department of the Universal House of Justice (Wilmette: Bahå'i Publishing Trust, 1986, 1997 printing), no. 53, p. 26.
7. The Hidden Words, Arabic no. 11, p. 6.
8. Gleanings from the Writings of Bahå 'u 'llåh, CLIII, par. 5, p. 370.
9. Ibid., CXXIX, pan 1, p. 316.
10. Ibid., XLIII, par. 9, p. 109.
11. From a talk given on 19 November 1911, published in Paris Talks: Addresses Given by 'Abdu 'I-Bahå in 1911 (Wilmette: Bahå'i Publishing, 2006, 2016 printing), no. 32.2, p. 121.
12. The Hidden Words, Persian no. 12, p. 26.
13. Ibid., Persian no. 14, p. 26.
14. Ibid., Arabic no. 15, p. 7.
15. Ibid., Persian no. 32, p. 33.
16. Bahå'u'llåh, in The Bahå'i World: Volume One, 1925—1926 (Wilmette: Bahå'i Publishing Trust, 1926, 1980 printing), p. 42.
17. The Call of the Divine Beloved: Selected Mystical Works of Bahå 'u 'llåh (Haifa: Bahå'i World Centre, 2018), no. 2.12, p. 17.
18. Tablets ofthe Divine Plan: Revealed by 'Abdu 'I-Bahå to the North American Bahå 'is (Wilmette: Bahå'i Publishing Trust, 1993, 2006 printing), no. 13.6, pp. 95—96.
19. Gleanings from the Writings ofBahå 'u 'llåh, XXXIV, par. 8, p. 91.

20. Selections from the Writings of 'Abdu 'I-Bahå (Wilmette: Bahå'i Publishing, 2010

**2015 printing), no. 40.3, pp. 118—19.**

21. **Ibid., no. 40.3, p. 119.**
22. **From a talk given on 11 May 1912, published in The Promulgation of Universal Peace: Talks Delivered by 'Abdu 'I-Bahå during His Visit to the United States and Canada in 1912 (Wilmette: Bahå'i Publishing, 2012), par. 2, p. 153.**
23. **Selections from the Writings of 'Abdu 'I-Bahå, no. 206.13, pp. 356—57.**
24. **From a talk given by 'Abdu'l-Bahå on 21 November 1911, published in Paris Talks, no. 34.8, p. 133.**
25. **Bahå'u'llåh, Epistle to the Son ofthe Wolf(Wilmette: Bahå'i Publishing Trust, 1988, 2016 printing), p. 139.**



# ಉನ್ನತಿಗೇರಿಸುವ ಸಂಭಾಷಣೆಗಳು

**ಉದ್ದೇಶ**

ಒಂದು ಸಂಭಾಷಣೆಯಲ್ಲಿ ಆಧ್ಯಾತ್ಮಿಕ ತತ್ವಗಳನ್ನು
ಪರಿಚಯಿಸಲು ಸಾಮರ್ಥ್ಯವನ್ನು ಗಳಿಸುವುದು

## ವಿಭಾಗ 1

ಈ ಪುಸ್ತಕದ ಮೊದಲ ಘಟಕದಲ್ಲಿ ದೇವರ ನುಡಿಯನ್ನು ಇತರರೊಂದಿಗೆ ಹಂಚಿಕೊಳ್ಳುವ ಕಾರ್ಯದಿಂದ ಅಳೆಯಲಾಗದ ಆನಂದವನ್ನು ಹೊಂದುವೆವು ಎಂದು ನಾವು ಮಾತನಾಡಿದೆವು. ನಾವು ಸೇವಾ ಪಥದಲ್ಲಿ ಸಾಗುತ್ತಿದ್ದಂತೆ, ಮಿತ್ರರೊಂದಿಗೆ ಚರ್ಚಿಸುವ ಅನೇಕ ಅವಕಾಶಗಳು ಸಿಗುತ್ತವೆ ಮತ್ತು ಬಹಾ'ಉ'ಲ್ಲಾರವರ ಪ್ರಕಟಣೆಯ ಅಂತಃದೃಷ್ಟಿಯನ್ನು ಆಯ್ದುಕೊಳ್ಳುವ ಅವಕಾಶವೂ ಸಿಗುವುದು. ಆದುದರಿಂದ, ನಾವು ಅವಶ್ಯಕವಾಗಿ ಬೆಳಸಿಕೊಳ್ಳಬಹುದಾದ ಅತ್ಯಂತ ಮುಖ್ಯ ಸಾಮರ್ಥ್ಯಗಳಲ್ಲಿ, ಅರ್ಥಪೂರ್ಣ ಮತ್ತು ಉತ್ಸಾಹಪೂರಿತ ಸಂಭಾಷಣೆಗೆ ಕೊಡುಗೆ ನೀಡಲು ನಮ್ಮನ್ನು ಸಮರ್ಥರಾಗಿಸುವುದೂ ಒಂದು. ಈ ಘಟಕ ಹಾಗೂ ಮುಂದಿನದರ ಉದ್ದೇಶವು ಈ ನಿಟ್ಟಿನಲ್ಲಿ ನಿಮಗೆ ಸಹಾಯ ಮಾಡುವುದೇ ಆಗಿದೆ. ಸಂದರ್ಭಗಳು ಒದಗಿದಾಗ , ಆಧ್ಯಾತ್ಮಿಕ ತತ್ವಗಳನ್ನು ಪರಿಶೀಲಿಸುತ್ತಾ ಸಂಭಾಷಣೆಯ ಹಂತವನ್ನು ಹೇಗೆ ಉನ್ನತಗೊಳಿಸಬಹುದೆಂಬುದರ ಕುರಿತು ನೀವು ಕಾಳಜಿ ವಹಿಸುವಿರಿ. ಮುಂದಿನ ಘಟಕದಲ್ಲಿ, ನಿಮ್ಮ ಗ್ರಾಮ ಅಥವಾ ನೆರೆಹೊರೆಯದಲ್ಲಿ ಒಂದು ಚೈತನ್ಯಭರಿತ ಸಮುದಾಯವನ್ನು ಕಟ್ಟುವ ಶಿಸ್ತುಬದ್ಧ ಪ್ರಯತ್ನದ ಅಂಗವಾಗಿ ಕೆಲವು ವಿಷಯಾಂಶಗಳುಳ್ಳ ಸರಣಿ ಸಂಭಾಷಣೆಯನ್ನು ಪ್ರಾರಂಭಿಸಲು ಹಾಗೂ ಅದನ್ನು ನಿರಂತರವಾಗಿಸುವುದರ ಬಗ್ಗೆ ನೀವು ಆಲೋಚಿಸುವಿರಿ.

ಅನುಸರಿತ ವಿಭಾಗಗಳಲ್ಲಿ ವಿವಿಧ ವಿಷಯಗಳ ಮೇಲೆ ನೇರವಾಗಿ ಉಲ್ಲೇಖಗಳಿಲ್ಲದಿದ್ದರೂ ಅನೇಕ ಹೇಳಿಕೆಗಳನ್ನು ಕಾಣುವೆವು, ಅವು ಅಬ್ದುಲ್ ಬಹಾರವರ ಭಾಷಣಗಳ ಹಾಗೂ ಶಾಸನಗಳ ಮೇಲೆ ಹಾಗೂ ಅವರು ಉಪಯೋಗಿಸಿದ ನುಡಿಗಟ್ಟುಗಳ ಮೇಲೆ ಆಧಾರಿತವಾಗಿವೆ. ನೀವು ಪ್ರತಿಯೊಂದು ವಾಕ್ಯಗಳನ್ನು ಹಲವಾರು ಬಾರಿ ಓದಬೇಕು, ಅನುಕ್ರಮವಾದ ವಿಚಾರಗಳನ್ನು ಗುರುತಿಸಿ ನಂತರ ನಿಮ್ಮ ತಂಡದಲ್ಲಿ ಪ್ರತಿಯೊಬ್ಬರೂ ಸರದಿಯಂತೆ ನೀವು ಸ್ವಾಭಾವಿಕವಾಗಿಯೇ ಪ್ರಸ್ತುತ ಪಡಿಸುವವರೆಗೂ ಜೋರಾಗಿ ಹೇಳಿರಿ. ಈ ಅಭ್ಯಾಸವು ಒಂದು ಸಂವಾದವನ್ನು ಮುಂದುವರೆಸುವಲ್ಲಿ ಧರ್ಮದ ಬೋಧನೆಗಳತ್ತ ಸೆಳೆಯಲು ಸುಲಭವಾಗಿ ಮಾತನಾಡುವಂತೆ ತಯಾರಿಯಾಗಲು ಸಹಾಯವಾಗುವುದು.

ನೀವು ಈ ಘಟಕದಲ್ಲಿ ಮುಂದುವರೆದಂತೆ, ಬರಹಗಳಿಂದಾಯ್ದ ವಾಕ್ಯಾಂಶಗಳನ್ನು ಕಂಠಪಾಠ ಮಾಡುವುದು ಅವಶ್ಯಕ, ಏಕೆಂದರೆ ಅವು ಒಂದು ವಿಶೇಷ ಶಕ್ತಿಯನ್ನು ಹೊಂದಿದ್ದು, ಅದು ನಿಮ್ಮ ಭಾಷಣದಲ್ಲಿ ನೇಯಲ್ಪಟ್ಟಾಗ ಮಾನವ ಹೃದಯ ಮತ್ತು ಮನಸ್ಸನ್ನು ನಾಟುವುದಲ್ಲದೆ ಕೇಳುಗರ ಮೇಲೆ ಅಗಾಧವಾದ ಪರಿಣಾಮ ಬೀರುವುದು. ಅತಿ ಮುಖ್ಯವಾದುದೇನೆಂದರೆ ಮಧ್ಯಮತರವಾದ, ಬರಹಗಳಿಂದ ನೇರವಾಗಿ ಉಲ್ಲೇಖಿಸುವುದು ಮತ್ತು ಧರ್ಮದ ಬೋಧನೆಗಳನ್ನು ತಮ್ಮದೇ ಸ್ವಂತ ಮಾತುಗಳಲ್ಲಿ ವಿವರಿಸುವಾಗ ಒಂದು ಸಮತೋಲನವಿರಬೇಕಾದುದು ಅಗತ್ಯ. ಈ ಸಮತೋಲನವನ್ನು ಸಾಧಿಸಲು, ಬರಹಗಳ ಅಧ್ಯಯನವನ್ನು ಮಾಡುವಲ್ಲಿ ಮತ್ತು ಅವು ನಿಮ್ಮ ಆಲೋಚನೆಗಳು ಮತ್ತು ಭಾವನೆಗಳನ್ನು ರೂಪಿಸಲು ನೀವು ಅತಿ ಹೆಚ್ಚಿನ ಸಮಯ ಮತ್ತು ಶಕ್ತಿಯನ್ನು ಮೀಸಲಿಡಬೇಕಾಗಿರುವುದು.

## ವಿಭಾಗ-2

ಮಾನವತೆಗೆ ಒಬ್ಬ ಶಿಕ್ಷಕನ ಅಗತ್ಯದ ಕುರಿತಾಗಿರುವ ವಾಕ್ಯಾಂಶವನ್ನು ನೀವು ಮೊದಲು ಅಧ್ಯಯನ ಮಾಡಲಿದ್ದೀರಿ.

> ಅಸ್ತಿತ್ವವನ್ನು ಕುರಿತು ನಾವು ವಿಚಾರ ಮಾಡಿದಾಗ ನಾವು ಖನಿಜ, ಸಸ್ಯ, ಪ್ರಾಣಿ ಹಾಗೂ ಮಾನವತೆಯ ಪ್ರಪಂಚವೆಲ್ಲಕ್ಕೂ ಒಬ್ಬ ಶಿಕ್ಷಕನ ಅಗತ್ಯವಿರುವುದನ್ನು ನಾವು ಕಾಣುತ್ತೇವೆ. ಒಂದು ತೋಟಕ್ಕೆ ಒಬ್ಬ ತೋಟಗಾರನ ಅವಶ್ಯಕತೆಯಿರುವುದು. ಹೇರಳವಾದ ಬೆಳೆಯನ್ನು ಪಡೆಯಲು, ಭೂಮಿಗೆ ಒಬ್ಬ ರೈತನ ಅಗತ್ಯವಿರುವುದು. ಒಬ್ಬ ವ್ಯಕ್ತಿಯನ್ನು ಕಾಡಿನಲ್ಲಿ ಏಕಾಂಗಿಯಾಗಿ ಬಿಟ್ಟಲ್ಲಿ ಅವನು ಪ್ರಾಣಿಗಳ ದಾರಿಯನ್ನೇ ಅನುಸರಿಸುವನು. ಅವನಿಗೆ ಶಿಕ್ಷಣ ದೊರಕಿದರೆ, ಪಾಂಡಿತ್ಯದ ಅತ್ಯುನ್ನತ ಹಂತವನ್ನು ತಲುಪುವನು. ಶಿಕ್ಷಕರು ಇಲ್ಲದಿದ್ದರೆ ನಾಗರಿಕತೆಯೇ ಇರುವುದಿಲ್ಲ.

> ಶಿಕ್ಷಣವು ಮೂರು ವಿಧವಾದುದು ಭೌತಿಕ, ಮಾನವೀಯ ಮತ್ತು ಆಧ್ಯಾತ್ಮಿಕ. ಭೌತಿಕ ಶಿಕ್ಷಣವು ದೇಹದ ಬೆಳವಣಿಗೆಗೆ ಸಂಬಂಧಿಸಿರುವುದು. ಮಾನವತೆಯ ಶಿಕ್ಷಣವು ನಾಗರಿಕತೆ ಮತ್ತು ಪ್ರಗತಿಯ ಕುರಿತಾಗಿರುವುದು. ಅದು ಸರಕಾರ, ಸಾಮಾಜಿಕ ವ್ಯವಸ್ಥೆ, ಮಾನವನ ಒಳಿತು, ವ್ಯಾಪಾರ ಮತ್ತು ಉದ್ಯೋಗ, ಕಲೆ ಮತ್ತು ವಿಜ್ಞಾನಗಳು, ಕಾಲಕಾಲದ ಅನ್ವೇಷಣೆಗಳು, ಹಾಗೂ ಮಹತ್ತರವಾದ ಉದ್ದಿಮೆಗಳ ಬಗ್ಗೆ ವ್ಯವಹರಿಸುತ್ತದೆ. ಆಧ್ಯಾತ್ಮಿಕ ಶಿಕ್ಷಣವು ದೈವೀ ಪರಿಪೂರ್ಣತೆಯನ್ನು ಗಳಿಸುವ ಕುರಿತಾಗಿರುವುದು. ಇದೇ ನಿಜವಾದ ಶಿಕ್ಷಣ, ಏಕೆಂದರೆ ಅದರ ಸಹಾಯದಿಂದ ಮಾನವ ಅಸ್ತಿತ್ವದ ಆಧ್ಯಾತ್ಮಿಕ ಸ್ವಭಾವ, ಹಾಗು ಉನ್ನತ ಸ್ವಭಾವವು ಬೆಳೆಯುವುದು.

ಪ್ರಗತಿಯಾಗಬೇಕಾದರೆ, ಮಾನವತೆಗೆ ಭೌತಿಕ, ಮಾನವೀಯ ಹಾಗು ಆಧ್ಯಾತ್ಮಿಕವಾಗಿ ಸ್ಪಷ್ಟ ಅಧಿಕಾರವುಳ್ಳ ಒಬ್ಬ ಶಿಕ್ಷಕನ ಅವಶ್ಯಕತೆ ಇರುವುದು. ಯಾರಾದರೊಬ್ಬರು, "ನಾನು ಅಧಿಕವಾದ ಬುದ್ಧಿವಂತಿಕೆಯನ್ನು ಹೊಂದಿದ್ದೇನೆ ಮತ್ತು ಅಂತಹ ಶಿಕ್ಷಕನ ಅಗತ್ಯ ನನಗಿಲ್ಲ" ಎಂದು ಹೇಳಿದರೆ, ಅವನು ಸ್ಪಷ್ಟವಾಗಿರುವುನ್ನು ನಿರಾಕರಿಸುತ್ತಿರುವನು. ಅದು ಒಂದು ಮಗುವು ನನಗೆ ಶಿಕ್ಷಣದ ಅವಶ್ಯಕತೆ ಇಲ್ಲ; ನಾನು ನನ್ನದೇ ಆದ ವಿವೇಕ ಮತ್ತು ಬುದ್ಧಿವಂತಿಕೆಗೆ ತಕ್ಕಂತೆ ವರ್ತಿಸುವೆ ಹಾಗೂ ನನ್ನಷ್ಟಕ್ಕೆ ಉತ್ಕೃಷ್ಟತೆಯನ್ನು ಸಾಧಿಸುವೆ" ಎಂದಂತಾಗುವುದು.

ಮಾನವತೆಯು ಯಾವಾಗಲೂ ಅಂತಹ ಪರಿಪೂರ್ಣ ಶಿಕ್ಷಕನ ಅವಶ್ಯಕತೆಯನ್ನು ಹೊಂದಿರುವುದು, ಯಾರು, ದೇಹದ ಪೋಷಣೆ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ವಿಷಯಗಳನ್ನು ಆಲೋಚಿಸಲು, ಮಾನವತೆಯ ಜ್ಞಾನವು ಪ್ರಗತಿಯಾಗುವಂತೆ ಸ್ಫೂರ್ತಿನೀಡುವವನು, ] ಶೋಧನೆ ಮತ್ತು ಅನ್ವೇಷಣೆಗೆ ಹಾಗೂ ಅತಿ ಮುಖ್ಯವಾಗಿ ಚೈತನ್ಯದ ಜೀವನದಲ್ಲಿ ಉಸಿರು ನೀಡಲು ಸಹಾಯ ಮಾಡುವವನು. ಯಾವುದೇ ಸಾಮಾನ್ಯ ಮಾನವ ಜೀವಿಯು ಈ ದುಸ್ಸಾಧ್ಯವಾದ ಕಾರ್ಯಗಳನ್ನು ಸಾಧಿಸಲು ಸಮರ್ಥವಲ್ಲ. ಕೇವಲ ದೇವರ ಅವತಾರ ಪುರುಷರು ಮಾತ್ರ ಅವುಗಳನ್ನು ನಿರ್ವಹಿಸಲು ಸಮರ್ಥರು. ಇವರೆಲ್ಲರೂ ಕಾಲಕಾಲಕ್ಕೆ ಸಾರ್ವತ್ರಿಕ ಶಿಕ್ಷಕರಾಗಿ ದೇವರಿಂದ ಕಳುಹಿಸಲ್ಪಟ್ಟ ಆಯ್ಕೆಯಾದ ಪವಿತ್ರಾತ್ಮಗಳು.

1. ವಾಕ್ಯಾಂಶಗಳನ್ನು ಹಲವಾರು ಬಾರಿ ನಿಮ್ಮ ತಂಡದಲ್ಲಿ ಓದಿರಿ, ಹಾಗೂ ಅದರಲ್ಲಿನ ವಿಷಯವಸ್ತುವನ್ನು ಕಲಿಯಲು ಪರಸ್ಪರ ಸಹಕರಿಸಿರಿ. ಅದರಲ್ಲಿನ ವಿಚಾರಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪರಸ್ಪರ ಕೇಳುವುದಲ್ಲದೆ ಸ್ವಾಭಾವಿಕವಾಗಿ ಸುಲಭವಾಗಿ ಪ್ರಸ್ತುತಪಡಿಸಲು ಅಭ್ಯಾಸ ಮಾಡಿರಿ.

2. ನಂತರ, ಇಲ್ಲಿ ನೀವು ಸ್ಪಷ್ಟೀಕರಿಸಲು ಕಲಿತ ವಿಚಾರಗಳನ್ನು ಒಂದು ಸಂಭಾಷಣೆಯಲ್ಲಿ ಹೇಗೆ ಪರಿಚಯಿಸಬೇಕು ಎಂದು ನಿಮ್ಮ ತಂಡದಲ್ಲಿ ಚರ್ಚಿಸಿರಿ. ಸ್ವಾಭಾವಿಕವಾಗಿ, ನಿಮ್ಮ ಸ್ನೇಹಿತರಿಗೆ ಶಿಕ್ಷಣವು ಮೂರು ಪ್ರಕಾರದ್ದು ಎಂದು ಒಮ್ಮೆಲೇ ಹೇಳಲಾರಿರಿ. ಆದುದರಿಂದ ಮೇಲಿನ ವಿಚಾರಗಳು ಸರಿಹೊಂದುವಂತೆ ಸಂವಹನದ ವಿಧಗಳ ಬಗ್ಗೆ ಆಲೋಚಿಸುವುದು ಒಳಿತು. ಬಹುಶಃ ಸಮಾಜದಲ್ಲಿನ ನೈತಿಕತೆಯ ಇಳಿಕೆ ಅಥವಾ ಪ್ರಪಂಚದ ಒಳಿತಿಗೆ ಹೇಗೆ ಕಾರ್ಯನಿರ್ವಹಿಸುವುದೆಂಬ ವಿಷಯಗಳಡಿಯಲ್ಲಿ ಚರ್ಚಿಸಬಹುದು. ನೀವು ಮಿತ್ರರೊಂದಿಗೆ, ಕುಟುಂಬದ ಸದಸ್ಯರೊಂದಿಗೆ ಮತ್ತು ಪರಿಚಿತರೊಂದಿಗೆ ತೊಡಗಬಹುದಾದ ಸಂಭಾಷಣೆಯ ಕುರಿತು ಪ್ರತಿಫಲಿಸಿರಿ. ಈ ವಾಕ್ಯಾಂಶಗಳಲ್ಲಿನ ವಿಚಾರಗಳ ಬಗ್ಗೆ ಚರ್ಚಿಸುವಂತಹ, ತಮ್ಮ ಮನಸ್ಸನ್ನು ಆವರಿಸುವ ವಿಚಾರಗಳಲ್ಲಿ ಯಾವುದಾದರೂ ಇದೆಯೇ?

______________________________________________________________________________
______________________________________________________________________________
______________________________________________________________________________
______________________________________________________________________________
______________________________________________________________________________
______________________________________________________________________________
______________________________________________________________________________
_____________________________________________________________________

3. ನೀವು ಇದೀಗ ಅಧ್ಯಯನ ಮಾಡಿದ ವಿಷಯಗಳ ಮೇಲಿನ ಸಂಭಾಷಣೆಗಳಲ್ಲಿ ಆಗಾಗ ಪ್ರಶ್ನೆಗಳೇಳುತ್ತವೆ. ಯಾರಾದರೊಬ್ಬರು "ನೀವು ಮಾತನಾಡುತ್ತಿರುವ ಈ ಕೆಲವು ಶಿಕ್ಷಕರು ಯಾರು?" ಎಂದು ಪ್ರಶ್ನಿಸಿದರೆ ನೀವು ಏನೆಂದು ಉತ್ತರಿಸುವಿರಿ?

______________________________________________________________________________
______________________________________________________________________________
______________________________________________________________________________
_____________________________________________________________________

4. ಮಾನವತೆಗೆ ಒಬ್ಬ ದೊಡ್ಡ ಶಿಕ್ಷಕನ ಅಗತ್ಯವಿರುವುದಕ್ಕೆ ಸಂಬಂಧಿಸಿದ ಬಹಾ'ಉ'ಲ್ಲಾರವರ ಬರಹಗಳಿಂದ ಕೆಲವು ಉಲ್ಲೇಖಗಳನ್ನು ಈ ಕೆಳಗೆ ನೀಡಲಾಗಿದೆ. ಅವುಗಳ ಬಗ್ಗೆ ಪ್ರತಿಫಲಿಸಿರಿ ಹಾಗೂ ಕೊನೆಯ ಪಕ್ಷ ಒಂದನ್ನಾದರೂ ಕಂಠಪಾಠ ಮಾಡಿರಿ. ಈ ರೀತಿಯಾಗಿ ಸಂದರ್ಭವೊದಗಿದಾಗ ನಿಮ್ಮ ಮಾತುಗಳಲ್ಲಿ ಬರಹಗಳಿಂದಾಯ್ದ ವಾಕ್ಯಂಶಗಳನ್ನು ಸೇರಿಸಲು ಸಮರ್ಥರಾಗುವಿರಿ:

**"ಎಲ್ಲಾ ಮಾನವರು ಎಂದೂ ಮುಂದುವರೆಯುವ ನಾಗರೀಕತೆಯನ್ನು ಮುನ್ನಡೆಸಲು ಸೃಷ್ಟಿಸಲ್ಪಟ್ಟಿರುವರು."[1]**

**"ಒಬ್ಬನೇ ನೈಜ ದೇವರು, ಆತನ ಮಹಿಮೆಯು ಉನ್ನತವಾಗಿರಲಿ, ಮನುಷ್ಯರಿಗೆ ತನ್ನನ್ನು ತಾನು**

**ಪ್ರಕಟಪಡಿಸುವುದರಲ್ಲಿ ಆತನ ಉದ್ದೇಶವು, ಅವರ ನಿಜವಾದ ಮತ್ತು ಅಂತರಂಗವೆಂಬ ಗಣಿಯಲ್ಲಿ ಅಡಗಿರುವ ಆ ರತ್ನಗಳನ್ನು ಹೊರತೆಗೆಯುವುದೇ ಆಗಿದೆ."[2]**

**"ತನ್ನ ಪ್ರವಾದಿಗಳನ್ನು ಮನುಷ್ಯರಿಗೆ ಕಳುಹಿಸುವ ದೇವರ ಉದ್ದೇಶವು ದ್ವಿಮುಖವಾದದ್ದು.ಮೊದಲನೆಯದು ಮನುಷ್ಯರ ಮಕ್ಕಳನ್ನು ಅಜ್ಞಾನದ ಕತ್ತಲೆಯಿಂದ ಮುಕ್ತಗೊಳಿಸುವುದು ಮತ್ತು ಅವರಿಗೆ ನಿಜವಾದ ಅರಿವಿನ ಬೆಳಕಿನತ್ತ ಮಾರ್ಗದರ್ಶನ ತೋರುವುದು. ಎರಡನೆಯದು ಮನುಕುಲದ ಶಾಂತಿ ಮತ್ತು ಸಮಾಧಾನವನ್ನು ಖಚಿತಪಡಿಸುವುದು, ಮತ್ತು ಅದು ಸ್ಥಾಪಿತವಾಗಲು ಅವಶ್ಯವಾದ ಎಲ್ಲ ವಿಧಾನಗಳನ್ನು ಒದಗಿಸುವುದು."[3]**

**"ಮಾನವರಿಗೆ ಎಲ್ಲಾ ಸಮಯದಲ್ಲೂ ಮತ್ತು ಎಲ್ಲಾ ಪರಿಸ್ಥಿತಿಗಳಲ್ಲೂ ಪ್ರೋತ್ಸಾಹಿಸಲು, ಮಾರ್ಗದರ್ಶನ ಮಾಡಲು ಮತ್ತು ಆದೇಶಿಸಲು ಮತ್ತು ಬೋಧಿಸಲು ಒಬ್ಬ ಶಿಕ್ಷಕನ ಅಗತ್ಯವಿದೆ."[4]**

## ವಿಭಾಗ 3

ಈ ಕೆಳಗಿನ ಪಠ್ಯಕ್ರಮಗಳು, ದೇವರನ್ನು ಹೇಗೆ ಆತನ ಅವತಾರಗಳ ಮೂಲಕ ಮಾತ್ರ ಅರಿಯಬಹುದು ಎಂಬುದನ್ನು ವಿವರಿಸುತ್ತವೆ ಮತ್ತು ಸ್ನೇಹಿತರೊಂದಿಗೆ ಸಂಭಾಷಿಸುವಾಗ ಅವು ನಿಮಗೆ ಸಹಾಯ ಮಾಡುತ್ತವೆ :

ಅನಂತ ವಿಶ್ವವನ್ನು ಪರಿಗಣಿಸಿ. ಸೃಷ್ಟಿಕರ್ತನಿಲ್ಲದೆ ಅದು ಸೃಷ್ಟಿಯಾಗಿರಬಹುದೇ? ಅಥವಾ ಸೃಷ್ಟಿಕರ್ತನ ವಾಸ್ತವತೆಯನ್ನು ಆತನು ಸೃಷ್ಟಿಸಿದ ವಿಷಯಗಳು ಎಂದಾದರೂ ಗ್ರಹಿಸಬಹುದೇ? ನಾವು ಸಂಪೂರ್ಣ, ಸೃಷ್ಟಿಯನ್ನು ಗಮನಿಸಿದಾಗ, ಕೆಳಸ್ತರದಲ್ಲಿರುವ ಯಾವೂ ಮೇಲಿನ ಸ್ತರದಲ್ಲಿರುವುದನ್ನು ಗ್ರಹಿಸಲು ಸಾಧ್ಯವಿಲ್ಲ. ಆದ್ದರಿಂದ ಕಲ್ಲು ಮತ್ತು ಮರವು, ಅವು ಎಷ್ಟೇ ವಿಕಸನ ಹೊಂದಿದರೂ,ಶ್ರವಣ ಮತ್ತು ದೃಷ್ಟಿಯ ಶಕ್ತಿಯನ್ನು ಊಹಿಸಲಸಾಧ್ಯ. ಪ್ರಾಣಿಯು ಮನುಷ್ಯನ ವಾಸ್ತವತೆಯನ್ನು ಗ್ರಹಿಸಲು ಹಾಗು ಮಾನವ ಚೇತನದ ಶಕ್ತಿಗಳ ಕುರಿತು ಅರಿವನ್ನು ಗಳಿಸಲು ಸಾಧ್ಯವಿಲ್ಲ. ಆದ್ದರಿಂದ ಸೃಷ್ಟಿಸಲ್ಪಟ್ಟ ನಾವು, ಸೃಷ್ಟಿಕರ್ತನ ವಾಸ್ತವತೆಯನ್ನು ಹೇಗೆ ತಿಳಿಯಬಹುದು?

ನಮ್ಮ ತಿಳುವಳಿಕೆ ಎಂದಿಗೂ ದೇವರನ್ನು ತಲುಪಲು ಸಾಧ್ಯವಿಲ್ಲವಾದರೂ, ನಾವು **ಆತನನ್ನು** ಅರಿಯುವುದರಿಂದ ವಂಚಿತರಾಗಿಲ್ಲ. ಕಾಲಕಾಲಕ್ಕೆ **ವಿಶಿಷ್ಟ ಜೀವಿ**, ದೇವರ ಅವತಾರ ಪುರುಷನು ಭೂಮಿಯ ಮೇಲೆ ಕಾಣಿಸಿಕೊಳ್ಳುತ್ತಾನೆ. ಸ್ಪಷ್ಟವಾದ, ಹೊಳಪುಳ್ಳ ಕನ್ನಡಿಯಲ್ಲಿ ಕಾಣಿಸಿಕೊಳ್ಳುವ ಸೂರ್ಯನ ಕಿರಣಗಳಂತೆ ಈ ಪವಿತ್ರ ಅವತಾರ ಪುರುಷರಲ್ಲಿ ದೇವರಿಗೆ ಸಂಬಂಧಿಸಿದ ಎಲ್ಲಾ ಪರಿಪೂರ್ಣತೆ, ಔದಾರ್ಯ ಮತ್ತು ವೈಭವಗಳು ಗೋಚರಿಸುತ್ತವೆ. ಕನ್ನಡಿ ಸೂರ್ಯನನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳುವುದು ಸೂರ್ಯನು ತನ್ನ ಎತ್ತರದಿಂದ ಇಳಿದು ಕನ್ನಡಿಯಲ್ಲಿ ಸೇರಿಕೊಂಡಿದ್ದಾನೆ ಎಂದಲ್ಲ. ಅಂತೆಯೇ, ದೇವರು ಪವಿತ್ರತೆಯ ಸ್ವರ್ಗದಿಂದ ಈ ಅಸ್ತಿತ್ವದ ಪ್ರಪಂಚಕ್ಕೆ ಇಳಿಯುವುದಿಲ್ಲ. ಇದರ ಅರ್ಥವೇನೆಂದರೆ: ಮಾನವತೆಯು ತಿಳಿದಿರುವ, ಕಲಿಯುವ ಮತ್ತು ಅರ್ಥೈಸಿಕೊಳ್ಳುವ, ದೇವರ ನಾಮಗಳು ಮತ್ತು ಗುಣಲಕ್ಷಣಗಳು ಮತ್ತು ಪರಿಪೂರ್ಣತೆಗಳೆಲ್ಲವೂ **ಆತನ ಪವಿತ್ರ ಅವತಾರ ಪುರುಷ**ರನ್ನು ಸೂಚಿಸುತ್ತದೆ.

1. ನಿಮ್ಮ ತಂಡದಲ್ಲಿ ಈ ಹೇಳಿಕೆಯನ್ನು ಹಲವಾರು ಬಾರಿ ಓದಿದ ನಂತರ ಮತ್ತು ಅದರಲ್ಲಿನ ವಿಷಯದ ಕುರಿತು ಒಬ್ಬರಿಗೊಬ್ಬರು ಕೇಳುವ ಪ್ರಶ್ನೆಗಳಿಗೆ ಉತ್ತರಿಸಿದ ನಂತರ, ನೀವು ಈ ಆಲೋಚನೆಗಳನ್ನು ಸುಲಭವಾಗಿ ಹೇಳುವ ಅಭ್ಯಾಸ ಮಾಡಬೇಕು.

2. ನೀವು ಇಲ್ಲಿ ಕಲಿತ ವಿಚಾರಗಳನ್ನು ಸ್ವಾಭಾವಿಕವಾಗಿ ಸಂಭಾಷಣೆಯಲ್ಲಿ ಹೇಗೆ ಪ್ರಸ್ತುತಿ ಮಾಡಬಹುದು ಎಂಬುದನ್ನು ಈಗ ನಿಮ್ಮ ಗುಂಪಿನಲ್ಲಿ ಚರ್ಚಿಸಿ. ಇದನ್ನು ಸುಲಭವಾಗಿ ಮಾಡಬಹುದು, ಉದಾಹರಣೆಗೆ, ದೇವರ ಅಸ್ತಿತ್ವ ಅಥವಾ ಜೀವನದ ಉದ್ದೇಶದ ಕುರಿತು ಚರ್ಚಿಸಬಹುದು. ಈ ವಿಚಾರಗಳನ್ನು ನಿಮ್ಮ ಕುಟುಂಬ ಮತ್ತು ಸ್ನೇಹಿತರ ನಡುವಿನ ಸಂಭಾಷಣೆಯಲ್ಲಿ ಹಂಚಿಕೊಳ್ಳುವ ಸಾಧ್ಯತೆಯನ್ನು ನೀಡುವ, ಇತರ ಕೆಲವು ವಿಷಯಗಳು ಮತ್ತು ಪ್ರಶ್ನೆಗಳು ಯಾವುವು?

____________________________________________________________

____________________________________________________________

____________________________________________________________

____________________________________________________________

________________________________________________________________________________

3. ನಿಮ್ಮ ಸ್ನೇಹಿತರೊಂದಿಗಿನ ಸಂಭಾಷಣೆಯಲ್ಲಿ, ನೀವು ಇದೀಗ ಅಧ್ಯಯನ ಮಾಡಿದ ವಿಚಾರಗಳನ್ನು ಪರಿಚಯಿಸಲು ನಿಮಗೆ ಅವಕಾಶವಿದೆ ಎಂದು ಭಾವಿಸೋಣ. ಅವರಲ್ಲಿ ಒಬ್ಬರು ಈ ಕೆಳಗಿನ ಪ್ರಶ್ನೆಯನ್ನು ಕೇಳಿದರೆ ನೀವು ಹೇಗೆ ಉತ್ತರಿಸುತ್ತೀರಿ: "ದೇವರ ಅವತಾರ ಪುರುಷರ ಮೂಲಕ ನಾವು ದೇವರ ಬಗ್ಗೆ ಅರಿತಿರುವ ಕೆಲವು ವಿಷಯಗಳು ಯಾವುವು?"

________________________________________________________________________________

________________________________________________________________________________

________________________________________________________________________________

________________________________________________________________________________

4. ಬಹಾ'ಉ'ಲ್ಲಾರವರ ಬರಹಗಳಿಂದ ಈ ಕೆಳಗಿನ ಒಂದು ಅಥವಾ ಹೆಚ್ಚಿನ ವಚನ ಭಾಗಗಳನ್ನು ನೆನಪಿಟ್ಟುಕೊಳ್ಳಲು ನೀವು ಇಚ್ಛಿಸಬಹುದು, ಇದರಿಂದಾಗಿ ನೀವು ಈ ವಿಷಯದ ಕುರಿತು ಸ್ನೇಹಿತರೊಂದಿಗೆ ಮಾತನಾಡುವಾಗ ಅವುಗಳನ್ನು ಉಲ್ಲೇಖಿಸಬಹುದು:

**"ಸತ್ಯದ ಸೂರ್ಯನಿಂದ ಉದಯಿಸಿರುವ ಈ ಪ್ರಕಾಶಮಾನವಾದ ಜೀವಿಗಳ ಜ್ಞಾನ ಮತ್ತು ಪ್ರಾಪ್ತಿಯ ಮೂಲಕವಲ್ಲದೆ, ಎಲ್ಲದರ ಮೂಲನಾದ ಆತನ ಪ್ರಾಪ್ತಿ ಮತ್ತು ಜ್ಞಾನವು ಅಸಾಧ್ಯ."[5]**

**"ಅವತಾರ ಪುರುಷನು, ಎಂದೆಂದಿಗೂ ದೇವರ ಪ್ರತಿನಿಧಿ ಮತ್ತು ಮುಖವಾಣಿಯಾಗಿದ್ದಾನೆ. ಆತನು, ಸತ್ಯವಾಗಿಯೂ, ದೇವರ ಅತ್ಯುತ್ತಮ ಬಿರುದುಗಳ ದಿನಕಾರಂಜಿ, ಮತ್ತು ಆತನ ಉತ್ಕೃಷ್ಟ ಗುಣಲಕ್ಷಣಗಳ ಉಗಮಸ್ಥಾನ."[6]**

**"ಇದಲ್ಲದೆ, ದೇವರ ಪ್ರತಿಯೊಂದು ಅವತಾರಗಳ ಕಾರ್ಯಗಳು ಮತ್ತು ಕೃತಿಗಳು, ಅವರಿಗೆ ಸಂಬಂಧಿಸಿದ ಯಾವುದಾದರೂ, ಮತ್ತು ಭವಿಷ್ಯದಲ್ಲಿ ಅವರು ಪ್ರಕಟಿಸಲಿರುವ ಯಾವುದಾದರೂ ಸರಿ, ಇವೆಲ್ಲವೂ ದೇವರಿಂದ ವಿಧಾಯಕಗೊಳಿಸಲ್ಪಟ್ಟವು, ಮತ್ತು ಆತನ ಸಂಕಲ್ಪ ಮತ್ತು ಉದ್ದೇಶದ ಪ್ರತಿಫಲನವಾಗಿದೆ ಎಂದು ನೀವು ಭರವಸೆ ಹೊಂದಿರಿ."[7]**

## ವಿಭಾಗ 4

ಧರ್ಮದ ಏಕತೆಯು ಅನೇಕರಿಗೆ ಕಾಳಜಿಯ ವಿಷಯವಾಗಿದೆ, ಮತ್ತು ಈ ಕೆಳಗಿನ ವಿಚಾರಗಳು ಹಲವಾರು ಸಂದರ್ಭಗಳಲ್ಲಿ ನಿಮಗೆ ಸಹಾಯ ಮಾಡುತ್ತವೆ:

ಯಾವುದೇ ದೀಪದಲ್ಲಿ ಬೆಳಕು ಕಾಣಿಸಿಕೊಂಡರೂ ನಾವು ಅದನ್ನು ಪ್ರೀತಿಸುವವರಾಗಿರಬೇಕು. ಗುಲಬಿಯು ಯಾವುದೇ ತೋಟದಲ್ಲಿ ಅರಳಿದರೂ ನಾವು ಅದನ್ನು ಪ್ರೀತಿಸುವವರಾಗಿರಬೇಕು. ಸತ್ಯವು ಯಾವ ಮೂಲದಿಂದ ಬಂದರೂ ನಾವು ಅದನ್ನು ಅನ್ವೇಷಿಸುವವರಾಗಿರಬೇಕು. ಒಂದು ದೀಪಕ್ಕೆ ಅಂಟಿಕೊಳ್ಳುವುದರಿಂದ ಮತ್ತೊಂದರಲ್ಲಿ ಹೊಳೆಯುವ ಬೆಳಕನ್ನು ಪ್ರಶಂಸಿಸಲು ನಮಗೆ ತಡೆಯಾಗಬಹುದು. ಸತ್ಯವನ್ನು ಅನ್ವೇಷಿಸುವಲ್ಲಿ, ನಾವು ಪೂರ್ವಭಾವಿ ಕಲ್ಪನೆಗಳಿಂದ ದೂರವಿರಬೇಕು ಮತ್ತು ನಮ್ಮ ಪೂರ್ವಾಗ್ರಹಗಳನ್ನು ತ್ಯಜಿಸಬೇಕು. ನಮ್ಮ ಬಟ್ಟಲು ಸ್ವಾರ್ಥದಿಂದ ತುಂಬಿದ್ದಲ್ಲಿ, ಜೀವ ಜಲಕ್ಕೆ ಎಡೆಯಿರದು.

ಧರ್ಮವು ಪ್ರಪಂಚಕ್ಕೆ ಬೆಳಕಾಗಿರುವುದು. ಇದು ನಮ್ಮ ಹೆಜ್ಜೆಗಳಿಗೆ ಮಾರ್ಗದರ್ಶನ ನೀಡುತ್ತದೆ ಮತ್ತು ಕೊನೆಯಿಲ್ಲದ ಸಂತೋಷದ ಬಾಗಿಲುಗಳನ್ನು ನಮಗಾಗಿ ತೆರೆಯುತ್ತದೆ. ಸೈದ್ಧಾಂತಿಕ ನಂಬಿಕೆಗಳ ಅಡೆತಡೆಗಳು ಮತ್ತು ಅಂಧಾನುಕರಣೆಗಳಿಂದ ಮುಕ್ತವಾಗಿ, ಎಲ್ಲಾ ಶ್ರೇಷ್ಠ ಧರ್ಮಗಳ ಬೋಧನೆಗಳ ಕುರಿತು ನಾವು ವಿಚಾರ ಮಾಡಿದಾಗ, ಅವುಗಳೆಲ್ಲದರ ಅಡಿಪಾಯ ಒಂದೇ ಎಂಬುದರ ಅರಿವು ಮೂಡುತ್ತದೆ. ಅವೆಲ್ಲವೂ ದೇವರ ಜ್ಞಾನವನ್ನು ಪ್ರಕಟಪಡಿಸುತ್ತವೆ. ಅವು ಮಾನವತೆಯ ಪ್ರಪಂಚದ ಪ್ರಗತಿಯನ್ನು ಬಯಸುತ್ತವೆ.

ಸಹಜವಾಗಿ, ಸಮಯ ಮತ್ತು ಸ್ಥಳದ ಅವಶ್ಯಕತೆಗಳಿಗೆ ಅನುಗುಣವಾಗಿ ಪ್ರತಿ ಧರ್ಮವು ಸಾರುವ ಸಾಮಾಜಿಕ ನಿಯಮಗಳು ಮತ್ತು ನಿಬಂಧನೆಗಳ ನಡುವೆ ವ್ಯತ್ಯಾಸಗಳಿವೆ. ಆದರೆ ಎಲ್ಲಾ ಧರ್ಮಗಳ ಒಳ ತಿರುಳು ಒಂದೇ ಆಗಿರುವುದು. ಭರವಸೆ, ಜ್ಞಾನ, ಸ್ಥಿರವಾದ ನಂಬಿಕೆ, ನ್ಯಾಯ, ಧರ್ಮನಿಷ್ಠೆ, ಪ್ರಬುದ್ಧ ಮನಸ್ಸು, ವಿಶ್ವಾಸಾರ್ಹತೆ, ದೇವರ

ಪ್ರೀತಿ ಮತ್ತು ದಾನವನ್ನು  ಅವುಗಳು ಪೋಷಿಸುವುವು. ಪರಿಶುದ್ಧತೆ, ನಿರ್ಲಿಪ್ತತೆ, ನಮ್ರತೆ, ಸಹನಶೀಲತೆ, ತಾಳ್ಮೆ ಮತ್ತು ಸ್ಥಿರತೆಯನ್ನು ಅವುಗಳು ಬೋಧಿಸುವವು. ಈ ಮಾನವ ಸದ್ಗುಣಗಳು ಪ್ರತಿ ದಿವ್ಯ ದರ್ಶನದಲ್ಲೂ ನವೀಕರಿಸಲ್ಪಡುವವು.

ಪೂರ್ವಾಗ್ರಹ ಮತ್ತು ಅಂಧಾನುಕರಣೆಯಿಂದಾಗಿ, ಅನೇಕರು ಧರ್ಮದ ಆಧಾರವಾಗಿರುವ ಏಕತೆಯನ್ನು ನೋಡಲು ಸಾಧ್ಯವಾಗದಿರುವುದು ದುರದೃಷ್ಟಕರ. ಸತ್ಯವೇ ಮಾನವತೆಗೆ ದೇವರ ಮಾರ್ಗದರ್ಶನ , ಮತ್ತು ಸತ್ಯವು ಯಾವುದೇ ವಿಭಜನೆಗಳನ್ನು ಹೊಂದಿಲ್ಲ; ಅದು ಏಕರೂಪವಾದದ್ದು. ನಾವು ಪೂರ್ವಭಾವಿ ಕಲ್ಪನೆಗಳನ್ನು ಬದಿಗಿಟ್ಟು ಸತ್ಯವನ್ನು ಸ್ವತಂತ್ರವಾಗಿ ವಿಚಾರ ಮಾಡಿದರೆ, ನಮ್ಮ ಅನ್ವೇಷಣೆಯು ಐಕ್ಯತೆಗೆ ದಾರಿದೀಪವಾಗುತ್ತದೆ. ಧರ್ಮವು ನಮ್ಮನ್ನು ಒಂದುಗೂಡಿಸಬೇಕು; ಅದು ಜನರಲ್ಲಿ ಪ್ರೀತಿಯ ಬಾಂಧವ್ಯಗಳನ್ನು ಸ್ಥಾಪಿಸಬೇಕು. ಅದು ದ್ವೇಷ ಮತ್ತು ಕಲಹಕ್ಕೆ ಕಾರಣವಾದರೆ, ಅದರ ಇಲ್ಲದಿರುವಿಕೆಯೇ ಸೂಕ್ತ.

1. ಹಿಂದಿನ ವಿಭಾಗಗಳಲ್ಲಿ ಅನುಸರಿಸಿದಂತೆ, ನಿಮ್ಮ ಗುಂಪಿನಲ್ಲಿ ನೀವು ಈ ಹೇಳಿಕೆಯನ್ನು ಹಲವಾರು ಬಾರಿ ಓದಬೇಕು, ಈ ವಿಚಾರಗಳಿಗೆ ಸಂಬಂಧಿಸಿದಂತೆ, ಪರಸ್ಪರ ಪ್ರಶ್ನೆಗಳನ್ನು ಕೇಳಬೇಕು ಮತ್ತು ಅವುಗಳನ್ನು ಚೆನ್ನಾಗಿ ವ್ಯಕ್ತಪಡಿಸಲು ಅಭ್ಯಾಸ ಮಾಡಬೇಕು.

2. ನಿಮ್ಮ ಗುಂಪಿನಲ್ಲಿ ನೀವು ಅಧ್ಯಯನ ಮಾಡಿದ ವಿಚಾರಗಳನ್ನು ಸಂಭಾಷಣೆಯಲ್ಲಿ ಹೇಗೆ ಹೆಣೆಯಬಹುದು ಎಂಬುದರ ಕುರಿತು ಪರಿಗಣಿಸಿ, ಅದು ಜನರ ಮನಸ್ಸಿನಲ್ಲಿ ಸದಾ ತಲೆದೋರುವ ಧಾರ್ಮಿಕ ಸಂಘರ್ಷದ ಕುರಿತಾಗಿ ಹೇಳೋಣವೆನ್ನಿ. ಆದರೆ ಪ್ರಚಾರ ಮುಕ್ತವಾದ, ಸತ್ಯಾನ್ವೇಷಣೆಯ ಪ್ರಾಮುಖ್ಯತೆಯನ್ನು  ನಿಮ್ಮ ಹಲವಾರು ಸ್ನೇಹಿತರ ನಡುವೆ ಚರ್ಚಿಸುವ ಅವಕಾಶವೂ ದೊರೆಯುವುದೆನ್ನಿ. ಸ್ನೇಹಿತರು ಮತ್ತು ನೆರೆಹೊರೆಯವರು, ಸಹೋದ್ಯೋಗಿಗಳು ಮತ್ತು ಪರಿಚಯಸ್ಥರೊಂದಿಗೆ ನಿಮ್ಮ ಇತ್ತೀಚಿನ ಸಂಭಾಷಣೆಗಳ ಬಗ್ಗೆ ಮತ್ತೊಮ್ಮೆ ಯೋಚಿಸಿ. ಈ ವಿಷಯದ ಸುತ್ತಲಿನ ಚರ್ಚೆಯಿಂದ ಪ್ರಯೋಜನ ಪಡೆಯುವ ಅವರ ಮನಸ್ಸಿನಲ್ಲಿರುವ ಕೆಲವು ವಿಚಾರಗಳು ಯಾವುವು?

________________________________________________

________________________________________________

________________________________________________

3. ಮೇಲಿನ ವಿಚಾರಗಳನ್ನು ಸಂಭಾಷಣೆಯಲ್ಲಿ ಹಂಚಿಕೊಂಡ ನಂತರ, ಯಾರಾದರೂ, “ಎಲ್ಲಾ ಧರ್ಮಗಳಲ್ಲಿ ಸಮಾನವಾಗಿರುವಂತಹ  ಕೆಲವು ಸತ್ಯಗಳು ಯಾವುವು?” ಎಂದು ಕೇಳಿದರೆ ನೀವು ಹೇಗೆ ಉತ್ತರಿಸುತ್ತೀರಿ.

________________________________________________

________________________________________________

________________________________________________

4. ಬಹಾಉಲ್ಲಾರವರ ಬರಹಗಳಿಂದ ಈ ಕೆಳಗಿನ ಒಂದು ಅಥವಾ ಎರಡು ವಚನಭಾಗಗಳನ್ನು ಕಂಠಪಾಠಮಾಡಲು ಸಲಹೆ ನೀಡಲಾಗಿದೆ:

**"ಪ್ರಪಂಚದ ಜನರು, ಯಾವುದೇ ಜನಾಂಗ ಅಥವಾ ಧರ್ಮದವರಾಗಿರಲಿ, ಒಂದೇ ಸ್ವರ್ಗೀಯ ಮೂಲದಿಂದ ತಮ್ಮ ಸ್ಫೂರ್ತಿಯನ್ನು ಪಡೆದುಕೊಂಡಿದ್ದಾರೆ ಮತ್ತು ಒಂದೇ ದೇವರ ಅಧೀನದಲ್ಲಿದ್ದಾರೆ ಎಂಬುದರಲ್ಲಿ ಸಂಶಯವಿಲ್ಲ."**[8]

**"ಎಲ್ಲಾ ಧರ್ಮಗಳ ಅನುಯಾಯಿಗಳೊಂದಿಗೆ ಸ್ನೇಹಪರತೆ ಮತ್ತು ಸಹಭಾಗಿತ್ವದೊಂದಿಗೆ ಬೆರೆಯಿರಿ."**[9]

**"ದೇವರ ನಂಬಿಕೆ ಮತ್ತು ಅವನ ಧರ್ಮವನ್ನು ಪ್ರೇರೇಪಿಸುವ ಮೂಲಭೂತ ಉದ್ದೇಶವೆಂದರೆ ಮಾನವ ಜನಾಂಗದ ಹಿತಾಸಕ್ತಿಗಳನ್ನು ಕಾಪಾಡುವುದು ಮತ್ತು ಏಕತೆಯನ್ನು ಉತ್ತೇಜಿಸುವುದೇ ಆಗಿದೆ. . . "[10]**

**"ದೇವರ ಧರ್ಮವಿರುವುದು ಪ್ರೀತಿ ಮತ್ತು ಐಕ್ಯತೆಗಾಗಿ; ಅದನ್ನು ದ್ವೇಷ ಅಥವಾ ಭಿನ್ನಾಭಿಪ್ರಾಯದ ಕಾರಣವಾಗಿಸಬೇಡಿ."[11]**

## ವಿಭಾಗ 5

ನೀವು ಅಧ್ಯಯನ ಮಾಡಲಿರುವ ಮುಂದಿನ ವಿಷಯವು ವಿಜ್ಞಾನ ಮತ್ತು ಧರ್ಮದ ನಡುವಿನ ಸಂಬಂಧವಾಗಿದೆ.

ಧರ್ಮವು ವಿಜ್ಞಾನಕ್ಕೆ ಅನುಗುಣವಾಗಿರಬೇಕು. ಸತ್ಯದ ಗ್ರಹಿಕಾ ಸಾಮರ್ಥ್ಯವನ್ನು ದೇವರು ನಮಗೆ ನೀಡಿದ್ದಾನೆ. ವಿಜ್ಞಾನ ಮತ್ತು ಧರ್ಮ ಎರಡೂ ತಾರ್ಕಿಕ ಮಾನದಂಡಗಳನ್ನು ಪೂರೈಸುವುದೆಂದು ನಿರೀಕ್ಷಿಸಲಾಗಿದೆ. ಆದ್ದರಿಂದ, ಅವು ಪರಸ್ಪರ ಒಪ್ಪುವಂತಿರತಕ್ಕದ್ದು. ಅವು ಮಾನವನ ಬುದ್ಧಿವಂತಿಕೆಯು ಮೇಲೇರಬಹುದಾದ ಎರಡು ರೆಕ್ಕೆಗಳಾಗಿವೆ. ಒಂದು ರೆಕ್ಕೆ ಸಾಕಾಗುವುದಿಲ್ಲ.

ವಿಜ್ಞಾನವು ದೈವಿಕ ಅನುಗ್ರಹವಾಗಿದೆ. ಅದು ಭೌತಿಕ ಪ್ರಪಂಚದ ನಿಯಮಗಳನ್ನು ಕಂಡುಕೊಳ್ಳುತ್ತದೆ ಮತ್ತು ಪ್ರಕೃತಿ ನಮ್ಮ ಮೇಲೆ ಹೇರಿರುವ ಮಿತಿಗಳನ್ನು ನಿವಾರಿಸಲು ಶಕ್ತಗೊಳಿಸುತ್ತದೆ. ವೈಜ್ಞಾನಿಕ ಸಾಧನಗಳ ಸಹಾಯದಿಂದ, ನಾವು ಬರಿಗಣ್ಣಿಗೆ ಕಾಣದ ವಿಷಯಗಳನ್ನು ನೋಡುತ್ತೇವೆ ಮತ್ತು ಕ್ಷಣಾರ್ಧದಲ್ಲಿ ಬಹಳ ದೂರದವರೆಗೂ ಸಂವಹನ ನಡೆಸುತ್ತೇವೆ. ವಿಜ್ಞಾನವು ವರ್ತಮಾನ ಮತ್ತು ಭೂತಕಾಲವನ್ನು ಒಂದುಗೂಡಿಸುತ್ತದೆ ಮತ್ತು ಭವಿಷ್ಯದ ರಹಸ್ಯಗಳನ್ನು ಭೇದಿಸುತ್ತದೆ. ಜನರ ಪ್ರಗತಿಯು ವೈಜ್ಞಾನಿಕ ಸಾಧನೆಗಳ ಮೇಲೆ ಅವಲಂಬಿತವಾಗಿರುತ್ತದೆ.

ದೇವರ ಧರ್ಮವು ಸತ್ಯವನ್ನು ಉತ್ತೇಜಿಸುವುದು, ಜ್ಞಾನವನ್ನು ಬೆಂಬಲಿಸುವುದು ಮತ್ತು ಮಾನವ ಜನಾಂಗದ ನಾಗರಿಕತೆಯನ್ನು ಮುಂದುವರೆಸುವುದು. ಧರ್ಮವಿಲ್ಲದೆ, ವಿಜ್ಞಾನವು ಭೌತಿಕತೆಯನ್ನು ಮುನ್ನಡೆಸುವ ಸಾಧನವಾಗಿ ಪರಿಣಮಿಸುತ್ತದೆ ಮತ್ತು ಅಂತಿಮವಾಗಿ ಹತಾಶೆಗೆ ಗುರಿಯಾಗುತ್ತದೆ. ಧರ್ಮವು ವಿಜ್ಞಾನವನ್ನು ವಿರೋಧಿಸಿದಾಗ ಅದು ಕೇವಲ ಮೂಢನಂಬಿಕೆಯಾಗುತ್ತದೆ. ಧರ್ಮ ಮತ್ತು ವಿಜ್ಞಾನವು ಸಾಮರಸ್ಯದಿಂದ ಜೊತೆ ಜೊತೆಯಾಗಿ ಸಾಗಿದರೆ, ಮಾನವತೆಗೆ ಈಗ ಸಂಕಟವನ್ನು ತರುತ್ತಿರುವ ದ್ವೇಷ ಮತ್ತು ಕಹಿ ಕೊನೆಗೊಳ್ಳುತ್ತದೆ.

1. ಎಂದಿನಂತೆ, ನಿಮ್ಮ ಗುಂಪಿನಲ್ಲಿ ಈ ಹೇಳಿಕೆಯನ್ನು ಹಲವಾರು ಬಾರಿ ಓದಿ, ವಾಕ್ಯವೃಂದದ ಮೂಲಕ, ವಿಷಯವನ್ನು ಸ್ವಾಭಾವಿಕವಾಗಿ ವ್ಯಕ್ತಪಡಿಸಲು ನೀವು ಸಾಕಷ್ಟು ಚೆನ್ನಾಗಿ ಕಲಿಯುವವರೆಗೆ ಪರಸ್ಪರ ಪ್ರಶ್ನೆಗಳನ್ನು ಕೇಳಿ.

2. ಈ ಕೆಳಗಿನಂತೆ ನಿಮ್ಮನ್ನು ಕೇಳಿದವರಿಗೆ ನೀವು ಹೇಗೆ ಪ್ರತಿಕ್ರಿಯಿಸುತ್ತೀರಿ: "ಧರ್ಮವು ಪುರಾತನ ವಿಷಯವಾಗಿದೆ; ವಿಜ್ಞಾನವು ಮಾನವತೆಯ ಎಲ್ಲಾ ಸಮಸ್ಯೆಗಳನ್ನು ಪರಿಹರಿಸುತ್ತದೆ. " ಧರ್ಮವು ಮೂಢನಂಬಿಕೆಗೆ ಸಮನಾಗಿಲ್ಲ, ಆದರೆ ಅದು ವಿಜ್ಞಾನದ ವಿನಃ ಹಾಗೆ ಆಗುತ್ತದೆ, ಮತ್ತು ಧರ್ಮವಿಲ್ಲದ ವಿಜ್ಞಾನವು ಭೌತಿಕತೆಯಿಂದ ಉದ್ಭವಿಸಿದ ಹತಾಶೆಗೆ ಕಾರಣವಾಗುತ್ತದೆ ಎಂದು ಸ್ಪಷ್ಟಪಡಿಸುವುದು ನಿಮಗೆ ಸಹಾಯಕಾರಿಯಾಗುವುದೇ? ಇದು ಹೇಗೆ ಸಂಭವಿಸಬಹುದು ಎಂಬುದಕ್ಕೆ ನೀವು ಉದಾಹರಣೆಗಳನ್ನು ನೀಡಬಹುದೇ ?

____________________________________________________________

____________________________________________________________

____________________________________________________________

____________________________________________________________

3. ಬಹಾ'ಉ'ಲ್ಲಾರವರ ಬರಹಗಳಿಂದ ಈ ಕೆಳಗಿನ ಒಂದು ಅಥವಾ ಹೆಚ್ಚಿನ ವಚನಭಾಗಗಳನ್ನು ಕಂಠಪಾಠ ಮಾಡಲು ಸಲಹೆ ನೀಡಲಾಗಿದೆ:

**"ಸರ್ವಶಕ್ತನು ಮನುಷ್ಯನಿಗೆ ದಯಪಾಲಿಸಿರುವ ಈ ಅನುಗ್ರಹಗಳಲ್ಲಿ ಮೊದಲನೆಯದು, ಅರಿವು ಎಂಬ ಕೊಡುಗೆಯಾಗಿದೆ. . . . ಈ ಉಡುಗೊರೆಯು ಮನುಷ್ಯನಿಗೆ ಎಲ್ಲ ವಿಷಯಗಳಲ್ಲಿ ಸತ್ಯವನ್ನು ಗ್ರಹಿಸುವ ಶಕ್ತಿಯನ್ನು ನೀಡುವುದು, ಅವನನ್ನು ಸರಿಯಾದ ಪಥಕ್ಕೆ ಕರೆದೊಯ್ಯುತ್ತದೆ, ಮತ್ತು ಸೃಷ್ಟಿಯ ರಹಸ್ಯಗಳನ್ನು ಕಂಡುಕೊಳ್ಳಲು ಅವನಿಗೆ ಸಹಾಯ ಮಾಡುತ್ತದೆ. "[12]**

**"ಜಗತ್ತನ್ನು ನೋಡಿ ಮತ್ತು ಅದರ ಕುರಿತು ಕೊಂಚ ಧ್ಯಾನ ಮಾಡಿ. ಅದು ತನ್ನ ಸ್ವಂತ ಪುಸ್ತಕವನ್ನು ನಿಮ್ಮ ಕಣ್ಣಮುಂದೆ ಅನಾವರಣಗೊಳಿಸುತ್ತದೆ ಮತ್ತು ವಿನ್ಯಾಸಗಾರನು, ಸರ್ವ-ಶ್ರೇಷ್ಟನು ಆದ ನಿನ್ನ ಸ್ವಾಮಿಯ ಲೇಖನಿಯು, ಅದರೊಳಗೆ ಕೆತ್ತಲ್ಪಟ್ಟಿದ್ದನ್ನು ಪ್ರಕಟಪಡಿಸುವುದು. "[13]**

**"ಜ್ಞಾನವು ಮನುಷ್ಯನ ಜೀವನಕ್ಕೆ ರೆಕ್ಕೆಗಳಂತೆ, ಮತ್ತು ಅವನ ಆರೋಹಣಕ್ಕೆ ಏಣಿಯಾಗಿದೆ. ಇದರ ಸ್ವಾಧೀನವು ಪ್ರತಿಯೊಬ್ಬರ ಕರ್ತವ್ಯವಾಗಿದೆ. "[14]**

## ವಿಭಾಗ 6

ಮಾನವತೆಯ ಏಕತೆಯು ಇಂದು ಎಲ್ಲೆಡೆ ಜನರ ಹೃದಯದಲ್ಲಿ ಪ್ರತಿಧ್ವನಿಸುವ ವಿಷಯವಾಗಿದೆ, ಮತ್ತು ಕೆಳಗೆ ನೀಡಲಾದ ವಿಚಾರಗಳನ್ನು ನಿಮ್ಮೊಂದಿಗೆ ಚರ್ಚಿಸುವುದನ್ನು ಅನೇಕರು ಸ್ವಾಗತಿಸುತ್ತಾರೆ.

ವಿವಿಧ ವರ್ಣಗಳಿಂದ ಮತ್ತು ಸುಗಂಧದಿಂದ ಕೂಡಿದ ಪುಷ್ಪಗಳು ಅಕ್ಕಪಕ್ಕದಲ್ಲಿ ಬೆಳೆದಿರುವ ಉದ್ಯಾನವನವನ್ನು ನೋಡಲು ಕಣ್ಣಿಗೆ ಆಹ್ಲಾದಕರವಾಗಿರುತ್ತದೆ. ಮತ್ತು ವಿಭಿನ್ನವಾಗಿದ್ದರೂ, ಪ್ರತಿಯೊಂದು ಪುಷ್ಪವೂ ಒಂದೇ ಮಳೆಯಿಂದ ಚೈತನ್ಯಗೊಳ್ಳುತ್ತದೆ ಮತ್ತು ಒಂದೇ ಸೂರ್ಯನಿಂದ ಉಷ್ಣತೆಯನ್ನು ಪಡೆಯುತ್ತದೆ. ಇದು ಮಾನವತೆಯ ವಿಷಯದಲ್ಲೂ ನಿಜ. ಅದು ಅನೇಕ ಜಾತಿ ಮತ್ತು ವರ್ಣಗಳಿಂದ ಕೂಡಿದೆ. ಆದರೆ ಎಲ್ಲರೂ ಒಂದೇ ದೇವರಿಂದ ಬಂದವರು, ಮತ್ತು ಎಲ್ಲರೂ ಒಂದೇ ಉಗಮವನ್ನು ಹೊಂದಿದ್ದಾರೆ. ಸಂಗೀತದಲ್ಲಿ ವಿಭಿನ್ನ ಶೃತಿಗಳ ಸಮ್ಮಿಶ್ರಣದಿಂದ ಪರಿಪೂರ್ಣ ಸ್ವರಮೇಳವು ಹೊರಹೊಮ್ಮುವ ಹಾಗೆ, ಮಾನವ ಕುಟುಂಬದಲ್ಲಿನ ವೈವಿಧ್ಯತೆಯು ಸಾಮರಸ್ಯದ ಮೂಲವಾಗಿರಬೇಕು.

ಅಸ್ತಿತ್ವಕ್ಕೆ ಐಕ್ಯತೆಯು ಅತ್ಯಗತ್ಯ. ಪ್ರೀತಿಯೇ ಜೀವನಕ್ಕೆ ಕಾರಣವಾಗಿದೆ. ಭೌತಿಕ ಜಗತ್ತಿನಲ್ಲಿ, ಎಲ್ಲ ವಸ್ತುಗಳಲ್ಲಿನ ಅಂಶಗಳು ಆಕರ್ಷಣೆಯ ನಿಯಮದಿಂದ ಒಗ್ಗೂಡಿಸಲ್ಪಟ್ಟಿದೆ. ಆಕರ್ಷಣೆಯ ನಿಯಮವು ಸುಂದರವಾದ ಪುಷ್ಪದ ರೂಪದಲ್ಲಿ ಕೆಲವು ಅಂಶಗಳನ್ನು ಒಟ್ಟುಗೂಡಿಸುತ್ತದೆ. ಆದರೆ ಆ ಆಕರ್ಷಣೆಯು ತೆಗೆಯಲ್ಪಟ್ಟಾಗ, ಹೂವು ಕೊಳೆಯುತ್ತದೆ ಮತ್ತು ಅಸ್ತಿತ್ವದಲ್ಲಿರುವುದಿಲ್ಲ. ಅದರಂತೆಯೇ ಮಾನವತೆಯನ್ನು ಪರಿಗಣಿಸತಕ್ಕದ್ದು. ಆಕರ್ಷಣೆ, ಸಾಮರಸ್ಯ ಮತ್ತು ಏಕತೆಯು ಮಾನವತೆಯನ್ನು ಒಟ್ಟಿಗೆ ಹಿಡಿದಿಡುವ ಶಕ್ತಿಗಳು.

ಬಹಾಉಲ್ಲಾರವರು ಪ್ರಪಂಚದ ಎಲ್ಲ ಜನರನ್ನು ಒಂದು ಗೂಡಿಸುವ ವಿನ್ಯಾಸವನ್ನು ನೀಡಿದ್ದಾರೆ. ಈ ಏಕತೆಯ ವಲಯಕ್ಕೆ ಅವರನ್ನು ಸೆಳೆಯಲು ನಾವು ಎಲ್ಲ ಪ್ರಯತ್ನಗಳನ್ನು ಮಾಡಬೇಕು. ಭಿನ್ನವಾದ ಜಾತಿ, ರಾಷ್ಟ್ರೀಯತೆ, ಧರ್ಮ ಮತ್ತು ಭಿನ್ನಾಭಿಪ್ರಾಯವಿರುವ ಜನರನ್ನು ನಾವು ಭೇಟಿಯಾದಾಗ, ಈ ವ್ಯತ್ಯಾಸಗಳು ನಮ್ಮ ನಡುವೆ ಅಡೆತಡೆಗಳಾಗಲು ನಾವು ಎಡೆಮಾಡಿ ಕೊಡಬಾರದು. ಮಾನವತೆಯ ಸುಂದರವಾದ ಉದ್ಯಾನದಲ್ಲಿ ಬೆಳೆಯುತ್ತಿರುವ ವಿಭಿನ್ನ ವರ್ಣದ ಗುಲಾಬಿಗಳೆಂದು ನಾವು ಭಾವಿಸಬೇಕು ಮತ್ತು ಅವರ ನಡುವೆ ಇರಲು ಸಂತೋಷಿಸಬೇಕು.

1. ನೀವು ಹಿಂದಿನಂತೆ ಮೇಲಿನ ಹೇಳಿಕೆಯನ್ನು ಅಧ್ಯಯನ ಮಾಡಿದ ನಂತರ, ನಿಮ್ಮ ಸುತ್ತಲೂ ತೆರೆಯಲ್ಪಡುವ ಅನೇಕ ಸಂಭಾಷಣೆಗಳ ಕುರಿತು ಆಲೋಚಿಸಿ. ಈ ವಿಚಾರಗಳನ್ನು ನೀವು ಅವರೊಂದಿಗೆ ಹಂಚಿಕೊಳ್ಳುವ ಸಾಧ್ಯತೆಯನ್ನು ನೀಡುವ, ಜನರ ಮನಸ್ಸಿನಲ್ಲಿ ಉದ್ಭವಿಸುವ ಕೆಲವು ವಿಚಾರಗಳು ಯಾವುವು?

____________________________________________

____________________________________________

____________________________________________

____________________________________________

2. ಮಾನವಕುಲದ ಐಕ್ಯತೆಯ ಕುರಿತ ಸಂಭಾಷಣೆಯು ಒಬ್ಬರ ಸ್ವಂತ ಸಮುದಾಯದಲ್ಲಿ ಏಕತೆಯ ಮಹತ್ವದ ಬಗ್ಗೆ ಚರ್ಚೆಗೆ ಕಾರಣವಾಗಬಹುದು. ನಮ್ಮಲ್ಲಿ ಪ್ರತಿಯೊಬ್ಬರೂ ಅದಕ್ಕೆ ಹೇಗೆ ಕೊಡುಗೆ ನೀಡಬಹುದು ಎಂಬುದರ ಕುರಿತು ನೀವು ಕೆಲವು ಮಾತುಗಳಲ್ಲಿ ಹೇಳಬಲ್ಲಿರಾ?

____________________________________________________________

____________________________________________________________

____________________________________________________________

____________________________________________________________

3. ನೀವು ಈ ಕೆಳಗಿನ ಒಂದು ಅಥವಾ ಹೆಚ್ಚಿನ ಉಲ್ಲೇಖಗಳನ್ನು ನೆನಪಿಟ್ಟುಕೊಳ್ಳಲು ಬಯಸಬಹುದು, ಇದರಿಂದಾಗಿ ನಿಮ್ಮ ಸ್ನೇಹಿತರೊಂದಿಗೆ ಈ ವಿಷಯದ ಬಗ್ಗೆ ಮಾತನಾಡುವಾಗ ನೀವು ಅವುಗಳನ್ನು ಉಲ್ಲೇಖಿಸಬಹುದು:

**“ಐಕ್ಯತೆಯ ಗುಡಾರವು ಏರಿಸಲ್ಪಟ್ಟಿದೆ; ನೀವು ಒಬ್ಬರನ್ನೊಬ್ಬರು ಅಪರಿಚಿತರು ಎಂದು ಪರಿಗಣಿಸದಿರಿ. ನೀವೆಲ್ಲಾ ಒಂದೇ ಮರದ ಹಣ್ಣುಗಳು ಮತ್ತು ಒಂದೇ ಕೊಂಬೆಯ ಎಲೆಗಳು. ”**[15]

**"ಐಕ್ಯತೆಯ ಪ್ರಕಾಶವು ಎಷ್ಟು ಬಲಯುತವಾದುದೆಂದರೆ ಅದು ಇಡೀ ಭೂಮಿಯನ್ನು ಬೆಳಗಿಸಬಲ್ಲದು."** [16]

**“ನಿಮ್ಮ ಮುಖಗಳನ್ನು ಐಕ್ಯತೆಯೆಡೆಗೆ ಇರಿಸಿ, ಮತ್ತು ಅದರ ಬೆಳಕಿನ ಕಾಂತಿ ನಿಮ್ಮ ಮೇಲೆ ಬೆಳಗಲಿ. ನೀವು ಒಟ್ಟಾಗಿ ಸೇರಿರಿ, ಮತ್ತು ದೇವರ ಸಲುವಾಗಿ, ನಿಮ್ಮ ನಡುವಿನ ವಾದ-ವಿವಾದದ ಮೂಲವನ್ನು ನಿರ್ಮೂಲನ ಮಾಡಲು ನಿರ್ಧರಿಸಿ. ”**[17]

**"ಸೌಹಾರ್ದತೆ, ದಯಾಪರತೆ ಮತ್ತು ಐಕ್ಯತೆಯನ್ನು ಉತ್ತೇಜಿಸುವಂತಹದನ್ನು ದೃಢವಾಗಿ ಪಾಲಿಸುವುದೇ ಮನುಷ್ಯನಿಗೆ ಒಳಿತು."** [18]

## ವಿಭಾಗ 7

ಈ ಕೆಳಗಿನ ಹೇಳಿಕೆಯು ನ್ಯಾಯದ ವಿಷಯದ ಕುರಿತಾದ ಚರ್ಚೆಗೆ ಕೊಡುಗೆ ನೀಡಲು ನಿಮಗೆ ಸಹಾಯ ಮಾಡುತ್ತದೆ, ಇದು ಅನೇಕ ಜನರಿಗೆ ಹೆಚ್ಚಿನ ಕಾಳಜಿಯ ವಿಷಯವಾಗಿದೆ:

> ವ್ಯಕ್ತಿಗಳಲ್ಲಿನ ವಿಭಿನ್ನ ಸಾಮರ್ಥ್ಯವು ಮಾನವ ಅಸ್ತಿತ್ವಕ್ಕೆ ಮೂಲಭೂತವಾಗಿದೆ. ಆದ್ದರಿಂದ, ಪ್ರತಿಯೊಂದು ವಿಷಯದಲ್ಲೂ ಎಲ್ಲ ಜನರು ಸಮಾನರಾಗಿರಲು ಸಾಧ್ಯವಿಲ್ಲ. ಆದರೂ ಮಾನವ ವ್ಯವಹಾರಗಳ ಆಡಳಿತವು ಸಂಪೂರ್ಣವಾಗಿ ನ್ಯಾಯದ ತತ್ವದ ಮೇಲೆ ನಡೆಸತಕ್ಕದ್ದು. ನ್ಯಾಯವು ಪವಿತ್ರವಾಗಿರಬೇಕು ಮತ್ತು ಪ್ರತಿಯೊಬ್ಬ ವ್ಯಕ್ತಿಯ ಹಕ್ಕುಗಳು ಸಂರಕ್ಷಿಸಲ್ಪಡಬೇಕು.
>
> ನ್ಯಾಯವು ಪರಿಮಿತವಾದುದಲ್ಲ; ಇದು ಸಾರ್ವತ್ರಿಕ ಗುಣವಾಗಿದೆ. ಇದು ಮಾನವ ಜೀವನದ ಎಲ್ಲಾ ಸ್ತರಗಳಲ್ಲಿ ಕಾರ್ಯನಿರ್ವಹಿಸತಕ್ಕದ್ದು. ಸಮಾಜದ ಪ್ರತಿಯೊಬ್ಬ ಸದಸ್ಯರು ನಾಗರಿಕತೆಯ ಪ್ರಯೋಜನಗಳನ್ನು ಸ್ವಾದಿಸಬೇಕು, ಏಕೆಂದರೆ ನಾವೆಲ್ಲರೂ ಮಾನವತೆಯ  ಶರೀರಕ್ಕೆ ಸೇರಿದವರು. ಈ ಶರೀರದ ಒಬ್ಬ ಸದಸ್ಯನು ದುಃಖ ಅಥವಾ ಸಂಕಟದಲ್ಲಿದ್ದರೆ, ಉಳಿದ ಎಲ್ಲಾ ಸದಸ್ಯರು ಅಗತ್ಯವಾಗಿ ಬಳಲುವರು. ಒಬ್ಬ ವ್ಯಕ್ತಿಯು ಪೀಡಿಸಲ್ಪಡುತ್ತಿರುವಾಗ ಇತರರು ಹೇಗೆ ನಿಶ್ಚಿಂತೆಯಿಂದಿರಲು ಸಾಧ್ಯ? ಇಂದಿನ ಸಮಾಜದಲ್ಲಿ ಅಗತ್ಯವಾದ ಸ್ಪಂದನ ಮತ್ತು ಸಮತೋಲನದ ಕೊರತೆ ಇದೆ; ಅದನ್ನು ಸರಿಯಾಗಿ ಜೋಡಿಸಲಾಗಿಲ್ಲ. ಇಡೀ ಮಾನವ ಕುಟುಂಬದ ಯೋಗಕ್ಷೇಮ ಮತ್ತು ಸಂತೋಷವನ್ನು ಖಚಿತಪಡಿಸುವ ನಿಯಮಗಳಾ ಮತ್ತು ತತ್ವಗಳ ಅಗತ್ಯವಿದೆ.
>
> ಪ್ರತಿಫಲ ಮತ್ತು ಶಿಕ್ಷೆಯ ಆಧಾರ ಸ್ತಂಭಗಳ ಮೇಲೆ ನ್ಯಾಯವನ್ನು ಸ್ಥಾಪಿಸಲ್ಪಟ್ಟಿದೆ.  ಆಳ್ವಿಕೆಯಲ್ಲಿರುವ ನಂಬಿಕೆ ರಹಿತ ಸರ್ಕಾರಗಳು, ದೈವೀ ಶಿಕ್ಷೆಯ ಭಯವಿಲ್ಲದೆ ಅನ್ಯಾಯದ ಕಾನೂನುಗಳನ್ನು ಜಾರಿಗೊಳಿಸುತ್ತವೆ. ದಬ್ಬಾಳಿಕೆಯನ್ನು ತಡೆಗಟ್ಟಬೇಕಾದರೆ ಪ್ರತಿಫಲದ ಭರವಸೆ ಮತ್ತು ಶಿಕ್ಷೆಯ ಭಯ ಎರಡೂ ಅಗತ್ಯವಾಗಿರುತ್ತದೆ. ಶಾಸಕರು ಮತ್ತು ಕಾನೂನಿನ ಆಡಳಿತಗಾರರು ತಮ್ಮ ನಿರ್ಧಾರಗಳ ಆಧ್ಯಾತ್ಮಿಕ ಪರಿಣಾಮಗಳ ಬಗ್ಗೆ ತಿಳಿದಿರಬೇಕು. ಅವರ ಕಾರ್ಯಗಳ ಪರಿಣಾಮಗಳು ಈ ಐಹಿಕ ಜೀವನವನ್ನು ಮೀರಿ ಅವರನ್ನು ಅನುಸರಿಸುತ್ತವೆ ಎಂದು ನಂಬುವ ಆಡಳಿತಗಾರರು ಮತ್ತು ಅವರ ತೀರ್ಪುಗಳು ದೈವಿಕ ನ್ಯಾಯದ ಸಮತೋಲನದಲ್ಲಿ ತೂಗುತ್ತವೆ ಎಂದು ತಿಳಿದಿರುವವರು ನಿಶ್ಚಯವಾಗಿಯೂ ಹಿಂಸಾಚಾರ ಮತ್ತು ದಬ್ಬಾಳಿಕೆಯನ್ನು ತಪ್ಪಿಸುತ್ತಾರೆ.

1. ಮೇಲಿನ ವಿಚಾರಗಳನ್ನು ಸ್ವಾಭಾವಿಕವಾಗಿ ವ್ಯಕ್ತಪಡಿಸಲು ನೀವು ಕಲಿತ ನಂತರ, ಈ ಹೇಳಿಕೆಯು ನೀಡುವ ಅಂತದೃಷ್ಟಿಯಿಂದ ಸಂಭಾಷಣೆಯ ಯಾವ ವಿಷಯಗಳು ಪ್ರಯೋಜನ ಪಡೆಯುತ್ತವೆ ಎಂಬುದನ್ನು ಪರಿಗಣಿಸಿ.

______________________________________________________________________

______________________________________________________________________

______________________________________________________________________

2. ಅನ್ಯಾಯವು ಎಂದಿಗೂ ಕೊನೆಗೊಳ್ಳದು ಎಂದು ನಂಬುವವರಿಗೆ ನೀವು ಹೇಗೆ ಪ್ರತಿಕ್ರಿಯಿಸುತ್ತೀರಿ?

______________________________________________________________________

______________________________________________________________________

______________________________________________________________________

3. ನ್ಯಾಯಕ್ಕೆ ಸಂಬಂಧಿಸಿದ, ಬಹಾ'ಉ'ಲ್ಲಾರವರ ಬರಹಗಳ ಕೆಲವು ಉಲ್ಲೇಖಗಳನ್ನು ಕೆಳಗೆ ನೀಡಲಾಗಿದೆ, ಅದನ್ನು ಕಂಠಪಾಠ ಮಾಡಲು ನಿಮ್ಮನ್ನು ಪ್ರೋತ್ಸಾಹಿಸಲಾಗುತ್ತದೆ.

**"ಮನುಕುಲದ ಬೆಳಕು ನ್ಯಾಯ. ಶೋಷಣೆ ಮತ್ತು ದಬ್ಬಾಳಿಕೆಯ ವಿರುದ್ಧವಾತದ ಗಾಳಿಯಿಂದ ಅದನ್ನು ನಂದಿಸದಿರಿ. ಮನುಕುಲದ ಐಕ್ಯತೆಯನ್ನು ಸ್ಥಾಪಿಸುವುದೇ ನ್ಯಾಯದ ಉದ್ದೇಶವಾಗಿದೆ. "[19]**

**"ಯಾವುದೇ ಪ್ರಕಾಶವನ್ನು, ನ್ಯಾಯದೊಂದಿಗೆ ಹೋಲಿಸಲಾಗುವುದಿಲ್ಲ. ಪ್ರಪಂಚದ ಸುವ್ಯವಸ್ಥೆ ಮತ್ತು ಮನುಕುಲದ ಶಾಂತಿಯು ಅದರ ಮೇಲೆ ಅವಲಂಬಿತವಾಗಿದೆ."[20]**

**"ಪ್ರಪಂಚಕ್ಕೆ ತರಬೇತಿ ನೀಡುವುದು ನ್ಯಾಯ, ಏಕೆಂದರೆ ಅದನ್ನು ಎರಡು ಸ್ತಂಭಗಳಿಂದ ಎತ್ತಿಹಿಡಿಯಲಾಗಿದೆ, ಪ್ರತಿಫಲ ಮತ್ತು ಶಿಕ್ಷೆ. ಈ ಎರಡು ಸ್ತಂಭಗಳು ಪ್ರಪಂಚಕ್ಕೆ ಜೀವನದ ಮೂಲವಾಗಿವೆ. "[21]**

## ವಿಭಾಗ 8

ಶ್ರೀಮಂತರು ಮತ್ತು ಬಡವರ ನಡುವಿನ ಅಂತರವು ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಇದೆ, ಮತ್ತು ಕೆಳಗಿನ ಹೇಳಿಕೆಯು ಈ ವಿಷಯ ಮತ್ತು ಸಂಬಂಧಿತ ವಿಷಯಗಳ ಕುರಿತು ಸ್ನೇಹಿತರೊಂದಿಗೆ ಸಂಭಾಷಿಸಲು ನಿಮಗೆ ಸಹಾಯ ಮಾಡುತ್ತದೆ.

ಇಂದು, ಅನ್ಯೋನ್ಯತೆ ಮತ್ತು ಸಾಮರಸ್ಯತೆಯ ಸಂಬಂಧಗಳ ಕೊರತೆಯಿಂದಾಗಿ, ಸಮಾಜದ ಕೆಲವು ಸದಸ್ಯರು ತೃಪ್ತವಾದ, ಹೆಚ್ಚಿನ ಆರಾಮ ಮತ್ತು ಐಷಾರಾಮದ ಜೀವನ ನಡೆಸುತ್ತಿದ್ದರೆ, ಇತರರು ಆಹಾರ ಮತ್ತು ಆಶ್ರಯಕ್ಕಾಗಿ ಬಳಲುತ್ತಿರುವರು. ಕೆಲವರು ಅಪಾರವಾಗಿ ಶ್ರೀಮಂತರಾಗಿದ್ದಾರೆ, ಮತ್ತು ಇತರರು ಅತ್ಯಂತ ಬಡತನದ ಬೇಗೆಯಲ್ಲಿ ಬದುಕುತ್ತಿದ್ದಾರೆ.

ಕೆಲವರು ಅತಿಯಾದ ಸಂಪತ್ತನ್ನು ಸಂಗ್ರಹಿಸುವಂತೆ ಮತ್ತು ಇತರರು ನಿರ್ಗತಿಕರಾಗಿರುವಂತೆ ಸಾಧ್ಯವಾಗದ ರೀತಿಯಲ್ಲಿ ಸಮಾಜದ ನಿಯಮಗಳು ರೂಪಿಸಲ್ಪಬೇಕು ಹಾಗು ಜಾರಿಗೊಳಿಸಬೇಕು. ಎಲ್ಲರೂ ಸಮಾನವಾಗಿರಬೇಕು ಎಂದು ಇದರ ಅರ್ಥವಲ್ಲ, ಏಕೆಂದರೆ ಪದವಿ ಮತ್ತು ಸಾಮರ್ಥ್ಯದಲ್ಲಿನ ವ್ಯತ್ಯಾಸಗಳು ಸೃಷ್ಟಿಯಲ್ಲಿ ಅಂತರ್ಗತವಾಗಿರುವ ವಿಷಯವಾಗಿದೆ. ಆದರೆ ನಿರಾಶಾದಾಯಕವಾದ ಮಿತಿಮೀರಿದ ಸಂಪತ್ತಿನ ಜೊತೆಗೆ ಶೋಚನೀಯವಾದ ಬಡತನವನ್ನು ರದ್ದುಗೊಳಿಸಬೇಕು. ಬಂಡವಾಳಶಾಹಿಯು ಅದೃಷ್ಟವನ್ನು ಹೊಂದಿರುವುದು ಸರಿಯೆಂದಾದರೆ, ಕಾರ್ಮಿಕನೂ

ಸಾಕಷ್ಟು ಅಸ್ತಿತ್ವದ ಸಾಧನಗಳನ್ನು ಹೊಂದಿರಬೇಕು ಎಂಬುದು ಅಷ್ಟೇ ಸರಿ. ನಾವು ಅತೀ ಬಡತನವನ್ನು ನೋಡಿದರೆ, ಅಲ್ಲಿ ಎಲ್ಲೋ ದಬ್ಬಾಳಿಕೆಯೂ ಸ್ಪಷ್ಟವಾಗಿ ಗೋಚರಿಸುತ್ತದೆ.

ವಿಷಯದ ಮೂಲತತ್ವವೆಂದರೆ ದೈವಿಕ ನ್ಯಾಯವು ಮಾನವನ ಪರಿಸ್ಥಿತಿಗಳಲ್ಲಿ ಪ್ರಕಟವಾಗಬೇಕು. ಇಡೀ ಆರ್ಥಿಕ ಸ್ಥಿತಿಯ ಮೂಲಭೂತತ ತತ್ವಗಳು ದೈವಿಕ ಸ್ವರೂಪದಲ್ಲಿರುತ್ತವೆ ಮತ್ತು ಹೃದಯ ಮತ್ತು ಚೇತನದ ಪ್ರಪಂಚದೊಂದಿಗೆ ಸಂಬಂಧ ಹೊಂದಿವೆ. ಶ್ರೀಮಂತರು ತಮ್ಮ ಸಮೃದ್ಧಿಯನ್ನು ನೀಡಬೇಕು; ಅವರು ತಮ್ಮ ಹೃದಯವನ್ನು ಮೃದುವಾಗಿಸಿ ಅನುಕಂಪದ ಬುದ್ಧಿಯನ್ನು ಬೆಳೆಸಿಕೊಳ್ಳಬೇಕು. ಹೃದಯಗಳು ಅದೆಷ್ಟು ಒಟ್ಟಿಗೆ ಅಂಟಿಕೊಂಡಿರಬೇಕು, ಎಂದರೆ ಪ್ರೀತಿ ಅಷ್ಟು ಪ್ರಬಲವಾಗಿ ಶ್ರೀಮಂತರು ಆರ್ಥಿಕ ಹೊಂದಾಣಿಕೆಗಳನ್ನು ಶಾಶ್ವತವಾಗಿ ಸರಿದೂಗಿಸಲು ಸ್ವಇಚ್ಛೆಯಿಂದ ಹೆಚ್ಚು ಕ್ರಮಗಳನ್ನು ತೆಗೆದುಕೊಳ್ಳುವಂತಿರಬೇಕು. ಸಮುದಾಯದಲ್ಲಿ ಕಡು ಬಡತನವಿರುವಾಗ ಅವರು ದೊಡ್ಡ ಸಂಪತ್ತನ್ನು ಹೊಂದಿರಬೇಕು ಎಂಬುದು ನ್ಯಾಯಸಮ್ಮತ ಅಥವಾ ಕಾನೂನುಬದ್ಧವಲ್ಲ ಎಂಬುದನ್ನು ಅವರೇ ಅರಿತುಕೊಳ್ಳಬೇಕು. ಆಗ, ಅವರು, ತಮಗೆ ಆರಾಮವಾಗಿ ಬದುಕಲು ಸಾಕಾಗುವಷ್ಟನ್ನು ಉಳಿಸಿಕೊಂಡು, ತಮ್ಮ ಸಂಪತ್ತನ್ನು ಸ್ವಇಚ್ಛೆಯಿಂದ ನೀಡುವರು.

1. ಹೇಳಿಕೆಯನ್ನು ಓದಿ ಮತ್ತು ಅದನ್ನು ನಿಮ್ಮ ಗುಂಪಿನಲ್ಲಿ ಅಧ್ಯಯನ ಮಾಡಿ. ಜನರ ಮನಸ್ಸಿನಲ್ಲಿ ಸಂಪತ್ತು ಮತ್ತು ಬಡತನಕ್ಕೆ ಸಂಬಂಧಿಸಿದ ಅನೇಕ ಸಮಸ್ಯೆಗಳಿವೆ - ಕೆಲವನ್ನು ಹೆಸರಿಸಬೇಕೆಂದರೆ ಉದ್ಯೋಗ, ವೇತನ, ವಸತಿ. ಈ ಹೇಳಿಕೆಯಲ್ಲಿರುವ ಆಲೋಚನೆಗಳ ಚರ್ಚೆಯ ಮೂಲಕ ಪ್ರಯೋಜನ ಪಡೆಯಬಲ್ಲ ಇತರ ವಿಷಯಗಳ ಬಗ್ಗೆ ನೀವು ಯೋಚಿಸಬಹುದೇ?

____________________________________________________________________

____________________________________________________________________

____________________________________________________________________

2. ಮೇಲಿನ ವಿಚಾರಗಳನ್ನು ಕೇಳಿದ ನಂತರ ಯಾರಾದರೂ ಈ ಕೆಳಗಿನಂತೆ ಪ್ರಶ್ನಿಸಿದರೆ ನೀವು ಹೇಗೆ ಉತ್ತರಿಸುತ್ತೀರಿ: "ಶ್ರೀಮಂತರು ಕಟ್ಟುನಿಟ್ಟಾದ ತೆರಿಗೆ ಕಾನೂನುಗಳನ್ನು ಅರ್ಥಮಾಡಿಕೊಳ್ಳುತ್ತಾರೆ ಮತ್ತು ಬೆಂಬಲಿಸುತ್ತಾರೆ ಎಂದು ನೀವು ಹೇಳುತ್ತೀರಾ, ಮತ್ತು ಅವರು ನಿಜವಾಗಿಯೂ ಏನು ಮಾಡಬೇಕು ಎಂಬುದನ್ನು ಅರಿತು ಅವರು ಮನಃಪೂರ್ವಕವಾಗಿ ಪಾವತಿಸುತ್ತಾರೆ ಎನ್ನುವಿರಾ? ಇದು ಹೇಗೆ ಸಾಧ್ಯ ಎಂದು ನೀವು ಭಾವಿಸುವಿರಿ?"

____________________________________________________________________

____________________________________________________________________

____________________________________________________________________

3. ಬಹಾ'ಉ'ಲ್ಲಾರವರ ಬರಹಗಳಿಂದ ಈ ಒಂದು ಅಥವಾ ಎರಡು ಉಲ್ಲೇಖನಗಳನ್ನು ನೀವು ಕಂಠಪಾಠ ಮಾಡಲು ಸಲಹೆ ನೀಡಲಾಗಿದೆ:

**“. . . ನೀವು ಮತ್ತು ಇತರರು ಲಾಭ ಪಡೆಯುವ ಸಲುವಾಗಿ ಒಳ್ಳೆಯ ಮತ್ತು ಅದ್ಭುತವಾದ ಫಲಗಳನ್ನು ನೀಡಬೇಕು. ಹೀಗೆ ಪ್ರತಿಯೊಬ್ಬರು ಕರಕುಶಲ ಮತ್ತು ವೃತ್ತಿಗಳಲ್ಲಿ ತೊಡಗಿಸಿಕೊಳ್ಳುವುದು ವಿಧಾಯಕವಾಗಿದೆ, ಏಕೆಂದರೆ, ಓ ತಿಳುವಳಿಕೆಯುಳ್ಳ ಮಾನವನೇ, ಅದರಲ್ಲಿ ಸಂಪತ್ತಿನ ರಹಸ್ಯವಿದೆ! ”[22].**

**“ನಿಮ್ಮ ಕಣ್ಣುಗಳನ್ನು ಕರುಣೆಯ ಕಡೆಗೆ ತಿರುಗಿಸಿದ ನಂತರ, ನಿಮಗೆ ಲಾಭಕರವಾದ ಸಂಗತಿಗಳನ್ನು ತ್ಯಜಿಸಿ ಮತ್ತು ಮಾನವಕುಲಕ್ಕೆ ಲಾಭವಾಗುವಂತಹವುಗಳಿಗೆ ಅಂಟಿಕೊಳ್ಳಿ. ನಿಮ್ಮ ಕಣ್ಣುಗಳು ನ್ಯಾಯದ ಕಡೆಗೆ ತಿರುಗಿದರೆ, ನಿಮಗಾಗಿ ಆಯ್ಕೆಮಾಡುವುದನ್ನೇ ನಿಮ್ಮ ನೆರೆಯವರಿಗೂ ಆರಿಸಿಕೊಳ್ಳಿ. ”[23]**

**“ತನಗಿಂತ ಮೊದಲು ತನ್ನ ಸಹೋದರನಿಗೆ ಆದ್ಯತೆ ನೀಡುವವನು ಧನ್ಯನು.” [24]**

**"ಯಾವುದೇ ಒಳ್ಳೆಯ ಕಾರ್ಯವು ಎಂದಿಗೂ ಕಳೆದುಹೋಗುವುದಿಲ್ಲ, ಏಕೆಂದರೆ ಪರೋಪಕಾರಿ ಕಾರ್ಯಗಳು ಕೃತಿಯನ್ನೆಸಗುವವರ ಅನುಕೂಲಕ್ಕಾಗಿ ದೇವರೊಂದಿಗೆ ಸಂರಕ್ಷಿಸಲ್ಪಟ್ಟ ನಿಧಿಗಳಾಗಿವೆ." [25]**

**“. . . ಸಂಯಮದ ಎಲ್ಲೆಯನ್ನು ಮೀರದಂತೆ, ಹಾಗೂ ದುಂದುವೆಚ್ಚ ಮಾಡುವವರ ನಡುವೆ ಎಣಿಸಲ್ಪಡದಂತೆ ಎಚ್ಚರವಹಿಸಿ.”[26]**

# ವಿಭಾಗ 9

ಪೂರ್ವಾಗ್ರಹದ ವಿಷಯದ ಕುರಿತು ಚರ್ಚೆಗಳಲ್ಲಿ ಭಾಗವಹಿಸಲು ನಿಮಗೆ ಸಹಾಯ ಮಾಡುವ ಕೆಲವು ವಿಚಾರಗಳನ್ನು ಕೆಳಗೆ ನೀಡಲಾಗಿದೆ.

ಪೂರ್ವಾಗ್ರಹದ ಎಲ್ಲಾ ರೂಪಗಳು - ಧಾರ್ಮಿಕ, ಜನಾಂಗೀಯ, ಲಿಂಗ, ಮೂಲ, ಆರ್ಥಿಕ - ಮಾನವ ದೇಗುಲವನ್ನು ನಾಶಪಡಿಸುತ್ತದೆ ಮತ್ತು ದೇವರ ಆಜ್ಞೆಗಳಿಗೆ ಅವು ವಿರುದ್ಧವಾಗಿವೆ. ಸಾವಿರಾರು ವರ್ಷಗಳಿಂದ ಈ ಪೂರ್ವಾಗ್ರಹಗಳ ಕಾರಣ ಒಂದಲ್ಲ ಒಂದು ರೀತಿಯಲ್ಲಿ ಯುದ್ಧ ಮತ್ತು ರಕ್ತಪಾತದಿಂದ ಮಾನವತೆಯು ಬಳಲುತ್ತಿದೆ. ಅವುಗಳು ಇರುವವರೆಗೂ ಮಾನವತೆಗೆ ವಿಶ್ರಾಂತಿ ಇರುವುದಿಲ್ಲ.

ಪ್ರೀತಿ ಮತ್ತು ಐಕ್ಯತೆಯನ್ನು ಸೃಷ್ಟಿಸುವ ಏಕೈಕ ಉದ್ದೇಶಕ್ಕಾಗಿ ದೇವರು ತನ್ನ ಪ್ರವಾದಿಗಳನ್ನು ಕಳುಹಿಸಿದ್ದಾನೆ. ಎಲ್ಲಾ ಸ್ವರ್ಗೀಯ ಪುಸ್ತಕಗಳು ಲಿಖಿತ ರೂಪದಲ್ಲಿರುವ ಪ್ರೀತಿಯ ನುಡಿಗಳಾಗಿವೆ. ಅವುಗಳು ವಿಭಜನೆಗೆ ಕಾರಣವೆಂದು ಸಾಬೀತಾದರೆ, ಅವು ಫಲಪ್ರದವಾಗುವುದಿಲ್ಲ. ಆದ್ದರಿಂದ, ವಿಶೇಷವಾಗಿ,ಧಾರ್ಮಿಕ ಪೂರ್ವಾಗ್ರಹವು ದೇವರ ಚಿತ್ತ ಮತ್ತು ಆಜ್ಞೆಗೆ ವಿರುದ್ಧವಾಗಿರುವುದು.

ರಾಷ್ಟ್ರೀಯ ಪೂರ್ವಾಗ್ರಹವು ಸಂಪೂರ್ಣವಾಗಿ ಅಸಮರ್ಥನೀಯ. ಪೃಥ್ವಿಯು ಒಂದು ಭೂಮಿ, ಒಂದು ದೇಶ. ರಾಷ್ಟ್ರಗಳನ್ನು ಪ್ರತ್ಯೇಕಿಸುವ ರೇಖೆಗಳು ಮತ್ತು ಗಡಿಗಳು ಕಾಲ್ಪನಿಕವಾಗಿವೆ; ಅವುಗಳು ದೇವರಿಂದ ಸೃಷ್ಟಿಸಲ್ಪಟ್ಟಿಲ್ಲ. ಜನರು ನದಿಯನ್ನು ಎರಡು ದೇಶಗಳ ನಡುವಿನ ಗಡಿರೇಖೆ ಎಂದು ಘೋಷಿಸುತ್ತಾರೆ, ಪ್ರತಿ ಬದಿಗೆ ಒಂದು ಹೆಸರನ್ನು ನೀಡುತ್ತಾರೆ, ಆದರೆ ನದಿಯು ನೈಸರ್ಗಿಕ ಧಮನಿಯಾಗಿದ್ದು, ಎಲ್ಲರಿಗಾಗಿ ಸೃಷ್ಟಿಸಲಾಗಿದೆ. ಕಲ್ಪನೆ ಮತ್ತು ಅಜ್ಞಾನವು ಜನರಿಗೆ ಜೀವನದ ವರಗಳನ್ನು ಯುದ್ಧ ಮತ್ತು ವಿನಾಶದ ಕಾರಣವಾಗುವಂತೆ ಮಾಡಿದೆಯಲ್ಲವೇ?

ಜಾತೀಯ ಪೂರ್ವಾಗ್ರಹವು ಮೂಢ ನಂಬಿಕೆಯಲ್ಲದೆ ಮತ್ತೇನೂ ಅಲ್ಲ. ವ್ಯಕ್ತಿಯ ಚರ್ಮದ ವರ್ಣವು ಹವಾಮಾನ ಮತ್ತು ಪರಿಸರಕ್ಕನುಗುಣವಾಗಿ ಆತನ ಅಥವಾ ಆಕೆಯ ಪೂರ್ವಜರು ಕಾಲಾನಂತರದಲ್ಲಿ ಅಳವಡಿಸಿಕೊಳ್ಳುವುದರ ಪರಿಣಾಮವಾಗಿದೆ. ಸನ್ನಡತೆಯು ಮಾನವತೆಯ ನಿಜವಾದ ಮಾನದಂಡವಾಗಿದೆ. ಉತ್ಕೃಷ್ಟತೆಯು ಜಾತಿ ಮತ್ತು ವರ್ಣವನ್ನು ಅವಲಂಬಿಸಿರುವುದಿಲ್ಲ. ನಂಬಿಕೆ, ಹೃದಯದ ಪರಿಶುದ್ಧತೆ, ಸತ್ಕಾರ್ಯಗಳು ಮತ್ತು ಪ್ರಶಂಸನೀಯ ಮಾತುಗಳು ದೇವರ ಹೊಸ್ತಿಲಲ್ಲಿ ಸ್ವೀಕಾರಾರ್ಹವಾದವುಗಳಾಗಿವೆ.

ದೀರ್ಘಕಾಲದವರೆಗೆ, ಮಹಿಳೆಯರನ್ನು ಪುರುಷರಿಗೆ ಅಧೀನರನ್ನಾಗಿ ಮಾಡಲಾಗಿದೆ ಮತ್ತು ತಪ್ಪಿತಸ್ಥರೆಂದು ಎಣಿಸಲ್ಪಡಲಾಗಿದೆ. ಸ್ತ್ರೀ ಪುರುಷರ ನಡುವಿನ ವ್ಯತ್ಯಾಸವು ಭೌತಿಕ ಪ್ರಪಂಚದ ಅವಶ್ಯಕತೆಯಾಗಿದೆ; ಆದರೆ ಚೈತನ್ಯದ ಜಗತ್ತಿನಲ್ಲಿ ಅವರು ಸಮಾನರು. ದೇವರ ದೃಷ್ಟಿಯಲ್ಲಿ, ಸ್ತ್ರೀ ಪುರುಷರೆಂಬ ಭೇದವಿಲ್ಲ. ಮಾನವಕುಲವೆಲ್ಲವೂ ಬುದ್ಧಿವಂತಿಕೆ ಮತ್ತು ಗ್ರಹಿಕೆಯನ್ನು **ಆತ**ನಿಂದ ಪಡೆದಿರುವುದು. ಎಲ್ಲರಿಗೂ ಸದ್ಗುಣಗಳನ್ನು ಬೆಳೆಸಿಕೊಳ್ಳುವ ಸಾಮರ್ಥ್ಯವಿದೆ. ಒಬ್ಬ ವ್ಯಕ್ತಿಯ ಲಿಂಗ ತಾರತಮ್ಯವನ್ನು ನಿರ್ಧರಿಸಲು ಆಧಾರವನ್ನು ಒದಗಿಸುವ ಯಾವ ವಿಷಯವೂ ಇಲ್ಲ.

ಹಳೆಯ ಒಡಂಬಡಿಕೆಯಲ್ಲಿ(ಬೈಬಲ್) ಉಲ್ಲೇಖಿಸಿರುವಂತೆ, "ನಮ್ಮ ಹೋಲಿಕೆಯಯಂತೆಯೇ ಮನುಷ್ಯನನ್ನು ನಮ್ಮ ಸ್ವರೂಪದಲ್ಲಿ ಸೃಷ್ಟಿಸೋಣ" ಎಂದು ದೇವರು ಹೇಳಿದ್ದಾನೆ. ಇದು ಮಹಿಳೆಯರಿಗೂ ಸ್ಪಷ್ಟವಾಗಿ ಅನ್ವಯಿಸುತ್ತದೆ. ಮನುಷ್ಯನನ್ನು ದೇವರ ಪ್ರತಿರೂಪದಲ್ಲಿ ಸೃಷ್ಟಿಸಲಾಗಿದೆ; ಅಂದರೆ, ದೈವಿಕ ಸದ್ಗುಣಗಳು ಮಾನವನ ವಾಸ್ತವತೆಯಲ್ಲಿ ಪ್ರತಿಫಲಿಸುತ್ತವೆ ಮತ್ತು ಪ್ರಕಟಗೊಳ್ಳುತ್ತವೆ. ಮಾನವರೆಲ್ಲರಿಗೂ ಇದು ಅನ್ವಯವಾಗುವುದು. ಒಂದೇ ವರ್ಣ, ಜಾತೀಯತೆ ಅಥವಾ ಮೂಲದ ಮಾನವರನ್ನು ಮಾತ್ರ ದೇವರ ಹೋಲಿಕೆಯಲ್ಲಿ ಸೃಷ್ಟಿಸಲಾಗಿದೆ ಎಂದು ಹೇಳುವುದು ಎಷ್ಟು ಅಸಮರ್ಥನೀಯ. ಶ್ರೀಮಂತರನ್ನು ಮಾತ್ರ **ಆತ**ನ ಪ್ರತಿರೂಪದಲ್ಲಿ ಸೃಷ್ಟಿಸಲಾಗಿದೆ ಅಥವಾ ಸಮಾಜದಲ್ಲಿ ಉನ್ನತ ಸ್ಥಾನ ಪಡೆಯುವುದು ದೇವರಿಗೆ ಹತ್ತಿರವಾಗಲು ಒಂದು ಶರತ್ತು ಎಂದು ಯೋಚಿಸುವುದು ಎಷ್ಟು ಅಸಂಬದ್ಧವಾಗಿದೆ. ಪೂರ್ವಾಗ್ರಹಗಳನ್ನು ತ್ಯಜಿಸಿ ಮತ್ತು ದೈವೀ ಸಾಮ್ರಾಜ್ಯದ ನೈತಿಕತೆಯನ್ನು ಸ್ವಾಧೀನಪಡಿಸಿಕೊಳ್ಳುವುದರ ವಿನಃ ಮಾನವತೆಯು ಬೆಳಕನ್ನು ಪಡೆಯಲು ಸಾಧ್ಯವಿಲ್ಲ.

1. ನೀವು ಹಿಂದಿನದರಲ್ಲಿ ಮಾಡಿದಂತೆ ಈ ಹೇಳಿಕೆಯನ್ನು ಅಧ್ಯಯನ ಮಾಡಿ ಮತ್ತು ನಂತರ ನಿಮ್ಮ ಸ್ನೇಹಿತರು ಮತ್ತು ನೆರೆಹೊರೆಯವರು ಸಂಭಾಷಣೆಯಲ್ಲಿ ಪೂರ್ವಾಗ್ರಹವನ್ನು ಹೋಗಲಾಡಿಸಲು ಕರೆ ನೀಡಲು ತಂದ ಕೆಲವು ಸವಾಲುಗಳನ್ನು ಯೋಚಿಸಿ.

______________________________________________________________________________

______________________________________________________________________________

______________________________________________________________________________

2. ಮೇಲಿನ ವಿಚಾರಗಳನ್ನು ನೀವು ಹಂಚಿಕೊಂಡ ನಂತರ ಯಾರಾದರೂ, "ನಾವು ಪೂರ್ವಾಗ್ರಹವನ್ನು ಹೊಂದಿದ್ದು ಮತ್ತು ಅದರ ಅರಿವಿಲ್ಲದೆ ಇರಬಹುದೇ?" ಎಂದು ನಿಮ್ಮನ್ನು ಕೇಳಿದರೆ ನೀವು ಹೇಗೆ ಉತ್ತರಿಸುತ್ತೀರಿ:

______________________________________________________________________________

______________________________________________________________________________

______________________________________________________________________________

3. ಈ ವಿಚಾರಗಳ ಕುರಿತಾದ ನಿಮ್ಮ ಚರ್ಚೆಗಳಲ್ಲಿ  ಬಹಾ'ಉ'ಲ್ಲಾರವರ ಬರಹಗಳಿಂದ ಒಂದೆರಡು ಉಲ್ಲೇಖನಗಳನ್ನು ಸೇರಿಸುವ ಸಂದರ್ಭವನ್ನು ನೀವು ಕಾಣಬಹುದು:

**"ಪೃಥ್ವಿಯೇ ಒಂದೇ ದೇಶ, ಮತ್ತು ಮಾನವಕುಲವು ಅದರ ಪ್ರಜೆಗಳು." [27]**

**"ಪ್ರಪಂಚದ ಎಲ್ಲಾ ಸಸಿಗಳು ಒಂದೇ ವೃಕ್ಷದಿಂದ, ಮತ್ತು ಎಲ್ಲಾ ಹನಿಗಳೂ ಒಂದೇ ಸಾಗರದಿಂದ ಕಾಣಿಸಿಕೊಂಡಿವೆ, ಮತ್ತು ಎಲ್ಲಾ ಜೀವಿಗಳ ಅಸ್ತಿತ್ವದ ಉಗಮಸ್ಥಾನ ಒಂದೇ."[28]**

**"ಇಂದು, ಇಡೀ ಮಾನವ ಜಾತಿಯ ಸೇವೆಗಾಗಿ ತನ್ನನ್ನು ಅರ್ಪಿಸಿಕೊಂಡಿರುವವನೇ ನಿಜವಾದ ಮನುಷ್ಯನು." [29]**

**"ಸನ್ನಡತೆಯೆಂಬ ಬೆಳಕು ಸೂರ್ಯನ ಬೆಳಕು ಮತ್ತು ಅದರ ಕಾಂತಿಯನ್ನೂ ಸಹ ಮೀರಬಲ್ಲದು." [30]**

**"ಮನುಷ್ಯನ ಶ್ರೇಷ್ಠತೆಯು ಆಭರಣಗಳು ಅಥವಾ ಸಂಪತ್ತಿನಲ್ಲಿಲ್ಲ, ಬದಲಾಗಿ ಸದ್ಗುಣಶೀಲ ನಡವಳಿಕೆ ಮತ್ತು ನಿಜವಾದ ತಿಳುವಳಿಕೆಯಲ್ಲಡಗಿರುವುದು."[31]**

**"ಮೂಡ ನಂಬಿಕೆಯೆಂಬ ವಿಗ್ರಹಗಳನ್ನು ಚೂರುಚೂರು ಮಾಡಲು ಮತ್ತು ಮಾನವನ  ಕಲ್ಪನೆಗಳ ಮುಸುಕುಗಳನ್ನು ಕಿತ್ತುಹಾಕಲು ಎಲ್ಲಾ ಪರಿಸ್ಥಿತಿಗಳಲ್ಲಿ ನಿಮಗೆ ದೇವರು ದಯಾಪೂರ್ವಕ ನೆರವನ್ನು ದಯಾಪಾಲಿಸಲಿ." [32]**

**"ವ್ಯರ್ಥವಾಗಿ ವಾದ ಮಾಡುವವನು ಮತ್ತು ತನ್ನ ಸಹೋದರನನ್ನು ಹತ್ತಿಕ್ಕಿ ಮುನ್ನೆಡೆಯಲು ಯತ್ನಿಸುವವನು ಮನುಷ್ಯರಲ್ಲಿ ಅತ್ಯಂತ ನಿರ್ಲಕ್ಷನು."[33]**

## ವಿಭಾಗ 10

ಸ್ನೇಹಿತರೊಂದಿಗೆ, ಸ್ತ್ರೀ ಪುರುಷರ ಸಮಾನತೆಯ ಕುರಿತು ಸಂಭಾಷಿಸುವಾಗ, ಕೆಳಗಿನ ಹೇಳಿಕೆಯಿಂದ ನೀವು ಆಗಾಗ್ಗೆ ವಿಚಾರಗಳನ್ನು ಸೆಳೆಯಲು ಸಾಧ್ಯವಾಗುತ್ತದೆ:

ಭೌತಿಕ ಸೂರ್ಯ, ಅದರ ಬೆಳಕು ಮತ್ತು ಶಾಖದ ಮೂಲಕ ಭೂಮಿಯ ಮೇಲಿನ ಎಲ್ಲಾ ವಸ್ತುಗಳ  ವಾಸ್ತವತೆಯನ್ನು ತಿಳಿಸುತ್ತದೆ. ಸೂರ್ಯನ ಶಕ್ತಿಗೆ ಪ್ರತಿಕ್ರಿಯೆಯಾಗಿ ವೃಕ್ಷದಲ್ಲಿ ಅಡಗಿರುವ ಹಣ್ಣು ಅದರ ಕೊಂಬೆಗಳ ಮೇಲೆ ಕಾಣಿಸಿಕೊಳ್ಳುತ್ತದೆ. ಅಂತೆಯೇ, ಸತ್ಯದ ಸೂರ್ಯ, ಆಧ್ಯಾತ್ಮಿಕ ಆಕಾಶದಲ್ಲಿ ಪೂರ್ಣ ವೈಭವದಿಂದ ಹೊಳೆಯುತ್ತಿದೆ,

ಹಿಂದೆ ಸ್ಪಷ್ಟವಾಗಿ ಕಾಣಿಸದ ವಾಸ್ತವ ಸಂಗತಿಗಳನ್ನು ಬೆಳಕಿಗೆ ತರುತ್ತದೆ. ಹೀಗಾಗಿಯೇ, ಈ ಯುಗದಲ್ಲಿ, ಸ್ತ್ರೀ ಪುರುಷರ ಸಮಾನತೆಯ ತತ್ವವನ್ನು ಸಂಪೂರ್ಣವಾಗಿ ಗುರುತಿಸಲಾಗುತ್ತದೆ ಮತ್ತು ಅದು ಈಗ ನಿರೂಪಿಸಲ್ಪಟ್ಟ ಸತ್ಯವಾಗಿದೆ.

ದೇವರ ದೃಷ್ಟಿಯಲ್ಲಿ ಸ್ತ್ರೀ ಪುರುಷರ ನಡುವೆ ಯಾವುದೇ ವ್ಯತ್ಯಾಸವಿಲ್ಲ ಎಂದು ಬಹಾ'ಉ'ಲ್ಲಾರವರು ಅತ್ಯಂತ ಸ್ಪಷ್ಟವಾದ ಪದಗಳಲ್ಲಿ ಹೇಳಿದ್ದಾರೆ. ಯುಗಯುಗದಿಂದ ಅಸ್ತಿತ್ವದಲ್ಲಿರುವ ಅಸಮಾನತೆಯ ಸ್ಥಿತಿಯು ಪುರುಷರ ಶ್ರೇಷ್ಠತೆಯ ಪರಿಣಾಮದಿಂದಲ್ಲ; ಮಹಿಳೆಯರಿಗೆ ಅವರ ಎಲ್ಲಾ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಲು ಸಮಾನವಾದ ಅವಕಾಶವನ್ನು ನೀಡಲಾಗಿಲ್ಲವಷ್ಟೆ. ಆದಾಗ್ಯೂ, ಅವರ ವಿರುದ್ಧದ ಪೂರ್ವಾಗ್ರಹದ ಹೊರತಾಗಿಯೂ, ಇತಿಹಾಸವು ಹಲವಾರು ಮಹಿಳೆಯರ ಸಾಧನೆಯ ಜೀವನವನ್ನು ದಾಖಲಿಸಿದೆ.

ಅಂತಹ ಒಬ್ಬ ಮಹಿಳೆಯೇ ಪರ್ಷಿಯನ್ ಕವಿಯಿತ್ರಿ, ತಾಃಹಿರಾ. ಅವರು 1800 ರ ದಶಕದ ಆರಂಭದಲ್ಲಿ ಮಹಿಳೆಯರು ಸಂಪೂರ್ಣವಾಗಿ ಪುರುಷರಿಗೆ ಅಧೀನರಾಗಿದ್ದ ದೇಶದಲ್ಲಿ ಜನಿಸಿದ್ದರು. ದೇವರ ಹೊಸ ಪ್ರಕಟಣೆಯ ಸತ್ಯವನ್ನು ಸ್ವೀಕರಿಸಿದ ಮೊದಲ ಮಹಿಳೆ ಅವರು. ನವ ದಿನದ ಉದಯಕ್ಕೆ ಅವರು ಸಾಕ್ಷಿಯಾಗುತ್ತಿದ್ದಂತೆ, ಸ್ತ್ರೀ ಪುರುಷ ಸಮಾನತೆಯ ವಾಸ್ತವತೆಯನ್ನು ಗುರುತಿಸುವ ಸಮಯ ಬಂದಿದೆ ಎಂದು ಅವರು ಮನಗೊಂಡರು. ಈ ಸತ್ಯವನ್ನು ಘೋಷಿಸಲು ಅವರು ತಮ್ಮ ಶಕ್ತಿಯನ್ನು ಅರ್ಪಿಸಿದರು. ಅವರ ಜ್ಞಾನ ಮತ್ತು ವಾಕ್ಚಾತುರ್ಯವು ಅವರ ಕಾಲದ ಹೆಚ್ಚು ಪಾಂಡಿತ್ಯ ಹೊಂದಿದ ಪುರುಷರನ್ನು ದಿಗ್ಭ್ರಮೆಗೊಳಿಸಿತ್ತು. ದಬ್ಬಾಳಿಕೆಯ ರಾಜ ಮತ್ತು ಅಜ್ಞಾನ ಹಾಗು ಅಹಂಕಾರದ ಪಾದ್ರಿಗಳ ಎಲ್ಲಾ ಶಕ್ತಿಗಳು ಅವರ ವಿರುದ್ಧವಾಗಿದ್ದರೂ, ಒಂದು ಕ್ಷಣವೂ ಅವರು ಸತ್ಯವನ್ನು ಮಾತನಾಡಲು ಹಿಂಜರಿಯಲಿಲ್ಲ. ಮತ್ತು ಕೊನೆಯಲ್ಲಿ, ಅವರು ತುಂಬಾ ದೃಢವಾಗಿ ಸ್ವೀಕರಿಸಿದ ಧರ್ಮಕ್ಕಾಗಿ ತಮ್ಮ ಜೀವವನ್ನು ಅರ್ಪಿಸಿದರು.

ದೇವರು ಉದ್ದೇಶಿಸದೇ ಇರುವುದನ್ನು ನಂಬುವುದು ಅಜ್ಞಾನ ಮತ್ತು ಮೂಢ ನಂಬಿಕೆ. ಇಂದು ಮಹಿಳೆಯರಿಗೆ ವಿದ್ಯಾವಂತರಾಗಲು ಮತ್ತು ಮಾನವ ಸಾಧಿಸುವ ಎಲ್ಲಾ ಕ್ಷೇತ್ರಗಳಲ್ಲಿ ಪುರುಷರೊಂದಿಗೆ ಸಮಾನತೆಯ ಸ್ಥಾನವನ್ನು ಪಡೆಯಲು ಎಲ್ಲ ಅವಕಾಶಗಳನ್ನು ಅನುಮತಿಸಬೇಕು. ಆಧ್ಯಾತ್ಮಿಕ ಕ್ಷೇತ್ರದಲ್ಲಿರುವಂತೆ, ಈ ಜಗತ್ತಿನಲ್ಲಿ ಸ್ತ್ರೀ ಪುರುಷರ ಸಮಾನತೆಯು ವಾಸ್ತವವಾಗುವವರೆಗೆ, ಮಾನವಕುಲದ ನಿಜವಾದ ಪ್ರಗತಿ ಸಾಧ್ಯವಾಗುವುದಿಲ್ಲ.

1. ನೀವು ಎಂದಿನಂತೆ ನಿಮ್ಮ ತಂಡದಲ್ಲಿ ಈ ಹೇಳಿಕೆಯನ್ನು ಅಧ್ಯಯನ ಮಾಡಬೇಕು ಮತ್ತು ವಿಚಾರಗಳನ್ನು ಹೇಳುವ ಅಭ್ಯಾಸ ಮಾಡಬೇಕು. ನಿಮ್ಮ ಸ್ನೇಹಿತರೊಂದಿಗೆ ನೀವು ಇತ್ತೀಚೆಗೆ ನಡೆಸಿದ ಯಾವುದೇ ಸಂಭಾಷಣೆಗಳಲ್ಲಿ ಅದು ನೀಡಿದ ಅಂತರ್ದೃಷ್ಟಿಯಿಂದ ಪ್ರಯೋಜನವಾಗಿದೆಯೇ? ಆ ಚರ್ಚೆಯಲ್ಲಿನ ಸಮಸ್ಯೆಗಳು ಯಾವುವು?

____________________________________________________________

____________________________________________________________

____________________________________________________________

2. ಮಹಿಳೆಯರು, ಶ್ರಮವಹಿಸಬೇಕಾದ ಎಲ್ಲಾ ಕ್ಷೇತ್ರಗಳಲ್ಲಿ ಪುರುಷರೊಂದಿಗೆ ಸಮಾನ ಸ್ಥಾನವನ್ನು ಪಡೆದುಕೊಳ್ಳಬೇಕಾದರೆ, ಇಂದಿನ ಸಮಾಜದಲ್ಲಿ ಚಾಲ್ತಿಯಲ್ಲಿರುವ ಕೆಲವು ನಂಬಿಕೆಗಳು ಮತ್ತು ವರ್ತನೆಗಳಲ್ಲಿ ಬದಲಾಗಬೇಕಾದುದು ಯಾವುವು?

____________________________________________________________

____________________________________________________________

____________________________________________________________

3. ನೀವು ಕಂಠಪಾಠ ಮಾಡಲು ಬಯಸಬಹುದಾದ ಬಹಾ'ಉ'ಲ್ಲಾರವರ ಬರಹಗಳ ಕೆಲವು ಉಲ್ಲೇಖನಗಳನ್ನು ಕೆಳಗೆ ನೀಡಲಾಗಿದೆ.

**"ಸ್ತ್ರೀ ಪುರುಷರು ದೇವರ ದೃಷ್ಟಿಯಲ್ಲಿ ಎಂದೂ ಮತ್ತು ಎಂದೆಂದಿಗೂ ಸಮಾನರಾಗಿರುತ್ತಾರೆ."** [34]

**"ಯಾರೂ ಇನ್ನೊಬ್ಬರಿಗಿಂತ ತಾನು ಮೇಲು ಎಂದು ಎಣಿಸಬಾರದೆಂದು, ನಾವು ನಿಮ್ಮೆಲ್ಲರನ್ನೂ ಒಂದೇ ಧೂಳಿನಿಂದ ಸೃಷ್ಟಿಸಿದ್ದೇವೆಂದು ನಿಮಗೆ ತಿಳಿದಿಲ್ಲವೇ?."**[35]

**“ಈ ದಿನ, ದೈವಾನುಗ್ರಹದ ಹಸ್ತವು, ಎಲ್ಲಾ ಬೇಧ ಭಾವಗಳನ್ನು ತೆಗೆದುಹಾಕಿದೆ. ದೇವರ ಸೇವಕರು ಮತ್ತು ಆತನ ಸೇವಕಿಯರನ್ನು ಒಂದೇ ಸ್ತರದಲ್ಲಿ ಪರಿಗಣಿಸಲಾಗುತ್ತದೆ. ”[36]**

## ವಿಭಾಗ 11

ಅಧ್ಯಯನ ಮಾಡಲು ನಿಮಗೆ ನೀಡಲಾದ ಅಂತಿಮವಾದ ವಿಷಯವು ಸಾರ್ವತ್ರಿಕ ಶಿಕ್ಷಣದ ವಿಷಯವಾಗಿದೆ:

ಶಿಕ್ಷಣದ ಪ್ರಗತಿಯು ನಮ್ಮ ಯುಗದ ಅತ್ಯಂತ ತುರ್ತು ಅವಶ್ಯಕತೆಯಾಗಿದೆ. ಶಿಕ್ಷಣವನ್ನು ತನ್ನ ಆಸಕ್ತಿಯ ಕೇಂದ್ರವನ್ನಾಗಿ ಮಾಡದ ಹೊರತು ಯಾವುದೇ ರಾಷ್ಟ್ರವು ಸಮೃದ್ಧಿಯನ್ನು ಸಾಧಿಸಲು ಸಾಧ್ಯವಿಲ್ಲ. ಜನರ ಅವನತಿಗೆ ಪ್ರಾಥಮಿಕ ಕಾರಣವೆಂದರೆ ಜ್ಞಾನದ ಹಾದಿಯ ಕೊರತೆ.

ಶಿಕ್ಷಣ, ಶೈಶವಾವಸ್ಥೆಯಿಂದಲೇ ಪ್ರಾರಂಭವಾಗಬೇಕು. ತಮ್ಮ ಮಕ್ಕಳಿಗೆ ಶಿಕ್ಷಣ ನೀಡುವುದು, ಅವರ ಚಾರಿತ್ರ್ಯವನ್ನು ಆಧ್ಯಾತ್ಮಿಕ ಮತ್ತು ನೈತಿಕ ನಿಯಮಗಳ ಪ್ರಕಾರ ನಯಗೊಳಿಸುವುದು ಮತ್ತು ಅವರು ಕಲೆ ಮತ್ತು ವಿಜ್ಞಾನದಲ್ಲಿ ತರಬೇತಿ ಪಡೆದಿದ್ದಾರೆಯೇ ಎಂದು ಖಚಿತಪಡಿಸಿಕೊಳ್ಳುವುದು ತಂದೆ ಮತ್ತು ತಾಯಿಯರ ಕರ್ತವ್ಯ. ತಾಯಂದಿರು ಮಾನವಕುಲದ ಮೊದಲ ಶಿಕ್ಷಣತಜ್ಞರು; ಅವರು ತಮ್ಮ ಮಕ್ಕಳನ್ನು ಜ್ಞಾನದ ಸ್ತನದಿಂದ ಪೋಷಿಸುತ್ತಾರೆ. ಪ್ರತಿ ಮಗುವು ಶಿಕ್ಷಣ ಪಡೆಯಬೇಕು; ಇದು ನಿರ್ಲಕ್ಷಿಸಬಹುದಾದ ವಿಷಯವಲ್ಲ. ಅಗತ್ಯವಾದ ಖರ್ಚನ್ನು ಪೋಷಕರು ಪೂರೈಸಲು ಸಾಧ್ಯವಾದರೆ, ಅವರು ಹಾಗೆ ಮಾಡಬೇಕು. ಇಲ್ಲದಿದ್ದರೆ ಮಗುವಿನ ಶಿಕ್ಷಣಕ್ಕೆ ಸಾಧನಗಳನ್ನು ಸಮುದಾಯವು ಒದಗಿಸಬೇಕು.

ಶಿಕ್ಷಣವು, ಪ್ರತಿಯೊಬ್ಬ ಮನುಷ್ಯನಲ್ಲಿಯೂ, ಉತ್ಕೃಷ್ಟತೆಯನ್ನು ಸಾಧಿಸುವ ಬಯಕೆಯನ್ನು ಬೆಳೆಸಬೇಕು. ನಾವು ಮಾನವ ಪರಿಪೂರ್ಣತೆಗೆ ಆಕರ್ಷಿತರಾಗಬೇಕು ಮತ್ತು ಅದನ್ನು ಉತ್ಸಾಹದಿಂದ ಮುಂದುವರಿಸಬೇಕು. ನಾವು ಆಧ್ಯಾತ್ಮಿಕ ಹಿರಿಮೆಯನ್ನು ಬಯಸಬೇಕು, ಮಾನವ ಪ್ರಪಂಚದ ಸದ್ಗುಣಗಳಿಗೆ -ಪ್ರಾಮಾಣಿಕತೆ, ನಿಷ್ಠೆ, ಮಾನವತೆಯ ಸೇವೆ, ಪ್ರೀತಿ ಮತ್ತು ನ್ಯಾಯಕ್ಕೆ ಹೆಸರುವಾಸಿಯಾಗಬೇಕು. ಶಾಂತಿ ಮತ್ತು ಐಕ್ಯತೆಯನ್ನು ಉತ್ತೇಜಿಸುವ ಮತ್ತು ಕಲಿಕಾ ಪ್ರಕ್ರಿಯೆಯನ್ನು ಬೆಳೆಸುವ ನಮ್ಮ ಪ್ರಯತ್ನಗಳಿಂದ ನಾವು ಗುರುತಿಸಲ್ಪಡುವಂತೆ ಪ್ರಯತ್ನಿಸಬೇಕು. ಅಂತಹ ಪಥದಲ್ಲಿ ಜನರಿಗೆ ಮಾರ್ಗದರ್ಶನ ನೀಡುವುದು ಶಿಕ್ಷಣದ ನಿಜವಾದ ಕಾರ್ಯವಾಗಿದೆ.

1. ನಿಮ್ಮ ತಂಡದಲ್ಲಿ ಈ ಹೇಳಿಕೆಯನ್ನು ಅಧ್ಯಯನ ಮಾಡಿದ ನಂತರ, ನಿಮ್ಮ ಸ್ನೇಹಿತರು ಶಿಕ್ಷಣದ ಬಗ್ಗೆ ಹೊಂದಿರುವ ಕೆಲವು ಆಸಕ್ತಿಗಳನ್ನು ಗುರುತಿಸಲು ಪ್ರಯತ್ನಿಸಿ. ಮೇಲಿನ ವಿಚಾರಗಳು ಅವರ ಕಳವಳಗಳನ್ನು ಹೇಗೆ ಪರಿಹರಿಸುತ್ತವೆ?

________________________________________________________________________

________________________________________________________________________

________________________________________________________________________

2. ಬಹಾ'ಉ'ಲ್ಲಾರವರ ಬರಹಗಳಿಂದ ಈ ಕೆಳಗಿನ ಒಂದು ಅಥವಾ ಹೆಚ್ಚಿನ ಉಲ್ಲೇಖನಗಳನ್ನು ನೀವು ಕಂಠಪಾಠ ಮಾಡಲು ಸಲಹೆ ನೀಡಲಾಗಿದೆ:

**"ಮನುಷ್ಯನನ್ನು ಜ್ಞಾನ ಅಥವಾ ಕೌಶಲ್ಯವಿಲ್ಲದೆ ಬಿಡುವುದು ಅಪೇಕ್ಷಣೀಯವಲ್ಲ, ಏಕೆಂದರೆ ಅವನು ಆಗ ಬಂಜರು ಮರವಾಗುವನು." [37]**

**“ಪೃಥ್ವಿಯ ಜನರು ಮತ್ತು ಕುಟುಂಬಸ್ಥರ ಶಿಕ್ಷಣಕ್ಕೆ ನಿಮ್ಮ ಮನಸ್ಸು ಮತ್ತು ಇಚ್ಛೆಯನ್ನು ಬಾಗಿಸಿ. . . ”[38]**

**"ಕಲೆ, ಕರಕುಶಲ ಮತ್ತು ವಿಜ್ಞಾನಗಳು ಜಗತ್ತನ್ನು ಉನ್ನತೀಕರಿಸುತ್ತವೆ ಮತ್ತು ಅದರ ಉತ್ಕೃಷ್ಟತೆಯನ್ನು ಪೋಷಿಸುತ್ತವೆ." [39]**

**"ಸತ್ಯವಾಗಿಯೂ, ಜ್ಞಾನವು ಮನುಷ್ಯನಿಗೆ ನಿಜವಾದ ನಿಧಿಯಾಗಿದೆ, ಮತ್ತು ವೈಭವದ, ಔದಾರ್ಯತೆಯ, ಸಂತೋಷದ, ಉದಾತ್ತತೆಯ,ಹರ್ಷೋದ್ಗಾರದ ಮತ್ತು ಸಂತೋಷದ ಮೂಲವಾಗಿದೆ." [40]**

## ವಿಭಾಗ 12

ಶಾಂತಿ ಎನ್ನುವುದು ಎಲ್ಲರ ಮನಸ್ಸಿನಲ್ಲಿರುವ ಒಂದು ವಿಷಯವಾಗಿದೆ. ಇದರ ಸ್ಥಾಪನೆಯು ಅತ್ಯಂತ ತುರ್ತಿನ ಮತ್ತು ಮಹತ್ವದ ವಿಷಯವಾಗಿದೆ. ಹಿಂದಿನ ಹೇಳಿಕೆಗಳಲ್ಲಿ ವಿವರಿಸಿರುವ ತತ್ವಗಳ ಕುರಿತು ನೀವು ಈಗ ಸ್ವಲ್ಪ ಚಿಂತನೆ ಮಾಡಿರುವಿರಿ, ಈಗ ಸಾರ್ವತ್ರಿಕ ಶಾಂತಿಯ ಪ್ರಶ್ನೆಯ ವಿಚಾರವಾಗಿ ಪ್ರತಿಫಲಿಸುವುದು ನಿಮಗೆ ಪ್ರಯೋಜನಕಾರಿಯಾಗಬಹುದು.

ಯುದ್ಧದ ನಿರ್ಮೂಲನ, ಸಹಜವಾಗಿ ಸರ್ಕಾರಗಳು ಪ್ರಾಯೋಗಿಕ ಕ್ರಮಗಳನ್ನು ತೆಗೆದುಕೊಳ್ಳುವುದರ ಮೇಲೆ ಹೆಚ್ಚಾಗಿ ಅವಲಂಬಿತವಾಗಿರುತ್ತದೆ. ರಾಷ್ಟ್ರಗಳ ನಡುವೆ ಅಂತರರಾಷ್ಟ್ರೀಯ ಸಹಯೋಗದಂತೆಯೇ ಅಸಂಖ್ಯಾತ ವಿವಾದಗಳನ್ನು ಬಗೆಹರಿಸಲು ರಾಜಕೀಯ ಒಪ್ಪಂದಗಳು ಮತ್ತು ಶಸ್ತ್ರಾಸ್ತ್ರಗಳನ್ನು ಕಡಿಮೆ ಮಾಡುವ ಕ್ರಿಯೆಯು, ಶಾಂತಿಯ ಅನ್ವೇಷಣೆಗೆ ಅವಶ್ಯವಾದುದಾಗಿದೆ. ಆದರೂ, ಅಂತಹ ಕ್ರಮಗಳು ಎಷ್ಟೇ ಮಹತ್ವದ್ದಾಗಿರಲಿ, ಈ ಹಿಂದೆ ಚರ್ಚಿಸಿದ ತತ್ವಗಳು ಪ್ರಪಂಚದಾದ್ಯಂತ ಸ್ಥಾಪಿಸಲ್ಪಡದಿದ್ದರೆ, ಬಾಳಿಕಯ (ಶಾಶ್ವತ) ಶಾಂತಿಯನ್ನು ನೆಲೆಸಲು ಕಾರಣವಾಗುವುದಿಲ್ಲ. ಜನರು ವಾಸ್ತವತೆಯನ್ನು ಸತ್ಯಾನ್ವೇಷಣೆ ಮಾಡಲು ಕಲಿಯದಿದ್ದರೆ ಮತ್ತು ಸತ್ಯವು ಒಂದು ಎಂದು ಅರಿತುಕೊಳ್ಳದಿದ್ದರೆ, ಹಳೆಯ ದ್ವೇಷಗಳು ಮುಂದುವರಿಯುವುದಿಲ್ಲವೇ? ಎಂಬ ಪ್ರಶ್ನೆಯನ್ನು ನಮ್ಮನ್ನು ನಾವೇ ಕೇಳಿಕೊಳ್ಳಬೇಕಾಗಿದೆ. ನಾವೆಲ್ಲರೂ ಒಂದೇ ಮೂಲವನ್ನು ಹೊಂದಿದ್ದೇವೆ. ದೇವರು ನಮ್ಮೆಲ್ಲರನ್ನೂ ಕಾಪಾಡುತ್ತಾನೆ ಮತ್ತು **ಆತ**ನ ಅವತಾರ ಪುರುಷರ ಮೂಲಕ ನಮ್ಮೆಲ್ಲರಿಗೂ ತರಬೇತಿ ನೀಡುತ್ತಾನೆ. ಅವರ ಬೋಧನೆಗಳು ಪ್ರೀತಿ ಮತ್ತು ಸಹಬಾಳ್ವೆಯ ಒಂದೇ ಅಡಿಪಾಯದ ಮೇಲೆ ನಿಂತಿವೆ. ಧರ್ಮದ ಏಕತೆಯನ್ನು ಅಂಗೀಕರಿಸಿದಾಗ ಮಾತ್ರ ಧಾರ್ಮಿಕ ಕಲಹಗಳು ನಿಲ್ಲುತ್ತವೆ ಮತ್ತು ಧರ್ಮದ ಬೆಳಕು ಶಾಂತಿಯ ಪಥವನ್ನು ಬೆಳಗಿಸುತ್ತದೆ. ನಾವು ಇನ್ನೂ ಮುಂದುವರೆದು ಕೇಳಿಕೊಳ್ಳಬೇಕಾದ ಪ್ರಶ್ನೆ, ಶಾಂತಿಗೆ ಪ್ರಬಲವಾದ ತಡೆಗೋಡೆಯಾಗಿರುವ ಅಜ್ಞಾನದ ಮೋಡಗಳನ್ನು ಹೋಗಲಾಡಿಸಲು ಮತ್ತು ಪ್ರತಿಯೊಂದು ರೀತಿಯ ಪೂರ್ವಾಗ್ರಹಗಳ ಮಿಥ್ಯತೆಯನ್ನು ಸಾಬೀತುಪಡಿಸಲು, ವಿಜ್ಞಾನ ಮತ್ತು ಧರ್ಮವು ಸಾಮರಸ್ಯದಿಂದ ಕೆಲಸ ಮಾಡುವುದು ಅನಿವಾರ್ಯವಲ್ಲವೇ? ಶ್ರೀಮಂತರು ಮತ್ತು ಬಡವರ ನಡುವಿನ ಪ್ರಸ್ತುತ ಅಸಂಗತ ಅಸಮಾನತೆಯನ್ನು ಜಗತ್ತಿನ ಮೂಲೆ ಮೂಲೆಗಳಲ್ಲಿ ಗಮನಿಸದಿದ್ದರೆ ಶಾಂತಿಯುತ ಜಗತ್ತನ್ನು ನಿರ್ಮಿಸಬಹುದೇ? ಎಂದು ಕೇಳಿಕೊಳ್ಳಬೇಕಾದ ಮತ್ತೊಂದು ಪ್ರಶ್ನೆ, ಮತ್ತು, ಪುರುಷರೊಂದಿಗೆ ಸಮಾನ ಹೆಜ್ಜೆಯಲ್ಲಿ ಮಾನವ ಪ್ರಯತ್ನದ ಎಲ್ಲಾ ಕ್ಷೇತ್ರಗಳಲ್ಲಿ ಹೆಜ್ಜೆ ಹಾಕಲು ಮಹಿಳೆಯರಿಗೆ ಅವಕಾಶ ನೀಡುವವರೆಗೂ , ಇತಿಹಾಸದ ಬಹುಭಾಗವನ್ನು ನಿರೂಪಿಸಿದ ಹಿಂಸಾಚಾರವು ಶಾಂತಿ ಮತ್ತು ನಿಜವಾದ ಸಮೃದ್ಧಿಗೆ ದಾರಿ ಮಾಡಿಕೊಡದು. ಉದಯೋನ್ಮುಖ ತಲೆಮಾರುಗಳು ಅಂತಹ ತತ್ವಗಳ ಪ್ರಕಾರ ಸಾರ್ವತ್ರಿಕವಾಗಿ ಶಿಕ್ಷಣ ಪಡೆಯಬೇಕು, ಇಲ್ಲದಿದ್ದರೆ ಶಾಂತಿಸ್ಥಾಪನೆಯ ಪ್ರತಿ ಭರವಸೆಯು ನುಚ್ಚುನೂರಾಗುತ್ತದೆ. ಬಹಾ'ಉ'ಲ್ಲಾ ರವರ ಮುಂದಿನ ನುಡಿಗಳನ್ನು ಕಂಠಪಾಠ ಮಾಡಲು ನೀವು ಬಯಸಬಹುದು, ಇದರಿಂದ ನೀವು ಅವುಗಳನ್ನು ಮಾನವತೆಯ ಭವಿಷ್ಯದ ಕುರಿತು ಆಸಕ್ತಿಯಿರುವ ಇತರರೊಂದಿಗೆ ಹಂಚಿಕೊಳ್ಳಬಹುದು:

> **"ಮಾನವ ಐಕ್ಯತೆಯನ್ನು ದೃಢವಾಗಿ ಸ್ಥಾಪಿಸದ ಹೊರತು, ಮಾನವಕುಲದ ಯೋಗಕ್ಷೇಮ, ಅದರ ಶಾಂತಿ ಮತ್ತು ಸುರಕ್ಷತೆಯನ್ನು ಸಾಧಿಸಲಸಾಧ್ಯ."** [41]

# REFERENCES


1. *Gleanings from the Writings of Baha U' llah* (Wilmette.: Baha.'i Publishing Trust., 1983, 2017 printing), CIX, par. 2, p. 243.

2, Ibid., CXXXII, par. 1, p. 325.

3, Ibid„ XXXIV, par. 5, p. 89.

4. *Tablets of Baha'U'llah Revealed after the Kittib-i-Aqdas (Wilmette:* Bah.i'i Publishing Tnst, 1988, 2005 printing), no, 11.1, p. 161,

5. *Baha'U'llah*, *The Kitab-i-Iqan: The Book of Certitude* (Wilmette: Bahai Publishing

Trust, 2003, 2018 printing), par. 151, p. 131.

6, *Gleanings from the Writings of Baha'U'llah,* XXVIll. par. 2, p. 77.

7, Ibid., XXIV., par. 1, p. 66.

8, Ibid.., CXI, par, 1, p. 246.

9, Ibid., XLIII, par. 6, p. 106.

10. Ibid., CX, par. 1, p. 244.

*11.* *Tablets of Baha'U'llahh Revealed after The Kitab-i-Aqdas,* no. 15.4, p. 220.

12. *Gleanings from the Writings of Baha'U'llah XCV, par. 1,* p p. 219-20,

13. Tablets. *Of Baha'U'llah Revealed after the Kitab-i-Aqdas,* no. 9.13, p. 141.

14. Ibid., no. 5.13, p. 51.

15. *Gleanings from the Writings of Baha'U'llah* CXII., par. l., pp. 247-48.

16. Ibid., CXXXII, par. 3, p. 326.

17. Ibid.., CXI, par. 1, p. 246.

18. *Tablets of Baha'U'llah Revealed after the Kitab-i-Aqdas,* no. 7.20, p. 90.

19. Ibid., no, 6.25, pp, 66-67.

20. *Baha'U'llah*, cited by Shoghi Effendi, *The Advent of Divine Justice (Wilmette.:* Bahr'i Publishing Trust, 2006. 2018 printing), par. 42, p. 41.

21. *Tablets of Baha'U'llah Revealed afier the Kitab-i-Aqdas,* no. 3.23, p. 27.

22. *Baha'U'llah*, *The Hidden bards* (Wilmette: Bahaii Publishing Trust, 2003, 2012 printing), Persian no, 80, p. 51.

23. Tablets of Baha'U'llah Revealed afier the Kitab-i-Aqdas, no. 6.19, p. 64.

24. Ibid.., no. 6.37„ p. 7l.

25. Baha'U'llah., in Huququ'llah—The Right of God: A Compilation of &extracts from the Writings of Baha'U'llah and 'Abdu1-Baha and from Letters Written by and on Behalf of Shoghi Effendi and the Universal House of Justice., compiled by the Research Department of the Universal House of Justice (Wilmette: Bahai Publishing Trust, 2007), no. l6, p. 16.

26. Gleanings from the Writings of Baha'U'llah, CXVIII, par. 2,, p. 283.

27. Ibid.., CXVII., par. 1, p.. 282.

28. Baha'U'llah, cited by Shoghi Effendi, The Promised Day Is Come (Wilmette: Bahai Publishing Trust, 1996, 2018 printing), par. 279, p.. 187.

29. Gleanings from the Writings of Baha'U'llahCXVII, par. 1 p. 282..

30. Tablets of Baha'U'llah Revealed afier the Kitab-i-Aqdas, no.. 4.11, p. 36.

31. Ibid.., no.. 6.3, p. 57.

32. Ibid.., no. 6.3, p. 58.

33. The Hidden Words, Persian no. 5, pp. 23-24.

34. Baha U'llah, in Women: Extracts from the Writings of Baha U'llah, Abdul Baha, Shoghi Effendi and the Universal House of Justice, compiled by the Research Department of the Universal House of Justice (Wilmette: Baha'i Publishing Trust, 1986, 1997 Printing), no. 54, p.. 26.

33. The Hidden Words, Arabic no. 68, p. 20.

36. Baha U'llah, in the compilation Women, no. 3, p. 3.

37. Baha U'llah, in Excellence in All Things: A Compilation of Extracts from the Baha'i Writings, compiled by the Research Department of the Universal House of Justice (London: Baha'i Publishing Trust, 1981, 1989 printing), no. 5, p. 2.

38. Gleanings from the Writings of Baha U'llah, CLVI, par. 1, p. 378.

39. Baha U'llah, Epistle to the Son of the Wolf (Wilmettez Baha'i Publishing Trust, 1988, 2016 printing), p. 26.

40. Tablets of Baha'U'llah Revealed afier the Kitab-i-Aqdas, no. 5.13, p. 52.

41. Gleanings from the Writings of Baha'U'llah, CXXX1, par. 2, p. 324.



# ಜ್ಞಾನಾರ್ಜನ ವಿಷಯಗಳು

### ಉದ್ದೇಶ

ಆಧ್ಯಾತ್ಮಿಕ ಪ್ರಾಮುಖ್ಯತೆಯ ವಿಷಯಗಳ ಬಗ್ಗೆ ಮಿತ್ರರು ಮತ್ತು
ನೆರೆಯವರನ್ನು ಭೇಟಿ ಮಾಡಿ ಸಂಭಾಷಿಸುವ ಅಭ್ಯಾಸವನ್ನು ಬೆಳೆಸಿಕೊಳ್ಳುವುದು

## ವಿಭಾಗ -1

ಮೂರನೆಯ ಈ ಘಟಕದ ವಿಭಾಗವು ಹಿಂದಿನದರಂತೆಯೇ ಅರ್ಥಪೂರ್ಣ ಹಾಗೂ ಉನ್ನತಿಗೇರಿಸುವ ಸಂಭಾಷಣೆಗೆ ಪ್ರವೇಶಿಸಲು ಅಗತ್ಯವಾದ ಸಾಮರ್ಥ್ಯಗಳಿಗೆ ಕುರಿತಾಗಿದೆ. ಭೇಟಿ ನೀಡುವ ಅನೇಕ ಸಂದರ್ಭಗಳಲ್ಲಿ ಆಧ್ಯಾತ್ಮಿಕ ತತ್ವಗಳನ್ನು ಪರಿಚಯಿಸುತ್ತಾ ಸಂಭಾಷಣೆಯನ್ನು ಉನ್ನತಗೊಳಿಸುವುದರತ್ತ ಎರಡನೆಯ ಘಟಕವು ಸೃಷ್ಟಿಸಲ್ಪಟ್ಟಿತ್ತು. ಮಿತ್ರರು ಹಾಗೂ ನೆರೆಹೊರೆಯವರ ಮನೆಗಳಿಗೆ ನೀಡುವ ಭೇಟಿಯು ಸಮುದಾಯ ಕೇಂದ್ರೀಕೃತ ವಿಷಯಗಳನ್ನು ಒಟ್ಟಾಗಿ ಅನ್ವೇಷಿಸುವುದರತ್ತ ಹೊರಳುವುದು.

ಪ್ರಪಂಚದಾದ್ಯಂತ ಗ್ರಾಮಗಳಲ್ಲಿ ಮತ್ತು ನೆರೆಹೊರೆಯಗಳಲ್ಲಿ ಮಿತ್ರರ ತಂಡಗಳು, ಅಂತರ್ ಸಂಬಂಧಿತ ಚಟುವಟಿಕೆಗಳಾದ, ಕ್ರಮಬದ್ಧ ಭಕ್ತ್ಯಾತ್ಮಕ ಕೂಟಗಳು, ಮಕ್ಕಳ ಆಧ್ಯಾತ್ಮಿಕ ಶಿಕ್ಷಣದ ತರಗತಿಗಳು, ಕಿಶೋರರ ಸಭೆಗಳು, ಅಧ್ಯಯನ ವೃತ್ತಗಳು ಹಾಗೂ ಯುವ ಶಿಬಿರಗಳು ಅಲ್ಲದೆ ವಿವಿಧ ರೀತಿಯ ಸಮಾವೇಶಗಳಲ್ಲಿ ಕ್ರಿಯಾಶೀಲರಾಗಿ ತ್ವರಿತಗತಿಯಲ್ಲಿ ನಿರತರಾಗಿರುವರು. ಇಂತಹ ಚಟುವಟಿಕೆಗಳ ನಮೂನೆಯು ಒಂದು ಪ್ರದೇಶದಲ್ಲಿ ಬೇರೂರಿದಾಗ ಮತ್ತು ಸೇವಾಕಾರ್ಯದಲ್ಲಿ ನಿಷ್ಠರಾದವರ ಸಂಖ್ಯೆಗಳಲ್ಲಿನ ಹೆಚ್ಚಳದಿಂದ, ಬೀಜಕಣವಾದ ಮಿತ್ರರು ಸಂಖ್ಯೆಯಲ್ಲಿ ಹಾಗೂ ಸಾಮರ್ಥ್ಯದಲ್ಲೂ ಬೆಳವಣಿಗೆಯಾಗುವರು. ಗ್ರಾಮಗಳಲ್ಲಿ ಅಥವಾ ನೆರೆಹೊರೆಯಗಳಲ್ಲಿನ ಮನೆಗಳಿಗೆ ಭೇಟಿ ನೀಡುವ ಕ್ರಮಬದ್ಧವಾದ ಕಾರ್ಯಕ್ರಮವು ಸಮುದಾಯ ರಚನೆಯ ಪ್ರಕ್ರಿಯೆಯ ಮುಖ್ಯ ಅಂಗವಾಗಿದ್ದು ಈಗ ಅದು ತೀವ್ರತೆಯನ್ನು ಪಡೆದಿದೆ. ಅಂತಹ ಭೇಟಿಗಳಲ್ಲಿ ವಿವಿಧ ವಿಷಯಾಂಶಗಳ ಕುರಿತು ಚರ್ಚೆಯಾಗುತ್ತವೆ. ಉದಾಹರಣೆಗೆ ಬಹಾಯಿ-ಮಕ್ಕಳ ತರಗತಿಯ ಶಿಕ್ಷಕರು, ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಲು ಮಕ್ಕಳ ಪೋಷಕರನ್ನು ಆಗಾಗ್ಗೆ, ಅದೇ ರೀತಿ ಕಿಶೋರರ ಮತ್ತು ಯುವಜನರ ಮನೆಗಳಿಗೆ ಅನು ಪ್ರೇರಕರಾಗಿ, ಹಾಗೂ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವವರು ಭೇಟಿ ನೀಡಿ ಮಾನವ ಅಸ್ತಿತ್ವದ ಜೀವನದಲ್ಲಿನ ಈ ವಚನಬದ್ಧ ವರ್ಷಗಳಿಗೆ ಸಂಬಂಧಿಸಿದ ಸವಾಲುಗಳು ಮತ್ತು ಅವಕಾಶಗಳ ಬಗೆಗಿನ ವಿಷಯಗಳನ್ನು ಚರ್ಚಿಸಬೇಕು. ಮನೆಯಲ್ಲಿನ ಇತರ ಸದಸ್ಯರೊಂದಿಗೆ ಧರ್ಮದ ಬಗೆಗೆ ಅವರ ಜ್ಞಾನವನ್ನು ಆಳವಾಗಿಸುವಂತಹ ವಿಷಯಗಳ ಬಗ್ಗೆ ಸಂಭಾಷಣೆಯು ಅಷ್ಟೇ ಮುಖ್ಯವಾಗಿರುವುದು. ಇವೆಲ್ಲದರ ಪರಿಣಾಮವೆಂದರೆ ಅಂತಹ ಭೇಟಿಗಳಿಂದ ಸಮುದಾಯದಲ್ಲಿ ಸಹಬಾಳ್ವೆಯ ಸಂಸ್ಕೃತಿಯನ್ನು ಅತಿಯಾಗಿ ಅಂದಾಜು ಮಾಡಲಾಗುವುದಿಲ್ಲ.

## ವಿಭಾಗ-2

ಈ ಘಟಕದ ಉದ್ದೇಶಕ್ಕೆ ಸಂಬಂಧಿಸಿದಂತೆ, ಮೇಲೆ ವಿವರಿಸಿದ ಪ್ರಕ್ರಿಯೆಯು ಮುನ್ನಡೆಯಾಗುತ್ತಿರುವ ಒಂದು ಕಲ್ಪನೆಯ ನೆರೆಹೊರೆಯನ್ನು ನಾವು ನೋಡೋಣ ಮತ್ತು ಅದನ್ನು ನಾವು ಒಂದು ಮನೆಗೆ ಭೇಟಿ ನೀಡಿದಾಗ ನಡೆಸುವ ವಿವಿಧ ಸಂಭಾಷಣೆಗಳಲ್ಲಿ ತೆರೆದುಕೊಳ್ಳುವ ವಿಚಾರಗಳಿಗೆ ಅನುಗುಣವಾಗಿ ಉಪಯೋಗಿಸೋಣ.

ಅಲ್ಯಾಂಡ್ರ ವಿಶ್ವವಿದ್ಯಾನಿಲಯದ ಮೂರನೆಯ ವರ್ಷದ ಒಬ್ಬ ಯುವ ಮಹಿಳೆಯಾಗಿರುವಳು. ಅವಳು ಮತ್ತು ವಿದ್ಯಾರ್ಥಿಯಾಗಿರುವ ಅವಳ ಸಹೋದರರಲ್ಲಿ ಒಬ್ಬನು ನಾವು ಊಹಿಸಿರುವ ನೆರೆಹೊರೆಯದಲ್ಲಿ ತಮ್ಮ ತಂದೆ ತಾಯಿಯರೊಂದಿಗೆ ಹುಟ್ಟಿ ಬೆಳೆದ ಮನೆಯಲ್ಲಿ ವಾಸಿಸುತ್ತಿರುವರು. ಆ ನಾಲ್ಕು ಜನರು ಮತ್ತು ಇತ್ತೀಚೆಗೆ ಅಲ್ಲಿಗೆ ವಾಸಿಸಲು ಬಂದ ಒಂದು ದಂಪತಿ ವಾರಕ್ಕೊಮ್ಮೆ ಪ್ರಾರ್ಥಿಸಲು ಮತ್ತು ಸುತ್ತಮುತ್ತ ಸುಮಾರು ಎಂಟು ಸಾವಿರ ಜನಸಂಖ್ಯೆ ಇರುವ ಪ್ರದೇಶದಲ್ಲಿ ಚಟುವಟಿಕೆಗಳನ್ನು ಪ್ರಾರಂಭಿಸಿ ಅದನ್ನು ಪ್ರಗತಿಯತ್ತ ಸಾಗಿಸಲು ಸಮಾಲೋಚಿಸುತ್ತಿರುವರು. ಆಗಾಗ್ಗೆ ಇತರ ಮೂವರು ಈ ವಾರ ವಾರ ನಡೆಸುವ ಸಭೆಗಳಲ್ಲಿ ಭಾಗವಹಿಸಿ ತಮ್ಮದೇ ಆದ ಸೇವಾಕಾರ್ಯಗಳನ್ನು ನಡೆಸುವುದಷ್ಟೇ ಅಲ್ಲದೆ ಸಮುದಾಯ ನಿರ್ಮಾಣದ ಪ್ರಕ್ರಿಯೆಯಲ್ಲಿ ಶಿಸ್ತುಬದ್ಧವಾಗಿ ಹೇಗೆ ಕೆಲಸ ಮಾಡುವುದೆಂದು ಸಹ ಆಲೋಚಿಸಲು ಪ್ರಾರಂಭಿಸಿರುವರು : ಆರು ತಿಂಗಳ ಹಿಂದೆ ಒಂದು ಮಕ್ಕಳ ತರಗತಿಯನ್ನು ಪ್ರಾರಂಭಿಸಿದ ಒಬ್ಬ ಶಿಕ್ಷಕ ಹಾಗೂ ಹದಿನೇಳು ವರ್ಷ ವಯಸ್ಸಿನ ಇಬ್ಬರು ಯುವಕರು ಕಿಶೋರರ ತರಗತಿಗಳಿಗೆ ಮಾರ್ಗದರ್ಶನ ನೀಡುತ್ತಿದ್ದು, ಅವರು ಕಿಶೋರರಾಗಿದ್ದಾಗ ಅವರ ತಂಡದ ಅನುಪ್ರೇರಕರಾಗಿದ್ದು ತನ್ನ ತಂದೆತಾಯಿಗಳನ್ನು ಕ್ರಮಪ್ರಕಾರವಾಗಿ ಬಂದು ಭೇಟಿಯಾಗುತ್ತಿದ್ದ, ಅಲ್ಯಾಂಡ್ರಳ ಹಿರಿಯ ಸಹೋದರನ ಸಹಕಾರವನ್ನು ಪಡೆಯುತ್ತಿರುವರು.

ಮೊದಲಿಗೆ ನಾವು ಅಲ್ಯಾಂಡ್ರ ಮತ್ತು ನೆರೆಹೊರೆಯದ ಒಂದು ಪ್ರಸಿದ್ಧ ಹಾಗು ಗೌರವಾನ್ವಿತ ಕುಟುಂಬವಾದ ಸಾಂಚೇಜಸ್ ರವರ ನಡುವೆ ನಡೆದ ಪ್ರಥಮ ಸಂಭಾಷಣೆಗಳನ್ನು ನಾವು ಪರಿಶೀಲಿಸೋಣ. ಪತಿ ಮತ್ತು ಪತ್ನಿಯು ತಮ್ಮ 60 ವಯಸ್ಸಿನವರಾಗಿದ್ದರು, ತಮ್ಮ ಗಂಡು ಮತ್ತು ಹೆಣ್ಣು ಮಕ್ಕಳನ್ನು ಬೆಳೆಸಿ, ಅಲ್ಯಾಂಡ್ರ ಮನೆಯ ಕೆಲವೇ ದೂರದಲ್ಲಿದ್ದ ಗೃಹದಲ್ಲಿ ವಾಸಿಸುತ್ತಿದ್ದರು. ಶ್ರೀಮತಿ ಮತ್ತು ಶ್ರೀ ಸಾಂಚೇಜಸ್ ರವರು ಅಕ್ಷರಸ್ಥರಾಗಿದ್ದು ಹೆಚ್ಚಿನ ಔಪಚಾರಿಕ ಶಿಕ್ಷಣವನ್ನು ಪಡೆದಿರಲಿಲ್ಲ. ವ್ಯಾಪಕ ಗೌರವವನ್ನು ಹೊಂದಿದ್ದು ಅವರು ಉದಾರತೆ ಮತ್ತು ಪರಿಶುದ್ಧ ಕೆಲಸದ ಜೀವನ ನಡೆಸುತ್ತ ಅನುಭವಗಳಿಸಿದ್ದುದೇ ಆಗಿತ್ತು. ಅವರು ಬಹಾಯಿ ಬೋಧನೆಗಳ ಬಗ್ಗೆ ಸ್ವಲ್ಪ ಮಾತ್ರ ತಿಳಿದಿದ್ದರು ಆದರೆ ಇತ್ತೀಚೆಗಷ್ಟೇ ಹೆಚ್ಚಿನದನ್ನು ಅನ್ವೇಷಿಸಬೇಕೆಂದು ನಿರ್ಧರಿಸಿದ್ದರು. ಒಂದು ವಾರದ ಹಿಂದೆ, ಅವರು ಅಲ್ಯಾಂಡ್ರಳ ತಂದೆತಾಯಿಗಳಿಗೆ ತಾವುಸಮುದಾಯವನ್ನು ಸೇರಬೇಕೆಂಬ ಅಪೇಕ್ಷೆಯನ್ನು ವ್ಯಕ್ತಪಡಿಸಿದ್ದರು. ಅವರನ್ನು ಸ್ವಾಗತಿಸಲು ಒಂದು ಸಭೆಯನ್ನು ಈಗಾಗಲೇ ಆಯೋಜಿಸಲಾಗಿತ್ತು, ಇದರೊಂದಿಗೆ ಅಲ್ಯಾಂಡ್ರಳು ಕ್ರಮಬದ್ಧವಾಗಿ ಹಲವಾರು ವಾರಗಳಲ್ಲಿ ಅವರನ್ನು ಭೇಟಿಯಾಗುತ್ತ ಅವರ ಧರ್ಮದ ಜ್ಞಾನವನ್ನು ಅಧಿಕಗೊಳಿಸಲು ಅನೇಕ ವಿಷಯಾಂಶಗಳನ್ನು ಹಂಚಿಕೊಳ್ಳಬೇಕೆಂದು ನಿರ್ಧರಿಸಲಾಗಿತ್ತು. ಒಟ್ಟಾರೆ ಈ ಭೇಟಿಗಳನ್ನು

ಅನುಸರಿಸುವುದರೊಂದಿಗೆ ನೀವು ಅಲ್ಲಿನ ವಿಷಯಾಂಶಗಳನ್ನು ಅನ್ವೇಷಿಸಲು ಹಾಗೂ ಅದೇ ವೇಳೆ ಅಂತಹ ಸಂದರ್ಭಗಳಲ್ಲಿ ನಡೆಸುವ ಸಂಭಾಷಣೆಗಳ ಕ್ರಿಯಾತ್ಮಕತೆಯತ್ತ ಪ್ರತಿಫಲಿಸುವಿರಿ.

## ವಿಭಾಗ-3

ಅಲ್ಯಾಂಡ್ರಳು ಶ್ರೀಮತಿ ಮತ್ತು ಶ್ರೀ ಸಾಂಚೇಜಸ್ ರವರೊಂದಿಗೆ ತನ್ನ ಸಂಭಾಷಣೆಯಲ್ಲಿ ದೇವರ ಶಾಶ್ವತ ಒಡಂಬಡಿಕೆಯ ವಿಷಯದ ಬಗ್ಗೆ ಒಂದು ಚಿಕ್ಕ ವಿವರವನ್ನು ಪ್ರಸ್ತುತಪಡಿಸಲು ಯೋಜಿಸಿದಳು.

ಎಲ್ಲಾ ವಸ್ತುಗಳ ಸೃಷ್ಟಿಕರ್ತನು ಅನುಪಮೇಯನೂ, ಸ್ವಯಂ ಆಧಾರಿತನಾದ ದೇವರೊಬ್ಬನೇ, ದೇವರ ಸಾರವನ್ನು ಮಾನವನ ಮನಸ್ಸು ಗ್ರಹಿಸಲಾರದು ಏಕೆಂದರೆ ಮಿತವಾದುದು ಅಮಿತವಾದುದನ್ನು ಅರಿಯಲಾರದು ಎಂದು ಬಹಾಉಲ್ಲಾರವರು ನಮಗೆ ಬೋಧಿಸಿರುವರು. ಜನರು ಆತನನ್ನು ಪ್ರತಿನಿಧಿಸುವಂತೆ ಮಾಡುವ ವಿಚಾರಗಳೆಲ್ಲವೂ, ಅವರದೇ ಆದ ಕಲ್ಪನೆಗಳ ಫಲವಾಗಿರುತ್ತದೆ. ದೇವರು ಒಬ್ಬ ಮನುಜನಲ್ಲ ಮತ್ತು ಆತನು ವಿಶ್ವವನ್ನು ವ್ಯಾಪಿಸಿರುವ ಕೇವಲ ಒಂದು ಶಕ್ತಿಯಲ್ಲ. ನಮ್ಮ ಅಸ್ತಿತ್ವದ ಮೂಲವನ್ನು ಉಲ್ಲೇಖಿಸಲು ನಾವು ಅಗತ್ಯವಾಗಿ ಬಳಸಬೇಕಾದ ಪದಗಳು ಉದಾಹರಣೆಗೆ ಸ್ವರ್ಗೀಯ ತಂದೆ, ಸ್ವರ್ಗೀಯ ಶಕ್ತಿ, ಮಹಾ ಚೈತನ್ಯ, ಇವೆಲ್ಲವೂ ಮಾನವ ನಾಲಿಗೆಯಿಂದ ವ್ಯಕ್ತ ಪಡಿಸುವ ಆತನ ನಾಮಗಳನ್ನು ಮತ್ತು ಗುಣಲಕ್ಷಣಗಳನ್ನು ವರ್ಣಿಸಲು ಅಪೂರ್ಣವಾದುದಾಗಿರುವುದು.

ರಹಸ್ಯ ವಚನಗಳಲ್ಲಿ ನಾವು ಈ ರೀತಿ ಓದುತ್ತೇವೆ.

**"ಓ ಮಾನವ ತನುಜನೇ! ನಿನ್ನನ್ನು ಸೃಷ್ಟಿಸುವುದು ನನಗೆ ಪ್ರಿಯವೆನ್ನಿಸಿತು; ಅಂತೆಯೇ ನಿನ್ನನ್ನು ಸೃಷ್ಟಿಸಿದೆ. ಅದರಿಂದ ನೀನು ನನ್ನನ್ನು ಪ್ರೀತಿಸು. ಆಗ ಹೆಸರಿಟ್ಟು ನಿನ್ನನ್ನು ನಾನು ಕರೆಯುತ್ತೇನೆ, ಜೀವಚೈತನ್ಯದಿಂದ ನಿನ್ನ ಆತ್ಮವನ್ನು ತುಂಬುತ್ತೇನೆ:"[1]**

ಈ ವಾಕ್ಯಾಂಶಗಳಲ್ಲಿ, ದೇವರು ನಮ್ಮನ್ನು ಪ್ರೀತಿಸುವುದೇ ನಮ್ಮ ಅಸ್ತಿತ್ವದ ಕಾರಣವಾಗಿದೆ ಎಂದು ಬಹಾ'ಉ'ಲ್ಲಾರವರು ನಮಗೆ ಹೇಳಿರುವರು. ನಾವು ಯಾವಾಗಲೂ ಈ ಪ್ರೀತಿಯ ಬಗ್ಗೆ ಅರಿತಿರಬೇಕಾದುದು ಅಗತ್ಯ, ಅದು ನಮ್ಮನ್ನು ರಕ್ಷಿಸುವುದು, ಪೋಷಿಸುವುದು ಹಾಗೂ ಜೀವಚೈತನ್ಯದಿಂದ ನಮ್ಮನ್ನು ತುಂಬುವುದು. ಕಷ್ಟ ಅಥವಾ ಸುಖದ, ದುಃಖ ಅಥವಾ ಸಂತೋಷದ ಕ್ಷಣಗಳಲ್ಲಿ ಆತನ ಪ್ರೀತಿಯು ನಮ್ಮನ್ನು ಸರ್ವಾವೃತಗೊಂಡಿದೆ ಎಂಬುದನ್ನು ನಾವು ನೆನಪಿಸಿಕೊಳ್ಳುವುದು ಅವಶ್ಯಕ.

ದೇವರು ಪ್ರೀತಿಯಿಂದ ನಮ್ಮನ್ನು ಸೃಷ್ಟಿಸಿದ ನಂತರ **ಆತ**ನು ನಮ್ಮೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡಿರುವನು ಎಂಬುದನ್ನು ನಾವು ಬಹಾಯಿ ಬೋಧನೆಗಳಿಂದ, ಕಲಿಯುತ್ತೇವೆ. "ಒಡಂಬಡಿಕೆ" ಪದದ ಅರ್ಥವು ಇಬ್ಬರು ಅಥವಾ ಹೆಚ್ಚಿನ ಜನರ ನಡುವೆ ಮಾಡಿಕೊಂಡ ಒಪ್ಪಂದ ಅಥವಾ ವಾಗ್ದಾನವೆಂಬುದೇ ಆಗಿದೆ. ಶಾಶ್ವತವಾದ ಒಡಂಬಡಿಕೆಯ ಪ್ರಕಾರ ಸರ್ವ ಸೌಂದರ್ಯನಾದ ಸೃಷ್ಟಿಕರ್ತನು ನಮ್ಮನ್ನು ಎಂದಿಗೂ ಪರಿತ್ಯಜಿಸುವುದಿಲ್ಲ, ಮತ್ತು ಕಾಲಕಾಲಕ್ಕೆ, **ಆತ**ನ ಇಚ್ಛೆ ಮತ್ತು ಆತನ ಉದ್ದೇಶವನ್ನು ಆತನ ಅವತಾರ ಪುರುಷರ ಮೂಲಕ ನಮಗೆ ತಿಳಿಸುತ್ತಲೇ ಇರುವನು.

"ಪ್ರಕಟಿಸು"ಎಂಬ ಕ್ರಿಯಾ ಪದದ ಅರ್ಥವು ಬಹಿರಂಗಪಡಿಸು ಎಂದು, ಈ ಹಿಂದೆ ತಿಳಿಯದಿರುವುದನ್ನು ಪ್ರಕಟಗೊಳಿಸು ಎಂಬುವುದಾಗಿದೆ. ದೇವರ ಅವತಾರ ಪುರುಷರು ವಿಶೇಷ ಅಸ್ತಿತ್ವದವರಾಗಿದ್ದು ದೇವರ ನುಡಿಯನ್ನು ನಮಗೆ ಪ್ರಕಟಪಡಿಸುವರು. ಅವರು ಸಾರ್ವತ್ರಿಕ ಶಿಕ್ಷಕರಾಗಿದ್ದು ದೇವರ ಇಚ್ಛೆಗೆ ತಕ್ಕಂತೆ ನಾವು ಹೇಗೆ ಜೀವಿಸಬೇಕು ಮತ್ತು ನಿಜವಾದ ಸಂತೋಷವನ್ನು ಹೇಗೆ ಪಡೆಯಬೇಕು ಎಂಬುದನ್ನು ನಮಗೆ ಬೋಧಿಸುವರು. ಈ ಅವತಾರ ಪುರುಷರು ಅಬ್ರಹಾಂ, ಕೃಷ್ಣ, ಮೋಸೆಸ್, ಝೊರಾಸ್ಟರ್, ಬುದ್ಧ, ಕ್ರಿಸ್ತ, ಮೊಹಮ್ಮದ್, ಅಂತೆಯೇ ಬಾಬ್ ಮತ್ತು ಬಹಾ'ಉ'ಲ್ಲಾರವರು, ಇಬ್ಬರೂ ಈ ಯುಗದ ಮಾನವ ಇತಿಹಾಸದಲ್ಲಿ ಅವಳಿ ಅವತಾರಪುರುಷರಾಗಿರುವರು.

ಈ ರೀತಿಯಾಗಿ ದೇವರ ಸನಾತನ ಒಡಂಬಡಿಕೆಯಲ್ಲಿ ಆತನ ಪಾತ್ರವು ಸದಾ ಪರಿಪೂರ್ಣವಾಗಿದೆ. ನಮ್ಮನ್ನು ಕೇಳಿಕೊಳ್ಳಬೇಕಾದ ಅತಿಮುಖ್ಯ ಪ್ರಶ್ನೆಯು "ಒಡಂಬಡಿಕೆಗೆ ನನ್ನ ಪಾತ್ರವನ್ನು ನಾನು ಹೇಗೆ ಪೂರೈಸಲಿ?" ಇದಕ್ಕೆ ಧಾರ್ಮಿಕ ಗ್ರಂಥಗಳಲ್ಲಿ ನಾವು ಪಡೆಯುವ ಉತ್ತರವು ದೇವರ ಪ್ರಕಟಣೆಯನ್ನು ಗುರುತಿಸುವುದು ಹಾಗೂ ಆತನ ಬೋಧನೆಗಳಿಗೆ ವಿಧೇಯರಾಗಿರುವುದಾಗಿದೆ. ಈ ಪ್ರತಿಕ್ರಿಯೆಯು ನಮ್ಮ ಜೀವನದ ಮುಖ್ಯ ಉದ್ದೇಶವಾದ, ದೇವರನ್ನು ಅರಿಯುವುದು ಮತ್ತು ಆರಾಧಿಸುವುದನ್ನು ಸೂಚಿಸುವುದು. ಚಿಕ್ಕ ಅನಿವಾರ್ಯ ಪ್ರಾರ್ಥನೆಯಲ್ಲಿ ನಾವು ಘೋಷಿಸುತ್ತೇವೆ:

**"ಓ ನನ್ನ ಪರಮಾತ್ಮನೇ, ನಿನ್ನನ್ನು ಅರಿಯಲು ಮತ್ತು ಆರಾಧಿಸಲು  ನೀನು ನನ್ನನ್ನು ಸೃಷ್ಟಿಸಿದೆ, ಅದಕ್ಕೆ ನಾನೇ ಸಾಕ್ಷಿ,  ನಾನು ಬಲಹೀನ ನೀನು ಬಲಶಾಲಿ.  ನಾನು ಬಡವ, ನೀನು ಸಿರಿವಂತ, ಈ ಕ್ಷಣ ಇದಕ್ಕೆ ನಾನೇ ಸಾಕ್ಷೀಕರಿಸುತ್ತೇನೆ.**

**"ನೀನಲ್ಲದೆ ಬೇರೆ ದೇವರಿಲ್ಲ ಆಪತ್ತಿನಲ್ಲಿ ನೀನೇ ರಕ್ಷಕ ಸ್ವಯಂ ಪರಿಪೂರ್ಣ."[2]**

ದೇವರನ್ನು ಅರಿಯುವುದು ಆತನ ಅವತಾರ ಪುರುಷರ ಮೂಲಕವಲ್ಲದೆ ಬೇರೆ ಯಾವ ರೀತಿಯಲ್ಲೂ ಸಾಧ್ಯವಿಲ್ಲದ ಕಾರಣ, ನಮ್ಮ ಜೀವನದ ಉದ್ದೇಶವನ್ನು ಸಾಧಿಸುವ ಏಕಮಾತ್ರ ದಾರಿ ಎಂದರೆ ಅವರನ್ನು ಗುರುತಿಸುವುದು ಮತ್ತು ಅವರ ಬೋಧನೆಗಳನ್ನು ಪಾಲಿಸುವುದು. ಎಲ್ಲಾ ಪವಿತ್ರಗ್ರಂಥಗಳಲ್ಲಿ ವಾಗ್ದಾನವಿತ್ತಿರುವಂತೆ, ಭೂಮಿಯ ಮೇಲೆ ಶಾಂತಿ ಮತ್ತು ನ್ಯಾಯವು ಸ್ಥಾಪಿಸಲ್ಪಡುವುದೆಂಬುದು ಪರಿಪೂರ್ಣವಾಗಿರುವ ಈ ಸಮಯದಲ್ಲಿ ವಾಸಿಸುತ್ತಿರುವ ಅನುಗ್ರಹವನ್ನು ನಾವು ಪಡೆದಿರುವುದರಿಂದ,  ಇಂದು ನಮ್ಮ ಹೃದಯಗಳು ಕೃತಜ್ಞತೆಯಿಂದ ತುಂಬಿತುಳುಕುತ್ತಿರುವುದು. ಬಹಾ'ಉ'ಲ್ಲಾ ರವರು ಈ ರೀತಿ ಘೋಷಿಸಿರುವರು :-

**" ದೇವರ ಅತ್ಯಂತ ಉತ್ಕೃಷ್ಟ ಅನುಗ್ರಹಗಳನ್ನು ಮಾನವರ ಮೇಲೆ ಸುರಿಸಿದ ದಿನವೇ ಇದು. ಈ ದಿನದಲ್ಲಿ ಆತನ ಮಹಾ ದಯೆಯು ಸೃಷ್ಟಿಸಿದ ಎಲ್ಲಾ ವಸ್ತುಗಳ ಮೇಲೆ ಚೈತನ್ಯವನ್ನು ತುಂಬಿದೆ. ಪ್ರಪಂಚದ ಎಲ್ಲಾ ಜನರು ತಮ್ಮ ಭಿನ್ನಾಭಿಪ್ರಾಯಗಳನ್ನು ಮರೆತು, ಪರಿಪೂರ್ಣ ಐಕ್ಯತೆ ಮತ್ತು ಶಾಂತಿಯಿಂದ ಆತನ ರಕ್ಷಣೆ ಮತ್ತು ಪ್ರೀತಿಪೂರ್ವಕ ದಯೆಯ ವೃಕ್ಷದ ನೆರಳಿನಡಿಯಲ್ಲಿ  ನೆಲೆಸುವುದು ಎಲ್ಲರ ಕರ್ತವ್ಯವಾಗಿದೆ."[3]**

ನಮ್ಮ ಕಥೆಯನ್ನು ಮುಂದುವರಿಸುವ ಮೊದಲು ನೀವು ಮೇಲಿನ ವಿವರಣೆಯನ್ನು ಓದಿರಿ ನಂತರ ನಿಮ್ಮ ತಂಡದವರೊಂದಿಗೆ ಒಂದರ ನಂತರ ಒಂದು ವಾಕ್ಯಾಂಶಗಳ ಮೇಲೆ ಪ್ರತಿಫಲಿಸಿ ಪರಸ್ಪರ ಪ್ರಶ್ನೆಗಳನ್ನು ಕೇಳಿ ಉತ್ತರಗಳನ್ನು ಪಡೆಯುತ್ತಾ ಸ್ವಾಭಾವಿಕವಾಗಿ ನೀವು ಪ್ರತಿಯೊಬ್ಬರೂ ವಿಚಾರಗಳನ್ನು ಸುಲಭವಾಗಿ ಪ್ರಸ್ತುತ ಪಡಿಸುವವರೆಗೂ ಮುಂದುವರೆಸಿರಿ, ಉದ್ಧರಣಗಳನ್ನು ಕಲಿಯುವುದು ವಿಶೇಷವಾಗಿ ಪ್ರಮುಖವಾದದ್ದು, ಏಕೆಂದರೆ ಬರವಣಿಗೆಗಳಿಂದ ವಚನಗಳನ್ನು ಚರ್ಚೆಗಳಲ್ಲಿ ಹಂಚಿಕೊಳ್ಳುವುದು ಅತಿಮುಖ್ಯವಾದದ್ದು. ಈ ಕೆಳಕಂಡ ಅಭ್ಯಾಸವನ್ನು ಮಾಡುವುದರ ಮೂಲಕ ಈ ವಿಭಾಗದಲ್ಲಿ ನೀಡಿರುವ ವಿಚಾರಗಳನ್ನು ಹಾಗೂ ಅವುಗಳ ಅರ್ಥವನ್ನು ತಿಳಿಯಲು ನಿಮಗೆ ಸಹಾಯವಾಗುವುದು.

1. ದೇವರು ಅರಿಯಲಾಗದ ಸಾರ  ಎಂದು ನೀವು ಒಬ್ಬರಿಗೆ ಹೇಗೆ ವಿವರಿಸುವಿರಿ? ಮೇಲಿನ ಮೊದಲ ವಾಕ್ಯಾಂಶವು ಈ ನಿಟ್ಟಿನಲ್ಲಿ ನಿಮಗೆ ಸಹಾಯವಾಗುವುದು.

_______________________________________________________________
_______________________________________________________________
_______________________________________________________________

2. ದೇವರು ನಮ್ಮನ್ನು ಏಕೆ ಸೃಷ್ಟಿಸಿರುವನು?

_______________________________________________________________
_______________________________________________________________
_______________________________________________________________

3. "ಒಡಂಬಡಿಕೆ" ಎಂಬ ಪದದ ಅರ್ಥವೇನು?

_______________________________________________________________

4. ದೇವರು ತನ್ನ ಸನಾತನ ಒಡಂಬಡಿಕೆಯಲ್ಲಿ ಮಾನವತೆಗೆ ಏನೆಂದು ವಾಗ್ದಾನಾವಿತ್ತಿರುವನು?

_______________________________________________________________
_______________________________________________________________

5. ನಮ್ಮ ಜೀವನದ ಉದ್ದೇಶವೇನು?

_______________________________________________________________
_______________________________________________________________

6. ದೇವರ ಸಾರವನ್ನು ನಾವು ಎಂದಿಗೂ ಅರಿಯಲಾರೆವು ಎಂದಾದರೆ, ನಮ್ಮ ಜೀವನದ ಉದ್ದೇಶವೇ ದೇವರನ್ನು ಅರಿಯುವುದು ಎಂಬುದರ ಅರ್ಥವೇನು?

______________________________________________________________________________
______________________________________________________________________________
______________________________________________________________________________
______________________________________________________________________________

7. " ಪ್ರಕಟಿಸು " ಎಂಬ ಪದದ ಅರ್ಥವೇನು?

______________________________________________________________________________
______________________________________________________________________________

8. ದೇವರ ಅವತಾರ ಪುರುಷರಲ್ಲಿ ಕೆಲವರನ್ನು ಹೆಸರಿಸಿ:

______________________________________________________________________________
______________________________________________________________________________
______________________________________________________________________________
______________________________________________________________________________

9. ಒಡಂಬಡಿಕೆಯಲ್ಲಿ ನಮ್ಮ ಪಾತ್ರವನ್ನು ಪೂರೈಸಲು ನಾವು ಮಾಡಬೇಕಾದುದು ಏನು?

______________________________________________________________________________
______________________________________________________________________________
______________________________________________________________________________
______________________________________________________________________________

10. ಈ ಕೆಳಕಂಡ ವಾಕ್ಯಗಳನ್ನು ಪೂರ್ಣಗೊಳಿಸಿರಿ.

ಅ. ಈ ದಿನದಲ್ಲಿ ದೇವರ ________________________________ಮಾನವರ ಮೇಲೆ ಸುರಿಸಲ್ಪಟ್ಟಿರುವುದು.
ಆ. ಈ ದಿನದಲ್ಲಿ,ದೇವರ______________________ಸೃಷ್ಟಿಸಿದ ಎಲ್ಲಾ ವಸ್ತುಗಳ ಮೇಲೆ ಚೈತನ್ಯವನ್ನು ತುಂಬಿದೆ.
ಇ. ಈ ದಿನದಲ್ಲಿ ನಾವು__________________ ಭಿನ್ನಾಬಿಪ್ರಾಯಗಳನ್ನು ಮರೆತು ಪರಿಪೂರ್ಣ ಐಕ್ಯತೆ ಮತ್ತು ಶಾಂತಿಯಿಂದ______________________________________________________________________
______________________________________________________________________________

11. ಪ್ರಪಂಚದ ಜನರು ಏನು ಮಾಡಬೇಕೆಂದು ಬಹಾ'ಉ'ಲ್ಲಾರವರು ಹೇಳಿರುವರು?

______________________________________________________________________________
______________________________________________________________________________
______________________________________________________________________________
______________________________________________________________________________

## ವಿಭಾಗ -4

ಶ್ರೀಮತಿ ಮತ್ತು ಶ್ರೀ ಸಾಂಚೇಜಸ್ ರವರೊಂದಿಗೆ ಅಲ್ಯಾಂಡ್ರಳು ಹಂಚಿಕೊಳ್ಳಬೇಕೆಂದು ಯೋಜಿಸಿದ ವಿಷಯಾಂಶದ ವಿಚಾರವು ಕೇವಲ ತನ್ನ ಮನಸ್ಸಿನಲ್ಲಿದ್ದುದ್ದಷ್ಟೇ ಆಗಿರಲಿಲ್ಲ. ಅವಳು ಆ ದಂಪತಿಗಳೊಂದಿಗೆ ಒಂದು ಗಾಢವಾದ ಸ್ನೇಹವನ್ನು ಬೆಳೆಸಿಕೊಳ್ಳಲು ಆಶಿಸಿದ್ದಳು. ಪ್ರಥಮ ಅನುಭವದಿಂದ, ಅವಳು ಪೂರ್ವಾಗ್ರಹ ಮತ್ತು ಅಧಿಕಾರಯುಕ್ತ ನೆಡವಳಿಕೆಯ ಪ್ರಭಾವದ ಕೆಡಕಿನ ಬಗ್ಗೆ ತಿಳಿದಿದ್ದಳು. ಇವನ್ನು ಅವಳು ಸಹಜವಾಗಿಯೇ ತಪ್ಪಿಸುವಳು. ಅವಳ ಉನ್ನತ ವ್ಯಾಸಂಗವು ಅವಳ ವಿನಮ್ರತೆಯನ್ನು ಕಡಿಮೆ ಮಾಡಿರಲಿಲ್ಲ. ಸಾಂಚೇಜಸ್ ರವರಿಗಾಗಿ ಅವಳ ಹೃದಯದಲ್ಲಿ ಪ್ರೇಮ ಮತ್ತು ಗೌರವವಲ್ಲದೆ ಬೇರೇನೂ ಇಲ್ಲ.ಅವಳು ಪ್ರಥಮ ವಿಷಯಾಂಶವನ್ನು ಹೇಗೆ ವಿವರಿಸಿದ್ದಳು ಎಂಬುದನ್ನು ಮನಸ್ಸಿನಲ್ಲಿ ಪರಿಗಣಿಸುತ್ತಾ, ಇದು ಇನ್ನೂ ಮುಂದುವರೆಯುವುದು ಎಂದು ತನ್ನ ಸಂಭಾಷಣೆಯ ಬಗ್ಗೆ ಆಲೋಚಿಸಿದ್ದಳು. ಅವರೊಂದಿಗೆ ಹಲವಾರು ಮುಖ್ಯ ವಿಷಯಗಳನ್ನು ಹಂಚಿಕೊಳ್ಳುವುದ್ದಿದ್ದಾಗ್ಯೂ, ಕೆಲವು ಕಡೆ ಸ್ವಲ್ಪ ವಿರಮಿಸಿ ಆ ದಂಪತಿಗಳ ಕೆಲವು ವಿಚಾರಗಳನ್ನು ಆಲಿಸಬೇಕೆಂಬುದನ್ನು ಅರಿತಿದ್ದಳು. "ನಾನು ಗಾಬರಿಯಾಗದಿರಲು ಪ್ರಯತ್ನಿಸಬೇಕು" ಎಂದು ತನಗೆ ತಾನೇ ಹೇಳಿಕೊಳ್ಳುವಳು. "ಏಕೆಂದರೆ, ನಾನು ಮಾತನಾಡುತ್ತಿದ್ದರೆ ಅವರಿಗೆ ಸಂಭಾಷಿಸುವ ಅವಕಾಶವೇ ಸಿಗುವುದಿಲ್ಲ". ಅಲ್ಯಾಂಡ್ರಳು ಈ ಕೆಳಕಂಡ

ವಾಕ್ಯಗಳ ಬಗ್ಗೆ ಆಲೋಚಿಸುವುದನ್ನು ಮುಂದುವರೆಸುವಳು. ನೀವು ಅವಳ ಸ್ಥಾನದಲ್ಲಿದ್ದಿದ್ದರೆ, ನಿಮ್ಮ ಮನಸ್ಸಿನೊಳಗೆ ಬರುವ ಈ ಕೆಳಕಂಡ ಯಾವ ವಿಚಾರಗಳಲ್ಲ ಯಾವು ಸರಿಯೆನಿಸುವವು?

---ನನ್ನ ಕೆಲಸವೆಂದರೆ ಸಾಂಚೆಜಸ್ ರವರಿಗೆ ಧರ್ಮದ ಬಗ್ಗೆ ತಿಳಿಸುವುದು ಮತ್ತು ಅವರು ನಾನು ಬೋಧಿಸುವುದೆಲ್ಲವನ್ನೂ ಕಲಿಯುವರೆಂದು ಭರವಸೆ ಹೊಂದುವುದು.

---ಇಂತಹ ಸುಂದರ ದಂಪತಿಗಳೊಂದಿಗೆ ಹಲವು ಸಮಯ ಕಳೆಯುವುದು ಹಾಗೂ ಬರಹಗಳಿಂದಾಯ್ದ ವಿಷಯಗಳನ್ನು ಅವರೊಂದಿಗೆ ಹಂಚಿಕೊಳ್ಳುವುದು ಎಂತಹ ಸದವಕಾಶವಾಗಿದೆ.

---ಈ ಭೇಟಿಯು ಎಷ್ಟು ಮುಖ್ಯವೆಂಬುದನ್ನು ನಾನು ತಿಳಿದಿರುವೆ. ಆದರೂ, ಬಹುಶಃ ಇದು ದೀರ್ಘಕಾಲ ಸಾಗಲಾರದು, ಏಕೆಂದರೆ ನನಗೆ ಬೇರೆ ಕೆಲಸಗಳನ್ನು ಮಾಡಬೇಕಾಗಿದೆ.

--- ಉಲ್ಲೇಖಗಳು ಅವರಿಗೆ ಬಹಳ ಕಷ್ಟಕರವಾಗಿರುವುದು. ನಾನು ಕೇವಲ ಅವುಗಳಲ್ಲಿನ ಸರಳವಾದುದನ್ನು ಮಾತ್ರ ನೀಡಬೇಕು. ಅವರಿಗೆ ಪ್ರೀತಿ ತೋರಿಸಬೇಕಾಗಿರುವುದೇ ಅತಿಮುಖ್ಯವಾದುದು.

--- ಈ ವಯಸ್ಸಿನಲ್ಲಿ ಸಾಂಚೇಜಸ್ ರವರು ಹೆಚ್ಚು ಕಲಿಯಲಾರರು.

---ನಾವು ವಿಷಯಾಂಶಗಳನ್ನು ಚರ್ಚಿಸುವುದು ಹಾಗೂ ಅದರ ಮೇಲೆ ಪ್ರತಿಫಲಿಸುವುದರಿಂದ ಅವರಲ್ಲಿ ಉಂಟಾದ ಅಂತದೃಷ್ಟಿಯನ್ನು ಕೇಳುವುದಕ್ಕಾಗಿ ನಾನು ನನ್ನ ಭೇಟಿಯ ನಿರೀಕ್ಷೆಯಲ್ಲಿಯೇ ಇರುತ್ತೇನೆ.

--- ಅವರು ಓದಬಲ್ಲರು. ನಾನು ಕೇವಲ ವಿಷಯವನ್ನು ಪರಿಚಯಿಸಿ, ಉಲ್ಲೇಖಗಳನ್ನು ನೀಡಿ ಅವರೇ ಓದಿ ಅಭ್ಯಾಸ ಮಾಡುವಂತೆ ಹೇಳುತ್ತೇನೆ.

---ವಿಷಯಗಳನ್ನು ಪ್ರಸ್ತುತಿ ಪಡಿಸುವಾಗ, ನಾನು ಸ್ವಲ್ಪ ನಿಧಾನಿಸಬೇಕಾಗಿರುವುದು, ಅದರಿಂದ ನಾವು ವಾಕ್ಯವೃಂದಗಳನ್ನು ಒಟ್ಟಾಗಿ ಓದಬಹುದು ಹಾಗೂ ಅದರ ಬಗ್ಗೆ ಸಮಾಲೋಚಿಸಬಹುದು.

--- ಯಾವುದೇ ಅಡಚಣೆ ಇಲ್ಲದಂತೆ ಎಲ್ಲವನ್ನೂ ಒಂದೇ ಸಲಕ್ಕೆ ನೀಡಿ ಕೊನೆಯಲ್ಲಿ ಅವರಿಗೆ ಏನಾದರೂ ಪ್ರಶ್ನೆಗಳಿವೆ ಎಂದು ಕೇಳುವುದನ್ನು ನಾನು ಆಶಿಸುವೆ.

ಇಂತಹ ಭೇಟಿಯ ಸಮಯದಲ್ಲಿ ನೀವು ಇಚ್ಛಿಸುವ ಅಥವಾ ಇಚ್ಛಿಸದಿರುವ ಯಾವುದಾದರೂ ಮನೋಭಾವನೆಗಳ ಬಗ್ಗೆ ಆಲೋಚಿಸ ಬಲ್ಲಿರಾ?

## ವಿಭಾಗ- 5

ಸಾಂಚೆಜಸ್ ರವರ ಮನೆಗೆ ಅಲ್ಯಾಂಡ್ರಳು ನೀಡಿದ ಪ್ರಥಮ ಭೇಟಿಯು ಸರಾಗವಾಗಿ ಜರುಗಿತು. ಆ ದಂಪತಿಗಳು ಅವಳ ಅಂಜಿಕೆಯನ್ನು ಗಮನಿಸಿದರಲ್ಲದೆ ತಮ್ಮ ಸ್ವಾಗತ ಮತ್ತು ದಯೆಯಿಂದ ಅವಳಿಗೆ ಸಮಾಧಾನವಾಗುವಂತೆ ಮಾಡಿದರು. ಅವರು ಬಹಳ ಆಸಕ್ತಿಯಿಂದ ಆಲಿಸುತ್ತಾ, ಚರ್ಚೆಯಲ್ಲಿ ಸಂಪೂರ್ಣವಾಗಿ ಭಾಗಿಗಳಾಗಿ ಉಲ್ಲೇಖಗಳಿಗೆ ನಿರ್ದಿಷ್ಟ ಗಮನವನ್ನು ನೀಡುತ್ತಿದ್ದರು. ಒಂದು ಕಷ್ಟದ ಕ್ಷಣವೆಂದರೆ, ಕೊನೆಯಲ್ಲಿ ಶ್ರೀಮತಿ ಸಾಂಚೆಜಸ್ ಅವರು ಕೇಳಿದ ಪ್ರಶ್ನೆಯು ಅಲ್ಯಾಂಡ್ರಳನ್ನು ಆಶ್ಚರ್ಯಗೊಳಿಸುದುದು : " ನಾನು ಬಹಾಯಿ ಸಮುದಾಯಕ್ಕೆ ಸೇರುವುದರಿಂದ ಯೇಸುಕ್ರಿಸ್ತನನ್ನು ಮರೆಯುತ್ತಿದ್ದೇನೆಯೇ? " ಅಲ್ಯಾಂಡ್ರಳು ಉತ್ತರವನ್ನು ತಿಳಿದಿದ್ದರೂ ಅದನ್ನು ವ್ಯಕ್ತಪಡಿಸಲು ಸಮಯವು ಬೇಕಾಗಿತ್ತು. ಶ್ರೀ ಸಾಂಚೆಜಸ್ ರವರು ಮುಗುಳ್ನಗುತ್ತಾ ಅವಳ ನೆರವಿಗೆ ಬಂದು, " ನಾವು ಬೋಧನೆಗಳ ಬಗ್ಗೆ ಕಲಿತಾಗಿನಿಂದ ಯೇಸುಕ್ರಿಸ್ತನ ಮೇಲಿನ ನಮ್ಮ ಪ್ರೀತಿಯು ಅಧಿಕವಾಯಿತು" ಎಂದು ಹೇಳಿದರು. "ಇದೇ ರೀತಿ ಪ್ರಪಂಚದಾದ್ಯಂತ ಅನೇಕರಿಗೆ ಆಗಿದೆ", ಎಂದು ತನ್ನ ಯೋಚನೆಗಳನ್ನು ಒಟ್ಟುಗೂಡಿಸತ್ತಾ ಅಲ್ಯಾಂಡ್ರ ಸೇರಿಸಿದಳು. "ಮೋಸೆಸ್, ಏಸುಕ್ರಿಸ್ತ, ಕೃಷ್ಣ, ಬುದ್ಧ, ಝೊರಾಸ್ಟರ್ ಮತ್ತು ಮೊಹಮ್ಮದರ ಮೇಲಿನ ಅವರ ಪ್ರೀತಿಯು ಬಲಗೊಂಡಿದೆ ಏಕೆಂದರೆ ದೈವೀ ಏಕತೆ, ಧರ್ಮಗಳ ಏಕತೆ ಹಾಗೂ ಮಾನವ ಜನಾಂಗದ ಏಕತೆಯ ಕುರಿತಾದ ಬೋಧನೆಗಳನ್ನು ಬಹಾ'ಉ'ಲ್ಲಾರವರು ನೀಡಿರುವರು". ಎಂದು ಅಲ್ಯಾಂಡ್ರಳು ಹೆಚ್ಚಿನ ವಿಚಾರಗಳನ್ನು ಒಂದುಗೂಡಿಸಿ ಹೇಳಿದಳು.

ಅಲ್ಯಾಂಡ್ರಳು ನೀಡಿದ ಭೇಟಿಯು ಅಷ್ಟು ಫಲಪ್ರದವಾಗಲು ಆ ಸಮಯದಲ್ಲಿ ವ್ಯಕ್ತಪಡಿಸಿದ ಕೆಲವು ಗುಣಗಳು ಮತ್ತು ಮನೋಭಾವನೆಗಳ ಬಗ್ಗೆ ನಿಮ್ಮ ತಂಡದಲ್ಲಿ ವಿಚಾರ ವಿನಿಮಯ ಮಾಡಲು ಕೆಲವು ಕ್ಷಣಗಳನ್ನು ವ್ಯಯಿಸುವುದು ನಿಮಗೆ ಉಪಯುಕ್ತವಾಗಬಹುದು. ಅವುಗಳಲ್ಲಿ ಪ್ರಧಾನವಾಗಿ ಪರಿಗಣಿಸಬೇಕಾಗಿರುವುದು ವಿನಮ್ರತೆ. ಎಲ್ಲಾ ವಿನಮ್ರತೆಗೂ ಅಡಿಪಾಯವೆಂದರೆ ದೇವರ ಮುಂದೆ ಸಲ್ಲಿಸುವ ವಿನಮ್ರತೆಯೇ ಆಗಿದೆ. ಅದರಿಂದ ಆತನ ಸೃಷ್ಟಿಗಳತ್ತ ವಿನಮ್ರತೆಯು ಚಿಮ್ಮುವುದು. ದೇವರ ಕುರಿತು ಹಾಗೂ ಆತನ ಅವತಾರ ಪುರುಷರ ಬಗ್ಗೆ ಮಾತನಾಡುವಾಗಲೆಲ್ಲ ವಿನಮ್ರತೆ ಅತ್ಯಂತ

ಮುಖ್ಯವಾದುದು. ಬಹಾ'ಉ'ಲ್ಲಾರವರ ಈ ಕೆಳಕಂಡ ನುಡಿಗಳ ಮೇಲೆ ನೀವು ಪ್ರತಿಫಲಿಸಿರಿ ಹಾಗೂ ಅದನ್ನು ಕಂಠಪಾಠ ಮಾಡಲು ಪ್ರಯತ್ನಿಸಿರಿ.

**ದೇವರ ಪ್ರೀತಿಗೆ ಪಾತ್ರರಾದವರು, ಯಾವ ಪ್ರದೇಶಗಳಲ್ಲೆಲ್ಲ ಒಟ್ಟುಗೂಡುವರೋ ಮತ್ತು ಯಾರನ್ನೆಲ್ಲ ಅವರು ಭೇಟಿ ಮಾಡುವರೋ, ಅವರಲ್ಲಿ ದೇವರ ಬಗೆಗಿನ ಮನೋಭಾವ ದೇವರ ಹೊಗಳಿಕೆ ಮತ್ತು ವೈಭವದ ಆಚರಣೆಯ ಗುಣಭಾವಗಳು ನಮ್ರತೆ ಮತ್ತು ವಿಧೇಯತೆಗಳಿಂದ ಕೂಡಿದ್ದು, ಅವರ ಕಾಲ ಕೆಳಗಿನ ಪ್ರತಿಯೊಂದು ಅಣುವು ಅವರ ಭಕ್ತಿಯ ಆಳವನ್ನು ಸಾಕ್ಷೀಕರಿಸುವಂತಾಗಬೇಕು. ಈ ಪವಿತ್ರಾತ್ಮಗಳು ನಡೆಸುವ ಸಂಭಾಷಣೆಯು ಅಗಾಧ ಪಾಂಡಿತ್ಯದಿಂದ ಕೂಡಿದ್ದು ಅದರ ಪ್ರಭಾವದಿಂದ ಅದೇ ಧೂಳಿನ ಕಣಗಳು ಸಹ ರೋಮಾಂಚನಗೊಳ್ಳುತ್ತವೆ. ಅವರು ಎಂತಹ ಗುಣವಿಶೇಷತೆಗಳಿಂದ ಕೂಡಿರಬೇಕೆಂದರೆ, ಅವರು ನಡೆದಾಡುವ ಭೂಮಿಯು ಸಹ ಈ ರೀತಿಯಾಗಿ ಉದ್ದೇಶಿಸಿ ಮಾತನಾಡಬಾರದು: 'ನಿಮಗಿಂತಲೂ ನಾನು ಹೆಚ್ಚು ಪ್ರಾಶಸ್ತ್ಯ ಹೊಂದಿದ್ದೇನೆ. ಯಜಮಾನನು ನನ್ನ ಮೇಲಿರಿಸಿದ ಹೊರೆಯನ್ನು ನಿಭಾಯಿಸುವಲ್ಲಿ, ನಾನು ಅದೆಷ್ಟು ತಾಳ್ಮೆಯಿಂದಿದ್ದೇನೆ ಎಂಬುವುದಕ್ಕೆ ಸಾಕ್ಷೀಕರಿಸು. ಸರ್ವಾನುಗ್ರಹಗಳ ಮೂಲನು ನನಗೆ ವಹಿಸಿರುವ ದೈವಾನುಗ್ರಹಗಳನ್ನು ಅಸ್ತಿತ್ವದಲ್ಲಿರುವ ಎಲ್ಲಾ ವಸ್ತುಗಳಿಗೂ ಅವಿರತವಾಗಿ ತಲುಪಿಸುವಲ್ಲಿ ನಾನು ಸಾಧನವಾಗಿದ್ದೇನೆ. ಅದೆಷ್ಟೋ ಬಿರುದುಗಳಿಂದ ನನ್ನನ್ನು ಗೌರವಿಸಿದರೂ, ನನ್ನ ಅಗಣಿತ ಐಶ್ವರ್ಯದ ಸಾಕ್ಷಿಯಾಗಿ-ಸೃಷ್ಟಿಸಿದವುಗಳೆಲ್ಲದಕ್ಕೂ ಸಂಪದ್ಭರಿತ ಅಗತ್ಯಗಳನ್ನು ಪೂರೈಸುವೆ -ಇಗೋ ನನ್ನ ನಮ್ರತೆಯ ಪ್ರಮಾಣವನ್ನು ನೋಡು, ಜನರ ಕಾಲ್ತುಳಿತಕ್ಕೆ ಒಳಗಾಗಲು ನನ್ನನ್ನು ನಾನೇ ಅರ್ಪಿಸಿಕೊಂಡಿದ್ದೇನೆ"[4]**

ಮೇಲೆ ತಿಳಿಸಿದಂತೆ, ನಮ್ಮ ಸಹ ಮಾನವರೊಂದಿಗಿನ ವಿನಮ್ರತೆಯು ದೇವರತ್ತ ಇರುವ ವಿನಮ್ರತೆಯಿಂದಲೇ ಚಿಮ್ಮುವುದು. ಇದೇ ವಿನಮ್ರತೆಯಿಂದ ನಾವು ಭೇಟಿ ನೀಡುವ ಸ್ನೇಹಿತರ ಅಥವಾ ನೆರೆಯವರ ಮನೆಗಳನ್ನು ಪ್ರವೇಶಿಸುವಾಗ ಪ್ರಾರ್ಥನಾ ಮನೋಭಾವನೆಯಿಂದ ಕೆಲವು ವಿಚಾರಗಳಲ್ಲಿ ಆಳವಾದ ಜ್ಞಾನವನ್ನು ಹೊಂದಲು ಒಟ್ಟಾಗಿ ಪ್ರಯತ್ನಿಸುವೆವು. ಸಂಭಾಷಣಾ ವೇಳೆಗಳಲ್ಲಿ, ಪದೇಪದೇ ದೇವರತ್ತ ನಮ್ಮ ಆಲೋಚನೆಗಳನ್ನು ತಿರುಗಿಸುತ್ತಾ, ನಮ್ಮ ಹಾಗೂ ಅಲ್ಲಿರುವವರೆಲ್ಲರ ಮನಸ್ಸು ಮತ್ತು ಹೃದಯಗಳನ್ನು ಬೆಳಗುವಂತೆ ಆತನನ್ನು ಯಾಚಿಸುವೆವು. ನಮ್ಮ ಮನಸ್ಸಿನಲ್ಲಿ ಈ ಉದ್ದೇಶಕ್ಕಾಗಿಯೇ ನಾವು ಹಲವು ನುಡಿಗಟ್ಟುಗಳಲ್ಲಿ ಮತ್ತು ಪ್ರಾರ್ಥನೆಯಲ್ಲಿರುವ ವಾಕ್ಯವೃಂದಗಳನ್ನು ನಾವು ಕಂಠಪಾಠ ಮಾಡಬಹುದಾಗಿದೆ. ಅವುಗಳಲ್ಲಿ ಕೆಲವನ್ನು ಮಾತ್ರ ಈ ಕೆಳಗೆ ನೀಡಲಾಗಿದೆ :

**" ನಮ್ಮ ಹೃದಯಗಳನ್ನು ಪ್ರಕಾಶಿತ ಗೊಳಿಸು, ಗ್ರಹಿಕೆಯುಳ್ಳ ಕಣ್ಣುಗಳನ್ನು ಮತ್ತು ಆಸಕ್ತಿಯುಳ್ಳ ಕಿವಿಗಳನ್ನು ದಯಪಾಲಿಸು. "[5]**

**" ಓ ದೇವರೇ! ನಿನ್ನ ಅಪರಿಮಿತ ಅನುಗ್ರಹವನ್ನು ದಯಪಾಲಿಸು, ನಿನ್ನ ಮಾರ್ಗದರ್ಶನದ ಬೆಳಕು ಹೊಳೆಯುತ್ತಿರಲಿ. "[6]**

**" ನೈಜ ಅರಿವಿನ ದ್ವಾರವನ್ನು ತೆರೆ ಮತ್ತು ನಂಬಿಕೆಯ ಬೆಳಕು ಉಜ್ವಲವಾಗಿ ಹೊಳೆಯಲಿ. "[7]**

**"ಓ ದೇವರೇ! ನಮ್ಮ ಕಣ್ಣುಗಳನ್ನು ಬೆಳಗಿಸು ಅದರಿಂದ ನಾವು ನಿನ್ನ ಬೆಳಕನ್ನು ಕಾಣುವಂತಾಗಲಿ"[8]**

**"ನಿನ್ನ ದಿವ್ಯ ಏಕತೆಯ ಆವರ್ತದಲ್ಲಿ, ನಿನ್ನ ಇಚ್ಛೆಗೆ ವಿರುದ್ಧವಾಗಿರುವ ಎಲ್ಲವುಗಳಿಂದ ನನ್ನನ್ನು ರಕ್ಷಿಸೆಂದು ನಾನು ನಿನ್ನನ್ನು ನನ್ನ ಪೂರ್ಣ ಹೃದಯ, ಮನಸ್ಸು ಮತ್ತು ನನ್ನ ನಾಲಿಗೆಯಿಂದ ಬೇಡಿಕೊಳ್ಳುತ್ತೇನೆ." [9]**

## ವಿಭಾಗ- 6

ಸಾಂಚೇಜಸ್ ರವರ ಮನೆಗೆ ಭೇಟಿ ನೀಡಿ, ಅವರೊಂದಿಗೆ ಸನಾತನ ಒಡಂಬಡಿಕೆಯ ವಿಷಯವಾಗಿ ನಡೆಸಿದ ಸಂಭಾಷಣೆಯಿಂದ ಅಲ್ಯಾಂಡ್ರಾಳ ಹೃದಯವು ಆನಂದದಿಂದ ತುಂಬಿತ್ತು. "ಮುಂದಿನ ಭೇಟಿಯಲ್ಲಿ", "ಬಹಾ'ಉ'ಲ್ಲಾರವರ ಜೀವನ ಕುರಿತು ಅವರ ಜ್ಞಾನವನ್ನು ಆಳವಾಗಿಸಲು ಒಳ್ಳೆಯ ಅವಕಾಶವಾಗಿರುವುದು" ಎಂದು ಅವಳು ಆಲೋಚಿಸುವಳು. ಅವಳ ಪ್ರಸ್ತುತಪಡಿಸುವಿಕೆಯು ಈ ಕೆಳಗಿನಂತೆ ಇರುವುದು:

ಬಹಾ'ಉ'ಲ್ಲಾರವರು ಪರ್ಶಿಯಾದ ರಾಜಧಾನಿ ಟೆಹರಾನಿನಲ್ಲಿ 12 ನವೆಂಬರ್ 1817ರಲ್ಲಿ ಜನಿಸಿದರು. ಚಿಕ್ಕಂದಿನಿಂದಲೇ **ಅವರು** ಅಸಾಧಾರಣ ಗುಣ ವಿಶೇಷಗಳನ್ನು ತೋರಿದ್ದರು, ಮತ್ತು **ಅವರ** ತಂದೆ ತಾಯಿಗೆ **ಆತನು** ಮಹಾತ್ಮನಾಗುವನೆಂಬ ಖಾತ್ರಿಯಿತ್ತು . ರಾಜನ ಆಸ್ಥಾನದಲ್ಲಿ ಗೌರವಾನ್ವಿತ ಮಂತ್ರಿಯಾಗಿದ್ದ ಬಹಾ'ಉ'ಲ್ಲಾರವರ ತಂದೆಗೆ ಮಗನ ಮೇಲೆ ಆದಮ್ಯ ಪ್ರೀತಿ ಇದ್ದಿತು. ಒಂದು ದಿನ ಅವರಿಗೆ ಒಂದು ಕನಸು ಬಿತ್ತು. ಮಿತಿ ಇಲ್ಲದ ಸಾಗರದಲ್ಲಿ ಬಹಾ'ಉ'ಲ್ಲಾರವರು ಈಜುತ್ತಿರುವಂತೆ, ಅವರ ದೇಹವು ಹೊಳೆಯುತ್ತಾ ವಿಶಾಲ ಸಾಗರವನ್ನು ಪ್ರಕಾಶಗೊಳಿಸಿದಂತೆ. ಅವರ ತಲೆಯ ಸುತ್ತಲೂ ಕಾಂತಿಯುಕ್ತ ಕಪ್ಪನೆಯ ಉದ್ದ ಕೇಶ ರಾಶಿ ಎಲ್ಲಾ ದಿಕ್ಕುಗಳಿಗೂ ಪಸರಿಸಿತ್ತು . ಅವರ ಸುತ್ತ ಮೀನುಗಳ ಹಿಂಡು ನೆರೆದಿದ್ದು , ಪ್ರತಿಯೊಂದೂ ಅವರ ಒಂದೊಂದು ಕೂದಲನ್ನು ಕಚ್ಚಿಕೊಂಡಿತ್ತು. ಮೀನುಗಳ

ಸಂಖ್ಯೆಯು ತುಂಬಾ ಇದ್ದರೂ ಬಹಾಉಲ್ಲಾರ ತಲೆಯಿಂದ ಒಂದು ಕೂದಲು ಕೂಡಾ ಬೇರ್ಪಟ್ಟಿರಲಿಲ್ಲ. ಅವರು ಮುಕ್ತವಾಗಿ ಮತ್ತು ತಡೆಯಿಲ್ಲದೆ ನೀರಲ್ಲಿ ಈಜಾಡಿದರು , ಮೀನುಗಳೆಲ್ಲವೂ ಅವರನ್ನು ಹಿಂಬಾಲಿಸಿದವು . ಕನಸುಗಳ ವ್ಯಾಖ್ಯೆ ನೀಡುವಲ್ಲಿ ಪ್ರಖ್ಯಾತಿಗೊಂಡ ಮನುಷ್ಯನನ್ನು ಬಹಾಉಲ್ಲಾರ ತಂದೆ ಈ ಕನಸಿನ ಅರ್ಥವನ್ನು ಕೇಳಿದರು . ಅವರು ಮಿತಿ ಇಲ್ಲದ ಸಾಗರ ಎಂದರೆ ಅಸ್ತಿತ್ವದ ಪ್ರಪಂಚ, ಒಬ್ಬರೇ ಒಬ್ಬಂಟಿಯಾಗಿ ಅದರ ಮೇಲಿನ ಸಾರ್ವಭೌಮತ್ವವನ್ನು ಬಹಾ'ಉ'ಲ್ಲಾರವರು ಸಾಧಿಸುತ್ತಾರೆ. ಮೀನುಗಳ ಹಿಂಡು, ಪ್ರಪಂಚದ ಜನರ ನಡುವೆ ಬಹಾ'ಉ'ಲ್ಲಾರವರಿಗೆ ಎದುರಾಗುವ ತುಮುಲಗಳು. ಅವರಿಗೆ ದೇವರ ವಿಫಲಗೊಳ್ಳದ ರಕ್ಷಣೆ ಇರುವುದು, ಅವರಿಗೆ ಯಾವುದೇ ಕೋಲಾಹಲವೂ ಕೆಡುಕು ಮಾಡಲು ಸಾಧ್ಯವಾಗುವುದಿಲ್ಲ ಎಂದು ವಿವರಿಸಿದರು.

ಬಹಾ'ಉ'ಲ್ಲಾರವರು ಹದಿಮೂರು ಅಥವಾ ಹದಿನಾಲ್ಕು ವರ್ಷದವರಾಗಿದ್ದಾಗಲೇ ರಾಜನ ಆಸ್ಥಾನದಲ್ಲಿ ತಮ್ಮ ವಿವೇಕ ಮತ್ತು ವಿದ್ವತ್ತಿಗೆ ಹೆಸರಾಗಿದ್ದರು . ಅವರ ತಂದೆ ತೀರಿ ಹೋದಾಗ ಅವರಿಗೆ 22 ವರ್ಷ ವಯಸ್ಸಾಗಿತ್ತು, ಆಗ ಸರಕಾರ ಅವರನ್ನು ತಮ್ಮ ತಂದೆಯ ಸ್ಥಾನವನ್ನು ವಹಿಸಿಕೊಳ್ಳಲು ಕೇಳಿಕೊಂಡಿತು . ಆದರೆ ಬಹಾ'ಉ'ಲ್ಲಾರವರಿಗೆ ಪ್ರಾಪಂಚಿಕ ವಿಚಾರಗಳಲ್ಲಿ ವೇಳೆಗಳೆಯಲು ಇಚ್ಛೆ ಇರಲಿಲ್ಲ. ಅವರು ಆಸ್ಥಾನ ಮತ್ತು ಅದರ ಮಂತ್ರಿಗಳನ್ನು ಬಿಟ್ಟು , ದೇವರು ತನಗೆ ತೋರಿದ ಪಥದಲ್ಲಿ ಸಾಗಿದರು. ದಮನಕ್ಕೊಳಗಾದವರಿಗೆ, ರೋಗಗ್ರಸ್ತರಿಗೆ ಮತ್ತು ಬಡವರಿಗೆ ಸಹಾಯ ಮಾಡಲು ತಮ್ಮ ಸಮಯವನ್ನು ವ್ಯಯ ಮಾಡಿದರು ಮತ್ತು ಶೀಘ್ರದಲ್ಲೇ ಅವರು ನ್ಯಾಯ ಪಾಲನೆಯ ವೀರಾಗ್ರೇಸನೆಂದು ಹೆಸರುವಾಸಿಯಾದರು.

ಅವರು 27 ವರ್ಷದ ವಯಸ್ಸಿನವರಿದ್ದಾಗ , ಮಾನವತೆಯು ಬಹಳ ಸಮಯದಿಂದ ಕಾಯುತ್ತಿದ್ದ , ನ್ಯಾಯ ಐಕ್ಯತೆ ಮತ್ತು ಶಾಂತಿಯನ್ನು ತರುವ , ದೇವರ ಅವತಾರವು ಬರುವ ಕಾಲವು ಸನ್ನಿಹಿತವಾಗಿದೆ ಎಂದು ಸಾರುತ್ತಿದ್ದ ಬಾಬ್‌ರವರ ಕೆಲವು ಬರಹಗಳನ್ನು ವಿಶೇಷ ದೂತನ ಮೂಲಕ ಪಡೆದರು . ಬಾಬ್‌ರವರ ಸಂದೇಶವನ್ನು ಬಹಾ'ಉ'ಲ್ಲಾರವರು ಕೂಡಲೇ ಸ್ವೀಕರಿಸಿ ಅದರ ಉತ್ಸಾಹಿತ ಅನುಯಾಯಿಗಳಲ್ಲೊಬ್ಬರಾದರು . ಆದರೆ , ಅಯ್ಯೋ , ಪರ್ಷಿಯಾವನ್ನು ಆಳುತ್ತಿದ್ದವರು , ತಮ್ಮ ಸ್ವಾರ್ಥ ಲಾಲಸೆಗಳಿಂದ ಕುರುಡರಾಗಿ, ಬಾಬ್‌ರವರ ಅನುಯಾಯಿಗಳನ್ನು ಅತಿ ಕ್ರೂರವಾಗಿ ಹಿಂಸಿಸತೊಡಗಿದರು . ಬಹಾ'ಉ'ಲ್ಲಾರವರು ತಮ್ಮ ಉದಾರತೆಗೆ ಹೆಸರಾಗಿದ್ದರೂ ಅವರನ್ನೂ ಕೂಡಾ ಬಿಡಲಿಲ್ಲ. ಬಾಬ್‌ರವರ ಘೋಷಣೆಯ ಎಂಟು ವರ್ಷಗಳ ನಂತರ ಮತ್ತು ಬಾಬ್‌ರವರು ಹುತಾತ್ಮರಾದ ಎರಡು ವರ್ಷಗಳ ನಂತರ ಬಹಾ'ಉ'ಲ್ಲಾರವರನ್ನು ಕಪ್ಪು ಗುಂಡಿ ಎಂದು ಕರೆಯಲ್ಪಡುವ ಕತ್ತಲೆಯಿಂದ ಕೂಡಿದ ನೆಲಮಾಳಿಗೆಗೆ ತಳ್ಳಿದರು . ಅವರ ಕುತ್ತಿಗೆಯ ಸುತ್ತ ಹಾಕಿದ ಕಬ್ಬಿಣದ ಸರಪಳಿಯ ಭಾರವೆಷ್ಟಿತ್ತೆಂದರೆ ಅವರಿಗೆ ತಲೆಯನ್ನು ಎತ್ತಲಾಗುತ್ತಿರಲಿಲ್ಲ. ಇಲ್ಲಿ ಬಹಾ'ಉ'ಲ್ಲಾರವರು ಭಯಂಕರವಾದ 4 ತಿಂಗಳನ್ನು ಅತಿ ಕಷ್ಟದಲ್ಲಿ ಕಳೆದರು. ಆದರೂ ಇದೇ ಸೆರೆಮನೆಯಲ್ಲಿ ದೇವರ ದಿವ್ಯ ಚೈತನ್ಯವು ಅವರ ಆತ್ಮವನ್ನು ತುಂಬಿ , ' ಎಲ್ಲಾ ಯುಗಗಳ ಭರವಸಿಗ ' ಎಂದು ಪ್ರಕಟಿಸಲ್ಪಟ್ಟಿತು . ಈ ಕತ್ತಲ ಸೆರೆಮನೆಯಿಂದ ಬಹಾ'ಉ'ಲ್ಲಾ ಎಂಬ ಸೂರ್ಯ ಎದ್ದು ಸಮಗ್ರ ಸೃಷ್ಟಿಯನ್ನು ಪ್ರಕಾಶಿಸಿತು .

ಕಪ್ಪು ಗುಂಡಿಯಲ್ಲಿ ನಾಲ್ಕು ತಿಂಗಳು ಕಳೆದ ನಂತರ , ಬಹಾ'ಉ'ಲ್ಲಾರವರ ಸಮಸ್ತ ಆಸ್ತಿಯನ್ನು ಮುಟ್ಟುಗೋಲು ಹಾಕಿ ಅವರನ್ನು ಮತ್ತು ಅವರ ಕುಟುಂಬದವರನ್ನು ಗಡೀಪಾರು ಮಾಡಿದರು. ಚಳಿಗಾಲದ ಆ ಭಯಂಕರ ಚಳಿಯಲ್ಲಿ ಪರ್ಷಿಯಾದ ಪಶ್ಚಿಮ ಪರ್ವತಗಳ ಮೂಲಕ ಒಟ್ಟೋಮನ್ ಸಾಮ್ರಾಜ್ಯದ ಅಂದಿನ ನಗರವೊಂದಕ್ಕೆ, ಈಗಿನ ಇರಾಕಿನ ರಾಜಧಾನಿ ಬಾಗ್ದಾದಿಗೆ ಪ್ರಯಾಣ ಬೆಳೆಸಿದರು . ವಿಧಿ ನಿಯಮಿತ ಆ ನಗರಕ್ಕೆ ಅವರು ನೂರಾರು ಮೈಲುಗಳ ಹಿಮ ಮತ್ತು ಮಂಜುಗಡ್ಡೆಯಿಂದಾವೃತ ನೆಲದಲ್ಲಿ ಸಾಗುವಾಗಿನ ಕಷ್ಟಾನುಭವಗಳನ್ನು ಪದಗಳಿಂದ ವರ್ಣಿಸಲು ಸಾಧ್ಯವಿಲ್ಲ.

ಬಾಗ್ದಾದ್ ಮತ್ತು ಆ ಪ್ರಾಂತ್ಯದ ಸುತ್ತಲ ನಗರಗಳಲ್ಲಿ ಬಹಾ'ಉ'ಲ್ಲಾರವರ ಕೀರ್ತಿಯು ಕೂಡಲೇ ಪಸರಿಸಿತು ಮತ್ತು ಹೆಚ್ಚು ಹೆಚ್ಚು ಜನರು ಈ ಗಡೀಪಾರಿಗೊಳಪಟ್ಟ ಖೈದಿಯನ್ನು ನೋಡಲು ಮತ್ತು ಅವರ ಆಶೀರ್ವಾದಗಳನ್ನು ಪಡೆಯಲು ಬಂದರು . ಆದರೆ , ಅವರ ಈ ಕೀರ್ತಿಯ ಬಗ್ಗೆ ಅಸೂಯೆ ಪಟ್ಟ ಕೆಲವರಿದ್ದರು. ಅವರಲ್ಲಿ ಬಹಾ'ಉ'ಲ್ಲಾರವರ ಪ್ರೀತಿಪೂರ್ವಕ ರಕ್ಷಣೆಗೊಳಪಟ್ಟ ಅವರ ಸ್ವಂತ ಮಲಸಹೋದರ ಮಿರ್ಜಾ ಯಾಹ್ಯಾನೂ ಇದ್ದನು. ಮಿರ್ಜಾ ಯಾಹ್ಯಾನ ಷಡ್ಯಂತ್ರವು ಬಾಬಿಗಳಲ್ಲಿ ಐಕ್ಯತೆಯನ್ನು ಒಡೆಯಿತು ಮತ್ತು ಅದು ಬಹಾ'ಉ'ಲ್ಲಾರವರಿಗೆ ದುಃಖವನ್ನುಂಟು ಮಾಡಿತು. ಒಂದು ರಾತ್ರಿ, ಇತರರಿಗೆ ತಿಳಿಸದೆ , ಬಹಾಉಲ್ಲಾರವರು ಕುರ್ದಿಸ್ಥಾನದ ಪರ್ವತವೊಂದಕ್ಕೆ ತಮ್ಮ ಮನೆಯನ್ನು ಬಿಟ್ಟು ತೆರಳಿದರು ಅಲ್ಲಿ ಅವರು ಪ್ರಾರ್ಥನೆ ಮತ್ತು ಧ್ಯಾನಗಳಿಂದ ವಿರಕ್ತ ಜೀವನವನ್ನು ನಡೆಸಿದರು . ಅಲ್ಲಿ ಗುಹೆಯೊಂದರಲ್ಲಿ ಇದ್ದು , ಅತಿಸರಳ ಆಹಾರವನ್ನು ತೆಗೆದುಕೊಳ್ಳುತ್ತಿದ್ದರು. ಯಾರಿಗೂ ಅವರು ಎಲ್ಲಿಯವರೆಂದೂ ಮತ್ತು ಅವರ ಹೆಸರೂ ಗೊತ್ತಿರಲಿಲ್ಲ . ಆದರೆ ಕ್ರಮೇಣ ಈ "ಅನಾಮಧೇಯ" , ದೇವರಿಂದಲೇ ಜ್ಞಾನ ಪಡೆದ ಮಹಾ ಸಂತನ ಕುರಿತು ಜನರು ಮಾತನಾಡತೊಡಗಿದರು. ಈ ಪವಿತ್ರ ವ್ಯಕ್ತಿಯ ವಿಷಯವು ಬಹಾ'ಉ'ಲ್ಲಾರವರ ಹಿರಿಯ ಮಗ ಅಬ್ದುಲ್-ಬಹಾರವರ ಕಿವಿಗೆ ಬಿದ್ದಾಗ ತನ್ನ ತಂದೆಯ ಎಲ್ಲಾ ಲಕ್ಷಣಗಳು ಆ ವ್ಯಕ್ತಿಯಲ್ಲಿರುವುದನ್ನು ಕೂಡಲೇ ಗುರುತಿಸಿದರು . ಬಹಾ'ಉ'ಲ್ಲಾರವರು ಬಾಗ್ದಾದಿಗೆ ಹಿಂದಿರುಗಬೇಕೆಂದು ವಿನಂತಿಸುವ ಪತ್ರಗಳೊಂದಿಗೆ ವಿಶೇಷ ಧೂತನನ್ನು ಕಳುಹಿಸಿಕಟ್ಟರು . ಇದನ್ನು ಸ್ವೀಕರಿಸಿದ ಬಹಾ'ಉ'ಲ್ಲಾರವರು , ಎರಡು ವರ್ಷಗಳ ನೋವಿನಿಂದ ಕೂಡಿದ ಈ ಬೇರ್ಪಡಿಕೆಗೆ ಕೊನೆಯನ್ನು ತಂದಿತ್ತರು.

ಬಹಾ'ಉ'ಲ್ಲಾರವರ ಅನುಪಸ್ಥಿತಿಯಲ್ಲಿ ಬಾಬಿ ಸಮುದಾಯದ ಸ್ಥಿತಿಗತಿಗಳು ಬಹಳ ಅವನತಿಗಿಳಿದಿತ್ತು. ಕಿರುಕುಳಕ್ಕೊಳಗಾದ ಮತ್ತು ಗೊಂದಲಕ್ಕೊಳಗಾದ ಬಾಬ್‌ರವರ ಅನುಯಾಯಿಗಳಲ್ಲಿ ಹೊಸ ಚೈತನ್ಯವನ್ನು ತುಂಬಲು ಬಹಾ'ಉ'ಲ್ಲಾರವರು ಮುಂದಾದರು. ತಮ್ಮ ನಿಜ ಸ್ಥಾನದ ಕುರಿತು ಬಹಾ'ಉ'ಲ್ಲಾರವರು ಘೋಷಣೆ ಮಾಡದಿದ್ದರೂ , ಅವರ ನುಡಿಗಳಲ್ಲಿದ್ದ ಶಕ್ತಿ ಮತ್ತು ವಿವೇಕಗಳಿಂದ ಬಾಬಿಗಳ ನಿಷ್ಠೆಯನ್ನು ಮತ್ತು ಪ್ರತಿಯೊಂದು ಸ್ತರದ ವ್ಯಕ್ತಿಗಳ ಅಭಿಮಾನವನ್ನು ಗಳಿಸಲಾರಂಭಿಸಿದರು. ಆದರೆ ಮತಾಂಧ ಮುಸ್ಲಿಂ ಮತ ಪಂಡಿತರು ಬಹಾ'ಉ'ಲ್ಲಾರವರ ಪ್ರಭಾವ ಇತರ ಆತ್ಮಗಳ ಮೇಲಾಗುವ ಅಗಾಧ ಪ್ರಭಾವವನ್ನು ಸಹಿಸದಾದರು. ಪರ್ಷಿಯಾದ ಸರಕಾರ ಒಟ್ಟೋಮನ್ ಸಾಮ್ರಾಜ್ಯದ ಅಧಿಕಾರಿಗಳೊಡಗೂಡಿ ಬಹಾ'ಉ'ಲ್ಲಾರವರನ್ನು ತಮ್ಮ ತಾಯ್ನಾಡಿನಿಂದ ಈ ಸಲ ಇನ್ನೂ ದೂರದ ಕಾನ್‌ಸ್ಟಂಟಿನೋಪಲ್ ಎಂಬ ನಗರಕ್ಕೆ ಗಡೀಪಾರು ಮಾಡುವ ತನಕ ಅವರು ಪದೇ ಪದೇ ದೂರುಗಳನ್ನು ಕೊಟ್ಟರು .

ಏಪ್ರಿಲ್೧೮೬೩ ಬಾಗ್ದಾದಿನ ಜನತೆಗೆ ಅತಿ ದುಃಖವನ್ನು ತಂದ ತಿಂಗಳು . ತಾವು ಪ್ರೀತಿಸುತ್ತಿದ್ದ ಆ ವ್ಯಕ್ತಿಯನ್ನು ಅವರಿಗೆ ತಿಳಿಯದ ಕಡೆಗೆ ಕರೆದೊಯ್ಯುತ್ತಿದ್ದಾರೆಂಬುದೇ ಕಾರಣ. ಊರ ಹೊರಗಣ ಉದ್ಯಾನವೊಂದರಲ್ಲಿ ಬಹಾ'ಉ'ಲ್ಲಾರವರು ಡೇರೆಯೊಂದನ್ನು ಹೂಡಿ ತಮ್ಮ ವಾಸವನ್ನು ಬದಲಾಯಿಸಿಕೊಂಡರು. ಅಲ್ಲಿ ಹನ್ನೆರಡು ದಿನಗಳ ಪರ್ಯಂತ ತಮಗೆ ವಿದಾಯ ಹೇಳಲು ಬಂದ ಸಂದರ್ಶಕರ ಮಹಾ ಪೂರವನ್ನೇ ಅಲ್ಲಿ ಸ್ವಾಗತಿಸಿದರು . ಬಾಬ್‌ರವರ ಅನುಯಾಯಿಗಳು ಈ ಉದ್ಯಾನಕ್ಕೆ ಭಾರವಾದ ಹೃದಯಗಳಿಂದ ಬಂದರು. ಅವರಲ್ಲಿ ಕೆಲವರು ಮುಂದಿನ ಗಡೀಪಾರಿನ ಪ್ರಯಾಣದಲ್ಲಿ ಬಹಾ'ಉ'ಲ್ಲಾರೊಡನೆ ಹೋಗುವವರಿದ್ದರು . ಆದರೆ ಹೆಚ್ಚಿನವರು ಹಿಂದುಳಿಯಬೇಕಾಗಿದ್ದು ಬಹಾ'ಉ'ಲ್ಲಾರವರ ನಿಕಟ ಒಡನಾಟದಿಂದ ವಂಚಿತರಾಗಬೇಕಾಯಿತು. ದೇವರು ಈ ಸಂದರ್ಭವನ್ನು ದುಃಖಕರವಾಗಿರುವುದನ್ನಾಗಿ ಮಾಡಲು ಉದ್ದೇಶಿಸಿರಲಿಲ್ಲ. ಆತನ ಅಗಣಿತ ಅನುಗ್ರಹದ ದ್ವಾರವು ಅಗಲವಾಗಿ ತೆರೆಯಿತು, ಬಾಬ್‌ರವರು ತಿಳಿಸಿದ "ದೇವರೇ ಅವತರಿಸಿರುವಂತೆ ಮಾಡಿರುವ ಆತನೇ ತಾನೆಂದು" - ಬಹಾ'ಉ'ಲ್ಲಾರವರು ತನ್ನ ಸುತ್ತ ನೆರದವರಿಗೆ ಘೋಷಿಸಿಕೊಂಡರು. ಆಗ ದುಃಖವು ಮಿತಿಯಿಲ್ಲದ ಸಂತೋಷಕ್ಕೆ ದಾರಿ ಮಾಡಿಕೊಟ್ಟಿತು , ಹೃದಯಗಳು ಸಂತೋಷದಿಂದ ತುಂಬಿದವು ಮತ್ತು ಆತನ ಪ್ರೀತಿಯಿಂದ ಆತ್ಮಗಳು ಪ್ರಜ್ವಲಿತವಾದವು. ಏಪ್ರಿಲ್ ತಿಂಗಳ ಈ ಹನ್ನೆರಡು ದಿನಗಳನ್ನು ಎಲ್ಲೆಡೆಯು ರಿದ್ವಾನ್ ಹಬ್ಬ, ಬಹಾ'ಉ'ಲ್ಲಾರವರ ವಿಶ್ವಾವೃತ ಕಾರ್ಯೋದ್ದೇಶದ ಘೋಷಣೆಯ ವಾರ್ಷಿಕೋತ್ಸವವೆಂದು ಆಚರಿಸುವರು.


ಒಟ್ಟೋಮನ್ ಸಾಮ್ರಾಜ್ಯದ ರಾಜಧಾನಿ ಕಾನ್‌ಸ್ಟಂಟಿನೋಪಲ್ ಆಗಿತ್ತು. ಇಲ್ಲೂ ಕೂಡ ಕೇವಲ ನಾಲ್ಕು ತಿಂಗಳಲ್ಲಿ ಬಹಾ'ಉ'ಲ್ಲಾರವರ ವೈಯಕ್ತಿಕ ಆಕರ್ಷಣೆ ಮತ್ತು ಮಹಾ ವಿವೇಕವು ಹೆಚ್ಚು ಸಂಖ್ಯೆಯಲ್ಲಿ ಜನರನ್ನು ಆಕರ್ಷಿಸಿತು. ಬಹಾ'ಉ'ಲ್ಲಾರವರನ್ನು ಇನ್ನು ಇಲ್ಲಿ ಎಷ್ಟು ಮಾತ್ರಕ್ಕೂ ಇರಲು ಬಿಡಬಾರದು ಎಂದು ಮತಾಂಧ ಮುಸ್ಲಿಂ ಮತ ಪಂಡಿತರು ಗೊಣಗುಟ್ಟಿದರು ಮತ್ತು ಅಲ್ಲಿಯ ಅಧಿಕಾರಿಗಳ ಮನ ಒಲಿಸಿ ಏಡ್ರಿಯನೋಪಲ್ ಎಂಬ ನಗರಕ್ಕೆ ಗಡೀಪಾರು ಮಾಡಿದರು. ಏಡ್ರಿಯನೋಪಲ್‌ನಲ್ಲಿ ಬಹಾ'ಉ'ಲ್ಲಾರವರು ಪ್ರಪಂಚದ ರಾಜರಿಗೆ ಮತ್ತು ಆಡಳಿತಗಾರರಿಗೆ ಪತ್ರ ಬರೆದು ಅವರು ನಡೆಸುವ ದಮನಕಾರಿ ಪಥವನ್ನು ಬಿಟ್ಟು ಜನರ ಉನ್ನತಿಗೆ ಗಮನ ನೀಡಬೇಕೆಂದು ಕರೆ ಇತ್ತರು . ಆಗ ಬಹಾ'ಉ'ಲ್ಲಾರವರ ವಿರೋಧಿಗಳು ಇನ್ನೂ ಕ್ರೂರವಾದ ಶಿಕ್ಷೆ ನೀಡುವ ಯೋಜನೆಯೊಂದನ್ನು ತಯಾರು ಮಾಡಿದರು . ಬಹಾ'ಉ'ಲ್ಲಾರವರನ್ನು ಮತ್ತು ಅವರ ಕುಟುಂಬದವರನ್ನು ಸಾಮ್ರಾಜ್ಯದ ಅಂದಿನ ಅತಿ ಕೆಟ್ಟ ಸೆರೆವಾಸಿಗಳ ವಸಾಹತು ಆದ 'ಅಕ್ಕಾ' ಎಂಬ ಪ್ರದೇಶಕ್ಕೆ ಕಳುಹಿಸಿದರೆ , ಆ ಬಂದೀಖಾನೆಯುಳ್ಳ ನಗರದ ಕೆಟ್ಟ ಪರಿಸ್ಥಿತಿಯಿಂದಾಗಿ ಆತನು ನಿಜವಾಗಿಯೂ ಅಳಿದುಹೋಗುವನು," ಎಂದು ದೇವರೇ ಚಾಲನೆಯನ್ನು ನೀಡಿದ ಆ ಯೋಜನೆಯನ್ನು ನಿಲ್ಲಿಸಬಹುದೆಂದು ಸಣ್ಣ ಮನಸ್ಸಿನ ಆ ಜನ ಕಲ್ಪಿಸಿಕೊಂಡರು .

ಅಕ್ಕಾದಲ್ಲಿ ಬಹಾ'ಉ'ಲ್ಲಾರವರು ಅನುಭವಿಸಿದ ಕಷ್ಟಗಳು ಹೇಳಲು ಅಸಂಖ್ಯಾತವಾದವು. ಮೊದಲು ಒಂದು ಕೋಣೆಯಲ್ಲಿ ಅವರನ್ನು ಒಬ್ಬರನ್ನೇ ಕೂಡಿಹಾಕಲಾಯಿತು , ಅವರಿಗೆ ಪ್ರತಿಯೊಂದು ಸೌಕರ್ಯದಿಂದಲೂ ವಂಚಿತರನ್ನಾಗಿಸದ್ದರು ಮತ್ತು ಹಗಲಿರುಳು ಶತ್ರುಗಳಿಂದ ಸುತ್ತುವರಿಯಲ್ಪಟ್ಟಿದ್ದರು. ಆದರೆ ಸೆರೆಮನೆಯ ವಾತಾವರಣವು ಕ್ರಮೇಣ ಬದಲಾವಣೆಗೊಂಡಿತು . ಅಕ್ಕಾದ ಜನರು ಮತ್ತು ಅದರ ಸರಕಾರ ಅವರ ನಗರಕ್ಕೆ ಗಡೀಪಾರಾದ ಈ ಚಿಕ್ಕ ಗುಂಪಿನ ಬಹಾಯಿಗಳ ನಿರ್ದೋಷತ್ವದ ಮನವರಿಕೆಯಾಯಿತು. ಮತ್ತೊಮ್ಮೆ ಜನರು ಈ ವಿಶೇಷ ಗಣ್ಯ ಪುರುಷನ ಮಹಾ ಸ್ಥಾನದ ಅರಿವಿಲ್ಲದಿದ್ದರೂ , ಆತನ ವಿವೇಕ ಮತ್ತು ಪ್ರೀತಿಯಿಂದ ಆಕರ್ಷಿತರಾದರು. ಸುಮಾರು ಒಂಬತ್ತು ವರ್ಷಗಳ ನಂತರ ಆ ಸೆರೆಮನೆಯ ದ್ವಾರವು ಬಹಾ'ಉ'ಲ್ಲಾರವರಿಗೆ ಮತ್ತು ಅವರ ಅನುಯಾಯಿಗಳಿಗಾಗಿ ತೆರೆಯಿತು. **ಅವರ** ನೆಚ್ಚಿನ ಮಗನಾದ ಅಬ್ದುಲ್-ಬಹಾರವರು ತಮ್ಮ ತಂದೆಯು ವಾಸಿಸಲು ನಗರದ ಗೋಡೆಯ ಹೊರವಲಯದಲ್ಲಿ ಭವ್ಯವಾದ ಬಂಗಲೆಯೊಂದನ್ನು ಪಡೆಯುವಲ್ಲಿ ಸಮರ್ಥರಾದರು, ಮತ್ತು ಅಂತಿಮವಾಗಿ ಅಬ್ದುಲ್-ಬಹಾರವರು ಬಹಾ'ಉ'ಲ್ಲಾರವರು ತಮ್ಮ ಜೀವಿತಾವಧಿಯ ಹದಿಮೂರು ವರ್ಷಗಳನ್ನು ಶಾಂತಿ ಮತ್ತು ನೆಮ್ಮದಿಯಿಂದ ಕಳೆಯಲೆಂದು ಹಳ್ಳಿಯಲ್ಲಿ ಒಂದು ಮನೆಯನ್ನು ಬಾಡಿಗೆಗೆ ಪಡೆಯಲು ಸಾಧ್ಯವಾಯಿತು. ಈ ಮನೆಯನ್ನು ನಾವೀಗ ಬಹಜಿ ಎಂದು ಕರೆಯುತ್ತೇವೆ ಅಲ್ಲಿಯೇ ಅವರು 1892ರ ಮೇ ತಿಂಗಳಿನಲ್ಲಿ ತಮ್ಮ ಭವ್ಯತೆ ಮತ್ತು ವೈಭವ ಉತ್ತುಂಗದ ಶಿಖರದಲ್ಲಿದ್ದಾಗಲೇ ದೈವಾಧೀನರಾದರು.

ಬಹಾ'ಉ'ಲ್ಲಾರವರು ವಿಶ್ವಶಾಂತಿ ಹಾಗೂ ಸೌಹಾರ್ದತೆಯ ಪತಾಕೆಯನ್ನು ಹಾರಿಸಿದರು ಹಾಗೂ ದೇವರ ನುಡಿಯನ್ನು ಪ್ರಕಟಿಸಿದರು. ಅವರ ವಿರೋಧಿಗಳು ತಮ್ಮೆಲ್ಲಾ ಶಕ್ತಿಗಳನ್ನು ಒಗ್ಗೂಡಿಸಿದ್ದಾಗ್ಯೂ, ತೆಹರಾನಿನಲ್ಲಿ ಸರಪಳಿಯಿಂದ

ಬಂಧಿಸಲ್ಪಟ್ಟಿದ್ದಾಗ, ದೇವರೇ ಆಶ್ವಾಸನೆ ಇತ್ತಂತೆ, ಅವರೆಲ್ಲರ ಮೇಲೂ, **ಅವರು** ವಿಜಯ ಸಾಧಿಸಿದ್ದರು. **ಅವರ** ಜೀವಿತಾವಧಿಯಲ್ಲಿ **ಅವರ** ಸಂದೇಶವು ಸಾವಿರಾರು ಜನರ ಹೃದಯಗಳನ್ನು ನವೀಕರಿಸಿತು ಮತ್ತು ಆತನ ಪಥದಲ್ಲಿ ಜೀವವನ್ನೇ ತೆತ್ತರು. ಇಂದು ಪ್ರಪಂಚದಾದ್ಯಂತ ಅವರ ಸಂದೇಶವು ಪ್ರಸಾರಗೊಳ್ಳುತ್ತಿದೆ. ಒಂದು ವಿಶ್ವ ಧರ್ಮದಲ್ಲಿ ಮಾನವ ಜನಾಂಗವನ್ನು ಒಗ್ಗೂಡಿಸುವ ಬಹಾ'ಉ'ಲ್ಲಾರವರ ಅಂತಿಮ ಗುರಿ ಸಾಧನೆಯನ್ನು ಯಾವುದೂ ತಡೆಯಲಾರದು.

ಬಹಾ'ಉ'ಲ್ಲಾರವರ ಜೀವನದ ಕುರಿತಾಗಿನ ಮೇಲಿನ ವಿವರಗಳು ಸ್ವಲ್ಪ ದೀರ್ಘವಾಗಿರುವುದು. ಕೆಳಕಂಡ ಅಭ್ಯಾಸವನ್ನು ಮಾಡುವ ಮೊದಲು, ನೀವು ತಂಡದಲ್ಲಿ ಒಂದೊಂದೇ ಪ್ಯಾರಾವನ್ನು ಹಲವು ಬಾರಿ ಓದಿ, ವಿಷಯಗಳನ್ನು ಚೆನ್ನಾಗಿ ಕಲಿತು ನಿಮ್ಮದೇ ನುಡಿಗಳಲ್ಲಿ ಸುಲಭವಾಗಿ ಪ್ರಸ್ತುತಪಡಿಸಲು ಶಕ್ಯರಾಗುವವರೆಗೂ ಪರಸ್ಪರ ಪ್ರಶ್ನೆಗಳನ್ನು ಕೇಳಿರಿ. ಕೆಳಕಂಡ ನಕ್ಷೆಯು ಬಹಾವುಲ್ಲಾರವರ ಗಡೀಪಾರು ಹಾಗೂ ಮಾರ್ಗದುದ್ದಕ್ಕೂ ನಡೆದ ಘಟನೆಗಳು ನಿಮ್ಮ ಮನಸ್ಸಿಗೆ ತರಲು ನಿಮಗೆ ಸಹಕಾರಿಯಾಗಬಹುದು.




1. ಈ ಕೆಳಗೆ ನೀಡಿರುವ ಸ್ಥಳದಲ್ಲಿ, ಬಹಾಉಲ್ಲಾರವರ ಜೀವನದ ಅತಿಮುಖ್ಯ ಘಟನೆಗಳನ್ನು ಮೇಲಿನ ವಿವರಣೆಯಿಂದ ಕ್ರಮಪ್ರಕಾರವಾಗಿ ಬರೆಯುವುದು ನಿಮಗೆ ಸಹಾಯವಾಗಬಹುದು :

____________________________________________
____________________________________________
____________________________________________
____________________________________________
____________________________________________
____________________________________________
____________________________________________
____________________________________________

2. ಬಹಾ'ಉ'ಲ್ಲಾರವರ ಜೀವನದ ವಿಷಯಾಂಶದ ಸುತ್ತಲಿನ ಚರ್ಚೆಯಲ್ಲಿ ಸರಣಿಯೋಪಾದಿಯ ಘಟನೆಗಳಷ್ಟೇ ಅಲ್ಲದೆ ಹಲವಾರು ಪರಿಕಲ್ಪನೆಗಳಿಗೂ ಒತ್ತು ನೀಡಬೇಕಾದುದು ಅಗತ್ಯ. ನಿರ್ದಿಷ್ಟವಾಗಿ ಪ್ರಮುಖವಾಗಿರುವುದು **ಆತ**ನು ಮಾನವತೆಯ ಮೇಲಿನ ಪ್ರೀತಿಯಿಂದ ಅನುಭವಿಸಿದ ನೋವು ಮತ್ತು ಆತನ ಧರ್ಮವು ವಿರೋಧವಿದ್ದರೂ ಸಾಧಿಸಿದ ಅಸಮಾನ್ಯವಾದ ವಿಜಯಗಳ ಮೇಲೆ ಪ್ರತಿಫಲಿಸುವುದು. ಕೆಳಕಂಡ ನುಡಿಗಳು ನಮ್ಮ ಮನಸ್ಸು ಮತ್ತು ಹೃದಯಗಳಲ್ಲಿ ಅಚ್ಚೊತ್ತಿದಂತಿರಲಿ :

**"ಮಾನವಕುಲವೇ ತನ್ನ ದಾಸ್ಯದಿಂದ ಬಿಡುಗಡೆ ಹೊಂದುವಂತಾಗಲು ಸನಾತನ ಸೌಂದರ್ಯನು ಸರಪಣಿಗಳಿಂದ ತನ್ನನ್ನು ಬಿಗಿಸಿಕೊಳ್ಳಲು ಒಪ್ಪಿರುವನು ಮತ್ತು ಇಡೀ ಪ್ರಪಂಚವು ನಿಜವಾದ ಸ್ವಾತಂತ್ರ್ಯವನ್ನು ಪಡೆಯಲೆಂದು ಮಹಾ ಅಭೇದ್ಯವಾದ ಈ ಕಾರಾಗೃಹದಲ್ಲಿ ಬಂಧಿಯಾಗಿರಲು ಒಪ್ಪಿಕೊಂಡಿರುವನು. ಈ ಭೂಮಿಯಲ್ಲಿರುವ ಜನರೆಲ್ಲರೂ ಶಾಶ್ವತವಾದ ಸಂತೋಷ ಹಾಗು ಆನಂದವನ್ನು ಪಡೆಯಲೆಂದು, ದುಃಖದ ಪಾತ್ರೆಯಲ್ಲಿ ಇರುವುದೆಲ್ಲವನ್ನೂ ಪೂರ್ತಿಯಾಗಿ ಕುಡಿದಿರುವನು. ಅತ್ಯಂತ ದಯಾಮಯನೂ, ಕರುಣಾಮಯಿಯೂ ಆದ ನಿಮ್ಮ ಪ್ರಭುವಿನ ದಯೆಯೇ ಇದು. ಭಗವಂತನ ಏಕತೆಯಲ್ಲಿ ದೃಢ ವಿಶ್ವಾಸವುಳ್ಳ ಭಕ್ತರೇ, ನೀವೆಲ್ಲರೂ ಶ್ರೇಷ್ಠ ಸ್ಥಿತಿಯಲ್ಲಿರಬೇಕೆಂದು ನಾವು ಹೀನ ಸ್ಥಿತಿಯಲ್ಲಿ ಇರಲು ಒಪ್ಪಿರುವೆವು. ಅಲ್ಲದೇ ನೀವು ಚೆನ್ನಾಗಿ ಬಾಳಿ ಬದುಕಲೆಂದು ನಾವು ಬಹು ವಿಧವಾದ ಕಷ್ಟಗಳನ್ನು ಅನುಭವಿಸಿರುವೆವು. ಇಡೀ ಪ್ರಪಂಚವನ್ನು ನವೀಕರಿಸಲು ಬಂದಿರುವವನನ್ನು ದೇವರೊಡನೆ ಪಾಲು ಮಾಡಿಕೊಂಡಿರುವ ಜನರು ಹೇಗೆ ಆತನನ್ನು ಅತ್ಯಂತ ನಿರ್ಗತಿಕವಾದ ನಗರಗಳಲ್ಲಿ ವಾಸಿಸುವಂತೆ ಮಾಡಿರುವರು!"[10]**

3. ಬಹಾ'ಉ'ಲ್ಲಾರವರ ಸಂಕಷ್ಟಗಳ ಬಗ್ಗೆ ನಾವು ಮಾತನಾಡುವಾಗ ಬಹಾ'ಉ'ಲ್ಲಾರವರನ್ನು ಅವರ ವಿರೋಧಿಗಳೆದುರು ನಿಸ್ಸಾಹಾಯಕರನ್ನಾಗಿ ಬಿಂಬಿಸಬಾರದೆಂದು ನಾವು ದೃಢವಾಗಿ ತಿಳಿದಿರಬೇಕು. ಮಾನವತೆಯ ಬಿಡುಗಡೆಗಾಗಿ ಅವರು ತಮ್ಮನ್ನು ಸರಪಳಿಗಳಿಂದ ಬಂಧಿಸಲ್ಪಡಲು ಒಪ್ಪಿಕೊಂಡಿದ್ದರು. ಅವರ ಜೀವನ ಚರಿತ್ರೆಯು ಹಲವಾರು ಕಷ್ಟಗಳಿಂದ ತುಂಬಿದ್ದರೂ. ಅದು ಸಾರದಲ್ಲಿ ಮಹತ್ತರ ವಿಜಯವಾಗಿದೆ. ಬಹಾ'ಉ'ಲ್ಲಾರವರ ಪ್ರಸ್ತುತ ಜ್ಞಾನದಿಂದ ಅವರ ಕಷ್ಟ ಮತ್ತು ವಿಜಯಗಳ ಕುರಿತು ಅವರ ಜೀವನದ ಬಗ್ಗೆ ನಿಮ್ಮ ತಂಡದ ಶಿಕ್ಷಕರ ಸಹಾಯದಿಂದ ಒಂದು ಚಿಕ್ಕ ಭಾಷಣವನ್ನು ತಯಾರಿಸಬಲ್ಲಿರಾ? ಈ ಕೆಳಕಂಡ ಪ್ರಶ್ನೆಗಳು ನಿಮಗೆ ಸಹಕಾರಿಯಾಗಬಹುದು :

ಅ ) ಬಹಾ'ಉ'ಲ್ಲಾರವರು ಏತಕ್ಕಾಗಿ ಸರಪಣಿಗಳಿಂದ ಬಿಗಿಯಲ್ಪಡಲು ಒಪ್ಪಿದರು?

(ಆ ) ಬಹಾ'ಉ'ಲ್ಲಾರವರು ಸೆರೆಯಾಳಗಲು ಏತಕ್ಕೆ ಒಪ್ಪಿದರು?

______________________________________________________________________________

______________________________________________________________________________

(ಇ )ಬಹಾ'ಉ'ಲ್ಲಾರವರು ದುಃಖದ ಬಟ್ಟಲನ್ನು ಏಕೆ ಕುಡಿದರು?

______________________________________________________________________________

______________________________________________________________________________

______________________________________________________________________________

(ಈ )ಬಹಾ'ಉ'ಲ್ಲಾರವರು ಅಪಮಾನಿತರಾಗಲು ಏಕೆ ಒಪ್ಪಿದರು?

______________________________________________________________________________

______________________________________________________________________________

______________________________________________________________________________

(ಉ )ಬಹಾ'ಉ'ಲ್ಲಾರವರು ಇಷ್ಟೆಲ್ಲಾ ಕಷ್ಟಗಳನ್ನು ಏತಕ್ಕಾಗಿ ಸಹಿಸಿದರು?

______________________________________________________________________________

______________________________________________________________________________

______________________________________________________________________________

(ಊ) ಬಹಾ'ಉ'ಲ್ಲಾರವರು ಕಷ್ಟಗಳನ್ನು ಸ್ವೀಕರಿಸಿದರು ಏಕೆಂದರೆ ಅವರು ಬೇರೇನು ಮಾಡಲು ಅಸಮರ್ಥರಾಗಿದ್ದರೇ?

______________________________________________________________________________

______________________________________________________________________________

(ಋ) ಬಹಾ'ಉ'ಲ್ಲಾರವರು ತಮ್ಮ ಶತ್ರುಗಳ ಮುಂದೆ ಬಲಹೀನವಾಗಿಲ್ಲದಿದ್ದರೆ, ಏಕೆ ಕಷ್ಟಪಡಲು ಒಪ್ಪಿದರು?

______________________________________________________________________________

______________________________________________________________________________

## ವಿಭಾಗ-7

ಸಾಂಚೇಜಸ್ ರವರ ಮನೆಗೆ ನೀಡಿದ ಅಲ್ಯಾಂಡ್ರಾಳ ಎರಡನೆಯ ಭೇಟಿಯೂ ಮೊದಲಿನದರಷ್ಟೇ ಆನಂದದಾಯಕವಾಗಿತ್ತು. ಶ್ರೀಮತಿ ಮತ್ತು ಶ್ರೀ ಸಾಂಚೇಜಸ್ ರವರು ಈಗಾಗಲೇ ಬಹಾ'ಉ'ಲ್ಲಾರವರ ಜೀವನದ ಕಥೆಗೆ ಪರಿಚಿತರಾಗಿದ್ದರು, ಆದರೂ ಅವರು ಅಲ್ಯಾಂಡ್ರಾಳ ಪ್ರಸ್ತುತಪಡಿಸುವಿಕೆಯಿಂದ ಹೆಚ್ಚಿನದನ್ನು ಕಲಿಯಲು ಸಂತೋಷ ಪಟ್ಟಿದ್ದರು ಮತ್ತು ಬಹಾ'ಉ'ಲ್ಲಾರವರ ಕಷ್ಟಗಳು ಅವರ ಮನ ಮುಟ್ಟಿತು. ಒಂದು ವಿಚಾರದ ಸಮಯದಲ್ಲಿ "ದೇವರ ಅವತಾರ ಪುರುಷರು ನಾಯಕತ್ವ ಮತ್ತು ಪ್ರಾಪಂಚಿಕ ಅಧಿಕಾರದ ದಾಹ ಉಳ್ಳವರ ಕೈಯಲ್ಲಿ ಯಾವಾಗಲೂ ಸಂಕಷ್ಟಕ್ಕೆ ಒಳಗಾಗುವರಎಂದು ಎನಿಸುತ್ತದೆ" ಎಂದು ಶ್ರೀಮತಿ ಸಾಂಚೇಜಸ್ ಹೇಳಿದರು . ನಿಮಗೂ ತಿಳಿದಿರುವಂತೆ ಅಲ್ಯಾಂಡ್ರಾಳು ನೀವು ನಿಮ್ಮ ಹಿಂದಿನ ವಿಭಾಗದ ಅಧ್ಯಯನದಲ್ಲಿ ಕಂಠಪಾಠ ಮಾಡಿದ್ದನ್ನು- ಅವರೊಂದಿಗೆ ಹಂಚಿಕೊಳ್ಳಲು ಸರಿಯಾದುದೆಂದು ನಿರ್ಧರಿಸಿದಳು. ಅದರಲ್ಲಿ ಮಾನವತೆಗಾಗಿ ತಾವು ಸಲ್ಲಿಸಿದ ಸಂಕಷ್ಟಗಳು ಅದರಿಂದ ನಾವು ದಮನದಿಂದ ಮುಕ್ತರಾಗಿ ಎಂದೆಂದೂ ಇರುವ ಸಂತೋಷವನ್ನು ಹೊಂದಬೇಕೆಂದು ಬಹಾ'ಉ'ಲ್ಲಾರವರು ಹೇಳಿರುವರು. ಆ ದಿನದ ಸಂವಾದದಿಂದ ಮೂವರು ಮಿತ್ರರೂ ಉತ್ತೇಜಿತರಾಗಿದ್ದರು.

ತನ್ನ ಮುಂದಿನ ಭೇಟಿಯ ಕುರಿತು ಆಲೋಚಿಸುತ್ತಾ, ಅಲ್ಯಾಂಡ್ರಾಳು ಅಬ್ದುಲ್ ಬಹಾರವರ ಸ್ಥಾನದ ಕುರಿತಾದ ಚರ್ಚೆಯು ಒಂದು ಸ್ವಾಭಾವಿಕ ವಿಷಯವೆಂದು ತಕ್ಷಣ ನಿರ್ಧರಿಸಿದಳು. ಚರ್ಚೆಯಲ್ಲಿ ಈ ಕೆಳಕಂಡ ಅಂಶಗಳನ್ನು ತರುವಂತೆ ಖಚಿತ ಪಡಿಸಿಕೊಳ್ಳುವಳು:

ಬಹಾ'ಉ'ಲ್ಲಾರವರ ಹಿರಿಯ ಮಗನಾದ ಅಬ್ದುಲ್-ಬಹಾರವರು ಮಾನವ ಇತಿಹಾಸದಲ್ಲೇ ಒಂದು ವಿಶಿಷ್ಟ ವ್ಯಕ್ತಿತ್ವ ಮತ್ತು ಹಿಂದಿನ ಯಾವ ಧರ್ಮದಲ್ಲೂ ಇಂತಹ ಅನುಗ್ರಹಿತ ವ್ಯಕ್ತಿತ್ವವಿರಲಿಲ್ಲ. ಅವರು ಬಾಲ್ಯದಲ್ಲಿ ತಮ್ಮ ತಂದೆಯ ದೈವಸ್ಥಾನವನ್ನು ಗುರುತಿಸಿದ್ದರು ಹಾಗೂ ಅವರ ಸಂಕಷ್ಟಗಳಲ್ಲಿ, ಗಡಿಪಾರುಗಳಲ್ಲಿ ಭಾಗಿಯಾಗಿದ್ದರು. ಬಹಾ'ಉ'ಲ್ಲಾರವರು ತಮ್ಮ ಕಾಲಾನಂತರ ಬಹಾಯಿ ಸಮುದಾಯವನ್ನು ಅಬ್ದುಲ್-ಬಹಾರವರ ಗಮನ ಹಾಗೂ ರಕ್ಷಣೆಯಲ್ಲಿ ಇರುವಂತೆಯೂ ಮಾಡಿರುವರು. ಇದೊಂದು ವರ್ಣಿಸಲು ಅಸಾಧ್ಯವಾದಂತಹ ಅನುಗ್ರಹ ಮಾನವತೆಗೆ ಬಹಾವುಲ್ಲಾರವರು ತಮ್ಮ ಮಹತ್ತರ ದರ್ಶನವನ್ನು ನೀಡಿದ್ದೇ ಅಲ್ಲದೆ **ಅವರು** ತಮ್ಮ ಸ್ವಂತ ಮಗನನ್ನು ನೀಡಿದರು, ಯಾರ ಜ್ಞಾನ ಮತ್ತು ವಿವೇಕದ ಮೂಲಕ ಇಡೀ ಮಾನವತೆಯೇ ಮಾರ್ಗದರ್ಶಿಸಲ್ಪಡುವುದು ಮತ್ತು ಪ್ರಕಾಶಿಸಲ್ಪಡುವುದು ಎಂದು **ಅವರು** ಹೇಳಿರುವರು.

ಅಬ್ದುಲ್-ಬಹಾರವರ ಜೀವನ ಮತ್ತು ಅವರ ನುಡಿಗಳ ಅಧ್ಯಯನ ಮಾಡುವಾಗ ನಾವು-ಅವರು ಈ ಪ್ರಕಟಣೆಯಲ್ಲಿ ಹೊಂದಿರುವ ಅನನ್ಯವಾದ ಸ್ಥಾನದ ಬಗ್ಗೆ ಅಂತರ್ದೃಷ್ಟಿಯನ್ನು ಪಡೆಯುವೆವು. ಈ ಸ್ಥಾನದ ಮೂರು ಅಂಶಗಳನ್ನು ನಾವು ನೆನಪಿನಲ್ಲಿಡಬೇಕಾದುದು ಮುಖ್ಯವಾಗಿರುವುದು.

ಮೊದಲಿಗೆ, ಅಬ್ದುಲ್-ಬಹಾರವರು ಬಹಾ'ಉ'ಲ್ಲಾರವರ ಒಡಂಬಡಿಕೆಯ ಕೇಂದ್ರಬಿಂದುವಾಗಿರುವರು. ಬಹಾ'ಉ'ಲ್ಲಾರವರು ತಮ್ಮ ಅನುಯಾಯಿಗಳ ಜೊತೆ ಮಾಡಿದ ಒಡಂಬಡಿಕೆಯು ಅವರ ಹೃದಯಗಳನ್ನು ಆ ಕೇಂದ್ರಬಿಂದುವಿನತ್ತ ತಿರುಗಿಸುವುದಲ್ಲದೆ ಅದಕ್ಕೆ ಸಂಪೂರ್ಣವಾಗಿ ನಿಷ್ಠೆಯಿಂದಿರಬೇಕೆಂದು ತಿಳಿಸಿರುವರು. ಅಬ್ದುಲ್ ಬಹಾರವರು ತಮ್ಮ ಉಯಿಲು ಮತ್ತು ಮರಣ ಶಾಸನದಲ್ಲಿ ಶೋಘಿ ಎಫೆಂಡಿಯವರನ್ನು ಧರ್ಮರಕ್ಷಕರು ಎಂದು ಹೆಸರಿಸಿ, ತಮ್ಮ ಮರಣಾನಂತರ ಎಲ್ಲರೂ ಆ ಕೇಂದ್ರದತ್ತ ತಿರುಗಬೇಕೆಂದು ತಿಳಿಸಿದ್ದಾರೆ. ಈ ದಿನದಲ್ಲಿ ಈ ಕೇಂದ್ರವು ವಿಶ್ವನ್ಯಾಯ ಮಂದಿರವಾಗಿದೆ, ಇದು ಬಹಾ'ಉ'ಲ್ಲಾರವರ ನಿರ್ದಿಷ್ಟ ವಿಧಾಯಕದ ಅನುಸಾರವಾಗಿ ಹಾಗು ಅಬ್ದುಲ್ ಬಹಾ ಮತ್ತು ಧರ್ಮರಕ್ಷಕರ ಸ್ಪಷ್ಟ ನಿರ್ದೇಶನದಿಂದ ಸ್ಥಾಪಿಸಲ್ಪಟ್ಟಿದೆ. ಈ ಒಡಂಬಡಿಕೆಯ ಶಕ್ತಿಯು ಬಹಾಯಿ ಸಮುದಾಯವನ್ನು ಪರಸ್ಪರ ಒಂದುಗೂಡಿಸಿ ವಿಭಜನೆ ಮತ್ತು ಅವನತಿಯಿಂದ ರಕ್ಷಿಸುತ್ತಿರುವುದು.

ಎರಡನೆಯದಾಗಿ, ಅಬ್ದುಲ್-ಬಹಾರವರು ಬಹಾ'ಉ'ಲ್ಲಾರವರ ಬರಹಗಳ ತಪ್ಪು ಮಾಡದ ವ್ಯಾಖ್ಯಾನಕಾರರಾಗಿರುವರು. ಬಹಾ'ಉ'ಲ್ಲಾರವರ ದರ್ಶನವು ಅಷ್ಟು ಅಗಾಧವಾದುದು, ಆತನ ಪ್ರತಿಯೊಂದು ಹೇಳಿಕೆಗಳು ಮಹತ್ತರವಾದ ಅರ್ಥವುಳ್ಳದ್ದಾಗಿದೆ. ಅದಕ್ಕಾಗಿ ತಮ್ಮ ನಂತರ ವ್ಯಾಖ್ಯಾನಕಾರರೊಬ್ಬರ ಅಗತ್ಯವನ್ನು ಕಂಡುಕೊಂಡಿದ್ದರು, ಅವರನ್ನು ಸ್ವತಃ **ತಾವೇ** ಸ್ಫೂರ್ತಿಗೊಳಿಸುತ್ತಿದ್ದರು. ಈ ರೀತಿ ಮುಂಬರುವ ಪೀಳಿಗೆಯ ಮಾನವತೆಯು ಅಬ್ದುಲ್-ಬಹಾರವರ ಅಸಂಖ್ಯಾತ ಶಾಸನಗಳು ಮತ್ತು ಆತನ ಭಾಷಣಗಳ ಅಧಿಕೃತ ಭಾಷಾಂತರಗಳ ಮೂಲಕ ಬಹಾ'ಉ'ಲ್ಲಾರವರ ಬೋಧನೆಗಳ ವ್ಯಾಖ್ಯಾನವನ್ನು ಅರ್ಥಮಾಡಿಕೊಳ್ಳುವುದು. ಅಬ್ದುಲ್-ಬಹಾರವರ ನಂತರ ಬಹಾ'ಉ'ಲ್ಲಾರವರ ಬೋಧನೆಗಳ ವ್ಯಾಖ್ಯಾನಕಾರರು ಶೋಘಿ ಎಫೆಂಡಿಯವರಾಗಿದ್ದರು. ಅವರೊಂದಿಗೆ ವ್ಯಾಖ್ಯಾನ ನೀಡುವ ಅಧಿಕಾರವು ಮುಗಿಯಿತು, ಮತ್ತು ಬಹಾ'ಉ'ಲ್ಲಾರವರ ಯುಗ ಧರ್ಮದ ಉಳಿದ ಕಾಲದಲ್ಲಿ ಅವರ ನುಡಿಗಳನ್ನು ವ್ಯಾಖ್ಯಾನಿಸುವ ಅಧಿಕಾರವು ಯಾರಿಗೂ ಇರುವುದಿಲ್ಲ.

ಈ ಹಿಂದೆ, ಪ್ರತಿಯೊಂದು ಧರ್ಮವೂ ವಿಭಜನೆಯಾಗುವಂತಹ ಗಂಡಾಂತರಕ್ಕೆ ಸಿಲುಕಿದುದು ಪವಿತ್ರಗ್ರಂಥಗಳ ವಾಕ್ಯಾಂಶಗಳ ವಿಭಿನ್ನ ರೀತಿಯ ವ್ಯಾಖ್ಯಾನಗಳೇ ಕಾರಣವಾಗಿತ್ತು. ಆದರೆ ಈ ಧರ್ಮದಲ್ಲಿ ಬಹಾ'ಉ'ಲ್ಲಾರವರ ಬರಹಗಳ ಅರ್ಥದ ಬಗ್ಗೆ ಅನಿಶ್ಚಿತತೆ ಮೂಡಿದರೆ ಅಬ್ದುಲ್ ಬಹಾರ ಅಥವಾ ಶೋಘಿ ಎಫೆಂಡಿಯವರ ವ್ಯಾಖ್ಯಾನದತ್ತ ತಿರುಗಬೇಕು. ಅನಿಶ್ಚಿತತೆಯು ಇನ್ನೂ ಉಳಿದಿದ್ದರೆ, ವಿವರಣೆಗಾಗಿ ವಿಶ್ವ ನ್ಯಾಯ ಮಂದಿರವನ್ನು ಕೇಳಿಕೊಳ್ಳಬಹುದು. ಹೀಗೆ, ಬೋಧನೆಗಳ ಅರ್ಥಗಳ ಗೊಂದಲಕ್ಕೆ ಯಾವ ಆಸ್ಪದವೂ ಇಲ್ಲವಾಗಿದೆ ಮತ್ತು ಧರ್ಮದ ಐಕ್ಯತೆಯು ರಕ್ಷಿಸಲ್ಪಟ್ಟಿದೆ.

ಮೂರನೆಯದಾಗಿ, ಅಬ್ದುಲ್-ಬಹಾರವರು ತಮ್ಮ ತಂದೆಯ ಬೋಧನೆಗಳ ಪರಿಪೂರ್ಣ ಆದರ್ಶ ಪುರುಷರಾಗಿರುವರು. ಅಂತಹ ಪರಿಪೂರ್ಣತೆಯ ಹಂತಕ್ಕೆ ನಾವು ಎಂದಿಗೂ ತಲುಪಲಾಗದಿದ್ದರೂ, ನಾವು ಯಾವಾಗಲೂ ನಮ್ಮ ಕಣ್ಣು ಮುಂದೆ **ಅವರನ್ನು** ಇಟ್ಟುಕೊಳ್ಳಬೇಕು ಮತ್ತು **ಆತನ** ಆದರ್ಶವನ್ನು ಪಾಲಿಸಲು ಪ್ರಯತ್ನಿಸಬೇಕಾದುದು ಅಗತ್ಯ. **ಬರಹಗಳಲ್ಲಿ** ಪ್ರೀತಿಯ ವಿಷಯದ ಬಗ್ಗೆ ನಾವು ಓದುವಾಗ, ಅಬ್ದುಲ್-ಬಹಾರವರತ್ತ ತಿರುಗಬಹುದು ಮತ್ತು ಪ್ರೀತಿ ಮತ್ತು ದಯೆಯ ಸಾರ ಸತ್ವವನ್ನೇ ನಾವು ಕಾಣುವೆವು. ನಾವು ಪರಿಶುದ್ಧತೆ, ನ್ಯಾಯ, ನೈತಿಕತೆ, ಸಂತೋಷ ಮತ್ತು ಉದಾರತೆಯ ಬಗ್ಗೆ ಓದುವಾಗ, ಅವರತ್ತ ತಿರುಗಿ, ಅವರ ಜೀವನದ ಬಗ್ಗೆ ಆಲೋಚಿಸಿದಾಗ ಯಾವ ರೀತಿಯಲ್ಲಿ ಅವರು ಗುಣಗಳನ್ನು ಅತ್ಯಂತ ಪರಿಪೂರ್ಣತೆಯಿಂದ ಪ್ರದರ್ಶಿಸಿದ್ದರೆಂಬುದನ್ನು ನಾವು ಕಾಣುವೆವು.

ಅಬ್ದುಲ್ ಬಹಾರವರ ಜೀವನದ ಗುರುತೇ, ಸ್ವಾಭಾವಿಕವಾಗಿಯೇ ಅವರ ಸೇವಾ ಭಾವನೆಯಾಗಿತ್ತು. 'ಅಬ್ದುಲ್ ಬಹಾ' ಹೆಸರಿನ ಅರ್ಥವೇ "ಬಹಾನ ಸೇವಕ" ಎಂದು ಮತ್ತು ಅವರು ತಮಗೆ ನೀಡಿದ ಬಿರುದುಗಳೆಲ್ಲದರಲ್ಲಿ ಇದನ್ನು ಮಾತ್ರ ಆಶಿಸಿದ್ದರು. ಈ ಕೆಳಕಂಡ ಅಬುಲ್-ಬಹಾರವರ ನುಡಿಗಳು ಸೇವೆಗಾಗಿ ಅವರ ಅದಮ್ಯ ಕಾತುರತೆಯನ್ನು ವ್ಯಕ್ತಪಡಿಸುವುದು :

**" ನನ್ನ ಹೆಸರು ಬಹಾನ ಸೇವಕ, ನನ್ನ ವಿದ್ಯಾಭ್ಯಾಸ ಬಹಾನ ಸೇವಕ, ನನ್ನ ಅಸ್ತಿತ್ವ ಬಹಾನ ಸೇವಕ. ನನ್ನ ಹೊಗಳಿಕೆಯೇ ಬಹಾನ ಸೇವಕ, ಪರಿಪೂರ್ಣ ಸೌಂದರ್ಯಕ್ಕೆ ದಾಸನಾಗಿರುವುದೇ ನನ್ನ ವೈಭವ ಮತ್ತು ಪ್ರಕಾಶಿಸುವ ಮುಕುಟ. ಇಡೀ ಮಾನವ ಜನಾಂಗಕ್ಕೆ ಸೇವೆ ಸಲ್ಲಿಸುವುದೇ ನನ್ನ ಅದಮ್ಯ ಧರ್ಮ...... ಹೆಸರು, ಬಿರುದು, ಹೇಳಿಕೆ ಅಥವಾ ಹೊಗಳಿಕೆ ನನಗ್ಯಾವುದೂ ಇಲ್ಲ, ಮತ್ತುಎಂದಿಗೂ ಇರುವುದಿಲ್ಲ, ಬಹಾನ ಸೇವಕನಾಗಿರದ ಹೊರತು ಮತ್ತೇನೂ ಅಲ್ಲ. ಇದು ನನ್ನ ಆಶಯ, ಇದುವೇ ನನ್ನ ಅತಿದೊಡ್ಡ ಅಭಿಲಾಷೆ, ಇದು ನನ್ನ ಶಾಶ್ವತ ಜೀವನ, ಇದುವೇ ನನ್ನ ಕೊನೆಯಿಲ್ಲದ ಎಂದೆಂದಿಗೂ ಬಾಳುವ ವೈಭವ. "[11]**

ಸ್ಪಷ್ಟವಾಗಿ ಅಲ್ಯಾಂಡ್ರಾಳು ಸಾಂಚೇಜೆಸ್ ರ ಮುಂದಿನ ಭೇಟಿಯಲ್ಲಿ ಅವರೊಂದಿಗೆ ಹಂಚಿಕೊಳ್ಳುವ ಯೋಜನೆಯು ಒಂದು ವಿಶಿಷ್ಟ ವ್ಯಕ್ತಿತ್ವವನ್ನು ಪರಿಚಯಿಸುವುದಾಗಿದೆ; ಅಬ್ದುಲ್-ಬಹಾರವರು ಈ ಪ್ರಕಟಣೆಯಲ್ಲಿ ನಿರ್ವಹಿಸಿದ ಸ್ಥಾನದ ಮೆಚ್ಚುಗೆಯು ಮುಂದಿನ ವರ್ಷಗಳಲ್ಲಿ ಇನ್ನೂ ಮುಂದುವರೆದು ಬೆಳೆಯುವಂತೆ ಯೋಜನೆಯನ್ನು ಸ್ಪಷ್ಟ ಮಾಡಿಕೊಂಡಿದ್ದಳು.

ಸ್ವಯಂ ನಿಮ್ಮದೇ ಜೀವನದಲ್ಲಿ ಸೇವಾ ಪಥದಲ್ಲಿ ಸಾಗುವಾಗ, ಆತನ ಉದಾಹರಣೆಗಳು ನಿಮ್ಮ ಮನಸ್ಸಿಗೆ ಬರುವ ಹಾಗೂ ಆತನ ನುಡಿಗಳ ಮೇಲೆ ಪ್ರತಿಫಲಿಸುವ ಅನೇಕ ಅವಕಾಶಗಳನ್ನು ಹೊಂದುವಿರಿ. ಹಿಂದಿನ ವಿಭಾಗಗಳಲ್ಲಿ ಈಗಾಗಲೇ ನೀವು ಆತನ ಹಲವು ಹೇಳಿಕೆಗಳಿಗೆ ಪರಿಚಿತರಾಗಿರುವಿರಿ, ಅವರು ತಮ್ಮ ಶಾಸನಗಳಲ್ಲಿ ಮತ್ತು ಸಾರ್ವಜನಿಕ ಭಾಷಣಗಳಲ್ಲಿ ನೀಡಿರುವ ವಿಚಾರಗಳನ್ನು ವ್ಯಕ್ತಪಡಿಸಿದಂತೆಯೇ ನೀವು ಕಲಿಯಬೇಕೆಂದು ಪ್ರೋತ್ಸಾಹಿಸುತ್ತೇವೆ. ಈಗ ನೀವು ಆತನ ಸ್ಥಾನದ ಬಗ್ಗೆ ಪ್ರಸ್ತುತಿ ಮಾಡಿರುವುದನ್ನು ನಿಮ್ಮ ತಂಡದ ಇತರ ಸದಸ್ಯರೊಂದಿಗೆ ಮೇಲಿನ ವಾಕ್ಯದ ಮುಖ್ಯ ಅಂಶಗಳನ್ನು ಸ್ಪಷ್ಟವಾಗಿ ಹೇಳಲು ಅಭ್ಯಾಸ ಮಾಡಿರಿ. ಸೇವಾ ಪಥದಲ್ಲಿ ಸಾಗುವುದನ್ನು ಮುಂದುವರಿಸಿದಂತೆ ಉಲ್ಲೇಖದಲ್ಲಿನ ನುಡಿಗಳ ಮೇಲೆ ಪ್ರತಿಫಲಿಸುವುದರಿಂದ ನಿಮ್ಮ ಪ್ರಯತ್ನವು ಸ್ಫೂರ್ತಿ ಪಡೆಯುವುದು.

# ವಿಭಾಗ 8

ಅಲ್ಯಾಂಡ್ರಾಳ ಮನಸ್ಸಿನಲ್ಲಿ ಒಂದು ಪ್ರಶ್ನೆಯು ಅವಳು ಶ್ರೀಮತಿ ಮತ್ತು ಶ್ರೀ ಸಾಂಚೇಜಸ್ ರವರನ್ನು ಭೇಟಿಯಾಗಲು ಪ್ರಾರಂಭಿಸಿದಾಗಿನಿಂದಲೂ ಉದ್ಭವಿಸಿತ್ತು, ಅದೆಂದರೆ ಯಾವ ವಿಷಯಾಂಶಗಳು ಅವರೊಡನೆ ಸಂಭಾಷಿಸಿದಾಗ ಅವರು ನೆರೆಯಹೊರೆಯದಲ್ಲಿ ಸಮುದಾಯ ರಚನೆಯ ಕಾರ್ಯದಲ್ಲಿ ದೃಢವಾಗಿ ಕ್ರಿಯಾಶೀಲ ಅಗ್ರೇಸರರಾಗಬಹುದೆಂಬುದೇ ಆಗಿತ್ತು. ಒಂದು ಕಡೆ ಅವಳು ಪ್ರಾರ್ಥನೆ, ಆತ್ಮದ ಜೀವನ, ಮತ್ತು ದೇವರ ಪ್ರೀತಿಯಲ್ಲಿ ದೃಢತೆಯ ವಿಷಯಗಳ ಬಗ್ಗೆ ಅವರೊಡನೆ ಚರ್ಚಿಸಬೇಕೆಂದು ಆಶಿಸಿದ್ದಳು ಇದರಿಂದ ಅವರ ಆಧ್ಯಾತ್ಮಿಕ ಜೀವನದ ಅಡಿಪಾಯವು ನಿರಂತರವಾಗಿ ಸದೃಢಗೊಳ್ಳಲಿ ಎಂದು. ಮತ್ತೊಂದು ಕಡೆ, ಕ್ರಮವಾಗಿ ಬೆಳೆಯುತ್ತಿರುವ ಸಮುದಾಯದ ಒಂದು ದೃಷ್ಟಿಕೋನವನ್ನು ಅವರು ಹೊಂದಲಿ ಎಂಬುದು ಮುಖ್ಯವಾದುದಾಗಿತ್ತು ಹಾಗೂ ಅದನ್ನು ಸಾಕಾರಗೊಳಿಸುವಲ್ಲಿ ಅವರು ಅಮೂಲ್ಯ ಕೊಡುಗೆಯನ್ನು ನೀಡಬಹುದು ಎಂಬುದನ್ನು ತಿಳಿದುಕೊಳ್ಳಬೇಕಗಿತ್ತು. ಶ್ರೀಮತಿ ಮತ್ತು ಶ್ರೀ ಸಾಂಚೇಜಸ್ ರವರೊಂದಿಗೆ ಅಬ್ದುಲ್-ಬಹಾರವರ ಸ್ಥಾನದ ಬಗ್ಗೆ ಸಂಭಾಷಿಸುವಾಗ ಅಲ್ಯಾಂಡ್ರಾಳು ತನ್ನ ಮುಂದಿನ ಭೇಟಿಯಲ್ಲಿ ಮಾತನಾಡುವ ವಿಷಯಾಂಶದ ಬಗ್ಗೆ ಕ್ರಮೇಣ ಗ್ರಹಿಸಿದಳು. "ಧರ್ಮದ ಉದ್ದೇಶವು ಜನರನ್ನು ಒಗ್ಗೂಡಿಸುವುದು ಎಂಬುದರ ಸ್ಪಷ್ಟತೆ ಅವರಿಗಿರುವುದು" ಎಂದ ಯೋಚಿಸಿದಳು. ಆದುದರಿಂದ ಹೇಗೆ "ಒಂದು ಐಕ್ಯತೆಯ ಸಮುದಾಯವನ್ನು ರಚಿಸುವುದು ಹಾಗೂ ಕಾಪಾಡುವುದೇ ಈಗಿನ ಅನ್ವೇಷಣೆಯ ವಿಷಯ" ಎಂದು ಅವಳು ಆಲೋಚಿಸಿದಳು.

ಅಲ್ಯಾಂಡ್ರಾಳು ತನ್ನ ನಾಲ್ಕನೆಯ ಭೇಟಿಯನ್ನು ನೆರೆಹೊರೆಯದಲ್ಲಿ ಒಂದು ಚಿಕ್ಕ ತಂಡವು ಚಟುವಟಿಕೆಗಳನ್ನು ಕೈಗೊಂಡಿರುವುದರದ ಬಗ್ಗೆ ವಿವರಿಸುತ್ತಾ ಪ್ರಾರಂಭಿಸಿದಳು. " ನಮ್ಮ ಸಂಖ್ಯೆಯು ಅಧಿಕವಾಗುತ್ತಿದ್ದಂತೆ, ನಾವು ಸಾಧಿಸಬೇಕಾದ ಸವಾಲಿನ ಜವಾಬ್ದಾರಿ ಎಂದರೆ ನಾವು ನಮ್ಮ ಮಾತುಗಳಲ್ಲಿ, ನಮ್ಮ ಆಲೋಚನೆಗಳಲ್ಲಿ, ಹಾಗೂ ನಮ್ಮ ಕಾರ್ಯಗಳಲ್ಲಿ ಹೆಚ್ಚು ಹೆಚ್ಚು ಐಕ್ಯತೆಯಿಂದಿರುವುದು. ನೀವು ಒಪ್ಪುವುದಾದರೆ, ಈ ದಿನ ನಾವು ಒಟ್ಟಾಗಿ ಐಕ್ಯತೆಯ ವಿಷಯವಾಗಿ ಅನ್ವೇಷಿಸಬಹುದು " ಎಂದು ಅವಳು ವಿವರಿಸಿದಳು.

" ನಮ್ಮ ಸಮುದಾಯದ ಬೆಳವಣಿಗೆಗೆ ಐಕ್ಯತೆ ಎಷ್ಟು ಮುಖ್ಯವೆಂಬುದನ್ನು ನಾನು ಕಾಣುತ್ತಿದ್ದೇನೆ. " ಎಂದು ಶ್ರೀಮತಿ ಸಾಂಚೇಜಸ್ ಪ್ರತಿಕ್ರಿಯಿಸಿದರು.

" ಅದಲ್ಲದೆ ಬಹಾ'ಉ'ಲ್ಲಾರವರ ಐಕ್ಯತೆಯ ಸಂದೇಶವು ಮೊದಲು ನಮ್ಮ ಹೃದಯಗಳನ್ನು **ಆತ**ನ ಬೋಧನೆಗಳತ್ತ ಆಕರ್ಷಿಸಿತು"ಎಂದು ಶ್ರೀ ಸಾಂಚೇಜಸ್ ನುಡಿದರು.

" ಪ್ರತಿಯೊಂದಕ್ಕೂ ನಾನು ಒಂದು ಉಲ್ಲೇಖನಗಳನ್ನು ಗುರುತಿಸಿ ಅನೇಕ ವಿಚಾರಗಳನ್ನು ಆಯ್ಕೆಮಾಡಿರುವೆ, ನೀವು ಒಪ್ಪುವುದಾದರೆ, ನಾವು ಒಂದೊಂದಾಗಿ ಅವುಗಳನ್ನು ಓದಿ ಚರ್ಚಿಸಬಹುದು" ಎಂದು ಅಲ್ಯಾಂಡ್ರಾಳು ಹೇಳಿದಳು.

ಅಲ್ಯಾಂಡ್ರಾಳ ವಿಚಾರಗಳ ಪಟ್ಟಿಯು ಈ ಕೆಳಕಂಡಂತಿದೆ:-

- ನಮ್ಮ ಸಮುದಾಯ ನಿಜವಾಗಿಯೂ ಐಕ್ಯತೆಯಿಂದಿರಬೇಕಾದರೆ, ನಾವು ಪ್ರತಿಯೊಬ್ಬರೂ ಕಲಹ ಮತ್ತು ವಾದವಿವಾದಗಳನ್ನು ತಡೆಯಬೇಕು. ಬಹಾ'ಉ'ಲ್ಲಾರವರು ಈ ರೀತಿ ಹೇಳಿರುವರು :

  **"ದೇವರ ಪ್ರೀತಿ ಪಾತ್ರರಲ್ಲಿ ಈ ದಿನ ಮನಸ್ತಾಪ, ಕಚ್ಚಾಟ, ವಾದ-ವಿವಾದ, ಪರಕೀಯತೆ ಮತ್ತು ಉದಾಸೀನತೆಗಳಿಗಿಂತ ಧರ್ಮಕ್ಕೆ ಕೆಡುಕನ್ನು ಉಂಟು ಮಾಡುವಂತಹುದು ಬೇರೆ ಯಾವುದೂ ಇಲ್ಲ. ದೈವಶಕ್ತಿ ಮತ್ತು ಆತನ ಸಾರ್ವಭೌಮತೆಯ ಸಹಾಯದಿಂದ ಅವುಗಳನ್ನು ಹೊಡೆದೋಡಿಸಿರಿ ಮತ್ತು ನೀವು ಮಾನವರ ಹೃದಯಗಳನ್ನು ಒಟ್ಟಾಗಿ ಬೆಸೆಯಲು ಒಗ್ಗೂಡಿಸುವವನಾದ ಸರ್ವಜ್ಞಾನಿ ಮತ್ತು ಸರ್ವ ವಿವೇಕಿಯಾದ ಆತನ ಹೆಸರಿನಲ್ಲಿ ಶ್ರಮಿಸಿರಿ."[12]**

- ಸಮುದಾಯದಲ್ಲಿರುವ ನಾವು ಪ್ರತಿಯೊಬ್ಬರನ್ನೂ ಪ್ರೀತಿಸಬೇಕು, ಆ ಪ್ರೀತಿಯು ದೇವರಿಗೆ ನಾವು ತೋರುವ ಪ್ರೀತಿಯನ್ನು ಪ್ರತಿಫಲಿಸುವುದು. ಅಬ್ದುಲ್- ಬಹಾರವರು ಈ ರೀತಿ ಹೇಳಿರುವರು :

**"ಸಂಪೂರ್ಣ ಐಕ್ಯತೆಯಿಂದಿರಿ, ಪರಸ್ಪರರಲ್ಲಿ ಎಂದೂ ಕೋಪ ಮಾಡಿಕೊಳ್ಳಬೇಡಿ. ಜೀವರಾಶಿಗಳನ್ನು, ಅವುಗಳಿಗಾಗಿ ಅಲ್ಲ, ಆದರೆ ದೇವರಿಗಾಗಿ ಪ್ರೀತಿಸಿ. ಅವುಗಳನ್ನು ದೇವರಿಗಾಗಿ ನೀವು ಪ್ರೀತಿಸತೊಡಗಿದರೆ ಎಂದೂ ನೀವು ಕೋಪಗೊಳ್ಳುವುದಿಲ್ಲ ಅಥವಾ ತಾಳ್ಮೆ ಗೆಡುವುದಿಲ್ಲ. ಮಾನವತೆಯು ಪರಿಪೂರ್ಣವಲ್ಲ, ಪ್ರತಿಯೊಬ್ಬ ಮಾನವರಲ್ಲೂ ಅಪರಿಪೂರ್ಣತೆ ಇದೆ. ಜನರತ್ತ ಮಾತ್ರ ನೋಡಿದರೆ ಎಂದೂ ನಿಮ್ಮಲ್ಲಿ ದುಃಖ ತುಂಬಿಕೊಳ್ಳುವುದು, ಆದರೆ ನೀವು ದೇವರತ್ತ ನೋಡಿದರೆ, ನೀವು ಅವರನ್ನು ಪ್ರೀತಿಸುವಿರಿ ಮತ್ತು ಅವರತ್ತ ದಯಾಪೂರ್ಣರಾಗಿರುವಿರಿ, ಏಕೆಂದರೆ ದೇವರ ಲೋಕವೇ ಪರಿಪೂರ್ಣವಾದುದು ಹಾಗೂ ಸಂಪೂರ್ಣ ದಯಾ ಪೂರ್ಣತೆಯಿಂದ ತುಂಬಿರುವುದು."[13]**

- ಪರಸ್ಪರರು ಪ್ರೀತಿಯ ಭಾವನೆಯನ್ನು ಹೊಂದಿದ್ದರೂ, ನಮಗೆ ಉದ್ವೇಗ ಉಂಟಾದರೆ, ತಕ್ಷಣವೇ ನಾವು ಅಬ್ದುಲ್ ಬಹಾರವರ ಈ ಕೆಳಕಂಡ ಉಪದೇಶವನ್ನು ನೆನಪಿಸಿಕೊಳ್ಳಬೇಕು :

**" ನೀವು, ಪ್ರತಿಯೊಬ್ಬರೂ ನಿಮ್ಮ ಹೃದಯಗಳನ್ನು ಪ್ರೀತಿ ಮತ್ತು ಐಕ್ಯತೆಯತ್ತ ಕೇಂದ್ರೀಕರಿಸುವಂತೆ ನಾನು ಅಪೇಕ್ಷಿಸುತ್ತೇನೆ. ಯುದ್ಧದ ಆಲೋಚನೆಯು ಬಂದಾಗ ಅದನ್ನು ಶಾಂತಿಯ ಬಲವಾದ ಆಲೋಚನೆಯಿಂದ ವಿರೋಧಿಸಿ. ದ್ವೇಷದ ಆಲೋಚನೆಯನ್ನು ಅತಿ ಬಲವಾದ ಪ್ರೇಮದ ಆಲೋಚನೆಯಿಂದ ನಾಶಪಡಿಸಬೇಕು. ಯುದ್ಧದ ಆಲೋಚನೆಗಳು ಎಲ್ಲಾ ಸೌಹಾರ್ದತೆ, ಕ್ಷೇಮಾಭಿವೃದ್ಧಿ, ಸಮಾಧಾನ ಮತ್ತು ತೃಪ್ತಿಯನ್ನು ನಾಶಪಡಿಸುತ್ತವೆ.**

**"ಪ್ರೀತಿಯ ಆಲೋಚನೆಗಳು ರಚನಾತ್ಮಕವಾಗಿದ್ದು, ಸಹೋದರತ್ವ, ಶಾಂತಿ, ಗೆಳೆತನ ಮತ್ತು ಸಂತೋಷವನ್ನು ಕೊಡುತ್ತವೆ. "[14]**

- ಅವುಗಳನ್ನು ಅಂಕೆಯಲ್ಲಿಡಲು ಪ್ರತಿಯೊಂದು ಪ್ರಯತ್ನವನ್ನು ಮಾಡಿದರೂ, ನಮ್ಮ ಭಾವೋದ್ರೇಕಗಳು ನಮ್ಮೊಳಗೆ ನುಸುಳಿ, ಸಂಘರ್ಷಣೆಗಳು ಉಂಟಾದರೆ, ನಾವು ಬಹಾ'ಉ'ಲ್ಲಾರವರ ಈ ಕೆಳಕಂಡ ನುಡಿಗಳನ್ನು ನೆನಪಿಗೆ ತಂದುಕೊಳ್ಳಬೇಕಾದುದು ಅಗತ್ಯ :

**"ನಿಮ್ಮಲ್ಲಿ ಏನೇ, ಭಿನ್ನಾಭಿಪ್ರಾಯಗಳು ತಲೆದೋರಿದಾಗ, ನಿಮ್ಮ ಮುಂದೆ ನಾನು ನಿಂತಿರುವೆನೆಂದು ಭಾವಿಸಿ ಮತ್ತು ನನ್ನ ವ್ಯಕ್ತಗೊಂಡ ಹಾಗೂ ಭವ್ಯವಾದ ಧರ್ಮದ ನಿಮ್ಮ ಪ್ರೀತಿಯ ಕುರುಹಾಗಿ ಪರಸ್ಪರರ ತಪ್ಪುಗಳನ್ನು ನಿರ್ಲಕ್ಷಿಸಿರಿ."[15]**

- ಇತರರ ತಪ್ಪುಗಳನ್ನು ನಿರ್ಲಕ್ಷಿಸುವ ಮತ್ತು ಹೊಗಳಿಕೆಗೆ ತಕ್ಕುದಾದ ಇತರರ ಗುಣಗಳನ್ನು ಮಾತ್ರ ಗಮನಿಸುವ ಹಾಗೂ ಚಾಡಿ ಹಳುವದರಿಂದ ಸಂಪೂರ್ಣ ವರ್ಜಿತವಾಗಿರವ ಆಧ್ಯಾತ್ಮಿಕ ಶಿಸ್ತು, ಅನೈಕ್ಯತೆಯ ವಿರುದ್ಧ ಇರುವ ಅತಿ ಪರಿಣಾಮಕಾರಿ ಕ್ರಮ. ನಾವು ಪರಸ್ಪರರನ್ನು ಪ್ರೀತಿಸಿದರೆ ಚಾಡಿ ಹೇಳುವುದರತ್ತ ವಾಲುವುದನ್ನು ನಿಲ್ಲಿಸುವುದು ಸುಲಭವಾಗುವುದು. ನಾವು ನಮ್ಮ ಪ್ರೀತಿಪಾತ್ರರ ತಪ್ಪುಗಳನ್ನು ನೋಡದೆ ಇರುವೆವು ಮತ್ತು ಅವರ ತಪ್ಪುಗಳಿಗೆ ಕಣ್ಣು ಮುಚ್ಚುವುದು ಕಷ್ಟವಾಗುವುದಿಲ್ಲ. ಅಬ್ದುಲ್ ಬಹಾರವರು ಈ ರೀತಿ ಹೇಳಿದ್ದಾರೆ :

**"ಅಪರಿಪೂರ್ಣ ಕಣ್ಣುಗಳು ಅಪರಿಪೂರ್ಣತೆಗಳನ್ನೇ ಕಾಣುತ್ತವೆ. ತಪ್ಪನ್ನು ಮುಚ್ಚಿಡುವ ಕಣ್ಣುಗಳು ಆತ್ಮಗಳ ಸೃಷ್ಟಿಕರ್ತನನ್ನು ನೋಡುತ್ತವೆ. ಆತನು ಅವುಗಳನ್ನು ಸೃಷ್ಟಿಸಿರುವನು, ಶಿಕ್ಷಣವಿತ್ತು ಪೂರೈಕೆಗಳನ್ನು ಒದಗಿಸಿರುವನು, ಅವುಗಳಲ್ಲಿ ಸಾಮರ್ಥ್ಯ ಮತ್ತು ಜೀವವನ್ನು ತುಂಬಿರುವನು, ದೃಷ್ಟಿ ಮತ್ತು ಶ್ರವಣವನ್ನು ನೀಡಿರುವನು; ಆದುದರಿಂದ ಅವುಗಳು ಆತನ ಭವ್ಯತೆಯ ಚಿಹ್ನೆಗಳಾಗಿವೆ. ನೀವು ಪ್ರತಿಯೊಬ್ಬರನ್ನೂ ಪ್ರೀತಿಸಬೇಕು ಮತ್ತು ದಯೆಯನ್ನು ತೋರಬೇಕು, ಬಡವರತ್ತ ಲಕ್ಷ್ಯ ಕೊಡಬೇಕು, ದುರ್ಬಲರಿಗೆ ರಕ್ಷಣೆ ನೀಡಬೇಕು, ರೋಗಿಗಳನ್ನು ಗುಣಪಡಿಸಬೇಕು, ಅಜ್ಞಾನಿಗಳಿಗೆ ತಿಳುವಳಿಕೆ ಮತ್ತು ಶಿಕ್ಷಣ ನೀಡಬೇಕು. "[16]**

ಬಹಾ'ಉ'ಲ್ಲಾರವರು ನಮಗೆ ಈ ರೀತಿ ಹೇಳಿರುವರು:-

**" ಓ ನನ್ನ ಸಿಂಹಾಸನದ ಒಡನಾಡಿಯೇ! ಕೆಟ್ಟದ್ದನ್ನು ಕೇಳಬೇಡ, ಕೆಟ್ಟದ್ದನ್ನು ನೋಡಬೇಡ, ನಿನ್ನನ್ನೇ ಕೀಳಾಗಿಸಿಕೊಳ್ಳಬೇಡ, ನಿಟ್ಟುಸಿರು ಬಿಡಬೇಡ, ಶೋಕಿಸಬೇಡ. ನಿನ್ನ ಬಗ್ಗೆ ಬೇರೆಯವರು ಕೆಟ್ಟದ್ದನ್ನು ಮಾತನಾಡುವುದನ್ನು ಕೇಳಬಾರದೆಂದಿದ್ದರೆ, ಕೆಟ್ಟದ್ದನ್ನು ನೀನು ಆಡಬೇಡ, ನಿನ್ನ ದೋಷಗಳನ್ನು ದೊಡ್ಡದಾಗಿಸಬಾರದು ಎಂದಿದ್ದರೆ ಇತರರ ದೋಷಗಳನ್ನು ದೊಡ್ಡದಾಗಿಸ ಬೇಡ. ನಿನಗಾದ ಅವಮಾನ ಇನ್ನೊಬ್ಬರಿಗೆ ಗೊತ್ತಾಗಬಾರದು ಎಂಬ ಬಯಕೆ ಇದ್ದರೆ, ಅನ್ಯರಿಗೆ ಅವಮಾನವಾಗಲೆಂದು ನೀನು ಬಯಸಬೇಡ. ಕ್ಷಿಪ್ರದಲ್ಲಿ ಮಾಯವಾಗುವ ಕ್ಷಣಕ್ಕಿಂತಲೂ ಕ್ಷಣಿಕವಾದ ನಿನ್ನ ಬಾಳಿನ ದಿನಗಳನ್ನು ನೀನು ನಿಷ್ಕಳಂಕ ಮನಸ್ಸಿನಿಂದಲೂ, ನಿರ್ಮಲ ಹೃದಯದಿಂದಲೂ, ಪರಿಶುದ್ಧವಾದ ಆಲೋಚನೆಗಳಿಂದಲೂ, ಮತ್ತು ನಿನ್ನ ಸ್ವಭಾವ ಪರಿಶುದ್ಧತೆಯಿಂದಲು ಇದ್ದಲ್ಲಿ ನೀನು ಮುಕ್ತ ಹಾಗೂ ಸಂತೃಪ್ತವಾಗಿ ಈ ನಶ್ವರ**

**ಶರೀರವನ್ನು ಬಿಟ್ಟು ತೆರಳಿ, ನಿಗೂಢ ನಂದನಕ್ಕೆ ಹಾಯ್ದು ಆ ಚಿರಂತನ ರಾಜ್ಯದಲ್ಲಿ ಅನಂತವಾಗಿ ನೆಲಸಬಹುದು."[17]**

ಮತ್ತು ಆತನು ನಮಗೆ ಈ ರೀತಿ ಹೇಳಿರುವರು :

**" ಓ ವಲಸೆಗಾರರೇ! ನನ್ನ ನಾಮಸ್ಮರಣೆಗೆ ನಾನು ನಿರ್ಮಿಸಿದ ನಾಲಿಗೆಯನ್ನು ಇನ್ನೊಬ್ಬರ ನಿಂದನೆಗಾಗಿ ಉಪಯೋಗಿಸಿ ಮಲಿನವಾಗಿಸಬೇಡಿರಿ. ಸ್ವಾರ್ಥದ ಬೆಂಕಿಯು ನಿಮ್ಮನ್ನು ಆಕ್ರಮಿಸಿದರೆ ನಿಮ್ಮ ದೋಷಗಳನ್ನು ಜ್ಞಾಪಿಸಿಕೊಳ್ಳಿರಿ, ಮತ್ತು ನಾನು ಸೃಷ್ಟಿಸಿದ ಉಳಿದ ಜೀವರಾಶಿಗಳ ದೋಷಗಳನ್ನಲ್ಲ, ಏಕೆಂದರೆ ನಿಮ್ಮಲ್ಲಿ ಪ್ರತಿಯೊಬ್ಬರೂ ಅನ್ಯರನ್ನು ಅರಿತಿರುವುದಕ್ಕಿಂತ ಹೆಚ್ಚು ಸಮರ್ಪಕವಾಗಿ ತನ್ನನ್ನು ತಾನು ಅರಿತವನಾಗಿರುತ್ತಾನೆ. "[18]**

- ಐಕ್ಯತೆ ಎಂದರೆ ಕೇವಲ ಕಲಹ ಮತ್ತು ಮನಸ್ತಾಪಗಳಿಂದ ಮುಕ್ತವಾಗಿ ಇರುವುದಲ್ಲ ಮತ್ತು ಪ್ರೀತಿಯನ್ನು ಬರಿಯ ಮಾತುಗಳಲ್ಲೇ ವ್ಯಕ್ತಪಡಿಸುವುದಲ್ಲ. ನಮ್ಮಲ್ಲಿ ನಿಜವಾದ ಐಕ್ಯತೆಯು ಯಾವಾಗ ಇರುವುದೆಂದರೆ, ನಮ್ಮ ಪರಸ್ಪರ ಪ್ರೀತಿಯು ಸಮುದಾಯ ಸೇವೆಯಲ್ಲಿ ರೂಪಾಂತರಗೊಂಡಾಗ ಮತ್ತು ನಮ್ಮ ಚಟುವಟಿಕೆಗಳು ಚೈತನ್ಯಪೂರ್ಣ ಸಹಕಾರ ಮತ್ತು ಪರಸ್ಪರ ಸಹಕಾರದಿಂದ ನಿರ್ದೇಶಿಸಲ್ಪಟ್ಟಾಗ ಮಾತ್ರ ಎಂದು ಹೇಳಬಹುದು. ಅಬ್ದುಲ್ ಬಹಾರವರು ನಮಗೆ ಈ ರೀತಿ ಕರೆ ನೀಡಿರುವರು :

**" ಒಂದು ಕ್ಷಣಕ್ಕಾದರೂ ವಿಶ್ರಮಿಸದಿರಿ, ಮತ್ತು ಒಂದು ಗಳಿಗೆಗಾದರೂ ಸುಖವನ್ನು ಅರಸದಿರಿ; ಬದಲಾಗಿ ನೀವು ನಿಷ್ಠೆಯಿಂದ ಕೂಡಿದ ಸೇವೆ ನೀಡಲು, ಮಿತ್ರರಲ್ಲಿ ಒಬ್ಬನಿಗಾದರೂ ತರಲು ಹಾಗು ಸಂತೋಷ ಮತ್ತು ಆನಂದವನ್ನು ಒಂದು ಪ್ರಕಾಶಿತ ಹೃದಯಕ್ಕೆ ತರಲೆಂದು ಹೃದಯ ಮತ್ತು ಆತ್ಮದಿಂದ ಶ್ರಮಿಸಿರಿ. ಇದೇ ನಿಜವಾದ ಅನುಗ್ರಹ ಇದರಿಂದಲೇ ಅಬ್ದುಲ್ ಬಹಾರವರ ಹುಬ್ಬು ಪ್ರಕಾಶಿತವಾಗುವುದು. ನೀವು ಇದರಲ್ಲಿ ನನ್ನ ಸಹವರ್ತಿಗಳಾಗಿರಿ ಹಾಗೂ ಸಹಭಾಗಿತ್ವ ಹೊಂದಿರಿ. "[19]**

ಅವರು ಈ ರೀತಿ ಹೇಳಿರುವರು:-

**" ಮಾನವತೆಯ ಪರಮೋಚ್ಚ ಅಗತ್ಯವೇ ಸಹಕಾರ ಮತ್ತು ಪರಸ್ಪರ ಸ್ಪಂದಿಸುವಿಕೆ. ಮಾನವರ ನಡುವೆ ಸಹಭಾಗಿತ್ವ ಮತ್ತು ಐಕಮತ್ಯದ ಬಾಂಧವ್ಯಗಳು ಹೆಚ್ಚಿದಷ್ಟು ಮಾನವ ಚಟುವಟಿಕೆಗಳ ಸ್ತರಗಳಲ್ಲಿ ರಚನಾತ್ಮಕತೆ ಮತ್ತು ಸಾಧನೆಯ ಬಲವು ಅಧಿಕಗೊಳ್ಳುವುದು. "[20]**

- ಫಲಪ್ರದವಾದ ಸಮುದಾಯ ಚಟುವಟಿಕೆಯ ಅತಿಮುಖ್ಯ ಕೀಲಿಕೈಯೇ ಎಲ್ಲಾ ವಿಷಯಗಳ ಮೇಲೆ ನಡೆಯುವ ಮುಕ್ತ ಹಾಗೂ ಪ್ರೀತಿಪೂರ್ವಕ ಸಮಾಲೋಚನೆಯಾಗಿದೆ. ಸಮಾಲೋಚನೆಯ ಮೂಲಕ ಒಂದು ಸಮಸ್ಯೆಯ ಒಟ್ಟಿಗೆ ಅಂತರ್ಗತವಾಗಿರುವುದನ್ನು ನಾವು ಪ್ರತಿಯೊಬ್ಬರೂ ನೋಡುತ್ತೇವೆ ಮತ್ತು ನಮ್ಮ ಸಾಮೂಹಿಕ ಚಟುವಟಿಕೆಗಳಲ್ಲಿ ಯಾವ ದಿಕ್ಕನ್ನು ಅನುಸರಿಸಬೇಕೆಂಬುದನ್ನು ನಾವು ಅನ್ವೇಷಿಸುವೆವು. ಸಮಾಲೋಚನೆಯ ಮೂಲಕ ನಾವು ಆಲೋಚನಾ ಐಕ್ಯತೆಯನ್ನು ಸಾಧಿಸುತ್ತೇವೆ, ಮತ್ತು ನಮ್ಮ ಆಲೋಚನೆ ಹಾಗೂ ಅಭಿಪ್ರಾಯಗಳು ಒಂದಾಗಿ ನಮ್ಮ ಸಮುದಾಯದ ಪ್ರಗತಿಗೆ ಬೇಕಾದ ಪರಿಣಾಮಕಾರಿ ಯೋಜನೆಗಳನ್ನು ಸೃಷ್ಟಿಸುತ್ತೇವೆ. ಸಮಾಲೋಚನೆ ನಡೆಸುವವರ ಕುರಿತು ಅಬ್ದುಲ್-ಬಹಾರವರು ಈ ರೀತಿ ಹೇಳುತ್ತಾರೆ :

**" ಒಟ್ಟುಗೂಡಿ ಸಮಾಲೋಚಿಸುವವರಲ್ಲಿ ಅತಿ ಮುಖ್ಯವಾಗಿರಬೇಕಾದ ಅಂಶಗಳೆಂದರೆ : ಉದ್ದೇಶದ ಪರಿಶುದ್ಧತೆ, ಚೈತನ್ಯದ ಪ್ರಕಾಶತೆ, ದೇವರನ್ನು ಹೊರತುಪಡಿಸಿ ಉಳಿದೆಲ್ಲದರಿಂದ ನಿರ್ಲಿಪ್ತತೆ, ಆತನ ದೈವೀ ಪರಿಮಳದತ್ತ ಆಕರ್ಷಣೆ, ಪ್ರೀತಿಪಾತ್ರರತ್ತ ವಿನಮ್ರತೆ ಹಾಗೂ ದೈನ್ಯತೆ, ದೀರ್ಘವಾದ ಕಷ್ಟ ಕಾಲಗಳಲ್ಲಿ ತಾಳ್ಮೆ ಹಾಗೂ ಆತನ ಔನತ್ಯದ ಹೊಸ್ತಿಲಿನಲ್ಲಿ ಸೇವೆ. ಅವರು ಈ ಗುಣಗಳನ್ನು ಗಳಿಸಲು ಆನಂದದಾಯಕವಾಗಿ ಸಹಕರಿಸಿದಾಗ ಬಹಾರ ಅದೃಶ್ಯ ಸಾಮ್ರಾಜ್ಯದಿಂದ ವಿಜಯವು ಅವರ ಮೇಲೆ ಆವರಿಸಿರುತ್ತದೆ. "[21]**

- ಆಲೋಚನಾ ಐಕ್ಯತೆಯು ಕೃತಿಯ ಐಕ್ಯತೆಯಲ್ಲಿ ರೂಪಾಂತರವಾಗದಿದ್ದಲ್ಲಿ ಅದನ್ನು ಈಡೇರಿಸಲಾಗದು. ಐಕ್ಯತೆಯಲ್ಲಿ ಕೆಲಸ ಮಾಡುವುದು ಎಂದರೆ ನಾವು ಒಂದೇ ಕೆಲಸ ಮಾಡುತ್ತಿದ್ದೇವೆ ಎಂದು ಅರ್ಥವಲ್ಲ, ಬದಲಾಗಿ ಐಕ್ಯತೆಯ ಕೃತಿಯಲ್ಲಿ ಸಮುದಾಯದ ಸದಸ್ಯರ ವಿವಿಧ ಕೌಶಲ್ಯಗಳು ಗರಿಷ್ಠವಾಗಿ ಉಪಯೋಗಿಸಲ್ಪಡುವುದು. ನಮ್ಮ ಶಕ್ತಿಗಳು ದ್ವಿಗುಣಗೊಳ್ಳುವವು, ಸದಸ್ಯರ ಸಂಖ್ಯೆ ಚಿಕ್ಕದಾಗಿದ್ದರೂ, ಪ್ರಪಂಚದ ಮಹಾಬಲಶಾಲಿ ಸಂಸ್ಥೆಗಳು ಸಾಧಿಸಲಾಗದ್ದನ್ನು ನಾವು ಸಾಧಿಸಲು ಶಕ್ಯರಾಗುವೆವು.
  ಅಬ್ದುಲ್-ಬಹಾರವರು ಈ ರೀತಿ ಹೇಳಿರುವರು :

**" ಪರಿಶುದ್ಧ ಆತ್ಮಗಳು, ಸ್ವರ್ಗೀಯ ಶಕ್ತಿಗಳನ್ನು ಸೆಳೆದಾಗ, ಆತ್ಮದ ಆ ಗುಣಗಳಿಂದ ಮೇಲೆದ್ದು, ಸಾಮರಸ್ಯದಿಂದ ಸಾಗುತ್ತಾ ಶ್ರೇಣಿಯ ನಂತರ ಶ್ರೇಣಿಯಲ್ಲಿ ಸಾಗುವರು. ಅಂತಹ ಪ್ರತಿಯೊಂದು ಆತ್ಮವು**

**ಸಾವಿರ ಸಂಖ್ಯೆಗೆ ಸಮವಾಗುವುದು ಮತ್ತು ಉಕ್ಕೇರುವ ಸಾಗರದ ಅಲೆಗಳಾಗಿ ಮೇಲಿನ ದೇವತಾ ಸಮೂಹದ ಸೈನ್ಯದ ತುಕಡಿಗಳಂತಾಗುವುದು."[22]**

ಮೇಲಿನ ವಿಷಯಗಳನ್ನು ಕೂಲಂಕುಷವಾಗಿ ನಿಮ್ಮ ಗುಂಪಿನಲ್ಲಿ ಹಲವಾರು ಬಾರಿ ಓದಿದ ನಂತರ ಮತ್ತು ಅದರ ಸಾರದ ಪ್ರತಿಯೊಂದು ಅಂಶವನ್ನು ಸಮಾಲೋಚಿಸಿದ ನಂತರ ಕೆಳಕಂಡ ವಾಕ್ಯಗಳನ್ನು ಪೂರ್ತಿ ಮಾಡಿರಿ. ಇದರಿಂದ ಈ ವಿಭಾಗದಲ್ಲಿ ಕೊಟ್ಟಿರುವ ವಾಕ್ಯವೃಂದಗಳ ಅರ್ಥವನ್ನು ಗ್ರಹಿಸಬಹುದು.

1. ಕೆಳಕಂಡ ವಾಕ್ಯಗಳನ್ನು ಪೂರ್ತಿ ಮಾಡಿರಿ:

ಅ. ಈ ದಿನ ದೇವರ ಪ್ರೀತಿಪಾತ್ರರಲ್ಲಿ_______________ಕಚ್ಚಾಟ, ವಾದವಿವಾದ, ಪರಕೀಯತೆ ಮತ್ತು ಉದಾಸೀನತೆಗಳಿಗಿಂತ ಧರ್ಮಕ್ಕೆ ಕೆಡಕನ್ನುಂಟುಮಾಡುವುದು ಬೇರಾವುದೂ ಇಲ್ಲ.

ಆ. ಈ ದಿನ ದೇವರ ಪ್ರೀತಿಪಾತ್ರರಲ್ಲಿ ಮನಸ್ತಾಪ ಮತ್ತು____________________,ವಾದವಿವಾದ, ಪರಕೀಯತೆ ಮತ್ತು ಉದಾಸೀನತೆಗಳಿಗಿಂತ ಈ ಧರ್ಮಕ್ಕೆ ಕೆಡಕನ್ನುಂಟುಮಾಡುವುದು ಬೇರಾವುದೂ ಇಲ್ಲ.

ಇ. ಈ ದಿನ ದೇವರ ಪ್ರೀತಿ ಪಾತ್ರರಲ್ಲಿ ಮನಸ್ತಾಪ ಮತ್ತು ಕಚ್ಚಾಟ, ವಾದ ವಿವಾದ, ಪರಕೀಯತೆ ಮತ್ತು ಉದಾಸೀನತೆಗಳಿಗಿಂತ ಈ ಧರ್ಮಕ್ಕೆ ಕೆಡಕನ್ನುಂಟುಮಾಡುವುದು________________ ಇಲ್ಲ.

ಈ. ಈ ದಿನ ದೇವರ ಪ್ರೀತಿ ಪಾತ್ರರಲ್ಲಿ ಮನಸ್ತಾಪ ಮತ್ತು ಕಚ್ಚಾಟ, ವಾದವಿವಾದ, ಪರಕೀಯತೆ ಮತ್ತು________________ಗಳಿಗಿಂತ ಈ ಧರ್ಮಕ್ಕೆ ಕೆಡಕನ್ನುಂಟುಮಾಡುವುದು ಬೇರಾವುದೂ ಇಲ್ಲ.

ಉ. ಈ ದಿನ ದೇವರ ಪ್ರೀತಿಪಾತ್ರರಲ್ಲಿ ಮನಸ್ತಾಪ ಮತ್ತು ಕಚ್ಚಾಟ,____________________ ಪರಕೀಯತೆ ಮತ್ತು ಉದಾಸೀನತೆಗಳಿಗಿಂತ ಈ ಧರ್ಮಕ್ಕೆ ಕೆಡಕನ್ನುಂಟುಮಾಡುವುದು ಯಾವುದೂ ಇಲ್ಲ.

ಊ. ಈ ದಿನ ದೇವರ ಪ್ರೀತಿಪಾತ್ರರಲ್ಲಿ ಮನಸ್ತಾಪ ಮತ್ತು ಕಚ್ಚಾಟ, ವಾದವಿವಾದ, ____________________ಮತ್ತು ಉದಾಸೀನತೆಗಳಿಗಿಂತ ಈ ಧರ್ಮಕ್ಕೆ ಕೆಡಕನ್ನುಂಟುಮಾಡುವುದು ಯಾವುದೂ ಇಲ್ಲ.

ಋ. ಈ ದಿನ ದೇವರ ಪ್ರತಿಪಾತ್ರರಲ್ಲಿ ಮನಸ್ತಾಪ ಮತ್ತು ಕಚ್ಚಾಟ, ವಾದವಿವಾದ, ಪರಕೀಯತೆ ಮತ್ತು ಉದಾಸೀನತೆಗಳಿಗಿಂತ__________________ಕೆಡಕನ್ನುಂಟುಮಾಡುವುದು ಯಾವುದೂ ಇಲ್ಲ.

2. ಎರಡನೆಯ ವಾಕ್ಯವೃಂದದಲ್ಲಿ ಅಬ್ದುಲ್-ಬಹಾರವರು ಹೇಳುತ್ತಾರೆ:

ಅ.ನಾವು ಸಂಪೂರ್ಣ____________________ಯಿಂದ ಜೀವನ ನಡೆಸಬೇಕು.

ಆ.ನಾವು ಯಾವಾಗಲೂ____________________ಮತ್ತು____________________ಗೊಂಡಿರಬಾರದು.

ಇ. ನಾವು ಜೀವಿಗಳನ್ನು ಅವುಗಳಿಗಾಗಿ ಅಲ್ಲ, ಆದರೆ____________________ಗಾಗಿ ಪ್ರೀತಿಸಬೇಕು.

ಈ. ನಾವು ಜನರನ್ನು____________________ಗಾಗಿ ಪ್ರೀತಿಸಿದರೆ ನಾವು ಎಂದೂ ____________________ಅಥವಾ ____________________ರಾಗುವುದಿಲ್ಲ.

ಉ. ಮಾನವತೆಯು ____________________ವಲ್ಲ.

ಊ. ನಾವು __________ರಕ್ತ ನೋಡಿದರೆ ಎಂದೂ____________ತುಂಬಿಕೊಳ್ಳುವುದು____________________

ಋ. ಆದರೆ ನಾವು ____________________ನೋಡಿದರೆ, ನಾವು ಜನರನ್ನು__________________ಮತ್ತು ಅವರತ್ತ __________________

3. ಮೂರನೆಯ ವಾಕ್ಯವೃಂದದಲ್ಲಿ ಅಬ್ದುಲ್ ಬಹಾ ನಮಗೆ ಹೇಳುತ್ತಾರೆ.

ಅ. ನಾವು ನಮ್ಮ ಹೃದಯದ ಎಲ್ಲಾ ಭಾವನೆಗಳನ್ನು __________________ ಮತ್ತು __________________ಕೇಂದ್ರೀಕರಿಸಬೇಕು.

ಆ. ಯುದ್ಧದ ಆಲೋಚನೆಯು ಬಂದಾಗ ನಾವು ಅದನ್ನು__________________ಯಿಂದ ವಿರೋಧಿಸಬೇಕು.

ಇ. ದ್ವೇಷದ ಆಲೋಚನೆಯನ್ನು __________________ಆಲೋಚನೆಯಿಂದ ನಾಶಪಡಿಸಬಹುದು.

ಈ. ಯುದ್ಧ ಆಲೋಚನೆಗಳು ಎಲ್ಲಾ __________________, __________________,, _______________________ಮತ್ತು ____________________________ನಾಶವನ್ನು ತಂದು ಕೊಡುತ್ತದೆ.

ಉ. ಪ್ರೀತಿಯ ಆಲೋಚನೆಗಳು _________________________________________________ಅಭಿವೃದ್ಧಿ, ಸಮಾಧಾನ ಮತ್ತು ____________________________________ತಂದು ಕೊಡುತ್ತದೆ.

4. ನಿಮ್ಮ ಮತ್ತು ಸಮುದಾಯದ ಇತರರಲ್ಲಿ ನಿಮಗೆ ಭಿನ್ನತೆ ಉಂಟಾದರೆ ನೀವು ಏನು ಮಾಡುವಿರಿ

____________________________________________________________________________________________________
____________________________________________________________________________________________________
____________________________________________________________________________________________________
____________________________________________________________________________________________________

5. ನಿಮ್ಮ ಸಮುದಾಯದಲ್ಲಿ ಐಕ್ಯತೆಗಾಗಿ ನೀವು ನೀಡಬಹುದಾದ ಆಧ್ಯಾತ್ಮಿಕ ಶಿಸ್ತನ್ನು ವಿವರಿಸಿ.

____________________________________________________________________________________________________
____________________________________________________________________________________________________
____________________________________________________________________________________________________
____________________________________________________________________________________________________
____________________________________________________________________________________________________

6. ಈ ಕೆಳಕಂಡವುಗಳಲ್ಲಿ ಐಕ್ಯತೆಗೆ ಕೊಡುಗೆ ನೀಡುವುದು ಯಾವುವು?

______________ ಇತರರ ನ್ಯೂನತೆಗಳನ್ನು ಗಮನಿಸುವುದು.

______________ಇತರರ ದೋಷಗಳನ್ನು ನೋಡದಿರುವುದು.

______________ಮತ್ತೊಬ್ಬ ವ್ಯಕ್ತಿಯ ನ್ಯೂನತೆಗಳನ್ನು ಸ್ನೇಹಿತನೊಂದಿಗೆ ಟೀಕಿಸುವುದು.

______________ಇನ್ನೊಬ್ಬ ವ್ಯಕ್ತಿಯನ್ನು ಕೀಳಾಗಿಸಲು ಉತ್ಪ್ರೇಕ್ಷೆ ಮಾಡುವುದು ಅಥವಾ ಅವನ ಕಥೆಯನ್ನೇ ಬದಲಾಯಿಸುವುದು.

______________ಇನ್ನೊಬ್ಬರ ದೋಷಗಳ ಕುರಿತು ಯೋಚಿಸುವುದು.

7. ನಾವು ಕೆಲವು ಜನರು ಮಾಡಿದ ತಪ್ಪನ್ನು ಮಾತ್ರ ಟೀಕಿಸಿ, ಇತರರು ಅದೇ ತಪ್ಪನ್ನು ಮಾಡಿದಾಗ ಟೀಕಿಸುವುದಿಲ್ಲ ಏಕೆ?

8. ಪರಸ್ಪರ ಜನರು ಚಾಡಿ ಹೇಳುವ ಸನ್ನಿವೇಶಗಳಿದ್ದರೆ ಅಲ್ಲಿ ಐಕ್ಯತೆಯು ಇರಲು ಸಾಧ್ಯವೆ? ಏಕೆ ಸಾಧ್ಯವಿಲ್ಲ ?

9. ಉದ್ದೇಶಪೂರ್ವಕವಾಗಿ ಇನ್ನೊಬ್ಬರ ಮೇಲೆ ಸುಳ್ಳು ಹೇಳುವುದು ಸ್ಪುಟವಾಗಿಯೂ ತಪ್ಪು. ಆದರೆ ಆತ/ಆಕೆ ನಿಜವಾಗಿಯೂ ತಪ್ಪು ಮಾಡಿರುವ ಬಗ್ಗೆ, ಮತ್ತೊಬ್ಬರೊಡನೆ ಟೀಕಿಸುವುದು ಸರಿಯೇ?

೧೦. ಹರಟೆ ಮಾತು, ಚಾಡಿ ಮಾತು ಮತ್ತು ಟೀಕೆ ಮಾಡುವುದು ಇವುಗಳಲ್ಲಿನ ವ್ಯತ್ಯಾಸವೇನು ?

೧೧. ಒಂದು ಸಮುದಾಯದ ಮೇಲೆ ಹರಟೆ, ಚಾಡಿ ಹೇಳುವುದು ಮತ್ತು ಟೀಕಿಸುವುದರ ಪರಿಣಾಮವೇನು ?

12 ನಾವು ಹೇಗೆ ಈ ಕೆಟ್ಟ ಅಭ್ಯಾಸಗಳನ್ನು ನಮ್ಮ ಜೀವನದಿಂದ ತೊಡೆದು ಹಾಕಬಹುದು?

13. ಜನರು ನಮ್ಮ ಎದುರಿಗೇ ಇದ್ದಾರೆ ಎಂದು ಭಾವಿಸಿ ಅವರ ಬಗ್ಗೆ ನಾವು ಮಾತನಾಡಿದಾಗ ಏನಾಗುತ್ತದೆ?

14. ನಾವು ಮಕ್ಕಳ ಎದುರಿಗೆ ಚಾಡಿ ಮಾತುಗಳನ್ನು ಹೇಳುವಾಗ ಅವರ ಮೇಲೆ ಅದರ ಪರಿಣಾಮ ಏನಾಗುತ್ತದೆ?
______________________________________________________________________________
______________________________________________________________________________
______________________________________________________________________________
______________________________________________________________________________

15. ಹರಟೆ ಮಾತು ಮತ್ತು ಚಾಡಿ ಹೇಳುವ ಪ್ರವೃತ್ತಿಯು ಹೇಗೆ ಬಂದಿದೆ?
______________________________________________________________________________
______________________________________________________________________________
__________________________________________________________________________

16. ಬಹಾ’ಉ’ಲ್ಲಾರವರು ಉಪದೇಶಿಸಿರುವರು: "ಸ್ವಾರ್ಥದ ಬೆಂಕಿಯು ನಿನ್ನನ್ನು ಆಕ್ರಮಿಸಿದರೆ,
______________________________________________________________ಮಾತು ನಾನು
_________________________________________________, ಏಕೆಂದರೆ ನಿಮ್ಮಲ್ಲಿ ಪ್ರತಿಯೊಬ್ಬರು ಅನ್ಯರನ್ನು
ಅರಿತಿರುವುದಕ್ಕಿಂತ ಹೆಚ್ಚು____________________________________________.

17. ಪ್ರೀತಿಯನ್ನು ಮಾತುಗಳಲ್ಲಿ ವ್ಯಕ್ತಪಡಿಸಿದರೆ ಸಾಲದು, ಇನ್ನಾವುದರ ಅಗತ್ಯವಿದೆ?
______________________________________________________________________________
______________________________________________________________________________
______________________________________________________________________________
______________________________________________________________________________

18. ಐಕ್ಯತೆ ಮತ್ತು ಪ್ರೀತಿಗೆ ಸಂಬಂಧಿಸಿದಂತೆ, ಅಬ್ದುಲ್ ಬಹಾರವರು ಹೀಗೆ ಕರೆಯಿತ್ತಿರುವರು "
______________________________ ವಿಶ್ರಮಿಸದಿರಿ ಮತ್ತು ಒಂದು ಗಳಿಗೆಗಾದರೂ ______________________, ಬದಲಾಗಿ
_______________________________________________ ಅದರಿಂದ ನೀವು ________________________________________.
ಮಿತ್ರರಲ್ಲಿ ಒಬ್ಬನಿಗಾದರೂ _____________________ ಮತ್ತು ___________________ವನ್ನು ಒಂದು ಪ್ರಕಾಶಿತ ಹೃದಯಕ್ಕೆ
ತರಬಹುದು.

19. ಹಾಗೂ ಅವರು ಮುಂದುವರೆದು ಹೇಳಿರುವರು: "ಮಾನವತೆಯ ಪರಮೋಚ್ಚ ಅಗತ್ಯವೇ ____________________
ಮತ್ತು __________________________________. ಮಾನವರ ನಡುವೆ ______________________ ಮತ್ತು
____________________________ಬಂಧಗಳು ಹೆಚ್ಚಿದಷ್ಟು ಮಾನವ ಚಟುವಟಿಕೆಗಳ ಸ್ತರಗಳಲ್ಲಿ
____________________________ ಮತ್ತು________________________________ ಬಲವು ಅಧಿಕಗೊಳ್ಳುವುದು.

20. ಫಲಪ್ರದವಾದ ಸಮುದಾಯದ ಕಾರ್ಯತತ್ಪರತೆಗೆ ಅತಿಮುಖ್ಯ ಕೀಲಿ ಕೈ ಯಾವುದು?
______________________________________________________________________________
______________________________________________________________________________
______________________________________________________________________________

21. ಅಬ್ದುಲ್ ಬಹಾರವರು ಸಮಾಲೋಚಿಸುವವರನ್ನು ಕುರಿತು ಹೀಗೆ ಹೇಳಿರುವರು : " ಒಟ್ಟುಗೂಡಿ
ಸಮಾಲೋಚಿಸುವವರಲ್ಲಿ ಅತಿ ಮುಖ್ಯವಾಗಿರಬೇಕಾದ ಅಂಶಗಳೆಂದರೆ :
______________________________________________________________________________
______________________________________________________________________________
___________________________________________________________ ಪ್ರೀತಿಪಾತ್ರರತ್ತ
_________________________________________________, ________________________________ಕಷ್ಟ ಕಾಲಗಳಲ್ಲಿ
______________________________________________________ ಹೊಸ್ತಿಲಿನಲ್ಲಿ ಸೇವೆ. ಅವರು ಈ ಗುಣಗಳನ್ನು ಗಳಿಸಲು
ಆನಂದದಾಯಕವಾಗಿ ಸಹಕರಿಸಿದಾಗ ಬಹಾರ ಅದೃಶ್ಯ ಸಾಮ್ರಾಜ್ಯದಿಂದ
_______________________________________________________________________.

22. ಐಕ್ಯತೆಯಿಂದ ಕೆಲಸ ಮಾಡುವುದಕ್ಕಿರುವ ಶಕ್ತಿಯ ಕುರಿತು ಅಬ್ದುಲ್-ಬಹಾರವರು ಈ ರೀತಿ ಹೇಳಿರುವರು : " ಪರಿಶುದ್ಧ ಆತ್ಮಗಳು, ________________________ ಸೇರಿದಾಗ, ಆತ್ಮಗಳಾ ಗುಣಗಳಿಂದ ಮೇಲೆದ್ದು, ಸಾಮರಸ್ಯದಿಂದ ____________________ ಶ್ರೇಣಿಯ ನಂತರ ಶ್ರೇಣಿಯಲ್ಲಿ ಸಾಗುವರು. ಅಂತಹ ಪ್ರತಿಯೊಂದು ಆತ್ಮವು ________________________________ ಮತ್ತು ಉಕ್ಕೇರುವ ಸಾಗರದ ಅಲೆಗಳಾಗಿ ಅಷ್ಟೇ ಅಲ್ಲ ________________________________________________________________________.

## ವಿಭಾಗ- 9

ಅಲ್ಯಾಂಡ್ರಾಳಿಗೆ ಶ್ರೀಮತಿ ಮತ್ತು ಶ್ರೀ ಸಾಂಚೇಜಸ್ ರವರನ್ನು ನಾಲ್ಕನೆಯ ಬಾರಿ ಭೇಟಿಯಾದಾಗ, ಅವರ ಮೊಮ್ಮಗಳಾದ ಬಿಯಾಟ್ರಿಸ್ ಹತ್ತಿರದ ಪ್ರೌಢಶಾಲೆಯಲ್ಲಿ ಕಲಿಯಲು ಬಂದಿದ್ದು ಅವರೊಡನೆ ಇರಲು ಬಂದಿದ್ದ ಆಕೆಯನ್ನು ಭೇಟಿಯಾಗುವ ಅವಕಾಶ ದೊರೆಯಿತು. ಬಿಯಾಟ್ರಿಸ್ ಳಿಗೆ ಐಕ್ಯತೆಯ ವಿಷಯದಲ್ಲಿ ತುಂಬಾ ಕುತೂಹಲವಿದೆ ಮತ್ತು ಚರ್ಚೆಯಲ್ಲಿ ನ ಆಸಕ್ತಿಯಿಂದ ಭಾಗವಹಿಸಿದ್ದಳು. ಸಂಭಾಷಣೆಯು ಮುಗಿಯಲು ಬಂದಾಗ, ಶ್ರೀಮತಿ ಸಾಂಚೇಜಸ್ ರವರುಎಲ್ಲರಿಗೂ ಚಹಾ ಮತ್ತು ಬಿಸ್ಕೇಟನ್ನು ತಂದುಕೊಟ್ಟರು. ಈ ಅವಕಾಶವೂ ಅಲ್ಯಾಂಡ್ರಾಳಿಗೆ ಬಿಯಾಟ್ರಿಸ್ ಳ ಬಗ್ಗೆ ಹೆಚ್ಚು ತಿಳಿಯಲು ಸಾಧ್ಯವಾಯಿತು ಹಾಗೂ ಅವಳನ್ನು ಮಾರನೆಯ ದಿನ ಭೇಟಿಯಾಗಿ ನೆರೆಹೊರೆಯದಲ್ಲಿ ಸಮುದಾಯ ರಚನೆಯ ಪ್ರಯತ್ನದಲ್ಲಿ ಅವಳೊಡನೆ ಮಾತನಾಡಬಹುದು ಎಂದು ಸಿದ್ಧತೆ ಮಾಡಿಕೊಂಡಳು. "ಸರಣಿಯ ಮುಖ್ಯ ಪುಸ್ತಕಗಳನ್ನು ಅಧ್ಯಯನ ಮಾಡಲು ಅವಳು ಆಸಕ್ತಳಿರಬಹುದು, ಮೊದಲ ಕೆಲವು ಮುಖ್ಯ ಪುಸ್ತಕಗಳನ್ನು ಕಲಿಯಲು ಅವಳಿಗೆ ನಾನು ಸಹಕರಿಸಬಹುದು. ಅದರಿಂದ ಅವಳು ಒಂದು ಮಕ್ಕಳ ತರಗತಿಯನ್ನು ಪ್ರಾರಂಭಿಸಲು ಅಥವಾ ನೆರೆಹೊರೆಯದಲ್ಲಿ ಸ್ಥಾಪಿಸುವ ಕಿಶೋರರ ತಂಡಕ್ಕೆ ನನಗೆ ಸಹಕರಿಸಲು ಇಚ್ಛಿಸಬಹುದು. ಇದರಿಂದ ಅವಳು ತಂಡದ ಹೆಚ್ಚಿನ ಜವಾಬ್ದಾರಿಯನ್ನು ಪುಸ್ತಕ-5 ರವರೆಗಿನ ಅಧ್ಯಯನದಿಂದ ಅವಳು ಪಡೆಯಬಹುದು ಆ ರೀತಿಯಾದಾಗ ಅವಳು ಒಬ್ಬ ಅನುಪ್ರೇರಕಳಾಗಿ ಸೇವೆ ಸಲ್ಲಿಸಬಹುದು" ಎಂದು ಅಲ್ಯಾಂಡ್ರಾಳು ತನ್ನಲ್ಲಿಯೇ ಹೇಳಿಕೊಂಡಳು. ಅಲ್ಯಾಂಡ್ರಾಳು ಹಲವಾರು ಯುವ ಸಮ್ಮೇಳನಗಳಲ್ಲಿ ಭಾಗವಹಿಸಿದ್ದಳು,ಅಲ್ಲಿ ಕೆಲವು ನಿರ್ದಿಷ್ಟ ವಿಷಯಗಳ ಮೇಲೆ ಚರ್ಚೆಯು ಕೇಂದ್ರೀಕರಸಿದ್ದು, ಅದರಿಂದ ಅನೇಕರು ತರಬೇತಿ ಪ್ರಕ್ರಿಯೆಯಲ್ಲಿ ಭಾಗವಹಿಸುವಂತಾಗಿದ್ದ ಅನುಭವ ಅವಳಿಗಿತ್ತು. . ಮಾರನೆಯ ದಿನ ಬ್ರಿಯಾಟ್ರಿಸಳೊಂದಿಗಿನ ಸಂಭಾಷಣೆಯಲ್ಲಿ ಅದೇ ರೀತಿಯ ಸರಣಿಯ ವಿಚಾರಗಳನ್ನು ಅನುಸರಿಸಬೇಕೆಂದು ಅವಳು ನಿರ್ಧರಿಸಿದಳು. ಈ ಕೆಳಕಂಡಂತೆ ಸಂಭಾಷಣೆಯು ಆರಂಭವಾಯಿತು :

ನಾವೆಲ್ಲರೂ ಪ್ರಪಂಚವು ಉತ್ತಮವಾಗಿರಬೇಕೆಂದು ಬಯಸುತ್ತೇವೆ. ಭವಿಷ್ಯದಲ್ಲಿ ವಿಶ್ವಶಾಂತಿಯು ಸ್ಥಾಪಿತವಾಗಿ ಮಾನವ ಕುಟುಂಬವು ಸಹಬಾಳ್ವೆ ನಡೆಸಬೇಕೆಂದು ನಾವು ನಿರೀಕ್ಷಿಸುತ್ತೇವೆ. ಅಂತಹ ಭವಿಷ್ಯವು ಒಂದು ಕನಸಲ್ಲ ಆದರೆ ನಾವು ಹೆಚ್ಚುಹೆಚ್ಚಾಗಿ ಪ್ರಪಂಚದ ಒಳಿತಿಗೆ ಕೊಡುಗೆ ನೀಡಲು ಅತಿಯಾಗಿ ಪರಿಶ್ರಮ ವಹಿಸಬೇಕಾಗುವುದು. ನಮ್ಮ ಸಮುದಾಯಗಳ ಸೇವೆಮಾಡುವ ಆಸೆ ನಮ್ಮ ಪ್ರತಿಯೊಬ್ಬರ ಹೃದಯಾಂತರಾಳದಲ್ಲೂ ಇದೆ. ನಮಗೆ ಅಗತ್ಯವಾದುದೇನೆಂದರೆ ಸಾಮಾನ್ಯ ಒಳಿತಿಗಾಗಿ ನಿಸ್ವಾರ್ಥ ಸೇವೆ ಮಾಡಲು ನಮ್ಮಲ್ಲಿ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವುದೇ ಆಗಿದೆ.

ನಾವು ಒಂದುಗೂಡಿ ಸಾಗುವ ಸೇವಾ ಪಥವನ್ನು ಕಲ್ಪಿಸಿಕೊಳ್ಳುವುದರೊಂದಿಗೆ ಮಾನವತೆಗೆ ಸೇವೆ ಸಲ್ಲಿಸುವ ಬಗ್ಗೆ ಆಲೋಚಿಸಬೇಕು. ಈ ಮಾರ್ಗವು ಎಲ್ಲರಿಗೂ ತೆರೆಯಲ್ಪಟ್ಟಿರುವುದು. ನಾವು ಪ್ರತಿಯೊಬ್ಬರೂ ಅದನ್ನು ಪ್ರವೇಶಿಸಲು ಆಯ್ಕೆಮಾಡಿಕೊಂಡು ನಮ್ಮದೇ ಆದ ಸಮ ವೇಗಕ್ಕೆ ಹೆಜ್ಜೆ ಹಾಕಬೇಕು. ಈ ದಾರಿಯಲ್ಲಿ ನಾವು ಏಕಾಂಗಿಯಾಗಿ ಸಾಗಲು ಆಗುವುದಿಲ್ಲ ; ನಮ್ಮ ಮಿತ್ರರೊಂದಿಗೆ ಸೇವೆ ಮಾಡುತ್ತಾ, ಒಟ್ಟಾಗಿ ಕಲಿಯುತ್ತಾ ಹಾಗೂ ಪರಸ್ಪರ ಸಹಯೋಗದಿಂದ ಸಾಗುವೆವು. ನಾವು ತೆಗೆದುಕೊಳ್ಳುವ ಪ್ರತಿಯೊಂದು ಹೆಜ್ಜೆಯು ಆನಂದ ಮತ್ತು ಭರವಸೆಯನ್ನು ಉಂಟುಮಾಡುವುದು ಅಲ್ಲದೆ ನಾವು ಮಾಡುವ ಪ್ರತಿಯೊಂದು ಪರಿಶ್ರಮವು ದೈವೀ ದೃಢೀಕರಣವನ್ನು ತರುವುದು.

ಬಿಯಾಟ್ರಿಸ್ ಳು ತಾನು ಆಲಿಸುತ್ತಿದ್ದ ವಿಚಾರವನ್ನು ಇಷ್ಟಪಟ್ಟಳು ಮತ್ತು ಈ ಪ್ರಸ್ತುತಪಡಿಸಿದ ಆ ಸಂಭಾಷಣೆಯು ಉತ್ಸಾಹದಾಯಕವಾಗಿತ್ತು. ಇನ್ನೂ ಮುಂದುವರೆಯುವ ಮೊದಲು, ಇಲ್ಲಿ ನಾವು ಸ್ವಲ್ಪ ವಿರಮಿಸಿ, ಇಬ್ಬರು ಹೊಸ ಸ್ನೇಹಿತರ ನಡುವಿನ ಸಂವಹನ ಸ್ವಭಾವದ ಬಗ್ಗೆ ಪ್ರತಿಫಲಿಸೋಣ. ಬಿಯಾಟ್ರಿಸ್ ಳನ್ನು ತರಬೇತಿ ಪ್ರಕ್ರಿಯೆಯಲ್ಲಿ ತೊಡಗಿಸಲು ಅಲ್ಯಾಂಡ್ರಾಳು ಸತ್ವಭರಿತ ಸಂಭಾಷಣೆಯನ್ನು ಮಾಡಲು ನಿರ್ಧರಿಸಿದ್ದಳು. ಬಿಯಾಟ್ರಿಸ್ ಳನ್ನು ತರಬೇತಿ ಸಂಸ್ಥೆಯ ಸರಣಿಯ ತರಗತಿಗಳಲ್ಲಿ ಭಾಗವಹಿಸಲು ಸುಮ್ಮನೆ ಅಹ್ವಾನಿಸುವುದು ಏಕೆ ಸಾಕಾಗುತ್ತಿರಲಿಲ್ಲ?

____________________________________________________________________________________

____________________________________________________________________________________

____________________________________________________________________________________

____________________________________________________________________________________

______________________________________________________________________________

______________________________________________________________________________

______________________________________________________________________________

______________________________________________________________________________

## ವಿಭಾಗ 10

ಅಲ್ಯಾಂಡ್ರಾ ಮತ್ತು ಬಿಯಾಟ್ರಿಸ್ ಳ ನಡುವಿನ ಸಂಭಾಷಣೆಯು ಸುಮಾರು ಎರಡು ಗಂಟೆಗಳವರೆಗೆ ಮುಂದುವರೆದಿತ್ತು. ಕೆಳಕಂಡ ಹಲವಾರು ವಿಚಾರಗಳನ್ನು ಅಲ್ಯಾಂಡ್ರಾಳು ತನ್ನ ಹೊಸ ಸ್ನೇಹಿತೆಯೊಂದಿಗೆ ಹಂಚಿಕೊಂಡಳು. ಅವಳು ದೀರ್ಘವಾದ ಅಡೆತಡೆಯಿಲ್ಲದ ಪ್ರಸ್ತುತಿಯನ್ನು ಮಾಡಿರುವುದಿಲ್ಲ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳುವೆವು. ಒಟ್ಟಾರೆ ಎರಡು ಗಂಟೆಗಳ ಅವಧಿಯಲ್ಲಿ ಕೆಳಗೆ ಕೊಟ್ಟಿರುವ ಪ್ಯಾರದ ವಿಷಯಗಳನ್ನು ಸಮಾಲೋಚಸುವುದರಲ್ಲಿ  ಕಳೆಯಿತು:

ನಾವು ಯೌವನಸ್ಥರು, ನಾವು ಶಕ್ತಿಯುಳ್ಳವರು ಹಾಗೂ ನಾವು ಅತ್ಯಂತ ಉತ್ಸಾಹಿಗಳು. ಜನರು ನಮ್ಮನ್ನು ಚಿಂತೆಯಿಲ್ಲದವರು ಎಂದು ಭಾವಿಸುವರು. ಆದರೆ ಅದಕ್ಕೆ ಇದು ವಿರುದ್ಧವಾಗಿರುವುದು: ನಾವು ಮಾನವತೆಯ ದುರ್ದೆಸೆಯ ಕುರಿತು ಕಾಳಜಿವುಳ್ಳವರು ಮತ್ತು ಸಮಾಜದಲ್ಲಿ ನಿಜವಾದ ಪರಿವರ್ತನೆ ತರಲು ಇಚ್ಛಿಸುವೆವು. ಅಷ್ಟೇ ಅಲ್ಲದೆ ನಾವು ಸ್ವಯಂ ನಮ್ಮ ಜೀವನದ ಬಗ್ಗೆಯೂ ಆಲೋಚಿಸುವುದು ಅಗತ್ಯ -ಶಿಕ್ಷಣ, ಉದ್ಯೋಗ, ಮಿತ್ರರು, ಕುಟುಂಬ. ನಾವು ಪ್ರತಿವರ್ಷವೂ ಬೆಳೆಯುತ್ತಿದ್ದಂತೆ, ಹೆಚ್ಚಿನ ಜವಾಬ್ದಾರಿಯನ್ನು ಹೊರಬೇಕಾಗಿರುವುದನ್ನು ಕಾಣುತ್ತೇವೆ: ನಮ್ಮ ತಂದೆ ತಾಯಿಯರು ನಮ್ಮಿಂದ ಹೆಚ್ಚಿನದನ್ನು ನಿರೀಕ್ಷಿಸುವರು. ಕೆಲವೊಮ್ಮೆ, ನನ್ನ ಎಲ್ಲಾ ಜವಾಬ್ದಾರಿಗಳ ಬಗ್ಗೆ ಆಲೋಚಿಸಿದಾಗ, ನಾನು ದಿಕ್ಕು ತೋಚದವಳಾಗುತ್ತೇನೆ . ಆಗ ನಾನು ಬಹಾಯಿ ಬರಹಗಳಿಂದ ಕಂಠಪಾಠ ಮಾಡಿದ ಉಲ್ಲೇಖನಗಳನ್ನು ನೆನಪಿಸಿಕೊಳ್ಳುತ್ತೇನೆ : " ಮಾನವನ ಜೀವನವು ತನ್ನದೇ ಆದ ವಸಂತ ಕಾಲವನ್ನು ಹೊಂದಿರುವುದು ಹಾಗೂ ಅದು ಅದ್ಭುತವಾದ ವೈಭವದಿಂದ ಅಲಂಕರಿಸಲ್ಪಟ್ಟಿರುವುದು. ಯೌವನಾವಸ್ಥೆಯು ಶಕ್ತಿ ಮತ್ತು ಉತ್ಸಾಹದಿಂದ ಗುರುತಿಸಲ್ಪಡುವುದು ಮತ್ತು ಮಾನವ ಜೀವನದ ಅತ್ಯುತ್ತಮ ಸಮಯವಾಗಿರುವುದು. "

ನಾನು ನಿನ್ನೊಡನೆ ಏನನ್ನು ಹಂಚಿಕೊಳ್ಳ ಬಯಸುತ್ತೇನೆಂದರೆ, ಪ್ರಪಂಚದ  ಸಮುದಾಯಗಳಲ್ಲಿ ನಮ್ಮಂತಹ ಅನೇಕ ಯುವಜನತೆಯು ತಮ್ಮ ಸಾಮರ್ಥ್ಯಗಳನ್ನು ದ್ವಿಮುಖ ಉದ್ದೇಶಗಳತ್ತ  ನಿರ್ದೇಶಿಸಬೇಕೆಂಬುದನ್ನು ಗುರುತಿಸಿರುವರು ಅಂದರೆ ಸ್ವಯಂ ತಮ್ಮದೇ ಆದ ಬೌದ್ಧಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಯ ಹೊಣೆಯನ್ನು ವಹಿಸುವುದು ಹಾಗೂ ಸಮಾಜದ ಪರಿವರ್ತನೆಗೆ ಕೊಡುಗೆ ನೀಡುವುದು. ನಮ್ಮ ಉದ್ದೇಶದ ಈ ಎರಡು ಮಗ್ಗಲುಗಳು ಅಂತರ್ ಸಂಬಂಧಿತವಾಗಿರುವುದು. ನಮ್ಮ ಸಾಮರ್ಥ್ಯಗಳನ್ನು ಬೆಳೆಸುತ್ತಿದ್ದಂತೆಯೇ,  ಇತರರಿಗೆ ಒಳ್ಳೆಯ ಸೇವೆಯನ್ನು ಮಾಡವುದರಲ್ಲಿ ಸಮರ್ಥರಾಗುವೆವು, ಮತ್ತು ಪರಸ್ಪರ ಸಹಾಯ ಮಾಡುವುದರಿಂದ, ನಾವು ವೈಯುಕ್ತಿಕವಾಗಿ ಬೆಳೆಯುವೆವು ಮತ್ತು ನಾವು ಹೊಂದಿರುವ ಗುಣಗಳನ್ನು ಬಲಗೊಳಿಸುವೆವು.

ನಾನು ಈಗಾಗಲೇ ಹೇಳಿರುವುದರಲ್ಲಿ ಸೇವಾ ಪಥದ ವಿಚಾರವು ಬರುವುದು. ಅದರಂತೆ ನಡೆಯುವುದು ಎಂದರೆ ನಮ್ಮ ಜೀವನಕ್ಕೆ ಸುಮ್ಮನೆ ಅದನ್ನು ಸೇರಿಸುವುದು ಎಂದಲ್ಲ; ಅದು ನಾವು ಮಾಡುವ ಪ್ರತಿಯೊಂದಕ್ಕೂ ಅರ್ಥವನ್ನು ತರುವುದು. ಸಮುದಾಯ ಸೇವೆಯು ನಮ್ಮ ಶಿಕ್ಷಣದ ಉದ್ದೇಶವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಸಹಾಯ ಮಾಡುವುದು, ಭವಿಷ್ಯದ ಬಗೆಗಿನ ನಮ್ಮ ಆಲೋಚನೆಗಳನ್ನು ಸ್ಪಷ್ಟಪಡಿಸುವುದು, ನಮ್ಮ ಕುಟುಂಬಗಳ ಒಳಿತಿಗೆ ಅಗತ್ಯವಾದ ಕೊಡುಗೆ ನೀಡುವಂತಹ ಗುಣಗಳ ಬೆಳವಣಿಗೆಗೆ ಸಹಕರಿಸುವುದು. ಇದು ನಮ್ಮ ಮಿತ್ರತ್ವಗಳನ್ನು ಬಲಗೊಳಿಸುವುದು. ಇದು ನಮ್ಮ ಶಕ್ತಿಯನ್ನು ನಿರರ್ಥಕ ಕೆಲಸಗಳಲ್ಲಿ ವ್ಯರ್ಥ ಮಾಡುವುದರಿಂದ ದೂರವಿರಿಸುವುದು.

ನಮ್ಮ ಆಧ್ಯಾತ್ಮಿಕ ಮತ್ತು ಬೌದ್ಧಿಕ ಬೆಳವಣಿಗೆಯ ಬಗ್ಗೆ ನಾವು ಆಲೋಚಿಸುವಾಗ, ಅನೇಕ ಶಕ್ತಿಗಳು ನಮ್ಮ ಮೇಲೆ ಪ್ರಭಾವ ಬೀರುವುದರ ಬಗ್ಗೆ ನಾವು ಎಚ್ಚರದಿಂದಿರಬೇಕು. ಕೆಲವು ವಿಚಾರಗಳಾದ, ಜ್ಞಾನದ ಶಕ್ತಿ, ನ್ಯಾಯ  ಮತ್ತು ಪ್ರೀತಿಯ ಶಕ್ತಿಗಳು ನಮ್ಮನ್ನು ಸರಿಯಾದ ದಿಕ್ಕಿನಲ್ಲಿ ನಡೆಸುವುವು ಹಾಗು ನಾವು ಅವುಗಳೊಂದಿಗೆ ಸರಿದೂಗಿಸಿಕೊಳ್ಳಲು ಕಲಿಯಬೇಕು. ಭೌತಿಕತೆ ಮತ್ತು ಸ್ವಯಂ-ಕೇಂದ್ರಿತ , ಇವೇ ಮೊದಲಾದ ಶಕ್ತಿಗಳು ವಿರುದ್ಧ ದೆಸೆಯತ್ತ ನೂಕುವವು. ಆದರೆ ಅವುಗಳನ್ನು ನಾವು ತಡೆಯಬೇಕು. ನಾವು ಉತ್ಕೃಷ್ಟತೆಯನ್ನು ಸಾಧಿಸಲು ಪ್ರಯತ್ನಿಸಬೇಕು ಮತ್ತು ನಮ್ಮ ಪ್ರಯತ್ನಗಳಿಗೆ ದೈವೀ ದೃಢೀಕರಣವಿರುತ್ತದೆಂದು ಭರವಸೆ ಇಡುವುದು ಅಗತ್ಯ.

ಸಮಾಜದ ಪರಿವರ್ತನೆಗೆ ನಮ್ಮ ಕೊಡುಗೆಯ ಬಗ್ಗೆ ಆಲೋಚಿಸುವಾಗ - ಹಿಂಸೆ, ಬಡತನ ಮತ್ತು ನರಳುವಿಕೆಯ ಒಂದು ಸಮಾಜವನ್ನು ಒಂದು ಶಾಂತಿಯ, ಸಮೃದ್ಧಿಯ ಮತ್ತು ಸಹಬಾಳ್ವೆಯ ಪ್ರಪಂಚಕ್ಕೆ ಬದಲಾಯಿಸುವುದರಲ್ಲಿ ಭೌತಿಕ ಮತ್ತು ಆಧ್ಯಾತ್ಮಿಕ ಪ್ರಗತಿಗಳೆರಡನ್ನು ಪರಿಗಣಿಸಬೇಕು. ಎಲ್ಲಾ ಜನರ ಭೌತಿಕ ಪ್ರಗತಿಯನ್ನು ನಾವು ಆಧ್ಯಾತ್ಮಿಕ ಪ್ರಗತಿ ಇಲ್ಲದೆ ಸಾಧಿಸಲಾಗುವುದಿಲ್ಲ. ಇವೆರಡೂ ಜೊತೆಜೊತೆಯಾಗಿ ಸಾಗಿದಾಗ ಮಾತ್ರ ಪ್ರಪಂಚದ ಒಳಿತನ್ನು ಸಾಧಿಸಬಹುದು.

ನಾನು ಕಂಠಪಾಠ ಮಾಡಿದ ಮತ್ತೊಂದು ಉಲ್ಲೇಖನವು ಈ ರೀತಿ ಇದೆ. "ಭೌತಿಕ ನಾಗರಿಕತೆಯು ಒಂದು ದೀಪದಂತೆ, ಆಧ್ಯಾತ್ಮಿಕ ನಾಗರಿಕತೆಯು ಆ ದೀಪದಲ್ಲಿನ ಬೆಳಕಿನಂತೆ. ಭೌತಿಕ ಮತ್ತು ಆಧ್ಯಾತ್ಮಿಕ ನಾಗರಿಕತೆಗಳೆರಡೂ ಒಟ್ಟಾಗಿದ್ದಾಗ, ನಾವು ಬೆಳಕು ಮತ್ತು ದೀಪವೆರಡನ್ನೂ ಒಟ್ಟಾಗಿ ಕಾಣುವೆವು ಹಾಗೂ ಇದರ ಫಲಿತಾಂಶವು ಪರಿಪೂರ್ಣವಾಗಿರುವುದು."

ನಾವು ಸೇವಾ ಪಥದಲ್ಲಿ ನಡೆಯುತ್ತಿದ್ದಂತೆ, ವ್ಯಕ್ತಿಗಳ ತಂಡಗಳಲ್ಲಿ ಕೆಲಸ ಮಾಡಲು ಕಲಿಯುತ್ತೇವೆ ಅದರಲ್ಲೂ ಮಕ್ಕಳು ಮತ್ತು ಕಿಶೋರರಿಗೆ ಜ್ಞಾನವನ್ನು, ಕೌಶಲ್ಯಗಳು ಮತ್ತು ಆಧ್ಯಾತ್ಮಿಕ ಗುಣಗಳನ್ನು ಪಡೆಯಲು ಸಹಾಯ ಮಾಡುತ್ತೇವೆ. ನಾವು ನಮ್ಮ ಸಮುದಾಯಗಳು ಐಕ್ಯತೆಯಿಂದ ಇರಲು ಗಮನ ಹರಿಸಬೇಕೆಂಬುದನ್ನು ಕಲಿಯುತ್ತೇವೆ. ವ್ಯಕ್ತಿ, ಕುಟುಂಬಗಳು ಮತ್ತು ಸಂಸ್ಥೆಗಳು ಒಂದು ಸಮುದಾಯದ ಪ್ರಗತಿಗೆ ಕೊಡುಗೆ ನೀಡಲು ಅಪೇಕ್ಷಿಸಿದರೆ ಅವು ಸಹಕರಿಸುವುದು ಅತ್ಯವಶ್ಯಕ. ಅವುಗಳು ಘರ್ಷಣೆಯನ್ನು ಬಿಟ್ಟು, ಹಂಚಿಕೆಯ ದೃಷ್ಟಿಕೋನ ಮತ್ತು ಉದ್ದೇಶವನ್ನು ನಿರ್ಮಿಸತಕ್ಕದ್ದು.

ಯುವಜನತೆಯಾದ ನಾವು ಇತರರೊಂದಿಗೆ ಸೌಹಾರ್ದಯುತ ಸಂವಹನವನ್ನು ಬೆಳೆಸಿಕೊಳ್ಳುವುದು ಪ್ರಮುಖ. ನಾವು ಮಿತ್ರರಾಗಿರಬೇಕು. ನಾವು ಮಾಡುವ ಕೆಲಸದಲ್ಲಿ ಒಬ್ಬರೊಡನೊಬ್ಬರು ಜೊತೆಗೂಡಿರಬೇಕು, ಪರಸ್ಪರರ ಕೊಡುಗೆಗಳನ್ನು ಒಪ್ಪಿಕೊಳ್ಳಬೇಕು, ಒಬ್ಬರಿಗೊಬ್ಬರು ಪ್ರೋತ್ಸಾಹ ಮತ್ತು ಸಹಾಯವನ್ನು ನೀಡಬೇಕು, ಪರಸ್ಪರರ ಸಾಮರ್ಥ್ಯಗಳನ್ನು ಸ್ವೀಕರಿಸಬೇಕು, ಹಾಗೂ ಉಪಯುಕ್ತವಾದ ಸಲಹೆಗಳನ್ನು ಪರಸ್ಪರ ನೀಡಬೇಕು ಹಾಗೂ ಪರಸ್ಪರ ಸಾಧನೆಯಲ್ಲಿ ಸಂತೋಷವನ್ನು ಪಡಬೇಕು. ಸೇವಾ ಪಥದಲ್ಲಿ ಸಾಗುತ್ತಾ ನಮ್ಮ ಕೆಲಸದ ಬಗ್ಗೆ ಪ್ರತಿಫಲನೆ, ಒಟ್ಟಾಗಿ ಸಮಾಲೋಚನೆ ಮತ್ತು ಒಟ್ಟಾಗಿ ಅಧ್ಯಯನವನ್ನು ಮಾಡುವುದು ಅಗತ್ಯ.

ಕಳೆದ ಕೆಲವು ದಶಕಗಳಿಂದ, ಬಹಾಯಿ ಸಮುದಾಯವು ಒಂದು ವಿಶೇಷ ರೀತಿಯ ಕಲಿಕಾ ಸಂಸ್ಥೆಯನ್ನು ಪ್ರಾಯೋಗಿಕವಾಗಿ ಪ್ರಪಂಚದ ಪ್ರತಿಯೊಂದು ದೇಶದಲ್ಲೂ ಸ್ಥಾಪಿಸುವಲ್ಲಿ ಸಫಲವಾಗಿದೆ. ನಾವು ಅದನ್ನು ಸಂಸ್ಥೆಗಳೆಂದು ಕರೆಯುತ್ತೇವೆ, ಅವು ಸಮುದಾಯಗಳ ಸೇವೆಯಲ್ಲಿ ನಮ್ಮನ್ನು ಸಶಕ್ತಗೊಳಿಸಿ ಸಮರ್ಥರನ್ನಾಗಿಸುವ ತರಗತಿಗಳನ್ನು ನೀಡುತ್ತಿವೆ. ಈ ತರಗತಿಗಳ ಅಧ್ಯಯನದಿಂದ ನಾವು ಆಧ್ಯಾತ್ಮಿಕ ಅಂತರ್ದೃಷ್ಟಿಯನ್ನು ಹಾಗೂ ಸೇವಾ ಪಥದಲ್ಲಿ ಒಂದುಗೂಡಿ ಮುಂದೆ ಸಾಗುವುದಕ್ಕೆ ಅಗತ್ಯವಾದ ಪ್ರಾಯೋಗಿಕ ಕೌಶಲ್ಯಗಳನ್ನು ಪಡೆಯುತ್ತೇವೆ. ಅವುಗಳ ಮೂಲಕ ಸಾಗುವಾಗ ಸೇವೆಯ ಕಾರ್ಯಗಳ ಸಂಕೀರ್ಣತೆಯನ್ನು ಅಧಿಕಗೊಳಿಸುವ ಸಾಮರ್ಥ್ಯವನ್ನು ಗಳಿಸುತ್ತೇವೆ. ಅದರ ಮೂಲಕ ಮುಂದುವರೆಯುತ್ತಿದ್ದಂತೆ, ನಮಗಿಂತಲೂ ಹೆಚ್ಚು ಅನುಭವ ಉಳ್ಳವರೊಂದಿಗೆ ಸಾಗುತ್ತೇವೆ, ಸ್ವಾಭಾವಿಕವಾಗಿಯೇ ಕಡಿಮೆ ಅನುಭವವುಳ್ಳ ಮಿತ್ರರೊಂದಿಗೆ ಸಾಗುವುದನ್ನು ನಾವು ಕಲಿಯುತ್ತೇವೆ. ಆರಂಭದಿಂದಲೂ, ನಾವೆಲ್ಲರೂ ವೈಯುಕ್ತಿಕ ಹಾಗೂ ಸಾಮೂಹಿಕ ಪರಿವರ್ತನೆಯ ಅಗ್ರೇಸರರಾಗಿರುತ್ತೇವೆ, ಸ್ವಯಂ ನಮ್ಮದೇ ಆದ ಕಲಿಕೆಯ ಹಾಗೂ ಸಮುದಾಯದ ಸೇವೆಗಾಗಿ ಜವಾಬ್ದಾರಿಯನ್ನು ಉತ್ಸಾಹದಿಂದ ನಿರ್ವಹಿಸುತ್ತೇವೆ.

"ನಾಯಕರಾಗಿರುವುದು" ಎಂದರೆ ಚಿಂತನಶೀಲವಾಗಿ ವರ್ತಿಸುವ ಇಚ್ಛೆಯನ್ನು ಹೊಂದಿರುವುದು, ನಮ್ಮ ಪ್ರಯತ್ನಗಳಲ್ಲಿ ಸತತವಾಗಿ ಪರಿಶ್ರಮ ಪಡುವುದು. ಮತ್ತು ಪ್ರತಿ ಹಂತದಲ್ಲೂ ಜ್ಞಾನವನ್ನು ಪಡೆಯುವುದು ಮತ್ತು ಅಳವಡಿಸಿಕೊಳ್ಳುವುದು. ನಾಯಕನು ಕೇವಲ ನಿಷ್ಕ್ರಿಯ ಪ್ರಯೋಜನಗಳನ್ನು ಪಡೆಯುವುದರ ಬದಲಿಗೆ ಸಕ್ರಿಯವಾಗಿ ಪ್ರಗತಿಗೆ ಕೊಡುಗೆ ನೀಡುತ್ತಾನೆ. ನಾಯಕನಾಗಲು ಒಬ್ಬನು ಸೃಜನಶೀಲ ಮತ್ತು ಶಿಸ್ತುಬದ್ಧ ಮುಂದಾಳುತ್ವವನ್ನು ವಹಿಸಲು ಕಲಿಯಬೇಕು. ತರಬೇತಿ ಸಂಸ್ಥೆಯ ಪಠ್ಯಾನುಕ್ರಮಗಳು ಸಮುದಾಯ ನಿರ್ಮಾಣ ಪ್ರಕ್ರಿಯೆಯ ನಾಯಕತ್ವ ವಹಿಸುವ ನಮ್ಮ ಸಾಮರ್ಥ್ಯವನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ.

ಮೇಲಿನ ವಾಕ್ಯಾಂಶಗಳಲ್ಲಿನ ಆಲೋಚನೆಗಳನ್ನು ನಾವು ಪ್ರತಿಫಲಿಸಲು ಸ್ವಲ್ಪ ಸಮಯ ತೆಗೆದುಕೊಳ್ಳೋಣ. ವಿಭಾಗದ ಆರಂಭದಲ್ಲಿ ಹೇಳಿದಂತೆ, ಅಲ್ಯಾಂಡ್ರಾಳು ಕೇವಲ ಒಂದರ ನಂತರ ಒಂದರಂತೆ ಆಲೋಚನೆಗಳನ್ನು ಪ್ರಸ್ತುತಪಡಿಸುತ್ತಿರಲಿಲ್ಲ ಆದರೆ ಬಿಯಾಟ್ರಿಸ್ ಳು ಅವುಗಳ ಕುರಿತು ಯೋಚಿಸಲು ಮತ್ತು ಚರ್ಚೆಗೆ ಕೊಡುಗೆ ನೀಡಲು ಸಾಕಷ್ಟು ಅವಕಾಶ ದೊರಕುವಂತೆ ಖಚಿತಪಡಿಸಿಕೊಳ್ಳುತ್ತಿದ್ದಳು. ನಿಮ್ಮ ಗುಂಪಿನಲ್ಲಿ ಪ್ರತಿಯೊಂದು ವಾಕ್ಯಾಂಶವನ್ನು ಚರ್ಚಿಸಲು ನಿಮಗೆ ಅವಕಾಶ ದೊರಕಿದ ನಂತರ ಮತ್ತು ನಿಮ್ಮ ಆಲೋಚನೆಗಳನ್ನು ಚೆನ್ನಾಗಿ ವ್ಯಕ್ತಪಡಿಸಲು ಕಲಿತ ನಂತರ- ರೂಹಿ ಸಂಸ್ಥೆಯ ಕೆಲವು ಪಠ್ಯಾನುಕ್ರಮಗಳ ಕುರಿತು ಕೆಲವು ಮಾತುಗಳನ್ನು ಹಂಚಿಕೊಳ್ಳಲು ಮತ್ತು ಪುಸ್ತಕ 1 ರ ಅಧ್ಯಯನಕ್ಕೆ ಸೇರಿಕೊಳ್ಳಲು ಬಿಯಾಟ್ರಿಸ್ ಅವರನ್ನು ಆಹ್ವಾನಿಸುವುದರಲ್ಲಿ, ಅಲ್ಯಾಂಡ್ರಾಳ ಆತ್ಮವಿಶ್ವಾಸದ ಅನುಭವದ ಮಟ್ಟಕ್ಕೆ ನಿಮ್ಮ ಸಂಭಾಷಣೆಯು ಬೆಳೆದಿದೆಯೇ? ನೀವು ಅವಳ ಸ್ಥಾನದಲ್ಲಿದ್ದರೆ ಏನೆಂದು ಹೇಳುತ್ತಿದ್ದಿರಿ ಎಂಬುದನ್ನು ಕೆಳಗಿನ ಸ್ಥಳದಲ್ಲಿ ಬರೆಯಬಹುದೇ? ಪುಸ್ತಕಗಳು 1 ಮತ್ತು 2 ಕರೆ ನೀಡುವ ಸೇವಾ ಕಾರ್ಯಗಳನ್ನು ನೀವು ಹೇಗೆ ವಿವರಿಸುತ್ತೀರಿ? ನಂತರದ ಪುಸ್ತಕಗಳಲ್ಲಿ ತೆಗೆದುಕೊಂಡಿರುವ ಸೇವಾ ಕಾರ್ಯಗಳ ಸಂಕ್ಷಿಪ್ತ ಉಲ್ಲೇಖನವು - ವಿಶೇಷವಾಗಿ ಮಕ್ಕಳ ಆಧ್ಯಾತ್ಮಿಕ ಶಿಕ್ಷಣಕ್ಕಾಗಿ ಬೋಧನಾ ತರಗತಿಗಳು ಮತ್ತು ಕಿಶೋರರ ಸಮೂಹವನ್ನು ಅದರ ಅನುಪ್ರೇರಕರಾಗಿ ಮಾರ್ಗದರ್ಶನ ಮಾಡುವುದು- ಭವಿಷ್ಯದಲ್ಲಿ ಬಿಯಾಟ್ರಿಸ್ ರವರು ಯಾವ ಸೇವೆಯನ್ನು ನೀಡಬಹುದೆಂಬ ದೃಷ್ಟಿಕೋನವನ್ನು ಪಡೆಯಲು ಸಹಾಯ ಮಾಡುತ್ತದೆ. ಪುಸ್ತಕ 1 ರ ಅಧ್ಯಯನಕ್ಕೆ ಬಿಯಾಟ್ರಿಸ್ ಳನ್ನು ಆಹ್ವಾನಿಸುವಲ್ಲಿ ಅಲ್ಯಾಂಡ್ರಾಳು ಸೇರಿಸಬಹುದಾದ, ಈ ಎರಡು ಸೇವೆಯ ಕಾರ್ಯಗಳ ಕುರಿತು ಕೆಲವು ವಾಕ್ಯಗಳನ್ನು ಬರೆಯಲು ನಿಮ್ಮ ಗುಂಪಿನ ಶಿಕ್ಷಕರು ನಿಮಗೆ ಸಹಾಯ ಮಾಡಬಹುದು.

## ವಿಭಾಗ 11

ಸಾಂಚೇಜಸ್ ರವರ ಮನೆಗೆ ಅಲ್ಯಾಂಡ್ರಾಳ ಮುಂದಿನ ಭೇಟಿಯ ನಡುವೆ ಎರಡು ವಾರಗಳು ಕಳೆದುಹೋಗುವುದು. ಅದೇ ಅವಧಿಯಲ್ಲಿ ಬಿಯಾಟ್ರಿಸ್ ಳು ತೀವ್ರಗತಿಯ ಶಿಬಿರದಲ್ಲಿ ಭಾಗವಹಿಸಿ ಪುಸ್ತಕ-1ರಲ್ಲಿನ ಎರಡು ಘಟಕಗಳನ್ನು ಪೂರ್ಣಗೊಳಿಸಿದ್ದಳು. ಈಗ ಅವಳು ನೆರೆಹೊರೆಯದಲ್ಲಿ ವಾರಕ್ಕೆ ಎರಡು ಬಾರಿ ಐದು ಜನ ಮಿತ್ರರು ಇರುವ ತಂಡದೊಂದಿಗೆ ಮೂರನೆಯ ಘಟಕವನ್ನು ಅಧ್ಯಯನ ಮಾಡುತ್ತಿರುವಳು. ಸಾಂಚೇಜಸ್ ರವರ ಕುಟುಂಬದೊಂದಿಗೆ ಪ್ರಾರ್ಥನೆಯ ವಿಷಯಾಂಶದ ಕುರಿತು ಸಂಭಾಷಿಸಬಹುದು ಹಾಗೂ ಬಿಯಾಟ್ರಿಸ್ ನ ಸಹಕಾರ ಪಡೆಯಲು ಇದೊಂದು ಒಳ್ಳೆಯ ಅವಕಾಶವೆಂದು ಅಲ್ಯಾಂಡ್ರಾಳು ಆಲೋಚಿಸುವಳು. ನೀವು ಈಗಾಗಲೇ ಪುಸ್ತಕ-1ರಲ್ಲಿನ ಎರಡನೆಯ ಘಟಕವನ್ನು ಅಧ್ಯಯನ ಮಾಡಿರುವಿರಿ ಆದುದರಿಂದ ಅದರ ವಿಷಯ ವಸ್ತುವನ್ನು ಅಲ್ಯಾಂಡ್ರಾ ಮತ್ತು ಬಿಯಾಟ್ರಿಸ್ ಭೇಟಿಯಲ್ಲಿ ನಡೆದುದನ್ನು ಇಲ್ಲಿ ವಿವರಿಸುವುದು ಅಗತ್ಯವಿಲ್ಲ. ಘಟಕದ ಪುನರಾವಲೋಕನದ ನಂತರ ಈ ವಿಷಯಯಾಂಶದ ಬಗ್ಗೆ ಚರ್ಚಿಸಬಹುದಾದ ಮುಖ್ಯಾಂಶಗಳನ್ನು ನೀವು ಸಿದ್ಧಪಡಿಸಲು ಸಮರ್ಥರಾಗಿರುವಿರಿ. ನಿಮ್ಮ ವಿಚಾರಗಳನ್ನು ಈ ಕೆಳಕಂಡ ಸ್ಥಳದಲ್ಲಿ ಬರೆಯಿರಿ.

## ವಿಭಾಗ 12

ಸಾಂಚೇಜಸ್ ರವರ ಕುಟುಂಬಕ್ಕೆ ಅಲ್ಯಾಂಡ್ರಾಳು ನೀಡುತ್ತಿದ್ದ ಭೇಟಿಗಳು ಕೆಲವು ವಾರಗಳವರೆಗೆ ಮುಂದುವರೆಯಿತು. ಅವರ ಮಾತುಕತೆಗಳಲ್ಲಿ ಸ್ವಾಭಾವಿಕವಾಗಿಯೇ ಹಲವಾರು ವಿಷಯಗಳನ್ನು ಚರ್ಚಿಸುವ ಸದವಕಾಶಗಳು ಬರುತ್ತಿದ್ದವು ಅಂದರೆ ಪ್ರಾರ್ಥನೆ, ಆತ್ಮದ ಜೀವನ, ಆಧ್ಯಾತ್ಮಿಕ ಗುಣಗಳ ಬೆಳವಣಿಗೆ, ದೇವರ ನಿಯಮ ಮತ್ತು ವಿಧಾಯಕಗಳಿಗೆ ಬದ್ಧರಾಗಿರುವುದು ಮತ್ತು ಆತನ ಪ್ರೀತಿಯಲ್ಲಿ ದೃಢತೆ.  ಒಂದು ಸಂದರ್ಭದಲ್ಲಿ, ಅವರು ಆಡಳಿತ ವ್ಯವಸ್ಥೆಯ ಸಂಸ್ಥೆಯ ಕುರಿತು ಕೆಲವು ವಿಚಾರಗಳ ಬಗ್ಗೆ ಮಾತನಾಡಿದರು, ವಿಶಿಷ್ಟವಾಗಿ ಸ್ಥಳೀಯ ಮತ್ತು ರಾಷ್ಟ್ರೀಯ ಆಧ್ಯಾತ್ಮಿಕ ಸಭೆಗಳ ಬಗ್ಗೆಯೂ ಸಂಭಾಷಿಸಿದ್ದರು. ಒಂದರ ನಂತರ ನೀಡಿದ ಭೇಟಿಯಲ್ಲಿ ನಡೆಸಿದ ಎಲ್ಲಾ ವಿಷಯಗಳನ್ನು ಇಲ್ಲಿ ವಿವರಿಸುವುದು ಅನಗತ್ಯ. ಆದಾಗ್ಯೂ ಭಾಗವಹಿಸುವವರ ಸಂಭಾಷಣೆಯಿಂದ ಹೊರಹೊಮ್ಮಿದ ಎರಡು ಪ್ರಶ್ನೆಗಳಲ್ಲಿ ನಾವೀಗ ಒಂದನ್ನು ನೋಡುತ್ತೇವೆ. ಮೊದಲನೆಯದು ಸಮುದಾಯವು ನಡೆಸುವ ಸಭೆಗಳ ಸ್ವಭಾವದ ಬಗ್ಗೆ ಮತ್ತು ಎರಡನೆಯದು ಆರ್ಥಿಕ ಸಂಪನ್ಮೂಲಗಳ ಬಗೆಗೆ ಇರುವುದು. ನಾವು ಸಭೆಗಳ ವಿಚಾರದ ಬಗ್ಗೆ, ವಿಶೇಷವಾಗಿ ಹತ್ತೊಂಬತ್ತು ದಿನದ ಹಬ್ಬದ ಬಗ್ಗೆ ಈ ವಿಭಾಗದಲ್ಲೂ ಮತ್ತು ಮುಂದಿನದರಲ್ಲೂ ಆರ್ಥಿಕ ಪ್ರಶ್ನೆಯ ಬಗ್ಗೆ ತಿಳಿಯೋಣ.

ಈ ಕೆಳಕಂಡ ಅಂಶಗಳು ಹತ್ತೊಂಬತ್ತು ದಿನದ ಹಬ್ಬದ ವಿಷಯದ ಮೇಲೆ ನಡೆಸುವ ಸಂಭಾಷಣೆಗೆ ಆಧಾರವಾಗಿರುತ್ತವೆ.

- ಬಹಾಯಿ ಸಮುದಾಯದಲ್ಲಿ ವಿವಿಧ ಉದ್ದೇಶಗಳಿಗಾಗಿ ಸಭೆಗಳನ್ನು ನಡೆಸುವರು - ಪ್ರಾರ್ಥಿಸಲು, ಅಧ್ಯಯನಕ್ಕಾಗಿ, ವಿಶೇಷ ಸಂದರ್ಭಗಳ ಆಚರಣೆಗಾಗಿ, ಸಮುದಾಯದ ವ್ಯವಹಾರದ ಬಗ್ಗೆ ಸಮಾಲೋಚಿಸಲು ಹಾಗೂ ಸಮಾಜಕ್ಕೆ ಸೇವೆ ಸಲ್ಲಿಸಲು, ಕಾರ್ಯಗಳ ಬಗ್ಗೆ ಯೋಜನೆಗಾಗಿ ಚರ್ಚಿಸಲು. ಬಹಾ'ಉ'ಲ್ಲಾರವರು ಈ ಕೆಳಕಂಡ ವಾಗ್ದಾನವನ್ನು ಮಾಡಿರುವರು :

  **" ನನ್ನ ಜೀವ ಮತ್ತು ನನ್ನ ಧರ್ಮದ ಆಣೆ ! ದೈವ ಮಿತ್ರರು ಯಾವೆಲ್ಲಾ ನಿವಾಸಗಳನ್ನು ಪ್ರವೇಶಿಸುತ್ತಾರೋ ಮತ್ತು ದೇವರ ವೈಭವ ಮತ್ತು ಹೊಗಳಿಕೆಯ ಸ್ವರ ಎತ್ತುತ್ತಾರೋ, ಅಂತಹವರ ಸುತ್ತ ನಿಜವಾದ ಭಕ್ತರ ಆತ್ಮಗಳು ಮತ್ತು ಅನುಗ್ರಹಿತ ದೇವತೆಗಳು ಸುತ್ತು ವರಿಯುವರು."[23]**

- ಸಭೆಗಳಲ್ಲಿ ದೇವರ ನುಡಿಗಳನ್ನು ಕಲಿಯುವುದು ಹೃದಯಗಳಿಗೆ ಆನಂದವನ್ನು ತರುವುದಲ್ಲದೆ ಐಕ್ಯತೆಯ ಬಾಂಧವ್ಯವನ್ನು ದೃಢಗೊಳಿಸುತ್ತದೆ. ಬಹಾ'ಉ'ಲ್ಲಾರವರು ನಮಗೆ ಈ ರೀತಿ ಉಪದೇಶಿಸಿದ್ದಾರೆ :

  **" ಮಿತ್ರರು ಯಾವುದೇ ದೇಶದಲ್ಲಿರಲಿ ಅವರು ಸಭೆಗಳನ್ನು ನಡೆಸಲು ಒಟ್ಟುಗೂಡಬೇಕು, ಅಲ್ಲಿ ಅವರು ವಿವೇಕದಿಂದ ಮತ್ತು ನಿರರ್ಗಳವಾಗಿ ಮಾತನಾಡಬೇಕು ಹಾಗೂ ದೇವರ ವಚನಗಳನ್ನು ಓದಬೇಕು ; ಏಕೆಂದರೆ ದೇವರ ನುಡಿಗಳೇ ಪ್ರೀತಿಯ ಜ್ಯೋತಿಯನ್ನು ಉರಿಸುವುದು ಮತ್ತು ಅದನ್ನು ಪ್ರಜ್ವಲಿಸುವಂತೆ ಮಾಡುವುದು."[24]**

ಅಬ್ದುಲ್-ಬಹಾರವರು ಈ ರೀತಿ ಬರೆದಿರುವರು :-

**" ಸಭೆಗಳನ್ನು ನಡೆಸಿರಿ ಮತ್ತು ಸ್ವರ್ಗೀಯ ಬೋಧನೆಗಳನ್ನು ಪಠಿಸಿರಿ ಮತ್ತು ಓದಿರಿ, ಇದರಿಂದ ಆ ನಗರವು ಸತ್ಯದ ಬೆಳಕಿನಿಂದ ಪ್ರಕಾಶಿತವಾಗಬಹುದು ಮತ್ತು ಆ ಪ್ರದೇಶವು, ಪವಿತ್ರಾತ್ಮನ ದೃಢೀಕರಣದ ಮೂಲಕ ಒಂದು ರಮಣೀಯ ಸ್ವರ್ಗವಾಗುವುದು, ಏಕೆಂದರೆ ಈ ಯುಗವು ಸರ್ವ ವೈಭವನ ಶತಮಾನವಾಗಿದೆ ಹಾಗೂ ಮಾನವತೆಯ ಪ್ರಪಂಚದ ಏಕತೆಯ ಸ್ವರ ಮಾಧುರ್ಯವಾಗಿದ್ದು ಪೂರ್ವ ಪಶ್ಚಿಮ ದೇಶಗಳ ಜನರ ಕಿವಿಯನ್ನು ತಲುಪುತ್ತಿರುವುದು. "[25]**

- ಬಹಾಯಿ ಸಭೆಗಳಲ್ಲೆಲ್ಲಾ ಹತ್ತೊಂಬತ್ತು ದಿನದ ಹಬ್ಬದ ಸಭೆಗೆ ವಿಶೇಷ ಮಹತ್ವವಿದೆ. ಬಹಾಯಿ ಪಂಚಾಂಗದಲ್ಲಿ 19 ತಿಂಗಳುಗಳಿದ್ದು ಪ್ರತಿಯೊಂದು ತಿಂಗಳು 19 ದಿನಗಳನ್ನು ಹೊಂದಿದೆ, ಈ ಸಭೆಯನ್ನು ಬಹಾ'ಉ'ಲ್ಲಾರವರೇ ವಿಧಾಯಕ ಮಾಡಿರುವಂತೆ ಪ್ರತಿಯೊಂದು ಸ್ಥಳಗಳಲ್ಲೂ ಬಹಾಯಿಗಳು ತಿಂಗಳಿಗೊಮ್ಮೆ ಈ ಸಭೆಗೆ ಒಟ್ಟುಗೂಡುವರು:

  **"ಅಂತೆಯೇ, ಪ್ರತಿ ತಿಂಗಳಿಗೊಮ್ಮೆ, ಬರಿಯ ನೀರಿನಿಂದಲಾದರೂ ಉಪಚರಿಸಿ, ಹಬ್ಬವನ್ನು ಆಚರಿಸಬೇಕೆಂದು ವಿಧಾಯಕ ಮಾಡಲಾಗಿದೆ ; ಏಕೆಂದರೆ, ಭೌತಿಕ ಮತ್ತು ಸ್ವರ್ಗೀಯ ಸಾಧನಗಳಿಂದಾದರೂ ಹೃದಯಗಳನ್ನು ಒಂದುಗೂಡಿಸಲು ದೇವರು ಉದ್ದೇಶಿಸಿದ್ದಾರೆ. "[26]**

- ಹತ್ತೊಂಬತ್ತು ದಿನದ ಹಬ್ಬವು ಮೂರು ಭಾಗಗಳನ್ನು ಹೊಂದಿದೆ. ಮೊದಲನೆಯದು ಆಧ್ಯಾತ್ಮಿಕ ಭಾಗ, ಇದರಲ್ಲಿ ಪ್ರಾರ್ಥನೆಗಳನ್ನು ಪಠಿಸಲಾಗುವುದು ಮತ್ತು ಧರ್ಮದ ಪವಿತ್ರ ಬರಹಗಳನ್ನು ಓದಲಾಗುವುದು. ಎರಡನೆಯದು ಆಡಳಿತ ಭಾಗ, ಇದರಲ್ಲಿ ಸಮುದಾಯದ ವ್ಯವಹಾರಗಳ ಬಗ್ಗೆ ಸಮಾಲೋಚಿಸಲಾಗುವುದು. ಮೂರನೆಯ ಭಾಗವು ಸಾಮಾಜಿಕ ಒಡನಾಟಕ್ಕೆ ಸಂಬಂಧಿಸಿರುವುದಾಗಿದೆ.

- ಹತ್ತೊಂಬತ್ತು ದಿನದ ಹಬ್ಬದ ಆಧ್ಯಾತ್ಮಿಕ ಭಾಗದ ಪ್ರಾಮುಖ್ಯತೆಯ ಬಗ್ಗೆ ಒಂದು ಸೂಕ್ಷ್ಮ ಪರಿಕಲ್ಪನೆಯನ್ನು ನಮಗೆ ಅಬ್ದುಲ್ ಬಹಾರವರ ಈ ಕೆಳಕಂಡ ನುಡಿಗಳಿಂದ ದೊರೆಯುವುದು:

  **"ಓ ಪುರಾತನ ಸೌಂದರ್ಯದ ನಿಷ್ಠಾವಂತ ಸೇವಕರೇ! ಪ್ರತಿಯೊಂದು ಆವರ್ತದ ಪ್ರಕಟಣೆಯಲ್ಲೂ ಹಬ್ಬಗಳನ್ನು ಆಚರಿಸುವುದಕ್ಕೆ ಒಲವು ತೋರಲಾಗಿದೆ ಮತ್ತು ಪ್ರಿಯವಾಗಿದೆ, ದೇವರ ಪ್ರೀತಿಪಾತ್ರರಿಗೆ ಉಪಚರಿಸುವುದನ್ನು ವಿಧಿಸಲಾಗಿದ್ದು ಅದು ಹೊಗಳಿಕೆಗೆ ತಕ್ಕುದಾದ ಕೆಲಸವೆಂದು ತಿಳಿಯಲಾಗಿದೆ. ವಿಶೇಷವಾಗಿ ಇದು ಈ ಯುಗದಲ್ಲಿ ಹೋಲಿಕೆಗೆ ಅತೀತವಾಗಿದೆ , ಈ ಉದಾರವಾದ ಯುಗದಲ್ಲಿ ಅಂತಹ ಸಭೆಗಳು ಅತ್ಯಂತ ಶ್ಲಾಘನೀಯವಾಗಿದ್ದು, ಅದನ್ನು ದೇವರ ಆರಾಧನೆ ಮತ್ತು ಪ್ರಶಂಸೆಗಾಗಿ ಆಚರಿಸಲಾಗುವುದು. ಇಲ್ಲಿ ಪವಿತ್ರ ಶ್ಲೋಕಗಳನ್ನು, ಸ್ವರ್ಗೀಯ ಪದ್ಯಗಳನ್ನು ಹಾಗೂ ಸ್ತೋತ್ರಗಳನ್ನು ಸುಶ್ರಾವ್ಯವಾಗಿ ಹಾಡಲಾಗುವುದು ಅದರಿಂದ ಹೃದಯವು ಪರಿವರ್ತನೆಗೊಂಡು ಭಾವಪರವಶತೆಗೆ ಒಳಗಾಗುವುದು."[27]**

- ಹತ್ತೊಂಬತ್ತು ದಿನದ ಹಬ್ಬದ ಆಡಳಿತ ಭಾಗದಲ್ಲಿ ಹತ್ತಿರ ಮತ್ತು ದೂರದ ಬಹಾಯಿ ಸಮುದಾಯಗಳ ಚಟುವಟಿಕೆಗಳ ವರದಿಗಳನ್ನು ಮಿತ್ರರು ಹಂಚಿಕೊಳ್ಳುವರು, ತಮ್ಮದೇ ಸಮುದಾಯದಲ್ಲಿನ ಧರ್ಮದ ವ್ಯವಹಾರಗಳ ಬಗ್ಗೆ ಸಮಾಲೋಚಿಸುವರು ಮತ್ತು ಸಮಾಜದ ಒಳಿತಿಗಾಗಿ ಕೊಡುಗೆಗಳನ್ನು ನೀಡುವುದರ ಬಗ್ಗೆ ಪ್ರತಿಫಲಿಸುವರು. ವಿಶ್ವ

ನ್ಯಾಯ ಮಂದಿರದಿಂದ ಪಡೆದ ಮಾರ್ಗದರ್ಶನಗಳ ಪರಿಚಯ ಪಡೆಯುವರು ಅವರ ಯೋಜನೆಗಳ ಪ್ರಗತಿಯ ಕುರಿತು ಪ್ರತಿಫಲಿಸುವರು ಮತ್ತು ಧರ್ಮದ ಸಂಸ್ಥೆಗಳಿಗೆ ಸಲಹೆಗಳನ್ನು ನೀಡುವರು. ಹತ್ತೊಂಬತ್ತು ದಿನದ ಹಬ್ಬದ ವೇಳೆಯ ಸಮಾಲೋಚನೆಯು ಅತಿ ಮಹತ್ವವುಳ್ಳದ್ದು, ಏಕೆಂದರೆ ಇದರ ಮೂಲಕ ವಿಶ್ವವ್ಯಾಪಿ ಬಹಾಯಿ ಸಮುದಾಯಗಳ ವ್ಯವಹಾರಗಳಲ್ಲಿ ಪ್ರತಿಯೊಬ್ಬ ಬಹಾಯಿಯು ಭಾಗವಹಿಸಿದಂತಾಗುವುದು.

- ಹಬ್ಬದ ಸಾಮಾಜಿಕ ಭಾಗವು ಒಡನಾಟ ಪಡೆಯಲು ಒಳ್ಳೆಯ ಸಂದರ್ಭ ಅದೇ ರೀತಿ ಅತಿಥಿಸತ್ಕಾರ ಮತ್ತು ಪ್ರೀತಿಯನ್ನು ಹೆಚ್ಚಿಸಲು ಸಹಕಾರಿ. ಸಂಗೀತಗಳನ್ನು ಹಾಡಬಹುದು, ಪ್ರೇರಣೆಯನ್ನು ನೀಡುವ ಭಾಷಣಗಳನ್ನು ಮಾಡಬಹುದು ಮತ್ತು ಮಕ್ಕಳಿಂದ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಬಹುದು. ಸಂಕ್ಷಿಪ್ತವಾಗಿ ಹೇಳುವುದಾದರೆ, ಜಾಗ್ರತೆಯಿಂದ ಆಯ್ದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂತೋಷ ಮತ್ತು ಘನತೆಗೆ ತಕ್ಕಂತೆ ಆಚರಿಸುವುದರಿಂದ ಹತ್ತೊಂಬತ್ತು ದಿನದ ಹಬ್ಬದ ಈ ಭಾಗವನ್ನು ಶ್ರೀಮಂತಗೊಳಿಸಬಹುದು.

- ಹತ್ತೊಂಬತ್ತು ದಿನದ ಹಬ್ಬವು ಧರ್ಮದ ಆಡಳಿತಾತ್ಮಕ ವ್ಯವಸ್ಥೆಯ ಒಂದು ಪ್ರಮುಖ ವೈಶಿಷ್ಟ್ಯವಾಗಿದೆ. ಇದು ಆಧ್ಯಾತ್ಮಿಕ, ಆಡಳಿತಾತ್ಮಕ ಮತ್ತು ಸಾಮಾಜಿಕ ಅಂಶಗಳನ್ನು ಸಮುದಾಯ ಜೀವನದಲ್ಲಿ ಸೇರಿಸುವುದು. ಈ ಎಲ್ಲಾ ಅಂಶಗಳಿಗೂ ಸಮಾನವಾದ ಮಹತ್ವವನ್ನು ನೀಡಬೇಕಾದುದು ಅಗತ್ಯ ಏಕೆಂದರೆ ಹಬ್ಬದ ಸಫಲತೆಯು ಈ ಮೂರು ಅಂಶಗಳನ್ನು ಸರಿಯಾಗಿ ನಡೆಸಿ ಕೊಡುವುದರಲ್ಲಿ ಅಡಗಿದೆ. ವಿಶ್ವ ನ್ಯಾಯ ಮಂದಿರವು 1989ನೇ ಆಗಸ್ಟ್ ನ ತನ್ನ ಸಂದೇಶದಲ್ಲಿ ಈ ರೀತಿ ತಿಳಿಸಿದೆ:

**" ಬಹಾ'ಉ'ಲ್ಲಾರವರ ವಿಶ್ವ ವ್ಯವಸ್ಥೆಯು ಮಾನವ ಸಮಾಜದ ಎಲ್ಲಾ ಘಟಕಗಳನ್ನೂ ಒಳಗೊಂಡಿದೆ. ಅದು ಆಧ್ಯಾತ್ಮಿಕ, ಆಡಳಿತಾತ್ಮಕ ಮತ್ತು ಸಾಮಾಜಿಕ ಜೀವನದ ಅಂಶಗಳನ್ನೂ ಒಂದುಗೂಡಿಸುತ್ತದೆ; ನವ ನಾಗರಿಕತೆಯನ್ನು ಕಟ್ಟುವತ್ತ ಮಾನವನ ವಿವಿಧತೆಯನ್ನು ಅಭಿವ್ಯಕ್ತಿಗೊಳಿಸುವ ಕಾಲುವೆಯಂತೆ ಆಗುತ್ತದೆ. ಸಮಾಜದ ಅಡಿಪಾಯವಾಗಿ ಹತ್ತೊಂಬತ್ತು ದಿನದ ಹಬ್ಬವು ಎಲ್ಲಾ ಅಂಶಗಳನ್ನು ಒಳಗೊಂಡಿರುತ್ತದೆ. ಹಳ್ಳಿ, ಪಟ್ಟಣ ಮತ್ತು ನಗರಗಳಲ್ಲಿ ನಡೆಸಿಕೊಡುವ ಈ ಹಬ್ಬವು ಒಂದು ಸಂಸ್ಥೆಯಾಗಿದ್ದು, ಇದರ ಸದಸ್ಯರೆಲ್ಲರೂ ಬಹಾನ ಜನರಾಗಿರುವರು. ಐಕ್ಯತೆಯನ್ನು ಹೆಚ್ಚಿಸುವುದು, ಅಭಿವೃದ್ಧಿಯನ್ನು ಸಾಧಿಸುವುದು ಮತ್ತು ಸಂತೋಷವನ್ನು ಪೋಷಿಸುವುದೇ ಇದರ ಉದ್ದೇಶವಾಗಿದೆ. "[28]**

- ಈ ರೀತಿ ಮಹತ್ವವುಳ್ಳ ಹತ್ತೊಂಬತ್ತು ದಿನದ ಹಬ್ಬವನ್ನು ನಾವು ಅವಸರವಸರವಾಗಿ ಆಚರಿಸುವಂತಿಲ್ಲ. ಪ್ರಾರ್ಥನೆ, ಮತ್ತು ಪ್ರತಿಫಲನೆಯ ಮೂಲಕ ಆತನು ಅಥವಾ ಆಕೆಯು ಆಧ್ಯಾತ್ಮಿಕವಾಗಿ ಹಬ್ಬಕ್ಕೆ ತನ್ನನ್ನು ತಾನು ಸಿದ್ಧತೆ ಮಾಡಿಕೊಳ್ಳಬೇಕು ಮತ್ತು ಹಬ್ಬದ ವೇಳೆಯೂ ಪ್ರತಿಯೊಬ್ಬರೂ ಮನಃ ಪೂರ್ವಕವಾಗಿ ಭಾಗವಹಿಸಬೇಕು, ಅದು ಆಧ್ಯಾತ್ಮಿಕ ಭಾಗದಲ್ಲಿ ಒಂದು ಪ್ಯಾರಾವನ್ನು ಓದುವಾಗವಿರಲಿ ಅಥವಾ ಕೇಳುವಾಗವಿರಲಿ; ವರದಿಗಳನ್ನು ನೀಡುವಾಗ, ಮಾರ್ಗದರ್ಶನ ಪಡೆಯುವಾಗ ಅಥವಾ ಸಲಹೆ ನೀಡುವಾಗ, ಅತಿಥೇಯನಾಗಿ ಆಗಲಿ ಅಥವಾ ಕೇವಲ ಭಾಗವಹಿಸುವವರಾಗಿಯೇ ಆಗಲಿ, ಪ್ರತಿಯೊಬ್ಬರೂ ಸಂತೋಷ ಮತ್ತು ಪ್ರಕಾಶಯುತರಾಗಿರಬೇಕು. ವಿಶ್ವನ್ಯಾಯ ಮಂದಿರವು ಅದೇ ಪತ್ರದಲ್ಲಿ ಹತ್ತೊಂಬತ್ತು ದಿನದ ಹಬ್ಬವನ್ನು ಕುರಿತು ಈ ರೀತಿ ಬರೆದಿದೆ :

**"ಹತ್ತೊಂಬತ್ತು ದಿನದ ಹಬ್ಬಕ್ಕೆ ತಯಾರಿ ನಡೆಸುವಲ್ಲಿ ಮೊದಲೇ ಸೂಕ್ತವಾದ ಬರಹಗಳನ್ನು ಆಯ್ದು ಉತ್ತಮವಾಗಿ ಓದುವವರಿಗೆ ನೀಡಿರಬೇಕು. ಅವುಗಳನ್ನು ಓದುವಾಗ ಅಥವಾ ಕೇಳಿಸಿಕೊಳ್ಳುವುದರಲ್ಲಿ ನಾವು ಶಿಷ್ಟಾಚಾರವನ್ನು ವಹಿಸುವುದು ಅಗತ್ಯ. ಹಬ್ಬವನ್ನು ಆಚರಿಸುವ ಸ್ಥಳವು ಮನೆಯ ಒಳಗೆ ಅಥವಾ ಹೊರಗೇ ಇರಲಿ ಹೆಚ್ಚಿನ ಗಮನ ನೀಡಬೇಕು. ಅದರ ಸ್ವಚ್ಛತೆ, ಅಂದಗೊಳಿಸುವ ವ್ಯವಸ್ಥೆಗಳು ಅನುಭವದ ಮೇಲೆ ಹೆಚ್ಚಿನ ಪರಿಣಾಮ ಬೀರುವುದು. ಸಮಯಕ್ಕೆ ಸರಿಯಾಗಿ ಬರುವುದು ಮತ್ತು ಕಾರ್ಯಕ್ರಮವನ್ನು ನಡೆಸುವುದೂ ಸಹ ಹಬ್ಬಕ್ಕೆ ಉತ್ತಮ ತಯಾರಿ.**

**"ಒಟ್ಟಿನಲ್ಲಿ ಹತ್ತೊಂಬತ್ತು ದಿನದ ಹಬ್ಬದ ಸಫಲತೆಯು ಹಬ್ಬಕ್ಕೆ ನಡೆಸುವ ತಯಾರಿ ಮತ್ತು ಬಿಡಿ ವ್ಯಕ್ತಿಗಳಾಗಿ ಭಾಗವಹಿಸುವವರ ಮೇಲೆ ಆಧಾರಿತವಾಗಿದೆ. ಪ್ರಿಯ ಗುರುಗಳು ಈ ಕೆಳಕಂಡ ಸಲಹೆಯನ್ನು ನೀಡಿರುವರು : ಹತ್ತೊಂಬತ್ತು ದಿನದ ಸಭೆಗಳಿಗೆ ಹೆಚ್ಚಿನ ಒತ್ತು ನೀಡಿರಿ, ಅದರಿಂದ ಇಂತಹ ಸಂದರ್ಭಗಳಲ್ಲಿ ದೈವ ಮಿತ್ರರು ಹಾಗೂ ದಯಾಮಯನ ಸೇವಕಿಯರು ದೈವೀ ಸಾಮ್ರಾಜ್ಯದತ್ತ ಮುಖವನ್ನು ತಿರುಗಿಸಬಹುದು, ಪ್ರಾರ್ಥನೆಗಳನ್ನು ಪಠಿಸಬಹುದು, ದೇವರ ಸಹಾಯಕ್ಕೆ ಯಾಚಿಸಬಹುದು, ಪರಸ್ಪರರನ್ನು ಸಂತೋಷದಿಂದ ಕಾಣಬಹುದು, ಪಾವಿತ್ರ್ಯ ಮತ್ತು ದಿವ್ಯತೆಯಲ್ಲಿ ಹಾಗು ದೇವರ ಭಯದಲ್ಲಿ, ಸ್ವಾರ್ಥ ಮತ್ತು ಉದ್ವೇಗಗಳನ್ನು ನಿಗ್ರಹಿಸುವಲ್ಲಿ ಬೆಳೆಯಬಹುದು. ಈ ರೀತಿಯಾಗಿ ಅವರು ಈ ಭೌತಿಕ ಪ್ರಪಂಚದಿಂದ ಬೇರ್ಪಟ್ಟು ಆಧ್ಯಾತ್ಮಿಕತೆಯ ಸುವಾಸನೆಯಲ್ಲಿ ಮುಳುಗಬಹುದು. "[29]**

ಎಂದಿನಂತೆ, ಮೇಲಿನ ವಿಷಯಗಳನ್ನು ಹಲವಾರು ಬಾರಿ ಓದಿರಿ ಮತ್ತು ನಿಮ್ಮ ತಂಡದಲ್ಲಿ ಚರ್ಚಿಸಿರಿ ಅದರಿಂದ ಅವುಗಳನ್ನು ನಿಮ್ಮದೇ ಆದ ಮಾತಿನಲ್ಲಿ ಸುಲಭವಾಗಿ ಹೇಳಲು ಕಲಿಯುವಿರಿ. ಈ ಕೆಳಕಂಡ ಅಭ್ಯಾಸವು ಹತ್ತೊಂಬತ್ತು ದಿನದ ಹಬ್ಬದ ಪ್ರಾಮುಖ್ಯತೆಯ ಬಗ್ಗೆ ಇನ್ನೂ ಆಳವಾದ ಅರ್ಥವನ್ನು ಗಳಿಸಲು ಸಹಾಯವಾಗಬಹುದು :-

1) ನಾವು ದೇವರನ್ನು ಹೊಗಳುವ ಮತ್ತು ವೈಭವೀಕರಿಸುವ ನಿವಾಸದಲ್ಲಿ ಒಂದುಗೂಡುವ ಪ್ರತಿಯೊಂದು ನಿವಾಸದ ವೈಶಿಷ್ಟ್ಯವೇನೆಂದು ಬಹಾ'ಉ'ಲ್ಲಾರವರು ನಮಗೆ ಭರವಸೆ ನೀಡಿರುವರು?

______________________________________________________________________________

______________________________________________________________________________

______________________________________________________________________

2) ಮೇಲಿನ ಎರಡನೆಯ ಉಲ್ಲೇಖನದಲ್ಲಿ ಬಹಾ'ಉ'ಲ್ಲಾರವರು ನಮಗೆ ಹೇಳಿರುವುದೇನೆಂದರೆ ನಾವು ಸಭೆಗಳನ್ನು ನಡೆಸಲು ಒಂದುಗೂಡಿದಾಗ ನಾವು ______________ ಮತ್ತು_____________________ ಮಾತನಾಡಬೇಕು ಮತ್ತು ದೇವರ ____________________________ ಓದಬೇಕು; ಏಕೆಂದರೆ ದೇವರ ನುಡಿಗಳೇ______________________________ ಮತ್ತು ಅದನ್ನು____________________

3) ಮೇಲಿನ ಮೂರನೆಯ ಉಲ್ಲೇಖನದಲ್ಲಿ ಅಬ್ದುಲ್ ಬಹಾರವರು ನಮಗೆ ಸಭೆಗಳನ್ನು ನಡೆಸಿರಿ ಮತ್ತು ಸ್ವರ್ಗೀಯ ಬೋಧನೆಗಳನ್ನು ಪಠಿಸಿರಿ ಎಂದು ಸಲಹೆ ನೀಡಿರುವರು, ಇದರಿಂದ

- ನಾವು ವಾಸಿಸುವ ನಗರವು___________________________

- ನಾವು ವಾಸಿಸುವ ಪ್ರದೇಶವು______________________________-____

4) ಬಹಾಯಿ ಪಂಚಾಂಗದಲ್ಲಿ ಎಷ್ಟು ತಿಂಗಳುಗಳಿವೆ ?________________________________________

5) ಪ್ರತಿ ತಿಂಗಳಿನಲ್ಲಿ ಎಷ್ಟು ದಿನಗಳಿವೆ? __________________________________________________

6)ಬಹಾಯಿಗಳಲ್ಲಿ ಪ್ರತಿ ತಿಂಗಳಿನಲ್ಲಿ ನಡೆಯುವ ವಿಶೇಷ ಕಾರ್ಯಕ್ರಮವು ಯಾವುವು?_____________________________________________________________________

______________________________________________________________________________

_____________

______________________________________________________________________________

______________________________________________________________________________

______________________________________________________________________________

______________________________________________________________________________

__________________________

7)ಹತ್ತೊಂಬತ್ತು ದಿನದ ಹಬ್ಬದ 3 ಭಾಗಗಳು ಯಾವುವು?

______________________________________________________________________________

______________________________________________________________________________

______________________________________________________________________________

______________________________________________________________________________

__________________________

8) ಹತ್ತೊಂಬತ್ತು ದಿನದ ಹಬ್ಬದ ಈ ಭಾಗಗಳನ್ನು ನಾವು ವ್ಯವಸ್ಥಿತವಾಗಿ ನಡೆಸಿಕೊಂಡು ಬರಬೇಕೇ?

______________________________________________________________________________

______________________________________________________________________________

______________________________________________________________________________

______________________________________________________________________________

__________________________

9) ಹತ್ತೊಂಬತ್ತು ದಿನದ ಹಬ್ಬದ ಆಧ್ಯಾತ್ಮಿಕ ಭಾಗದ ಉದ್ದೇಶವೇನು?

______________________________________________________________________________

______________________________________________________________________________

______________________________________________________________________________

10) ಹತ್ತೊಂಬತ್ತು ದಿನದ ಹಬ್ಬದಲ್ಲಿ ಆಡಳಿತ ಭಾಗದ ಉದ್ದೇಶವೇನು ?

______________________________________________________________________________

______________________________________________________________________________

_______________________________________________________________________________________________

_______________________________________________________________________________________________

11) ಹತ್ತೊಂಬತ್ತು ದಿನದ ಹಬ್ಬದಲ್ಲಿ ಸಾಮಾಜಿಕ ಭಾಗದ ಉದ್ದೇಶವೇನು ?

_______________________________________________________________________________________________

_______________________________________________________________________________________________

_______________________________________________________________________________________________

_______________________________________________________________________________

12) ಹತ್ತೊಂಬತ್ತು ದಿನದ ಹಬ್ಬದ ಆಡಳಿತಾತ್ಮಕ ಭಾಗದಲ್ಲಿ ಈ ಕೆಳಕಂಡ ವಿಚಾರಗಳು ಚರ್ಚಿಸಲು ಸೂಕ್ತವಾದುವೇ?

______ಸಮುದಾಯದ ಚಟುವಟಿಕೆಗಳಿಗೆ ಅಗತ್ಯವಾದ ಆರ್ಥಿಕ ವಿಚಾರ.

______ರಾಷ್ಟ್ರೀಯ ಕಾಲ್ಚೆಂಡಿನ ತಂಡದ ಸಫಲತೆಯ ಬಗೆಗೆ.

______ಸಮುದಾಯದ ಇಬ್ಬರು ಮಿತ್ರರೊಳಗಿನ ಒಮ್ಮತ್ತವಲ್ಲದ ಸಮಸ್ಯೆಯನ್ನು ಪರಿಹರಿಸುವುದು.

______ಸಮುದಾಯದಲ್ಲಿನ ಮಕ್ಕಳ ತರಗತಿಯ ಪ್ರಗತಿಯ ಕುರಿತು.

______ಸಮುದಾಯವು ಹಿಂದಿನ ವಾರದಲ್ಲಿ ಅಧ್ಯಯನ ಮಾಡುತ್ತಿದ್ದ ಬರಹಗಳಲ್ಲಿನ ಒಂದು ವಾಕ್ಯಾಂಶದ ಅರ್ಥವನ್ನು ತಿಳಿಯುವುದಕ್ಕಾಗಿ.

______ಸಮುದಾಯದಲ್ಲಿ ಕಿಶೋರರ ಗುಂಪಿನ ಕಾರ್ಯಕ್ರಮದ ಚೈತನ್ಯವನ್ನು ಹುರಿದುಂಬಿಸುವುದು.

______ಸ್ಥಳೀಯ ಯುವಕರಿಗಾಗಿ ಉದ್ಯೋಗಾವಕಾಶವನ್ನು ಪ್ರಾರಂಭಿಸುವಿಕೆಯ ಬಗ್ಗೆ.

______ಕಿಶೋರರ ತಂಡಕ್ಕೆ ಸೇವಾ ಯೋಜನೆಗಳು ಕ್ಲಿಷ್ಟಕರವಾದಾಗ ಸಮುದಾಯವು ಅವರಿಗೆ ಸಹಕರಿಸುವುದು ಕುರಿತು.

______ಮಕ್ಕಳ ಮತ್ತು ಕಿಶೋರರ ತರಗತಿಗಳಲ್ಲಿ ಭಾಗವಹಿಸುವವರ ಪೋಷಕರನ್ನು ಅವರ ಶೈಕ್ಷಣಿಕ ಪ್ರಗತಿಯು ತರಬೇತಿ ಸಂಸ್ಥೆಯಿಂದ ನೀಡಿರುವುದರ ಕುರಿತು ಭೇಟಿ ನೀಡುವಿಕೆಯ ಬಗ್ಗೆ.

______ಸಮುದಾಯದ ಭಕ್ತ್ಯಾತ್ಮಕ ಗುಣವನ್ನು ಬಲಗೊಳಿಸುವ ಕುರಿತು.

______ದೂರದರ್ಶನದ ಮೂಲಕ ಪ್ರದರ್ಶನಗಳ ವೇಳಾ ಪಟ್ಟಿಯ ಬಗ್ಗೆ.

______ಅಧ್ಯಯನ ವೃತ್ತಗಳನ್ನು ನಡೆಸುವಾಗ ಎದುರಿಸಿದ ಆನಂದದಾಯಕ ಮತ್ತು ಶಿಸ್ತುಬದ್ಧ ಪರಿಸರದಲ್ಲಿ ಗಳಿಸಿದ ಅಂತದೃಷ್ಟಿ.

______ಮುಂಬರುವ ಪವಿತ್ರ ದಿನಗಳ ಆಚರಣೆಯ ಕುರಿತು.

______ಸಮುದಾಯ ನಿರ್ಮಾಣದ ಪ್ರಕ್ರಿಯೆಯಿಂದ ಉಂಟಾದ ಸಾಮಾಜಿಕ ಕಾರ್ಯದ ಬಗ್ಗೆ ಚರ್ಚೆ.

13) ಈ ಕೆಳಕಂಡ ಪ್ರಶ್ನೆಗಳನ್ನು ನಿಮ್ಮ ತಂಡದಲ್ಲಿ ಚರ್ಚಿಸಿರಿ ಹಬ್ಬದಲ್ಲಿನ ಮೂರು ಭಾಗಗಳಿಗೂ ಸಮತೋಲನವಿರಬೇಕು ಏಕೆ?

14) ಈ ಕೆಳಕಂಡ ಪ್ರಶ್ನೆಗಳನ್ನು ಚರ್ಚಿಸಿರಿ:

ಅ. ಹಬ್ಬದ ಆತಿಥೇಯರು ನೀವಾದಾಗ ನೀವು ಮಾಡಬೇಕಾದ ತಯಾರಿ.
ಆ. ಹಬ್ಬದಲ್ಲಿ ನೀವು ಕೇವಲ ಭಾಗವಹಿಸುವವರಾದಲ್ಲಿ ಮಾಡಬೇಕಾದ ತಯಾರಿ.

# ವಿಭಾಗ 13

ಧರ್ಮದ ಬಗ್ಗೆ ಸಂಭಾಷಣೆ ನಡೆಸುವಾಗ ಆಗಾಗ ಏಳುವ ಎರಡನೆಯ ಪ್ರಶ್ನೆಯೇ ಬಹಾಯಿ ಸಮುದಾಯ ತನ್ನ ಆರ್ಥಿಕ ಅಗತ್ಯಗಳನ್ನು ಹೇಗೆ ಪೂರೈಸುವುದು ಎಂಬುದು. ಅಂತಹ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಲು ಈ ಕೆಳಕಂಡ ಕೆಲವು ಅಂಶಗಳು ನಿಮಗೆ ಸಹಾಯವಾಗಬಹುದು :

- ಬಹಾಯಿ ಸಮುದಾಯವು ತನ್ನ ಬೌತಿಕ ಅಗತ್ಯಗಳಿಗೆ ಗಮನ ನೀಡಲು ಉಪಯೋಗಿಸುವ ಸಾಧನವೇ ಬಹಾಯಿ ನಿಧಿಯಾಗಿದೆ. ಅದು ಧರ್ಮದ ವಿವಿಧ ಹಂತಗಳಲ್ಲಿನ ಸಂಸ್ಥೆಗಳಿಂದ ಕಾರ್ಯನಿರ್ವಹಿಸುವುದು : ಅವು ಸ್ಥಳೀಯ, ರಾಷ್ಟ್ರೀಯ, ಖಂಡಾಂತರ ಮತ್ತು ಅಂತರಾಷ್ಟ್ರೀಯ. ತಮ್ಮ ಧರ್ಮವನ್ನು ಉನ್ನತ ಗೊಳಿಸುವ ಪ್ರಯತ್ನಗಳ ಖರ್ಚುಗಳಿಗೆ ತಾವೇ ಭರಿಸಬೇಕೆಂದು ಬಹಾಯಿಗಳು ನಂಬಿರುವರು, ಹಾಗೂ ನಿಧಿಗೆ ನೀಡುವ ಕೊಡುಗೆಯು ಕೇವಲ ಸಮುದಾಯದ ಸದಸ್ಯರಿಂದ ಪಡೆದಿರುವುದೇ ಆಗಿರುವುದು.

- ನಿಧಿಗೆ ಕಾಣಿಕೆ ನೀಡುವುದು ಒಂದು ಸ್ವಯಂ ಪ್ರೇರಿತ ಕಾರ್ಯ. ಇದೊಂದು ಗೌಪ್ಯ ಅಂದರೆ ಕೇವಲ ವ್ಯಕ್ತಿ ಹಾಗೂ ಧರ್ಮದ ಸಂಸ್ಥೆಯೊಳಗಿನ ವಿಚಾರವಾಗಿರುತ್ತದೆ. ಕೊಡುಗೆ ನೀಡುವ ಅವರ ಹೆಸರು ಮತ್ತು ಮೊತ್ತವನ್ನು ಘೋಷಿಸಲಾಗುವುದಿಲ್ಲ. ಕಾಣಿಕೆ ನೀಡಲೇಬೇಕೆಂದು ಸಮುದಾಯದ ಮಿತ್ರರನ್ನು ಬಲವಂತ ಪಡಿಸಲಾಗುವುದಿಲ್ಲ. ಸಂಸ್ಥೆಗಳು ಸಮುದಾಯಗಳಲ್ಲಿ ಸಾಮಾನ್ಯ ರೀತಿಯಲ್ಲಿ ತಿಳಿಸುವರು, ನಿಧಿಯ ಪ್ರಾಮುಖ್ಯತೆಯ ಮತ್ತು ಅದರ ಬೇಡಿಕೆಗಳ ಬಗ್ಗೆ ವಿಷಯವನ್ನು ನೆನಪಿಸುವರು. ಕೆಲವೊಮ್ಮೆ ಒಂದು ಸಮುದಾಯವು ಕಾಣಿಕೆ ನೀಡುವ ಒಂದು ಗುರಿಯನ್ನು ಇಟ್ಟುಕೊಳ್ಳಬಹುದು. ಆದರೆ ವ್ಯಕ್ತಿಗಳಿಗೆ ಇಂತಿಷ್ಟೇ ಮೊತ್ತವನ್ನು ನೀಡಬೇಕೆಂದು ನಿಗದಿಗೊಳಿಸಬಾರದು ಹಾಗೂ ಹಣವನ್ನು ಬೇಡಬಾರದು. ಅದನ್ನು ಪ್ರತಿವ್ಯಕ್ತಿಯ ನಿರ್ಧಾರಕ್ಕೆ ಬಿಡಬೇಕು, ಎಷ್ಟು ಕೊಡುಗೆ ನೀಡಬೇಕೆಂಬುದನ್ನು ಈ ತತ್ವದ ಅವರ ತಿಳುವಳಿಕೆಯಂತೆ ಅವರೇ ನಿರ್ಧರಿಸಬಹುದು.

- ನಾವು ಕಟ್ಟ ಬೇಕಾಗಿರುವ ನಾಗರಿಕತೆಯು ಭೌತಿಕ ಹಾಗೂ ಆಧ್ಯಾತ್ಮಿಕವಾಗಿ ಸಮೃದ್ಧವಾದಂತಹುದು. ಕೆಲವು ನಿಬಂಧನೆಗಳಿಗೆ ಒಳಪಟ್ಟಾಗ ಮಾತ್ರ ಸಂಪತ್ತು ಸ್ವೀಕಾರಾರ್ಹವಾಗಿರುವುದು. ಅದನ್ನು ಪ್ರಾಮಾಣಿಕ ಕೆಲಸದಿಂದ ಗಳಿಸಿರಬೇಕು ನಾವು ಅದನ್ನು ಮಾನವತೆಯ ಒಳಿತಿಗಾಗಿ ಮಾತ್ರ ಉಪಯೋಗಿಸಬೇಕು. ಇಡೀ ಸಮುದಾಯವೇ ಉನ್ನತಿಗೇರಿಸಲ್ಪಡಬೇಕು; ಅಧಿಕ ಸಂಖ್ಯೆಯ ಜನರು ಜೀವನದ ಕನಿಷ್ಟ ಬೇಡಿಕೆಗಳಿಗೂ ಸಂಕಟ ಪಡುತ್ತಿರುವಾಗ ಕೇವಲ ಕೆಲವೇ ಜನರು ಶ್ರೀಮಂತರಾಗಿರುವುದು ಸ್ವೀಕಾರಾರ್ಹವಲ್ಲ. ಗುಹ್ಯ ವಚನದಲ್ಲಿ ಬಹಾ'ಉ'ಲ್ಲಾರವರು ನಮಗೆ ಈ ರೀತಿ ಹೇಳಿರುವರು :

  **"ಅತ್ಯುತ್ತಮ ಮನುಷ್ಯರೆಂದರೆ, ಸಕಲ ಲೋಕಗಳ ಸ್ವಾಮಿಯಾದ ಭಗವಂತನ ಪ್ರೇಮಕ್ಕೋಸ್ಕರ, ಯಾರು ತಮ್ಮ ಉದ್ಯೋಗದಿಂದ ದುಡಿದು ತಮ್ಮ ಹಾಗೂ ತಮ್ಮ ಕುಟುಂಬದ ಉದರ ನಿರ್ವಹಣೆಯನ್ನು ಮಾಡಿಕೊಳ್ಳುವವರೇ ಆಗಿರುವರು."[30]**

  **"…. ನೀವು ಒಳ್ಳೆಯ ಹಾಗು ಬೆರಗುಗೊಳಿಸುವಂತಹ ಫಲಗಳನ್ನು ನೀಡಲೇಬೇಕು ಅದರಿಂದ ನೀವು ಮತ್ತು ಇತರರು ಪ್ರಯೋಜನ ಪಡೆಯಲೇಬೇಕು. ಈ ರೀತಿಯಾಗಿ ಪ್ರತಿಯೊಬ್ಬರೂ ಕೈ ಕೆಲಸಗಳಲ್ಲಿ, ವೃತ್ತಿಗಳಲ್ಲಿ, ತೊಡಗಿರಲೇ ಬೇಕೆಂದು ವಿಧಿಸಲ್ಪಟ್ಟಿದೆ, ಅದರಲ್ಲಿ ಸಂಪತ್ತಿನ ರಹಸ್ಯವಿದೆ. ಓ ತಿಳುವಳಿಕೆಯುಳ್ಳ ಮಾನವರೇ!" [31]**

  ಅಬ್ದುಲ್ ಬಹಾರವರು ಈ ರೀತಿ ವಿವರಿಸಿರುವರು :

  **"ಇಡೀ ಜನತೆಯೇ ಶ್ರೀಮಂತವಾಗಿದ್ದರೆ ಸಂಪತ್ತು ಅತ್ಯಂತ ಶ್ಲಾಘನೀಯವಾದುದಾಗಿರುವುದು. ಆದರೆ, ಕೆಲವರು ಕಡು ಬಡವರಾಗಿದ್ದು ಇನ್ನೂ ಕೆಲವರು ಅತಿರೇಕದ ಸಂಪತ್ತನ್ನು ಹೊಂದಿದ್ದರೆ, ಆ ಸಂಪತ್ತಿನಿಂದ ಯಾವುದೇ ಫಲ ಅಥವಾ ಲಾಭವು ದೊರಕುವುದಿಲ್ಲ, ಆಗ ಅದು ಅದರ ಮಾಲೀಕರಿಗೆ ಹೊರೆಯಾಗಿರುವುದಷ್ಟೇ".[32]**

- ಅನ್ಯಾಯ ಮತ್ತು ಕಡುಬಡತನದಿಂದ ಮುಕ್ತವಾದ ಒಂದು ಸಮಾಜವನ್ನು ಕಟ್ಟಬೇಕಾದರೆ ನಾವೆಲ್ಲರೂ ಉದಾರವಾಗಿ ಕೊಡುಗೆ ನೀಡಲೇಬೇಕು. ನಮ್ಮ ಆರ್ಥಿಕ ಸಂಪನ್ಮೂಲವು ಅದೆಷ್ಟೇ ಅಲ್ಪವಾದರೂ, ನಾವು ಮಾನವತೆಯ ಪ್ರಗತಿಗೆ ಸ್ವಲ್ಪವಾದರೂ ನೀಡಬೇಕಾದುದು ಅವಶ್ಯಕ, ಏಕೆಂದರೆ ನಿಜವಾದ ಪ್ರಗತಿಯು ಕೇವಲ ನೀಡುವುದರ ಮೂಲಕವೇ ಸಾಧಿಸಲ್ಪಡುವುದು. ಉದಾರತೆಯು ಮಾನವ ಆತ್ಮದ ಒಂದು ಗುಣವಾಗಿದೆ; ಅದು ನಮ್ಮ ಭೌತಿಕ ಪರಿಸ್ಥಿತಿಗೆ ಸಂಬಂಧಿಸಿಲ್ಲ. ಗುಹ್ಯ ವಚನಗಳಲ್ಲಿ ಬಹಾ'ಉ'ಲ್ಲಾರವರು ಈ ರೀತಿ ಹೇಳಿರುವರು :

  **" ನೀಡುವುದು, ಮತ್ತು ಧಾರಾಳತನವು ನನ್ನ ಗುಣವಾಗಿದೆ : ನನ್ನ ಸದ್ಗುಣಗಳಿಂದ ಯಾರು ತಮ್ಮನ್ನು ಅಲಂಕರಿಸಿಕೊಳ್ಳುತ್ತಾರೋ ಅವರು ಸದಾ ಸುಖಿಗಳಾಗಿರುತ್ತಾರೆ. "[33]**

- ನಾವು ಯಾವಾಗಲೂ ಜ್ಞಾಪಕದಲ್ಲಿಟ್ಟುಕೊಳ್ಳಬೇಕಾದ ವಿಷಯವೆಂದರೆ, ನಾವು ಯಾವುದೆಲ್ಲ ಐಶ್ವರ್ಯಗಳನ್ನು ಗಳಿಸಿರುವೆವೋ ಅದರ ಮೂಲ ಸರ್ವಾನುಗ್ರಹಿ ಭಗವಂತನು. ನಮ್ಮ ಅಸ್ತಿತ್ವಕ್ಕೆ ಬೇಕಾದುದೆಲ್ಲವನ್ನೂ ಆತನು ಪೂರೈಸುತ್ತಾನೆ; ನಾವು ಪ್ರಗತಿ ಕಂಡುಕೊಳ್ಳುವಂತೆ ಮಾಡುವನು ಮತ್ತು ನಿಧಿಗೆ ಕಾಣಿಕೆ ನೀಡಿದಾಗ, ನಾವು ಆತನ ಧರ್ಮಕ್ಕಾಗಿ ಖರ್ಚು ಮಾಡುತ್ತಿರುತ್ತೇವೆ, ಆತನೇ ನೀಡಿದ ಒಂದು ಭಾಗವನ್ನು ಆತನಿಗೆ ಹಿಂದಿರುಗಿಸುತ್ತಿರುತ್ತೇವೆ. ಆದುದರಿಂದ ಬಹಾಯಿಗಳಿಗೆ ನಿಧಿಗೆ ಕಾಣಿಕೆ ನೀಡುವುದು ಅಂದರೆ ಬರಿ ಧಾರಾಳತನದಿಂದ ಅಲ್ಲ, ಅದು ಒಂದು ಆಧ್ಯಾತ್ಮಿಕ ಅನುಗ್ರಹ ಕೂಡ ಮತ್ತು ವ್ಯಕ್ತಿಗತವಾದ ಅತಿ ದೊಡ್ಡ ಜವಾಬ್ದಾರಿ. ಧರ್ಮರಕ್ಷಕರು ನಮಗೆ ಈ ರೀತಿ ಸಲಹೆ ನೀಡಿರುವರು:-

  **"ನಾವು ಕಾರಂಜಿಯಂತೆ ಅಥವಾ ಚಿಲುಮೆಯಂತಿರಬೇಕು, ಅದು ತನ್ನಲ್ಲಿರುವುದೆಲ್ಲವನ್ನೂ ನಿರಂತರವಾಗಿ ಬರಿದು ಮಾಡಿಕೊಳ್ಳುತ್ತಾ ಅದೃಶ್ಯದ ಮೂಲಗಳಿಂದ ಪುನಃ ತುಂಬಿಕೊಳ್ಳುತ್ತಿರುತ್ತದೆ. ನಮ್ಮ ಸಹಚರರ ಒಳಿತಿಗಾಗಿ ಯಾವುದೇ ಬಡತನದ ಭಯವಿಲ್ಲದೆ, ನಿರಂತರವಾಗಿ ನೀಡುವುದು ಹಾಗೂ ಎಲ್ಲಾ ಸಂಪತ್ತಿನ ಮತ್ತು ಒಳಿತಿನ ಮೂಲದ ಅನುಗ್ರಹದ ಮೇಲೆ ಭರವಸೆ ಇಡುವುದು, ಇದೇ ಸರಿಯಾದ ಜೀವನದ ರಹಸ್ಯವಾಗಿರುವುದು.".[34]**

ಇಲ್ಲಿ ನೀವು ನೋಡಿದ ಕೆಲವು ವಿಚಾರಗಳ ಕುರಿತು ಹೆಚ್ಚು ಆಳವಾಗಿ ಪರಿಗಣಿಸಲು, ಈ ಪಠ್ಯಾನುಕ್ರಮದ ನಂತರದ ತರಗತಿಗಳಲ್ಲಿ ನಿಮಗೆ ಅವಕಾಶವಿದೆ, ಇದು ವಸ್ತುನಿಷ್ಟ ಸಾಧನಗಳ ವಿಷಯವನ್ನು ತಿಳಿಸುತ್ತದೆ. ಸದ್ಯಕ್ಕೆ, ಎಂದಿನಂತೆ, ವಿಷಯಾಂಶದ ಮೇಲೆ ಚರ್ಚಿಸಲು ಮತ್ತು ಈ ಕೆಳಗಿನ ಅಭ್ಯಾಸಗಳನ್ನು ಮಾಡಲು ನಿಮ್ಮನ್ನು ಪ್ರೋತ್ಸಾಹಿಸಲಾಗುತ್ತದೆ. ಇದರಿಂದ ನೀವು ಆಲೋಚನೆಗಳನ್ನು ಸ್ವಾಭಾವಿಕವಾಗಿ ಮತ್ತು ಸುಲಭವಾಗಿ ವ್ಯಕ್ತಪಡಿಸಲು ಕಲಿಯಬಹುದು.

1. ಮೇಲಿನ ಉದ್ಧರಣಗಳ ಆಧಾರದ ಮೇಲೆ, ಈ ಕೆಳಗಿನ ವಾಕ್ಯಾಂಶಗಳನ್ನು ಪೂರ್ತಿಗೊಳಿಸಿರಿ.

   ಅ. ಬಹಾ'ಉ'ಲ್ಲಾರವರು ಹೇಳುತ್ತಾರೆ ನಾವು ನಮ್ಮ ________________ ದುಡಿದು ನಮ್ಮ ಹಾಗೂ______________________________ ನಿರ್ವಹಣೆಯನ್ನು ಮಾಡಿಕೊಳ್ಳಬೇಕು.

   ಆ. ನಾವು __________________ ಹಾಗು ________________________________ ಫಲಗಳನ್ನು ನೀಡಲೇಬೇಕು ಅದರಿಂದ ನಾವು ಮತ್ತು ಇತರರು ________________________.

   ಇ. ಈ ರೀತಿಯಾಗಿ ನಾವು ಪ್ರತಿಯೊಬ್ಬರೂ ________________, ______________, ____________________________ ವಿಧಿಸಲ್ಪಟ್ಟಿದೆ, ಅದರಲ್ಲಿ ____________________________________________.

   ಈ. ಅಬ್ದುಲ್ ಬಹಾರವರು ಈ ರೀತಿ ವಿವರಿಸಿರುವರು, ____________________________________ ಸಂಪತ್ತು ಅತ್ಯಂತ ____________________________________.

   ಉ. ಆದರೆ, ಕೆಲವರು ______________________________ಇನ್ನೂ ಕೆಲವರು ______________________________ ಹೊಂದಿದ್ದರೆ, ಆ ಸಂಪತ್ತಿನಿಂದ ಯಾವುದೇ ___________ಅಥವಾ______________ ದೊರಕುವುದಿಲ್ಲ, ಆಗ ಅದು ಅದರ ________________________________________".

   ಊ. ಬಹಾ'ಉ'ಲ್ಲಾರವರು ಹೇಳುತ್ತಾರೆ, ____________________________________ ನನ್ನ ಗುಣವಾಗಿರುವುದು. ನನ್ನ ____________________ ಯಾರು ತಮ್ಮನ್ನು ____________________________ಅವರು ಸದಾ ಸುಖಿಯಾಗಿರುತ್ತಾರೆ.

   ಋ. ಮತ್ತು ಧರ್ಮ ಸಂರಕ್ಷಕರು ನಮ್ಮನ್ನು ಪ್ರೋತ್ಸಾಹಿಸುವುದೇನೆಂದರೆ, ನಾವು ________________ ಅಥವಾ ____________________, ಅದು ತನ್ನಲ್ಲಿರುವುದೆಲ್ಲವನ್ನೂ ________________________________________________________________.

   ಎ. ಅದು ತನ್ನಲ್ಲಿರುವುದೆಲ್ಲವನ್ನೂ ನಿರಂತರವಾಗಿ ______________________________. ನಮ್ಮ ಸಹಚರರ ________________ ಯಾವುದೇ ______________________________________________________________________ ____________________. ಇದೇ ಸರಿಯಾದ ಜೀವನದ ರಹಸ್ಯವಾಗಿರುವುದು.

2. ಮೇಲಿನ ಪ್ರಸ್ತುತಿಯಲ್ಲಿ ಅನುಸರಿಸಿದ ವಿಚಾರಗಳ ಅನುಕ್ರಮವನ್ನು ಬರೆಯಿರಿ.

## ವಿಭಾಗ 14

ಚಟುವಟಿಕೆಯಿಂದ ಸಮೃದ್ಧವಾದ ಒಂದು ಹಳ್ಳಿ ಅಥವಾ ನೆರೆಹೊರೆಯದಲ್ಲಿ ತೆರೆದು ಕೊಳ್ಳುವ ಸಂವಹನದ ಬಗ್ಗೆ ಅಂತರ್ದೃಷ್ಟಿಯನ್ನು ಪಡೆಯಲು ನಾವು ವಿಶ್ವವಿದ್ಯಾಲಯದ ಯುವ ವಿದ್ಯಾರ್ಥಿನಿಯಾದ ಅಲ್ಯಾಂಡ್ರಾಳ ಪ್ರಯತ್ನಗಳನ್ನು ಅನುಸರಿಸಿರುವೆವು. ಹಲವಾರು ವಾರಗಳವರೆಗೆ ಸಾಗಿದ ಸರಣಿಯ ಭೇಟಿಗಳಲ್ಲಿ ಶ್ರೀಮತಿ ಮತ್ತು ಶ್ರೀ ಸಾಂಚೇಜಸ್ ರೊಂದಿಗೆ ಹಲವಾರು ವಿಷಯಾಂಶಗಳನ್ನು ಚರ್ಚಿಸಿದ್ದಳು, ಅದು ಧರ್ಮದಲ್ಲಿ ಅವರ ಜ್ಞಾನವು ಆಳವಾಗಿಸಿ, ಅವರು ತಾವು ಒಪ್ಪಿದ ಬೋಧನೆಗಳಿಗೆ ನಿಷ್ಠರಾಗುವಂತೆ ಮಾಡುವುದೆಂದು ಅವಳು ಆಶಿಸಿದಳು. ಸಾಂದರ್ಭಿಕವಾಗಿ ಸಾಂಚೇಜಸ್ ರವರ ಮೊಮ್ಮಗಳಾದ ಬಿಯಾಟ್ರಿಸ್ ಳ ಆಗಮನವು ಮತ್ತೊಂದು ರೀತಿಯ ಸಂವಹನವನ್ನು ಪರಿಶೀಲಿಸಲು ನಮಗೆ ಅನುವುಮಾಡಿಕೊಟ್ಟಿತು, ಇದು ಇಬ್ಬರು ಯುವತಿಯರ ನಡುವೆ ಜರುಗಿದ್ದು, ಇಬ್ಬರೂ ತಾವು ಹೇಗೆ ತಮ್ಮ ಸಮುದಾಯಕ್ಕೆ ಸೇವೆ ಮಾಡುವುದೆಂಬುದನ್ನು ಕಲಿಯಲು ಉತ್ಸುಕರಾಗಿದ್ದರು. ವಿವರಣೆಗಳ ಮೂಲಕ ಸಾಗುತ್ತಾ ಮತ್ತು ಅಭ್ಯಾಸಗಳನ್ನು ಪೂರ್ಣಗೊಳಿಸುತ್ತಾ, ಸಂಬಂಧಪಟ್ಟ ವಿಷಯಗಳ ಜ್ಞಾನದ ಬೆಳವಣಿಗೆಯ ಜೊತೆಗೆ, ಹಲವು ಆಧ್ಯಾತ್ಮಿಕ ಗುಣಗಳು, ಮನೋಭಾವನೆಗಳು ಮತ್ತು ಕೌಶಲ್ಯಗಳು ನಾವು ಇಲ್ಲಿ ಪರಿಗಣಿಸಿರುವ ಸಂವಹನವನ್ನು ನಿರಂತರಗೊಳಿಸಲು ಬೇಕಾಗುವುದನ್ನು ನಾವು ಇಲ್ಲಿ ನೋಡಿದ್ದೇವೆ.

ಘಟಕದ ಈ ವಿಭಾಗ ಮತ್ತು ಮುಂದಿನದರಲ್ಲಿ ನಾವು ಬೇರೆ ರೀತಿಯ ವಿಷಯಾಂಶಗಳನ್ನು ಅನ್ವೇಷಿಸುವೆವು - ಅಂದರೆ, ತರಬೇತಿ ಸಂಸ್ಥೆಯು ಉತ್ತೇಜಿಸುತ್ತಿರುವ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಕಿರಿಯರು ಭಾಗವಹಿಸುತ್ತಿರುವ ಕುಟುಂಬಗಳಿಗೆ ಭೇಟಿ ನೀಡುವ ಸಮಯದಲ್ಲಿ ಸಾಮಾನ್ಯವಾಗಿ ಬರುವ ಚರ್ಚೆಗಳು. ಈಗಾಗಲೇ ನಿರ್ದೇಶಿಸಿದಂತೆ, ಮೂರು ಮತ್ತು ಐದರ ಪುಸ್ತಕಗಳ ತರಗತಿಗಳಲ್ಲಿ ಸೇವಾಕಾರ್ಯವನ್ನು ವಿವರಿಸಲಾಗಿದೆ. ನೀವು ಅದಕ್ಕೆ ಸಂಬಂಧಿಸಿದ ಎರಡು ಕಾರ್ಯಕ್ರಮಗಳ ಬಗ್ಗೆ ಪರಿಚಿತರಾಗಿರಬಹುದು ಅಥವಾ ಪರಿಚಿತರಾಗದೆ ಇರಬಹುದು, ಅವು ನೀವು ನಿಮ್ಮ ಹಿಂದಿನ ವರ್ಷಗಳು ಅವುಗಳಲ್ಲಿ ಭಾಗವಹಿಸುವುದರ ಮೇಲೆ ನಿರ್ಭರಿತವಾಗಿರುವುದು.

ಕಿಶೋರರ ತಂಡದ ಕುಟುಂಬಗಳೊಂದಿಗೆ ನಡೆಸುತ್ತಿರುವ ಸಂವಾದಕ್ಕೆ ಬಹಳ ಸಲ ಆಧಾರವಾಗುವ ಅದರ ಪರಿವಿಡಿಯನ್ನು ಮೊದಲಿಗೆ ನೋಡೋಣ. ನಮ್ಮ ಕಥೆಯನ್ನು ನಿಲ್ಲಿಸಿ ಬಿಟ್ಟ ಸಮಯವನ್ನು ಕಲ್ಪಿಸಿಕೊಳ್ಳೋಣ ಹಾಗೂ ಬಿಯಾಟ್ರಿಸ್ ಳು ಈಗ ಪುಸ್ತಕ -2ರ ಅಧ್ಯಯನವನ್ನು ಮಾಡುತ್ತಿರುವಳು. ಅಲ್ಯಾಂಡ್ರಾಳು ತಾನು ಭೇಟಿ ನೀಡಲಿರುವ ಹಲವಾರು ಕಿಶೋರ ವರ್ಗದ ಕುಟುಂಬಗಳು ತನ್ನ ಸಹಕಾರದಿಂದ ಒಂದು ತಂಡವನ್ನು ಸ್ಥಾಪಿಸಲಿರುವರು ಅಂತಹ ಭೇಟಿಯಲ್ಲಿ ಅವಳು ತನ್ನ ಸ್ನೇಹಿತೆಗೆ (ಬಿಯಾಟ್ರಿಸ್) ಸಹಯೋಗ ನೀಡು ಎಂದು ಕೇಳಿಕೊಂಡಳು. ಆಕೆಯು ಉತ್ಸಾಹದಿಂದ ಒಪ್ಪಿಕೊಂಡಳು.

ತಾನು ಸಿದ್ಧಪಡಿಸಿರುವ ದೃಷ್ಟಿಕೋನವನ್ನು ಅಲ್ಯಾಂಡ್ರಾ ಬಿಯಾಟ್ರಿಸ್ ಗೆ ಈ ರೀತಿ ವಿವರಿಸುವಳು: " ನಾವು ಪ್ರತಿಯೊಂದು ಭೇಟಿಯನ್ನು ಪೋಷಕರಿಗೆ ಅವರ ಮಗ ಅಥವಾ ಮಗಳು ಕಾರ್ಯಕ್ರಮಕ್ಕೆ ಸೇರಲು ಆಸಕ್ತಿಯನ್ನು ತೋರಿಸುವಂತೆ ಮತ್ತು ಅದು ನೆರೆಹೊರೆಯದಲ್ಲಿ ಸಮುದಾಯ ನಿರ್ಮಾಣದ ಪ್ರಕ್ರಿಯೆಯು ಮುಂದೆ ಸಾಗುವುದರ ಒಂದು ಭಾಗವೆಂದು ಅವರಿಗೆ ಪರಿಚಯಿಸೋಣ. ನಂತರ ಕಾರ್ಯಕ್ರಮದ ಕೇಂದ್ರಿತ ವಿಚಾರಗಳ ಪರಿಕಲ್ಪನೆಗಳನ್ನು ಅವರೊಂದಿಗೆ ಅನ್ವೇಷಿಸೋಣ. ಇದು ಭೇಟಿಗಳ ಸರಣಿಯಲ್ಲಿ ಮೊದಲನೆಯದು ಹಾಗೂ ನಮ್ಮ ಭರವಸೆ ಎಂದರೆ, ನಮ್ಮ ಸಂಭಾಷಣೆಯು ಮುಂದುವರೆದಂತೆ, ಕುಟುಂಬವು ತಂಡಕ್ಕೆ ವಿವಿಧ ರೀತಿಯಲ್ಲಿ ಸಹಕರಿಸುವುದು ಅಷ್ಟೇ ಅಲ್ಲದೆ, ಸಮುದಾಯದಲ್ಲಿ ಕಿಶೋರರ ಆಧ್ಯಾತ್ಮಿಕ ಸಶಕ್ತಿಕರಣದ ಕ್ರಿಯಾಶೀಲ ಉತ್ತೇಜಕರು ಸಹ ಆಗುವರು."

ಅಲ್ಯಾಂಡ್ರಾ ಮತ್ತು ಬಿಯಾಟ್ರಿಸಳು ಪ್ರತಿಯೊಂದು ಕುಟುಂಬದ ಜೊತೆಯಲ್ಲಿ ಚರ್ಚಿಸಲು ಕೆಲವು ಅಂಶಗಳನ್ನು ಯೋಜಿಸುವರು. ಅವರು ಮುಖ್ಯವಾದುದೆಂದು ಆಲೋಚಿಸಿದ ಎಲ್ಲಾ ವಿಚಾರಗಳನ್ನು ಬರೆದುಕೊಳ್ಳಲು ನಿರ್ಧರಿಸಿದರು, ಪ್ರಥಮ ಭೇಟಿಯಲ್ಲಿ ಕೆಲವನ್ನು ಉಪಯೋಗಿಸಬಹುದೆಂದೂ ಉಳಿದುದನ್ನು ಮುಂದುವರೆದ ಸಂಭಾಷಣೆಯಲ್ಲಿ ಉಪಯೋಗಿಸಬಹುದು ಎಂದು ನಿರ್ಧರಿಸಿದರು. ಕಿಶೋರರ ಸಾಮರ್ಥ್ಯದ ಬಗ್ಗೆ ಅವರು ಪಟ್ಟಿ ಮಾಡಿದ ಕೆಲವು ಅಂಶಗಳು ಈ ರೀತಿ ಇವೆ :

- ಒಬ್ಬ ವ್ಯಕ್ತಿಯ ಜೀವನದಲ್ಲಿ 12ರಿಂದ 15 ವರ್ಷ ವಯಸ್ಸಿನ ನಡುವಿನ ಮೂರು ವರ್ಷಗಳು ಅತ್ಯಂತ ನಿರ್ಣಾಯಕ ಅವಧಿಯಾಗಿರುತ್ತದೆ- ಇದು ಬಾಲ್ಯಾವಸ್ಥೆಯಿಂದ ಪ್ರೌಢಾವಸ್ಥೆಗೆ ಪರಿವರ್ತಿತವಾಗುವ ಹಂತವಾಗಿರುತ್ತದೆ.

- ಈ ಹಂತದ ವಯಸ್ಸಿನವರನ್ನು "ಕಿಶೋರ ವರ್ಗ" ದವರು ಎಂದು ನಾವು ಕರೆಯುತ್ತೇವೆ. ಅವರು ಈಗ ಮಕ್ಕಳಾಗಿರುವುದಿಲ್ಲ ಆದರೆ ಪೂರ್ತಿ ಯೌವನಾವಸ್ಥೆಯನ್ನೂ ತಲುಪಿರುವುದಿಲ್ಲ.

- ದುರದೃಷ್ಟವಶಾತ್, ಕಿಶೋರ ವರ್ಗದ ವ್ಯಕ್ತಿತ್ವದ ಬಗ್ಗೆ ತಪ್ಪಾದ ಹಾಗೂ ವ್ಯಾಪಕವಾಗಿ ಹರಡಿರುವ ವಿಚಾರವೆಂದರೆ, ಇದು ಪ್ರೇರಿತರಾಗುವ, ಪ್ರತಿಭಟಿಸುವ, ಸ್ವಾರ್ಥದಲ್ಲಿ ಮುಳುಗಿದ ಹಾಗೂ ನಿರಂತರ ಸಂಕಷ್ಟಕ್ಕೆ ಈಡಾಗುವ ವರ್ಗ ಎಂಬುದೇ ಆಗಿದೆ. ಆದಾಗ್ಯೂ, ನಾವು ಅವರನ್ನು ಬೇರೆಯದೇ ಬೆಳಕಿನಲ್ಲಿ ನೋಡುವೆವು. ಇದು ನಿಜವಾದುದಾದರೂ, ಜೀವನದ ಈ ಸಣ್ಣ ಅವಧಿಯಲ್ಲಿ, ನಾವು ಬದಲಾವಣೆಗಳನ್ನು- ದೈಹಿಕ, ಭಾವನಾತ್ಮಕ ಮತ್ತು ಮಾನಸಿಕವಾದುದನ್ನು ಅನುಭವಿಸುತ್ತೇವೆ. ಮತ್ತು ಅದರ ಪರಿಣಾಮವಾಗಿ ನಾವು ಸ್ವಲ್ಪ ಪ್ರತಿಭಟನೆಯನ್ನು ತೋರುವೆವೆಂಬುದು ನಿಜ. ಆದರೆ ಸ್ವಾಭಾವಿಕವಾಗಿ ಈ ವಯಸ್ಸು ಅಧಿಕ ಸಾಮರ್ಥ್ಯ ಮತ್ತು ಅಧಿಕ ಭರವಸೆಯ ಅವಧಿಯಾಗಿದೆ.

- ನಮ್ಮನ್ನೇ ತೆಗೆದುಕೊಂಡರೆ, ನಾವು ಕಿಶೋರರಾಗಿದ್ದು ಬಹಳ ಸಮಯವೇನು ಆಗಿಲ್ಲ. ನಾವು ಈ ಬದಲಾವಣೆಗಳಿಂದ ಎಷ್ಟು ಬಾಧಿತರಾಗಿದ್ದೆವು ಎಂಬುದನ್ನು ಜ್ಞಾಪಿಸಿಕೊಳ್ಳಿ. ಕೆಲವು ಸಲ ನಾವು ಧೈರ್ಯಶಾಲಿಗಳಾಗಿದ್ದರೆ, ಕೆಲವು ವೇಳೆ ನಾವು ಅಧೈರ್ಯರಾಗಿರುತ್ತಿದ್ದೆವು. ಕೆಲವು ವೇಳೆ ನಾವು ಸ್ನೇಹಪರ ರಾಗಿದ್ದರೆ ಕೆಲವು ವೇಳೆ ನಾಚಿಕೆ ಸ್ವಭಾವದವರಾಗಿದ್ದೆವು. ನಮ್ಮನ್ನು ಏಕಾಂಗಿಯಾಗಿ ಬಿಡಬೇಕೆಂದೂ ಆಸೆಪಡುತ್ತಿದ್ದು ಕೆಲವು ಸಲ ಗಮನವನ್ನು ಸೆಳೆಯುವ ಇಚ್ಛೆ ಉಳ್ಳವರಾಗಿದ್ದೆವು. ಯಾವುದರಲ್ಲಿ ನಾವು ಸಮರ್ಥರು ಮತ್ತು ನಮ್ಮಲ್ಲಿ ಯಾವ ಕೌಶಲ್ಯಗಳು ಮತ್ತು ಸಾಮರ್ಥ್ಯವಿದೆ ಎಂಬುದನ್ನು ಅರ್ಥೈಸಿಕೊಳ್ಳಲು ಇಚ್ಛಿಸುತ್ತಿದ್ದೆವು. ಇತರ ಜನರು ನಮ್ಮನ್ನು ಹೇಗೆ ನೋಡುವರು ಮತ್ತು ನಮ್ಮ ವಿಚಾರದ ಬಗ್ಗೆ ಅವರು ಏನೆಂದು ಆಲೋಚಿಸುತ್ತಿದ್ದರು ಎಂಬುದೇ ನಮ್ಮ ಆತಂಕವಾಗಿತ್ತು.

- ಈ ರೀತಿಯ ವರ್ತನೆಯು ಕೇವಲ ತಾತ್ಕಾಲಿಕ ಎಂದು ಅರಿಯುವುದು ಮುಖ್ಯ. ಮಾನವ ಜೀವನದಲ್ಲಿ ಈ ವಯಸ್ಸಿನ ಅವಧಿಯಲ್ಲಿ ಮನಸ್ಸಿನಲ್ಲಿ ಕೆಲವು ಶಕ್ತಿಗಳು ತೀವ್ರವಾಗಿ ಬೆಳೆಯುವವು. ಅಸ್ತಿತ್ವದ ಮುಖ್ಯ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕಲು ಪ್ರಾರಂಭಿಸುತ್ತೇವೆ. ನಮ್ಮ ಸುತ್ತಮುತ್ತಲೂ ಏನು ನಡೆಯುತ್ತಿದೆ ಎಂಬುದನ್ನು ವಿಶ್ಲೇಷಿಸುವುದು ಹಾಗೂ ನಾವು ಏನನ್ನು ಬೋಧಿಸಲ್ಪಟ್ಟಿದ್ದೆವು ಎಂಬುದರ ಬಗ್ಗೆ ಪ್ರಶ್ನಿಸುವೆವು. ದೊಡ್ಡವರು ನಮಗೆ ನಾವು ಏನು ಮಾಡಬೇಕೆಂದು ಹೇಳುತ್ತಿದ್ದರೋ ಅದನ್ನು ನಾವು ಯಾಂತ್ರಿಕವಾಗಿ ಈ ಹಿಂದೆ ಮಾಡುತ್ತಿದ್ದಂತೆ ಅದರಲ್ಲೂ ವಿಶೇಷವಾಗಿ ಅವರ ಮಾತು ಮತ್ತು ಕೃತಿಗಳ ನಡುವೆ ಭೇದವಿರುವುದನ್ನು ನೋಡಿದ ಮೇಲೆ ಈಗ ಮಾಡಲು ಇಚ್ಛಿಸುವುದಿಲ್ಲ.
- ಕಿಶೋರ ವರ್ಗದ ಜನತೆಯಲ್ಲಿ ಹೊರಹೊಮ್ಮುತ್ತಿರುವ ಶಕ್ತಿಯನ್ನು ಫಲಪ್ರದವಾಗಿ ಉಪಯೋಗಿಸಲು ಸಹಾಯ ಮಾಡಬೇಕಾದರೆ ಸಹಕರಿಸಲ್ಪಟ್ಟರೆ, ಅವರು ಇನ್ನೂ ಮಕ್ಕಳು ಎಂದು ಭಾವಿಸುವುದನ್ನು ನಿಲ್ಲಿಸುವುದು ಅತಿಮುಖ್ಯ. ಅಬ್ದುಲ್-ಬಹಾರವರು ಈ ಅವಧಿಯ ಬಗ್ಗೆ ಈ ರೀತಿ ವಿವರಿಸಿದ್ದಾರೆ:

**"ಕೆಲವು ಸಮಯದ ನಂತರ ಅವನು ಯೌವ್ವನದ ಅವಧಿಯನ್ನು ಪ್ರವೇಶಿಸುವನು. ಅದರಲ್ಲಿ ಅವನ ಮುಂಚಿನ ಸ್ಥಿತಿಗಳು ಮತ್ತು ಅವಶ್ಯಕತೆಗಳು ಅವನ ಮುಂದಿನ ಹಂತಕ್ಕೆ ಬೇಕಾಗುವ ಹೊಸ ಬೇಡಿಕೆಗಳಿಂದ ಮೇಲ್ಮಟ್ಟಕ್ಕೇರುವುದು. ಅವನ ಗ್ರಹಿಕೆಯ ಶಕ್ತಿಯ ವಿಸ್ತರಣೆ ಹಾಗೂ ಆಳವು ಅಧಿಕವಾಗುವುದು; ಅವನ ಭೌತಿಕ ಸಾಮರ್ಥ್ಯಗಳು ತರಬೇತಿಗೊಂಡು ಎಚ್ಚರಗೊಳ್ಳುವವು; ಬಾಲ್ಯದ ಮಿತಿಗಳು ಮತ್ತು ಪರಿಸರವು ಇನ್ನೂ ಅವನ ಸಮರ್ಥತೆ ಮತ್ತು ಸಹ ಯೋಗಗಳನ್ನು ನಿರ್ಬಂಧಿಸಲಾರವು."[35]**

- ಬಹಾಯಿ ಧರ್ಮದ ಆಡಳಿತವನ್ನು ನಿರ್ವಹಿಸುತ್ತಿರುವ ವಿಶ್ವ ನ್ಯಾಯ ಮಂದಿರವು ನಾವು ಕಿಶೋರರೊಂದಿಗೆ ಕಾರ್ಯನಿರ್ವಹಿಸಲು ಅನುಸರಿಸಬೇಕಾಗಿರುವುದರ ಕುರಿತು ಈ ರೀತಿ ಹೇಳಿದೆ :

**"ಉದ್ವೇಗ ಭರಿತ ಶಾರೀರಿಕ ಮತ್ತು ಭಾವುಕ ಬದಲಾವಣೆಗಳಲ್ಲಿ ಕಳೆದ ಹೋದವರು, ಸ್ಪಂದಿಸದವರು ಮತ್ತ ಸ್ವಾರ್ಥದಲ್ಲಿ ಮುಳುಗಿರುವವರು ಎಂದು ಜಾಗತಿಕ ಪ್ರವೃತ್ತಿಗಳು ಈ ವಯಸ್ಸಿನವರನ್ನು ಸಮಸ್ಯಾತ್ಮಕವೆಂದು ತೋರಿಸಿದರೆ, ಬಹಾಯಿ ಸಮುದಾಯವು ಅದರ ವಿರುದ್ಧವಾಗಿ, ಅದು ಬಳಸುವ ಭಾಷೆಯಲ್ಲಿ ಮತ್ತು ಅದು ಅಳವಡಿಸಿಕೊಳ್ಳುವ ವಿಧಾನಗಳಲ್ಲಿ – ಕಿಶೋರರಲ್ಲಿ ಪರಹಿತಚಿಂತನೆ, ನ್ಯಾಯದ ತೀವ್ರ ಪ್ರಜ್ಞೆ, ಬ್ರಹ್ಮಾಂಡದ ಬಗ್ಗೆ ಕಲಿಯಲು ಉತ್ಸಾಹ ಮತ್ತು ಉತ್ತಮ ಪ್ರಪಂಚದ ನಿರ್ಮಾಣಕ್ಕೆ ಕೊಡುಗೆ ನೀಡಲು ಬಯಕೆಯುಳ್ಳವರು ಎಂದು ತೋರಿಸುತ್ತದೆ." [36]**

ಅಲ್ಯಾಂಡ್ರಾ ಮತ್ತು ಬಿಯಾಟ್ರಿಸ್ ಇಬ್ಬರೂ ಮುಂದೆ ಆಧ್ಯಾತ್ಮಿಕ ಸಶಕ್ತೀಕರಣದ ಕಾರ್ಯಕ್ರಮದತ್ತ ಗಮನವನ್ನು ತಿರುಗಿಸುವರು ಮತ್ತು ಅದರ ಕೆಲವು ಗುಣಲಕ್ಷಣಗಳನ್ನು ಗುರುತಿಸಲು ಪ್ರಯತ್ನಿಸುವರು.

- 12 ಮತ್ತು 15 ವರ್ಷ ವಯಸ್ಸಿನ ನಡುವಿರುವ ಮಿತ್ರರು ಒಂದು ತಂಡಕ್ಕೆ ಸೇರಿದವರಾಗಿ ಅವರೊಡನೆ ತಮ್ಮ ಆಲೋಚನೆಗಳನ್ನು, ಯೋಜನೆಗಳಲ್ಲಿ ಕೆಲಸ ಮಾಡುವುದು, ಕ್ರೀಡೆಯಾಡುವುದು ಮುಂತಾದವುಗಳ ಬಗ್ಗೆ ಹಂಚಿಕೊಳ್ಳಲು ಇಚ್ಛಿಸುವರು, ಈ ಕಾರಣದಿಂದಲೇ "ಕಿಶೋರರ ತಂಡ" ಎಂಬ ಪರಿಕಲ್ಪನೆಯ ಸುತ್ತಲೇ ಕಾರ್ಯಕ್ರಮವು ರಚಿಸಲ್ಪಟ್ಟಿರುವುದು. ಪ್ರತಿಯೊಂದು ತಂಡವು ಒಬ್ಬ "ಅನುಪ್ರೇರಕ" ರಿಂದ ಮಾರ್ಗದರ್ಶಿಸಲ್ಪಡುವುದು, ಸಾಮಾನ್ಯವಾಗಿ ಇವರೊಬ್ಬ ಹಿರಿಯ ಯುವಕನಾಗಿದ್ದು ಸದಸ್ಯರಿಗೆ ನಿಜವಾದ ಒಬ್ಬ ಸ್ನೇಹಿತನಾಗಿರುತ್ತಾನೆ ಹಾಗೂ ಅವರಲ್ಲಿ ಸಾಮರ್ಥ್ಯವನ್ನು ಬೆಳೆಸಲು ಸಹಾಯಕನಾಗಿರುತ್ತಾನೆ.

- ತಂಡಗಳು ಕ್ರಮಬದ್ಧವಾಗಿ ಸಭೆ ಸೇರುವರು, ಅವರ ಸಭೆಗಳಲ್ಲಿ, ಕಿಶೋರರು ಪರಿಕಲ್ಪನೆಗಳನ್ನು ಅನ್ವೇಷಿಸಲು ಮತ್ತು ವಿಚಾರಗಳನ್ನು ಭಯವಿಲ್ಲದೆ, ವಿಮರ್ಶೆ ಅಥವಾ ಗೇಲಿಗೊಳಪಡದೆ ಪ್ರಸ್ತುತ ಪಡಿಸುವುದನ್ನು ಕಲಿಯುವರು. ಅವರು ಆಲಿಸಲು, ಮಾತನಾಡಲು, ಪ್ರತಿಫಲಿಸಲು, ವಿಶ್ಲೇಷಿಸಲು, ನಿರ್ಧಾರಗಳನ್ನು ತೆಗೆದುಕೊಳ್ಳಲು ಮತ್ತು ಅದರಂತೆಯೇ ಕಾರ್ಯನಿರ್ವಹಿಸಲು ಪ್ರೋತ್ಸಾಹಿಸಲ್ಪಡುವರು.

- ಕಿಶೋರರ ಆಲೋಚನೆ ಮತ್ತು ವರ್ತನೆಗಳ ಮೇಲೆ ಅನೇಕ ನಕಾರಾತ್ಮಕ ಶಕ್ತಿಗಳು ಪ್ರಭಾವ ಬೀರುವ ಸಮಯದಲ್ಲಿ ನಾವು ವಾಸಿಸುತ್ತಿರುವೆವು. ಅನುಪ್ರೇರಕರು ಈ ಶಕ್ತಿಗಳನ್ನು ಎದುರಿಸಲು ತಮ್ಮನ್ನು ತಾವು ಸಮಾಜದ ಕುಸಿಯುತ್ತಿರುವ ನೈತಿಕತೆಯಿಂದ ರಕ್ಷಿಸಿಕೊಳ್ಳುವುದಕ್ಕಷ್ಟೇ ಅಲ್ಲದೆ ಪ್ರಪಂಚದ ಒಳಿತಿಗಾಗಿ ಕೆಲಸ ಮಾಡಲು ಸಹ ಅವರಿಗೆ ಸಹಾಯ ಮಾಡುವರು.

- ಮಾನವ ಆತ್ಮದಲ್ಲಿ ಸುಪ್ತವಾಗಿ ಅಡಗಿರುವ ಶಕ್ತಿಗಳು ಆರಂಭಿಕ ಪ್ರೌಢಾವಸ್ಥೆಯಲ್ಲಿ ಹೆಚ್ಚು ಹೆಚ್ಚಿನ ಮಟ್ಟದಲ್ಲಿ ಪ್ರಕಟಗೊಳ್ಳಲು ಪ್ರಾರಂಭಿಸುವವು, ಅವುಗಳನ್ನು ಈ ಕಾರ್ಯಕ್ರಮವು ಪೋಷಿಸುವುದು. ನಿರ್ದಿಷ್ಟವಾಗಿ ಆಲೋಚನೆ ಮತ್ತು ವ್ಯಕ್ತಪಡಿಸುವಿಕೆಯ ಶಕ್ತಿಗಳು ಮುಖ್ಯವಾದವು. ಯುವಜನತೆಯು ಪ್ರಪಂಚದ ಬಗೆಗಿನ ಅಗಾಧ ವಿಚಾರಗಳನ್ನು ವ್ಯಕ್ತಪಡಿಸಲು ಹಾಗೂ ಅವರು ನೋಡಬೇಕಾಗಿರುವ ಬದಲಾವಣೆಯನ್ನು ಸ್ಪಷ್ಟಪಡಿಸಲು ಅಗತ್ಯವಾದ ಭಾಷೆಯನ್ನು ಅಭಿವೃದ್ಧಿ ಪಡಿಸಿಕೊಳ್ಳುವುದು ಅಗತ್ಯ.

- ಕಿಶೋರರು ಉದ್ದೇಶಪೂರಿತ ಜೀವನದ ಮುಖ್ಯ ಪರಿಕಲ್ಪನೆಗಳ ಅರ್ಥದ ಮೇಲೆ ಪ್ರತಿಫಲಿಸಲು ಉತ್ಸುಕರಾಗಿರುತ್ತಾರೆ. ಸಂತೋಷ, ಭರವಸೆ ಮತ್ತು ಉತ್ಕೃಷ್ಟತೆ ಇವೇ ಕೆಲವು ಉದಾಹರಣೆಗಳು. ದುಃಖಕರವೆಂದರೆ ಜನರು ಈ ವಿಚಾರಗಳ ಕುರಿತು ತೋರಿಕೆಯ ರೀತಿಯಲ್ಲಿ ಮಾತನಾಡುವರು. ಅಂತಹ ಪರಿಕಲ್ಪನೆಯು ಆಳವಾದ ಅರ್ಥೈಸುವಿಕೆಯನ್ನು ಹೊಂದಿ, ದಿನನಿತ್ಯದ ಜೀವನದಲ್ಲಿ, ಅವು ಹೇಗೆ ವ್ಯಕ್ತವಾಗುವುದು ಎಂಬುದನ್ನು ಗ್ರಹಿಸುವುದು, ಒಂದು ದೃಢವಾದ ನೈತಿಕದ ರಚನೆ ಮಾಡುವುದು ಹಾಗೂ ಸಮಾಜದ ನಕಾರಾತ್ಮಕ ಶಕ್ತಿಗಳನ್ನು ತಡೆ ಹಿಡಿಯುವುದಕ್ಕೆ ಯುವ ಮನಸ್ಸುಗಳಿಗೆ ಸಹಕರಿಸುವುದು.

- ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳುವುದು ಬೌದ್ಧಿಕ ಬೆಳವಣಿಗೆಗೆ ಅತಿ ಮುಖ್ಯವಾದುದು. ಕಿಶೋರರು ಕೆಲವು ಸಲ ಶಾಲೆಯಲ್ಲಿ ತೊಂದರೆಯನ್ನು ಎದುರಿಸಬೇಕಾಗುವುದು ಏಕೆಂದರೆ ಅವರು ಬೇರೆಬೇರೆ ವಿಷಯಗಳ ಮೇಲೆ ಅತಿ ಹೆಚ್ಚಿನ ಮಾಹಿತಿಯನ್ನು ಕಲಿಯಬೇಕಾಗುತ್ತದೆ, ಅದರಲ್ಲೂ ಪರಿಕಲ್ಪನೆಗಳನ್ನು ಗ್ರಹಿಸಲು ಸಾಕಷ್ಟು ಸಹಾಯ ದೊರೆಯದೆ ಅವರಿಂದ ಕಲಿಯಬೇಕಾದ ನಿರೀಕ್ಷೆ ಇರುವುದು. ಯಾವದೇ ವಿಚಾರಗಳ ಮೇಲೆ ಆಳವಾಗಿ ಆಲೋಚಿಸಲು ಕಾರ್ಯಕ್ರಮವು ಅವರಿಗೆ ಸ್ಫೂರ್ತಿ ಗೊಳಿಸುವುದು - ನೈತಿಕ, ಗಣಿತ, ವಿಜ್ಞಾನ ಮುಂತಾದವುಗಳ ಬಗ್ಗೆ- ಹಾಗೂ ಇದು ಶಾಲೆಯಲ್ಲಿ ಅವರ ಸಾಧನೆಯನ್ನು ಏಕಪ್ರಕಾರವಾಗಿ ಉತ್ತಮಗೊಳಿಸುವುದು.

- ಕಿಶೋರರು ವಿಚಾರಗಳ ಅರ್ಥ ಮಾಡಿಕೊಳ್ಳುವಲ್ಲಿ ಹೆಚ್ಚಿನ ಆಸೆಯನ್ನು ಹೊಂದಿರುವರು. ಅವರು ತಮ್ಮ ಸುತ್ತಮುತ್ತ ನಡೆಯುತ್ತಿರುವುದರ ಕಾರಣವನ್ನು ಗ್ರಹಿಸಲು ಇಚ್ಛಿಸುವರು. ಸಫಲತೆ ಹೊಂದಬೇಕಾದರೆ, ಅವರು ತಮ್ಮ ಭೌತಿಕ ಕಣ್ಣುಗಳಿಂದ ನೋಡವುದು ಅಷ್ಟೇ ಅಲ್ಲದೆ ಅಂತಃಚಕ್ಷು ಗಳಿಂದಲೂ ನೋಡಲು ಶಕ್ತರಾಗ ಬೇಕಾಗಿರುವುದು ಅವಶ್ಯಕ. ಆದುದರಿಂದ ಕಾರ್ಯಕ್ರಮದ ಮುಖ್ಯ ಗುರಿಯೆಂದರೆ, ಆಧ್ಯಾತ್ಮಿಕ ಗ್ರಹಿಕೆಯನ್ನು ವರ್ಧಿಸುವುದೇ ಆಗಿದೆ ; ಆಧ್ಯಾತ್ಮಿಕ ಶಕ್ತಿಗಳನ್ನು ಗುರುತಿಸುವುದು ಮತ್ತು ಸಂದರ್ಭಗಳಲ್ಲಿನ ಆಧ್ಯಾತ್ಮಿಕ ತತ್ವಗಳನ್ನು ಕಂಡುಹಿಡಿಯುವುದನ್ನು ಒಳಗೊಂಡಿದೆ.

- ಕಾರ್ಯಕ್ರಮವು ತನ್ನ ವಿವಿಧ ಗುರಿಗಳನ್ನು -ನೈತಿಕತೆಯ ಬೆಳವಣಿಗೆ, ಆಧ್ಯಾತ್ಮಿಕ ಗ್ರಹಿಕೆ ಮತ್ತು ಅಭಿವ್ಯಕ್ತಪಡಿಸುವ ಶಕ್ತಿಗಳನ್ನು - ಸರಣಿ ಪಠ್ಯಪುಸ್ತಕಗಳ ಸಹಾಯದಿಂದ ಸಾಧಿಸುವುದು. ಈ ಪುಸ್ತಕಗಳು ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿನ ಕಿಶೋರ ಜನತೆಯ ಜೀವನದ ಬಗೆಗಿನ ಸರಳ ಕಥೆಗಳನ್ನು ಒಳಗೊಂಡಿದೆ. ಇವುಗಳನ್ನು ಒಟ್ಟಾಗಿ ಓದುವುದರ ಜೊತೆಗೆ, ಅದರ ವಿಷಯ ವಸ್ತುವನ್ನು ಚರ್ಚಿಸುವುದು ಹಾಗೂ ಸೂಕ್ತ ಅಭ್ಯಾಸಗಳನ್ನು ಪೂರ್ಣಗೊಳಿಸುವುದಲ್ಲದೆ ಕಿಶೋರರು ಪಂದ್ಯಾಟಗಳಲ್ಲಿ ಭಾಗಿಯಾಗುವರು, ಕಲೆ ಮತ್ತು ಕೈ ಕೆಲಸಗಳನ್ನೂ ಕಲಿಯುವರು.

- ಅನುಪ್ರೇರಕರ ಸಹಾಯದಿಂದ, ತಂಡಗಳು ಅನೇಕ ಸೇವಾ ಯೋಜನೆಗಳನ್ನು ಆಯೋಜಿಸಿ ಕಾರ್ಯರೂಪಕ್ಕೆ ಇಳಿಸುವರು, ಇದೊಂದು ಕಾರ್ಯಕ್ರಮದ ಪ್ರಧಾನ ಅಂಗವಾಗಿದೆ. ಇಂತಹ ಯೋಜನೆಗಳ ಮೂಲಕ ಕಿಶೋರರು ಸಮುದಾಯದ ಬಗ್ಗೆ ಅದರ ಅವಶ್ಯಕತೆಗಳ ಬಗ್ಗೆ ಸಮಾಲೋಚಿಸಲು ತಮ್ಮತಮ್ಮಲ್ಲಿ ಹಾಗೂ ಸಮುದಾಯದ ಇತರರೊಂದಿಗೆ ಸಹ ಪ್ರವರ್ತಿಸಲು ಆಲೋಚಿಸುವರು.

- ಪಠ್ಯಪುಸ್ತಕಗಳು ವಿವಿಧ ವಿಷಯಗಳನ್ನು ಒಳಗೊಂಡಿವೆ; ಪ್ರತಿಯೊಂದು ಕಿಶೋರರ ಆಧ್ಯಾತ್ಮಿಕ ಸಶಕ್ತೀಕರಣಕ್ಕೆ ಮುಖ್ಯವಾದ ವಿಷಯಾಂಶಗಳತ್ತಲೇ ಗಮನ ನೀಡಲ್ಪಟ್ಟಿದೆ. ಉದಾಹರಣೆಗೆ ಪ್ರಥಮ ಪುಸ್ತಕವು "ದೃಢೀಕರಣ" ಎಂಬ ಪರಿಕಲ್ಪನೆಯ ಬಗೆಗೆ ಒತ್ತು ನೀಡಿದೆ - ಅಂದರೆ ಉನ್ನತ ಗುರಿಯನ್ನು ಸಾಧಿಸಲು ನಾವು ಮಾಡುವ ಪ್ರಯತ್ನವನ್ನು ದೇವರು ದೃಢೀಕರಿಸುವನು. ಮತ್ತೊಂದು ಪುಸ್ತಕವು- "ಭರವಸೆ" ಅತ್ಯಂತ ಕಷ್ಟಕರದ ಸಮಯದಲ್ಲೂ ನಾವು ಭವಿಷ್ಯದ ಬಗ್ಗೆ ಹೇಗೆ ಭರವಸೆ ಇಡಬೇಕೆಂಬುದನ್ನು ತಿಳಿಸುವುದು. ಮತ್ತೊಂದು "ಉತ್ಕೃಷ್ಟತೆ"ಯ ಪರಿಕಲ್ಪನೆಯ ಬಗ್ಗೆ, "ಆನಂದ" ಎಂಬುದು ಒಂದು ಕಥೆಯ ವಿಷಯಾಂಶ, "ನುಡಿಯ ಶಕ್ತಿ" ವಿಷಯವು ಮತ್ತೊಂದರಲ್ಲಿನ ಪ್ರತಿಫಲನೆ. ಗಣಿತದ ಪರಿಕಲ್ಪನೆಯನ್ನು ವಿವರಿಸುವ ಪಠ್ಯ ಪುಸ್ತವು, ಕ್ರಮಬದ್ಧ ಮನಸ್ಸಿನ ಹವ್ಯಾಸದ ಅನ್ವೇಷಣೆಯನ್ನು ಮಾಡುವುದು. ವಿಜ್ಞಾನದ ವಿಭಾಗದಲ್ಲಿ, ಒಂದು ಪುಸ್ತಕವು ತಮ್ಮ ಆರೋಗ್ಯದ ಬಗ್ಗೆ ಗಮನ ವಿರಿಸುವತ್ತ ಕೇಂದ್ರೀಕರಿಸುವುದು - ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ. ಸುಮಾರು ಹನ್ನೆರಡು ಅಥವಾ ಇನ್ನೂ ಹೆಚ್ಚಿನ ಪುಸ್ತಕಗಳನ್ನು ಮೂರು ವರ್ಷದ ಅವಧಿಯಲ್ಲಿ ಕಿಶೋರರು ಅಧ್ಯಯನ ಮಾಡುವರು.

ಅಲ್ಯಾಂಡ್ರಾ ಮತ್ತು ಬಿಯಾಟ್ರಿಸ್ ರು ತಮ್ಮೊಂದಿಗೆ ಕೆಲವು ಪಠ್ಯಪುಸ್ತಕಗಳನ್ನು ತೆಗೆದುಕಂಡು ಹೋಗಬೇಕೆಂದು ಯೋಜಿಸಿದರು, ಏಕಂದರೆ ಕೆಲವು ಪೋಷಕರು ಅವುಗಳನ್ನು ನೋಡಲು ಇಚ್ಛಿಸಬಹುದು ಎಂದು ಯೋಚಿಸಿದರು. ನೀವು ಪುಸ್ತಕಗಳಿಂದ ಚೆನ್ನಾಗಿ ಪರಿಚಿತರಾಗಿರದಿದ್ದರೆ ನೀವು ಸಾಧ್ಯವಾದಷ್ಟು ಹೆಚ್ಚು ಹೆಚ್ಚಿನ ಕಥೆಗಳನ್ನು ಓದಲು ಸಮಯ ತೆಗೆದುಕೊಳ್ಳಬಹುದು - ಸಮುದಾಯದಲ್ಲಿ ವಿವಿಧ ಬಗೆಯ ಸಂಭಾಷಣೆಗಳು ಎದುರಾದಾಗ ಪೂರ್ಣವಾಗಿ ಚರ್ಚಿಸಲು ಇದು ನಮಗೆ ಸಮರ್ಥರನ್ನಾಗಿಸುವುದು. ಅದರೊಂದಿಗೆ ನೀವು ನಿಮ್ಮ ಅಧ್ಯಯನ ತಂಡದ ಇತರ ಸದಸ್ಯರೊಂದಿಗೆ ಮೇಲೆ ತಿಳಿಸಿದ ವಿಚಾರಗಳ ಬಗ್ಗೆ ಚರ್ಚಿಸಲು ಪ್ರೋತ್ಸಾಹಿಸಲ್ಪಟ್ಟಿರುವಿರಿ. ಅದನ್ನು ರೂಹಿ ಪುಸ್ತಕ-5ರಲ್ಲಿ ಆಳವಾಗಿ ನಿರೂಪಿಸಲ್ಪಟ್ಟಿರುವುದು. ಈ ಪುಸ್ತಕವನ್ನು ನೀವು ಅಧ್ಯಯನ ಮಾಡಿದ ನಂತರ, ಕಿಶೋರ ತಂಡದ ಅನುಪ್ರೇರಕರಾಗಲು ನಿರ್ಧರಿಸಿದರೆ, ಅದರ ಸದಸ್ಯರುಗಳ ಕುಟುಂಬಗಳನ್ನು ಕ್ರಮಪ್ರಕಾರವಾಗಿ ಭೇಟಿಯಾಗುವಿರಿ ಹಾಗೂ ಅವರೊಂದಿಗೆ ಈ ವಿಚಾರಗಳನ್ನು ಮತ್ತು ಅಂತಹುದೇ ಅನೇಕ ವಿಚಾರಗಳನ್ನು ಅನ್ವೇಷಿಸುವಿರಿ. ಆದರೂ, ಈಗಲೂ ಬಿಯಾಟ್ರಿಸ್ ಳಂತೆಯೇ ನಿಮ್ಮ ಸಮುದಾಯದ ಕಿಶೋರರ ಕುಟುಂಬಗಳಿಗೆ ನೀಡುವ ಕೆಲವು ಭೇಟಿಗಳಲ್ಲಿ ಅನುಭವವುಳ್ಳವರ ಜೊತೆಗೂಡಿ ಸಾಗಬಹುದು.

## ವಿಭಾಗ 15

ಮರುದಿನ, ಅಲ್ಯಾಂಡ್ರಾ ಮತ್ತು ಬಿಯಾಟ್ರಿಸ್ ಇಬ್ಬರೂ ನೆರೆಹೊರೆಯಲ್ಲಿ ಹೊಸದಾಗಿ ಪ್ರಾರಂಭವಾಗಿದ್ದ ಕಿಶೋರರ ತಂಡಕ್ಕೆ ಸೇರಲಿರುವ ಮೂರು ಕಿಶೋರರ ಮನೆಗಳಿಗೆ ಭೇಟಿ ನೀಡಿದ್ದರು. ಆ ಪೋಷಕರು ಆಧ್ಯಾತ್ಮಿಕ ಸಶಕ್ತೀಕರಣ ಕಾರ್ಯಕ್ರಮದ ಬಗ್ಗೆ ಸಂಭಾಷಿಸಲು ಉತ್ಸುಕರಾಗಿದ್ದುದ್ದನ್ನು ನೋಡಿ ಬಿಯಾಟ್ರಿಸ್ ಳಿಗೆ ಸಂತೋಷವಾಗಿತ್ತು. ಮಧ್ಯಾಹ್ನದ ಕೊನೆಯ ಭಾಗದಲ್ಲಿ, ಅವಳು ಕಿಶೋರರ ತಂಡದೊಡನೆ ಅಲ್ಯಾಂಡ್ರಾಳಿಗೆ ಸಹಕರಿಸಲು ಒಪ್ಪಿಕೊಂಡಳು ಮತ್ತು ಒಂದು ವರ್ಷದೊಳಗೆ ತಾನು ಒಂದು ಹೊಸ ತಂಡದ ಅನುಪ್ರೇರಕರಾಗಿ ಸೇವೆ ಸಲ್ಲಿಸಲು ಕಲಿಯುವ ಭರವಸೆ ತಾಳಿದಳು. ಅದೇ ಸಮಯದಲ್ಲಿ ಅವಳು ತರಬೇತಿ ಸಂಸ್ಥೆಯ ಕೆಲವು ತರಗತಿಗಳ ಅಧ್ಯಯನವನ್ನು ಪೂರ್ಣಗೊಳಿಸ ಬೇಕಾಗಿತ್ತು. ಅದೇ ಸಮಯದಲ್ಲೇ ಮುಂದುವರೆಯುವಂತೆ ಮಾಡಬೇಕೆಂದು ನಿರ್ಧರಿಸಿದ್ದಳು.

ಹೀಗೆ ಅಲ್ಯಾಂಡ್ರಾಳ ನಿರಂತರ ಸಹಯೋಗ ಮತ್ತು ಪ್ರೋತ್ಸಾಹದಿಂದ ಬಿಯಾಟ್ರಿಸ್ ಸೇವಾ ಪಥದಲ್ಲಿ ಮುಂದೆ ಮುಂದೆ ಸಾಗಿದಳು. ಅವಳ ಕಥೆಯನ್ನೇ ಪುನಃ ಪ್ರಾರಂಭಿಸೋಣ, ಕೆಲವು ತಿಂಗಳುಗಳ ನಂತರ, ಅವಳು ಅದೇ ತಾನೇ ಪುಸ್ತಕ ಮೂರನ್ನು ಪೂರ್ಣಗೊಳಿಸಿದ್ದಳು. ಅವಳ ಅಧ್ಯಯನ ವೃತ್ತದ ಶಿಕ್ಷಕಿಯು, ಮಕ್ಕಳ ತರಗತಿಯ ಒಬ್ಬ ಶಿಕ್ಷಕಿಯಾಗಿದ್ದ ಮ್ಯಾರಿ ಬೆಲ್ ಳನ್ನು ಬಿಯಾಟ್ರಿಸ್ ಮತ್ತು ಅವಳ ಜೊತೆ ಭಾಗವಹಿಸಿದ್ದ ಇತರರನ್ನು ಸರದಿಯಂತೆ ಹೊಸದಾಗಿ ಪ್ರಾರಂಭವಾಗಿದ್ದ ಕ್ರಮ-1 ತರಗತಿಗೆಯ ಕಿಶೋರರ ಪೋಷಕರನ್ನು ಆಗಾಗ್ಗೆ ನಡೆಸುವ ಭೇಟಿಯಲ್ಲಿ ಜೊತೆ ಗೂಡಲು ಆಹ್ವಾನಿಸುವಂತೆ ತಿಳಿಸಿದ್ದರು. ಬಿಯಾಟ್ರಿಸ್ ಳು ಪುಸ್ತಕ ಮೂರರ ಅಧ್ಯಯನದಿಂದ ಹೆಚ್ಚಿನದನ್ನು ಕಲಿತಿರುವೆ ಎಂದು ಭಾವಿಸಿದ್ದಳು. ಆ ಪುಸ್ತಕದಿಂದ ಆಕೆ ಪಡೆದ ಅಂತದೃಷ್ಟಿಯು ಅವಳು ಒಬ್ಬ ಅನುಪ್ರೇರಕಳಾಗಿ ಸೇವೆಸಲ್ಲಿಸುವ ಸಾಮರ್ಥ್ಯವನ್ನು ಅಧಿಕ ಗೊಳಿಸಿದೆ ಎಂದು ಕೆಲವು ಸಲ ಅಲ್ಯಾಂಡ್ರಾಳು ಪ್ರಸ್ತುತಪಡಿಸಿದ್ದುದರಿಂದ ಅವಳು ತಿಳಿದಿದ್ದಳು.

ಅವರಿಬ್ಬರೂ ಸೇರಿದಾಗ, ಮ್ಯಾರಿಬೆಲ್ ಬಿಯಾಟ್ರಿಸ್ ಗೆ ತಾವು ಎಮ್ಮಾಳ ತಾಯಿಯನ್ನು ಭೇಟಿಯಾಗಲಿದ್ದೇವೆ ಎಂದು ಹೇಳಿದಳು. "ಅವಳೊಬ್ಬ ಸಂತೋಷದ ಹುಡುಗಿಯಾಗಿದ್ದು, ಕಲಿಯುವುದನ್ನು ಪ್ರೀತಿಸುವವಳಾಗಿದ್ದಳು. ನಾನು ಈಗಾಗಲೇ ಅವಳ ತಂದೆ ತಾಯಿಯರನ್ನು ಭೇಟಿಯಾಗಿ ಮಕ್ಕಳ ತರಗತಿಯ ಬಗ್ಗೆ ವಿವರಿಸಿದ್ದೇನೆ. ಅವರು ಸಂತೋಷದಿಂದ ಎಮ್ಮಾಳು ಭಾಗವಹಿಸಲು ಒಪ್ಪಿದರು. ಅವಳ ತಾಯಿಯು ತರಗತಿಯ ಬಗ್ಗೆ ಹೆಚ್ಚಿನದನ್ನು ತಿಳಿಯಲು ಆಸಕ್ತಳಾಗಿದ್ದಳು. ನಾವು ಬೋಧಿಸುವ ಶೈಕ್ಷಣಿಕ ಸಾಮಗ್ರಿಗಳಲ್ಲಿ ಹುದುಗಿರುವ ವಿಚಾರಗಳ ಬಗ್ಗೆ ಅವರೊಂದಿಗೆ ಹೋಗಿ ಮಾತನಾಡುವೆನೆಂದು ವಾಗ್ದಾನ ನೀಡಿರುವೆ. ನಾನು ನನಗಾಗಿ ಕೆಲವು ಟಿಪ್ಪಣಿಗಳನ್ನು ಬರೆದಿದ್ದೇನೆ ನೀನು ಇಚ್ಚಿಸಿದ್ದರೆ ನಾವಿಬ್ಬರೂ ಅದನ್ನು ಪರಿಶೀಲಿಸಿ ಅದರ ಕುರಿತು ಮಾತನಾಡೋಣ. " ಎಂದಳು. ಬಿಯಾಟ್ರಿಸ್ ಸಮ್ಮತಿಸಿದಳು. ಅವರು ಚರ್ಚಿಸಿದ ಟಿಪ್ಪಣಿಯು ಈ ರಿತಿ ಇರವುದು:

- ಮೊದಲಿಗೆ, ನಾನು ತರಗತಿಯಲ್ಲಿ ಎಮ್ಮಾಳನ್ನು ಹೊಂದಿರುವುದು ನನಗೆ ಅದೆಷ್ಟು ಸಂತೋಷ ವೆಂದು ಶ್ರೀಮತಿ ಮಾರ್ಟಿನೆಜ್ ರವರಿಗೆ ಹೇಳುತ್ತೇನೆ ಹಾಗೂ ಅವಳ ಕೆಲವು ಅದ್ಭುತ ಗುಣಗಳನ್ನು ಹೇಳುತ್ತೇನೆ.

- ಅವಳೊಂದಿಗೆ ಚರ್ಚಿಸುವ ಮೊದಲು ಬಹಾ'ಉ'ಲ್ಲಾರವರ ಈ ಕೆಳಕಂಡ ಬರವಣಿಗೆಗಳಿಂದ ಆರಂಭಿಸುವುದು ಒಳ್ಳೆಯದೆಂದು ಅನಿಸುವುದು.

**" ಮನುಷ್ಯನನ್ನು ಬೆಲೆಕಟ್ಟಲಾಗದ ಅಮೂಲ್ಯ ರತ್ನಗಳಿಂದ ತುಂಬಿದ ಗಣಿಯೆಂದು ಪರಿಗಣಿಸು. ವಿದ್ಯೆಯೊಂದೇ ಅದರಲ್ಲಿನ ಅಮೂಲ್ಯವಾದ ಸಂಪತ್ತನ್ನು ಹೊರ ತೆಗೆಯಬಲ್ಲದು, ಹಾಗೂ ಅದರಿಂದ ಮಾನವತೆಯು ಪ್ರಯೋಜನ ಪಡೆಯಬಲ್ಲದು. "[37]**

- ನಂತರ, ಈ ವಾಕ್ಯಾಂಶವು ನಾನೊಬ್ಬ ಶಿಕ್ಷಕಿಯಾಗಿ ನನ್ನನ್ನು ಎಷ್ಟು ಸ್ಪೂರ್ತಿಗೊಳಿಸಿತೆಂಬುದರ ಕೆಲವು ಆಲೋಚನೆಗಳನ್ನು ಹಂಚಿಕೊಳ್ಳುವೆ. . ತರಗತಿಯಲ್ಲಿ ಮಕ್ಕಳನ್ನು ನೋಡಿದಾಗಲೆಲ್ಲ ನನ್ನ ಹೃದಯವು ಆನಂದದಿಂದ ತುಂಬುವುದು ಎಂದ ಹೇಳುವೆ ಮತ್ತು ಅವರನ್ನು ಬೆಲೆಕಟ್ಟಲಾಗದ ರತ್ನಗಳಿಂದ ತುಂಬಿದ ಗಣಿಯೆಂದು ಆಲೋಚಿಸುತ್ತೇನೆ. ಅವರಲ್ಲಿ ಪ್ರತಿಯೊಬ್ಬರೂ ಸ್ವರ್ಗೀಯ ಗುಣಗಳನ್ನು ತೋರುವ ಸಾಮರ್ಥ್ಯವುಳ್ಳವರಾಗಿರುವರು. ಅವರಲ್ಲಿ ಪ್ರತಿಯೊಬ್ಬರೂ ಕೌಶಲ್ಯಗಳನ್ನು ಹೊಂದಿರುವರು ಅದನ್ನು ಕಂಡುಹಿಡಿದು ಬೆಳೆಸಬಹುದು. ಅವರಲ್ಲಿ ಪ್ರತಿಯೊಬ್ಬರೂ ಸಮಾಜದ ಬಹುಮೂಲ್ಯ ಸದಸ್ಯರಾಗಿ ಬೆಳೆಯಬಹುದು ಹಾಗೂ ಪ್ರಪಂಚದ ಒಳಿತಿಗೆ ಕೊಡುಗೆ ನೀಡಬಲ್ಲರು.

- ಪ್ರತಿಯೊಂದು ಮಗುವಿನಲ್ಲೂ ಹುದುಗಿರುವ ರತ್ನಗಳನ್ನು ಶಿಕ್ಷಣವು ಹೊರತರುವುದೆಂಬ ಕೆಲವು ಉದಾಹರಣೆಯನ್ನು ನಾನು ನೀಡಬಹುದು. ಮನಸ್ಸಿನ ಬಲಗಳಲ್ಲಿ ಕೆಲವನ್ನು ನಾನು ಹೇಳಬಹುದು ಅವೆಂದರೆ, ಪ್ರಕೃತಿಯ ನಿಯಮಗಳ ಅನ್ವೇಷಿಸುವಿಕೆ, ಕಲೆಯ ಸುಂದರ ಕೃತಿಗಳನ್ನು ರಚಿಸುವುದು ಹಾಗೂ ಉದಾತ್ತ ಆಲೋಚನೆಗಳನ್ನು ವ್ಯಕ್ತಪಡಿಸುವುದು. ಅವರು ಸರಿಯಾದ ಶಿಕ್ಷಣವನ್ನು ಪಡೆದಾಗ, ಮಕ್ಕಳು ಈ ಎಲ್ಲಾ ಶಕ್ತಿಗಳನ್ನು ಬೆಳೆಸಲು ಪ್ರಾರಂಭಿಸಬಹುದು, ಎಂದು ನಾನು ವಿವರಿಸುವೆ. ಆದರೆ ಇದನ್ನು ಮಾಡಬೇಕಾದರೆ, ಚಿಕ್ಕವಯಸ್ಸಿನಲ್ಲಿಯೇ ಅವರು ಕೆಲವು ಗುಣಲಕ್ಷಣಗಳನ್ನು ಗಳಿಸಿರುವುದು ಅವಶ್ಯಕ. ಉದಾಹರಣೆಗೆ, ಕಲಿಯುವಲ್ಲಿ ಗಮನವನ್ನು ನೀಡುವುದು, ಅಗತ್ಯವಿರುವಾಗ ಕಷ್ಟಪಟ್ಟು ಕೆಲಸ ಮಾಡಬೇಕು, ಮತ್ತು ತಾವು ಏನು ಮಾಡುತ್ತಿದ್ದೇವೆಂಬುದರತ್ತ ಕೇಂದ್ರಿತ ದೃಷ್ಟಿಯುಳ್ಳವರಾಗಿರಬೇಕು. ಅವರು ಇತರರ ಒಳಿತಿನ ಬಗ್ಗೆ ಕಾಳಜಿಯುಳ್ಳ ವ್ಯಕ್ತಿಗಳಾಗಿ ಬೆಳೆಯಬೇಕು ಮತ್ತು ಸಮುದಾಯದ ಸೇವೆ ಮಾಡುವ ಇಚ್ಛೆಯುಳ್ಳವರಾಗಿರಬೇಕು. ಆದುದರಿಂದಲೇ ಬಾಲ್ಯದಲ್ಲಿಯೇ ಅವರ ನಡತೆಯನ್ನು ಬೆಳೆಸಲು ಗಮನ ನೀಡಬೇಕಾಗಿರುವುದು ಅತಿಮುಖ್ಯ.

- ಆದುದರಿಂದ, ತನ್ನ ಮಗಳು ಎಂತಹ ವ್ಯಕ್ತಿ ಆಗಬೇಕೆಂದು ಅವಳು ಆಶಿಸುವಳು ಎಂಬುದಕ್ಕೆ ಕೆಲವು ವಿಚಾರಗಳನ್ನು ನಮ್ಮೊಡನೆ ಶ್ರೀಮತಿ ಮಾರ್ಟಿನೆಜ್ ರವರು ಹಂಚಿಕೊಳ್ಳಬಹುದೆಂದು ಕೇಳಲು ಇದು ಸರಿಯಾದ ಸಮಯ. ಎಮ್ಮಾಳು ಮುಖ್ಯವಾದ ಯಾವ ಕೆಲವು ಗುಣ ನಡತೆಗಳನ್ನು ಹೊಂದಿರಬೇಕೆಂದು ಎಂದು ಅವಳು ಯೋಚಿಸುವಳು?

- ಅವಳು ಹೇಳುವ ಗುಣಲಕ್ಷಣಗಳಲ್ಲಿ ಕೆಲವು ಆಧ್ಯಾತ್ಮಿಕ ಗುಣಗಳು ಸೇರಿರುವುದು ಖಂಡಿತ, ಹೌದು ಇದು ನಾನು ಪರಿಚಯಿಸುವ ಮುಂದಿನ ವಿಷಯವಾಗಿದೆ. ಒಬ್ಬ ವ್ಯಕ್ತಿಯು ಹೊಂದಿರಬೇಕಾದ ಕೆಲವು ನಿರ್ದಿಷ್ಟ ಗುಣಗಳಿವೆ, ಮಾನವ ಅಸ್ತಿತ್ವಕ್ಕೆ ಅತಿಮುಖ್ಯವಾದದ್ದು ಎಂದು ನಾನು ಹೇಳುವೆ. ಹೌದು ಮಾನವರ ಆತ್ಮಕ್ಕೆ ಸೇರಿದವುಗಳಾಗಿರುತ್ತವೆ ನಮ್ಮ

ಹೃದಯ ಕನ್ನಡಿಗಳನ್ನು ಹೊಳಪುಗೊಳಿಸುವುದರ ಮೂಲಕ ಅವುಗಳನ್ನು ಅಭಿವೃದ್ಧಿಸುವುದರಿಂದ ಅದು ದೇವರ ಗುಣಗಳನ್ನು ಪ್ರತಿಫಲಿಸಬಹುದು. ಇವುಗಳನ್ನು ನಾವು ಕ್ರಮ ಒಂದರ ಪುಸ್ತಕದ ತರಗತಿಗಳನ್ನು ಬೋಧಿಸುವಾಗ ಹೆಚ್ಚಾಗಿ ಈ ಗುಣಗಳತ್ತ ಗಮನವನ್ನು ಕೇಂದ್ರೀಕರಿಸುವೆವು.

- ಪುಸ್ತಕ-3 ರ ಕ್ರಮ-1ರಲ್ಲಿನ  ಪಾಠಗಳಲ್ಲಿ ಹೇಳಿರುವ ಕೆಲವು ಆಧ್ಯಾತ್ಮಿಕ ಗುಣಗಳ ಬಗ್ಗೆ ಉದಾಹರಿಸಿ ಹೇಳಲು ಯೋಚಿಸುವೆ. ಹಾಗೂ ಅವರೊಂದಿಗೆ ಸಂಬಂಧಪಟ್ಟ ಉಲ್ಲೇಖನಗಳನ್ನು ಹಂಚಿಕೊಳ್ಳುತ್ತೇನೆ. ಎಮ್ಮಾಳಿಗೆ ಈ ಕಳಗಿನ ಉಲ್ಲೇಖಗಳನ್ನು ಕಂಠಪಾಠ ಮಾಡಲು ಹೇಳುವುದಲ್ಲದೆ ತನ್ನ  ಮಗಳು ಅವುಗಳನ್ನು ಮತ್ತು ಅದರೊಂದಿಗೆ ಅವಳು ಕಲಿಯಲಿರುವ ಪ್ರಾರ್ಥನೆಗಳನ್ನು ಸೇರಿಸಿ ಅವಳೊಂದಿಗೆ ಪಠಿಸಬೇಕೆಂದು ತಿಳಿಸುವೆ:

- ಪ್ರೀತಿ:

**" ಓ ಮಿತ್ರನೇ! ನಿನ್ನೆದೆಯ ಉದ್ಯಾನದಲ್ಲಿ ಪ್ರೇಮ ಗುಲಾಬಿಯ ಹೊರತು ಬೇರೆ ಏನನ್ನೂ ನೆಡಬೇಡ  ...... "[38]**

- ನ್ಯಾಯ :

**" ನ್ಯಾಯದ ದಾರಿಯಲ್ಲಿ ನೀನು ನಡೆ,ಏಕೆಂದರೆ, ನಿಜವಾಗಿಯೂ ಅದುವೇ ನೇರವಾದ ಪಥವಾಗಿದೆ. "[39]**

- ಸತ್ಯಸಂಧತೆ:

**" ಸತ್ಯಸಂಧತೆಯು ಎಲ್ಲಾ ಮಾನವ  ಗುಣಗಳ ಅಡಿಪಾಯವಾಗಿದೆ."[40]**

- ಆನಂದ:

**" ಓ ಮಾನವ ತನುಜನೆ! ನಿನ್ನ ಹೃದಯದ  ಆನಂದದಲ್ಲಿ ಹರ್ಷೋನ್ಮತ್ತನಾಗು, ಇದರಿಂದ ನನ್ನನ್ನು ಸಂಧಿಸಲು ನೀನು ಅರ್ಹನಾಗುವಿ, ಮತ್ತು ನನ್ನ ಚೆಲುವನ್ನು ಪ್ರತಿಫಲಿಸಲು ನೀನು ಸಮರ್ಥನಾಗುವಿ. "[41]**

ಮೇಲಿನ ವಿಚಾರಗಳು ಪ್ರಥಮ ಬೇಟಿಗೆ ಸಾಕಾಗುವುದೆಂದು ಮ್ಯಾರಿಬೆಲ್ ಮತ್ತು ಬಿಯಾಟ್ರಿಸ್ ನಿರ್ಧರಿಸಿದರು. ನೀವು ಪುಸ್ತಕ -3 ರ ಅಧ್ಯಯನವನ್ನು ಮುಂದುವರೆಸುವಿರಿ ಹಾಗೂ ರೂಹಿ ತರಬೇತಿ ಸಂಸ್ಥೆಯು ಮಕ್ಕಳ ಅಧ್ಯಾತ್ಮಿಕ ಶಿಕ್ಷಣಕ್ಕಾಗಿ ರೂಪಿಸಿರುವ ಆರು-ವರ್ಷದ ಕಾರ್ಯಕ್ರಮದ ಕೆಲವು ತತ್ವಗಳ ಮೇಲೆ ಪ್ರತಿಫಲಿಸುವ ಅವಕಾಶವನ್ನು ಪಡೆಯುವಿರಿ. ಅದಕ್ಕೂ ಮೊದಲು, ಮಕ್ಕಳ ತರಗತಿಯ ಶಿಕ್ಷಕರೊಂದಿಗೆ ಕೆಲವು ಪೋಷಕರ ಮನೆಗಳಿಗೆ ಭೇಟಿ ನೀಡುವ ಸಂದರ್ಭವೂ ಬಂದರೆ, ಆಗ ಇಲ್ಲಿ ಪ್ರಸ್ತುತಿ ಪಡಿಸಿದ ವಿಚಾರಗಳು ನಿಮಗೆ ಸಹಾಯವಾಗಬಹುದು, ಈಗ ನೀವು ಅದನ್ನು ಒಂದರ ನಂತರ ಮತ್ತೊಂದು ಅಂಶಗಳನ್ನು ನಿಮ್ಮ ತಂಡದವರೊಂದಿಗೆ ಚರ್ಚಿಸಿರಿ.

## ವಿಭಾಗ -16

ಈ ಹಿಂದೆಯೇ ನಾವು ಅಬ್ದುಲ್ ಬಹಾರವರ ಈ ಕೆಳಕಂಡ ನುಡಿಗಳನ್ನು ಓದಿರುವೆವು: "ಮಾನವರೊಳಗೆ ಸಹಚರ್ಯ ಮತ್ತು ದೃಢವಾದ ಐಕ್ಯತೆಯು ಬಲವಾಗಿದ್ದಷ್ಟೂ, ಮಾನವ ಚಟುವಟಿಕೆಯ ಎಲ್ಲಾ ಕ್ಷೇತ್ರಗಳಲ್ಲೂ ರಚನಾತ್ಮಕತೆ ಮತ್ತು ಸಾಧನೆ ಅಧಿಕವಾಗುವುದು." ವಿಶ್ವನ್ಯಾಯ ಮಂದಿರವು ನಮಗೆ ಈ ರೀತಿ ಹೇಳಿದೆ : ಮನೆಗಳಿಗೆ ಭೇಟಿ ನೀಡುವುದು ಮತ್ತು  ನಮ್ಮದಕ್ಕೆ ಸ್ವಾಗತಿಸುವುದನ್ನು ವಿಸ್ತರಿಸುವುದರಿಂದ , ನಾವು "ಸಮುದಾಯದ ಭಾವನೆಯನ್ನು  ಪೋಷಿಸಬಲ್ಲ ಆಧ್ಯಾತ್ಮಿಕ ಸಂಬಂಧವನ್ನು ಬಲಗೊಳಿಸುವೆವು." ಇಂತಹ ಅಭ್ಯಾಸದ ಪರಿಣಾಮವು ಬೆಳೆಯುತ್ತಿರುವ  ಸಮುದಾಯದ ಸಂಸ್ಕೃತಿಯ  ಮೇಲೆ ಬೀರುವುದನ್ನು ಕಡೆಗಣಿಸಬಾರದು.

ಹಿಂದಿನ ವಿಭಾಗಗಳಲ್ಲಿ ನಾವು ಒಬ್ಬೊಬ್ಬರ ಮನೆಗಳಿಗೆ ಭೇಟಿ ನೀಡುವ ಸಂದರ್ಭಗಳಲ್ಲಿ ನಡೆಯುವ ವಿವಿಧ ಬಗೆಯ ಹಲವಾರು ಸಂಭಾಷಣೆಗಳನ್ನು ನೋಡಿರುವೆವು. ಸೇವಾ ಪಥದಲ್ಲಿ ಸಾಗುವಾಗ, ನಾವೆಲ್ಲರೂ ನಮ್ಮ ಹಳ್ಳಿ, ಪಟ್ಟಣ ಅಥವಾ ನೆರೆಹೊರೆಯವರ ವಿಸ್ತರಿತ ಸಂಭಾಷಣೆಯಲ್ಲಿ ಬಹಾ'ಉ'ಲ್ಲಾರವರ ಬೋಧನೆಗಳನ್ನು ನಮ್ಮ ವೈಯುಕ್ತಿಕ ಮತ್ತು ಸಾಮೂಹಿಕ ಜೀವನದಲ್ಲಿ ಅಳವಡಿಸುವುದರಲ್ಲಿ ಭಾಗಿಗಳಾಗುತ್ತೇವೆ. ಈ ಬೋಧನೆಗಳಲ್ಲಿ ತಮ್ಮ ಜ್ಞಾನವನ್ನು ಅಧಿಕಗೊಳಿಸಿಕೊಳ್ಳಲು ಹೆಚ್ಚಿನ ಸಂಖ್ಯೆಯವರು ಸಮರ್ಥರನ್ನಾಗಿಸಲು ಯೋಜಿಸಿದ  ಕ್ರಮಬದ್ಧವಾದ ಸರಣಿಯ ಔಪಚಾರಿಕ ಭೇಟಿಗಳಾಗಿ ಇವು ಕೆಲವು ಸಲ ತೆರೆದು ಕೊಳ್ಳುತ್ತವೆ. ಇನ್ನು ಹಲವಾರು ಸಂದರ್ಭಗಳಲ್ಲಿ ಸಂಸ್ಥೆಯ ಶೈಕ್ಷಣಿಕ ಕಾರ್ಯಕ್ರಮಗಳು, ಅವುಗಳ ಉದ್ದೇಶ ಮತ್ತು ವಿಷಯಾಂಶವು ಚರ್ಚೆಯ ವಿಷಯವಾಗಿರುವುದು.  ಸಮುದಾಯ ರಚನೆಯ ಪ್ರಕ್ರಿಯೆಯಲ್ಲಿ ತೊಡಗಲು ಹೆಚ್ಚು ಹೆಚ್ಚು ನೆರೆಹೊರೆಯದವರಿಗೆ ಮತ್ತು ಸ್ನೇಹಿತರಿಗೆ ಆಹ್ವಾನವನ್ನು ವಿಸ್ತರಿಸಲಾಗುವುದು.  ನೀವು ಭವಿಷ್ಯದತ್ತ ಮತ್ತು ನಿಮ್ಮ ಮುಂದೆ ಸಾಗುವ ಸೇವಾಪಥದತ್ತ ನೋಡುವಾಗ ಈ ಘಟಕದಲ್ಲಿ  ನೀಡಿರುವ ಪ್ರತಿಯೊಂದು ವಿಷಯಾಂಶವನ್ನು ಕಲಿಯಲು ನೀವು ಎಲ್ಲಾ

ಶ್ರಮ ವಹಿಸಬೇಕು, ಪ್ರತಿಯೊಂದು ವಿಷಯದ ಬಗ್ಗೆ ಸಂಭಾಷಿಸುವ ಅನುಭವ ಗಳಿಸಬೇಕು ಮತ್ತು ಬಹಾ'ಉ'ಲ್ಲಾರವರ ಬೋಧನೆಗಳ ನಿಮ್ಮ ಜ್ಞಾನವನ್ನು ಆಳವಾಗಿ ಹೆಚ್ಚಿಸಿಕೊಳ್ಳುವುದನ್ನು ಮುಂದುವರೆಸಬೇಕು. ಆಗ ದೇವರ ನುಡಿಗಳನ್ನು ಇತರರೊಂದಿಗೆ ಹಂಚಿಕೊಳ್ಳುವ ಎಂದೂ ಕೊನೆಗೊಳ್ಳದ ಆನಂದವು ನಿಮ್ಮದಾಗುವುದು.

## REFERENCES


1. Bahá'u'lláh, *The Hidden Words* (Wilmette: Bahá'í Publishing Trust, 2003, 2012 printing), Arabic no. 4, p. 4.

2. Bahá'u'lláh, in *Bahá'í Prayers: A Selection of Prayers Revealed by Bahá'u'lláh, the Báb, and 'Abdu'l-Bahá* (Wilmette: Bahá'í Publishing Trust, 2002, 2017 printing), p. 4.

3. *Gleanings from the Writings of Bahá'u'lláh* (Wilmette: Bahá'í Publishing Trust, 1983, 2017 printing), IV, par. 1, p. 5.

4. Ibid., V, par. 2, pp. 6–7.

5. 'Abdu'l-Bahá, in *Bahá'í Prayers*, p. 81.

6. Ibid., p. 111.

7. Ibid.

8. From a talk given on 16 August 1912, published in *The Promulgation of Universal Peace: Talks Delivered by 'Abdu'l-Bahá during His Visit to the United States and Canada in 1912* (Wilmette: Bahá'í Publishing, 2012), par. 23, p. 364.

9. 'Abdu'l-Bahá, in *Bahá'í Prayers*, p. 130.

10. *Gleanings from the Writings of Bahá'u'lláh*, XLV, par. 1, pp. 111–12.

11. 'Abdu'l-Bahá, cited by Shoghi Effendi, *The World Order of Bahá'u'lláh: Selected Letters* (Wilmette: Bahá'í Publishing Trust, 1991, 2012 printing), p. 139.

12. *Gleanings from the Writings of Bahá'u'lláh*, V, par. 5, p. 8.

13. From a talk given by 'Abdu'l-Bahá on 5 May 1912, published in *The Promulgation of Universal Peace*, par. 4, p. 128.

14. From a talk given on 21 October 1911, published in *Paris Talks: Addresses Given by 'Abdu'l-Bahá in 1911* (Wilmette: Bahá'í Publishing, 2006, 2016 printing), no. 6.7–8, p. 22.

15. *Gleanings from the Writings of Bahá'u'lláh*, CXLVI, par. 1, p. 357.

16. From a talk given by 'Abdu'l-Bahá on 5 May 1912, published in *The Promulgation of Universal Peace*, par. 4, p. 128.

17. *The Hidden Words*, Persian no. 44, p. 37.

18. Ibid., Persian no. 66, p. 45.

19. From a Tablet of 'Abdu'l-Bahá. (authorized translation)

20. From a talk given by 'Abdu'l-Bahá on 25 September 1912, published in *The Promulgation of Universal Peace*, par. 2, pp. 478–79.

21. *Selections from the Writings of 'Abdu'l-Bahá* (Wilmette: Bahá'í Publishing, 2010, 2015 printing), no. 43.1, p. 125.

22. Ibid., no. 207.3, p. 360.

23. Bahá'u'lláh, in *Bahá'í Meetings: Extracts from the Writings of Bahá'u'lláh, 'Abdu'l-Bahá, and Shoghi Effendi*, compiled by the Research Department of the Universal House of Justice (Wilmette: Bahá'í Publishing Trust, 1976, 1980 printing), p. 3.

24. Ibid.

25. *Tablets of Abdul-Baha Abbas* (New York: Bahá'í Publishing Committee, 1916, 1930 printing), vol. 3, p. 631. (authorized translation)

26. Bahá'u'lláh, in *The Kitáb-i-Aqdas: The Most Holy Book* (Wilmette: Bahá'í Publishing Trust, 1993, 2013 printing), par. 57, p. 41.

27. *Selections from the Writings of 'Abdu'l-Bahá*, no. 48.1, p. 130.

28. From a letter dated 27 August 1989, published in *Messages from the Universal House of Justice, 1986–2001: The Fourth Epoch of the Formative Age* (Wilmette: Bahá'í Publishing Trust, 2010), no. 69.2, pp. 132–33.

29. Ibid., no. 69.9–10, p. 135.

30. *The Hidden Words*, Persian no. 82, p. 51.

31. Ibid., Persian no. 80, p. 51.

32. 'Abdu'l-Bahá, *The Secret of Divine Civilization* (Wilmette: Bahá'í Publishing, 2007, 2016 printing), par. 46, p. 33.

33. *The Hidden Words*, Persian no. 49, p. 39.

34. Shoghi Effendi, cited in *Bahá'í News*, no. 13 (September 1926), p. 1.

35. From a talk given by 'Abdu'l-Bahá on 17 November 1912, published in *The Promulgation of Universal Peace*, par. 3, p. 617.

36. From a message dated 21 April 2010, published in *Framework for Action. Selected Messages of the Universal House of Justice and Supplementary Material, 2006–2016* (West Palm Beach. Palabra Publications, 2017), no. 14.16, p. 82.

37. *Gleanings from the Writings of Bahá'u'lláh*, CXXII, par. 1, p. 294.

38. *The Hidden Words*, Persian no. 3, p. 23.

39. *Gleanings from the Writings of Bahá'u'lláh*, CXVIII, par. 1, p. 283.

40. 'Abdu'l-Bahá, cited by Shoghi Effendi, *The Advent of Divine Justice* (Wilmette: Bahá'í Publishing Trust, 2006, 2018 printing), par. 40, p. 39.

41. *The Hidden Words*, Arabic no. 36, p. 12.